ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುಜರಾತ್: ತ್ರಿಕೋನ ಸ್ಪರ್ಧೆ 11
ಜೈಲಿನಲ್ಲಿ ಮುರುಘರಿಗೆ ವಿಶೇಷ ಆತಿಥ್ಯ 6
ಇಂದು ಸಿನಿಮಾ ಪುರವಣಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,836	18,053	₹51,950 (ಬೆಂಗಳೂರು)	₹59,500 (ಬೆಂಗಳೂರು)	82.88

6.87 ಲಕ್ಷ ವಾಹನಗಳಿಗೆ ನಿಗಾ ಉಪಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆದ್ದಾರಿಗಳಲ್ಲಿ ಅಪಘಾತಗಳು, ವಾಹನಗಳಲ್ಲಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ-ದಂತಹ ಘಟನೆಗಳನ್ನು ತಪ್ಪಿಸಲು ಶಾಲಾ ವಾಹನಗಳೂ ಸೇರಿದಂತೆ ಸುಮಾರು 6.87 ಲಕ್ಷ ಸಾರ್ವಜನಿಕ ಸಾರಿಗೆ ವಾಹನಗಳಿಗೆ ವಾಹನ ಚಲನೆ ನಿಗಾ ಉಪಕರಣಗಳು (ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್) ಮತ್ತು ಪ್ಯಾನಿಕ್ ಬಟನ್ ಅಳವಡಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ಯೋಜನೆಗೆ ಒಪ್ಪಿಗೆ ನೀಡಲಾಗಿದೆ.

ಕೇಂದ್ರ ಸಹಭಾಗಿತ್ವದ ಈ ಯೋಜನೆಗೆ ₹20.30 ಕೋಟಿ ಅನುದಾನ ನೀಡಲು ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಇದಕ್ಕೆ ಕೇಂದ್ರ ಶೇ 60 ಮತ್ತು ರಾಜ್ಯ ಸರ್ಕಾರ ಶೇ 40 ರಷ್ಟು ಅನುದಾನ ನೀಡುತ್ತವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದ ಸಾರ್ವಜನಿಕ ಸಾರಿಗೆ ಸೇವೆಯಲ್ಲಿರುವ ಬಸ್‌ಗಳು, ಕ್ಯಾಬ್, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್ ಸೇರಿ ವಿವಿಧ ರೀತಿಯ ಸರ್ಕಾರಿ ಮತ್ತು ಖಾಸಗಿ ವಾಹನಗಳಿಗೆ ಈ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸಲಾಗುವುದು. ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಕೇಂದ್ರ ಸರ್ಕಾರ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ಮಾಡಿದ್ದು, ಅದರ ಪ್ರಕಾರ ಎಲ್ಲ ರಾಜ್ಯಗಳಿಗೂ ಈ ಅತ್ಯಾಧುನಿಕ ವ್ಯವಸ್ಥೆಯನ್ನು ಅಳವಡಿಸಲು ನೆರವು ನೀಡುತ್ತಿದೆ. ಇದಕ್ಕೆ ಕ್ಲೌಡ್ ಸರ್ವಿಸ್ ಸೇವೆಯನ್ನೂ ಕೇಂದ್ರವೇ ನೀಡುತ್ತದೆ ಎಂದರು.

ಎಷ್ಟು ವಾಹನಗಳಿಗೆ ಅಳವಡಿಕೆ	
ಟ್ಯಾಕ್ಸಿ, ಕ್ಯಾಬ್, ಮ್ಯಾಕ್ಸಿ ಕ್ಯಾಬ್	4.51 ಲಕ್ಷ
ಶಾಲಾ ವಾಹನ ಮತ್ತು ಬಸ್‌ಗಳು	16,432
ಖಾಸಗಿ ಪ್ರಯಾಣಿಕ ವಾಹನಗಳು	73,077
ಕೆಎಸ್‌ಆರ್‌ಟಿಸಿ ಬಸ್‌ಗಳು	24,701
ಒಪ್ಪಂದ ವಾಹನಗಳು	5,130
ಅಖಿಲ ಭಾರತ ಪರ್ಮಿಟ್ ಹೊಂದಿರುವ ವಾಹನಗಳು	1,900
ಸರಕು ಸಾಗಣೆ ವಾಹನಗಳು	85,049

ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ-ಗಳಲ್ಲಿ ವಾಹನಗಳು ವೇಗದಲ್ಲಿ ಚಲಿಸಿ ಅಪಘಾತಕ್ಕೆ ಕಾರಣವಾಗುತ್ತಿವೆ. ಇಂತಹ ಅಪಘಾತಗಳನ್ನು ನಿಯಂತ್ರಿಸಲು ವಾಹನಗಳು ಸಂಚರಿಸುತ್ತಿರುವ ಹಾದಿಯ ಮೇಲೆ ಕಣ್ಣಿಟ್ಟು ಅಪಘಾತಗಳನ್ನು ನಿಯಂತ್ರಿಸಲು ಸಾಧ್ಯವಿದೆ. ವಾಹನಗಳು ನಿಗದಿತ ವೇಗದಲ್ಲಿ ಮತ್ತು ನಿಗದಿತ ರಸ್ತೆಯಲ್ಲಿ ಸಾಗುತ್ತಿವೆಯೇ? ನಿಗದಿಪಡಿಸಿದ ಸ್ಥಳಗಳಲ್ಲಿ ವಾಹನ ನಿಲ್ಲಿಸಿದ್ದಾರೆಯೇ? ವಾಹನ ಸಂಚಾರದಲ್ಲಿ ಅನಗತ್ಯ ವಿಳಂಬ ವಾಗುತ್ತಿದೆಯೇ, ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆಯೇ ಮುಂತಾದ ಚಟುವಟಿಕೆಗಳನ್ನು ನಿಯಂತ್ರಣ ಕೊಠಡಿಗಳಿಂದ ಗಮನಿಸಲಾಗುವುದು ಮತ್ತು ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮಾಧುಸ್ವಾಮಿ ಹೇಳಿದರು.

ತಾಯಿ ಕಾರ್ಡ್, ಆಧಾರ್ ಕಾರ್ಡ್ ಇಲ್ಲ ಎಂದು ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿಕೊಳ್ಳದ ಸಿಬ್ಬಂದಿ

ತಾಯಿ, ಅವಳಿ ಶಿಶುಗಳ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ತಾಯಿ ಕಾರ್ಡ್ ಮತ್ತು ಆಧಾರ್ ಕಾರ್ಡ್ ಇಲ್ಲ ಎಂದು ಜಿಲ್ಲಾ ಆಸ್ಪತ್ರೆ ಸಿಬ್ಬಂದಿ ಚಿಕಿತ್ಸೆ ನೀಡಲು ನಿರಾಕರಿಸಿದ ಕಾರಣ, ಹೆರಿಗೆ ನೋವಿನಿಂದ ಬಳಲುತ್ತಿದ್ದ ಅನಾಥ ಮಹಿಳೆಯೊಬ್ಬರು ತೀವ್ರ ರಕ್ತ ಸ್ರಾವದಿಂದ ಗುರುವಾರ ಮೃತಪಟ್ಟಿದ್ದಾರೆ. ಸಕಾಲಕ್ಕೆ ಚಿಕಿತ್ಸೆ ಸಿಗದೆ ಆಕೆಯ ಗರ್ಭದಲ್ಲಿದ್ದ ಅವಳಿ ಶಿಶುಗಳು ಕೂಡ ಮೃತಪಟ್ಟಿವೆ. ಅವರಿಗೆ ಆರು ವರ್ಷದ ಮಗಳಿದ್ದಾಳೆ.

ಭಾರತಿ ನಗರದಲ್ಲಿ ವಾಸವಿದ್ದ ಕಸ್ತೂರಿ (30) ಎಂಬ ಮಹಿಳೆಗೆ ಬುಧವಾರ ಸಂಜೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಒಬ್ಬಂಟಿಯಾಗಿದ್ದ ಆಕೆಯನ್ನು ಅಕ್ಕಪಕ್ಕದ ಮನೆಯ ಮಹಿಳೆಯರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆದರೆ, ಆಕೆಯ ಬಳಿ ತಾಯಿ ಕಾರ್ಡ್, ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣ ನೀಡಿದ ಜಿಲ್ಲಾ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಯು ಆಸ್ಪತ್ರೆಗೆ ದಾಖಲಿಸಿಕೊಳ್ಳಲು ನಿರಾಕರಿಸಿದರು.

ಮಹಿಳೆಯ ಜತೆಯಲ್ಲಿದ್ದ ನೆರೆ ಹೊರೆಯವರು ವೈದ್ಯರು ಮತ್ತು ಸಿಬ್ಬಂದಿಯನ್ನು ಪರಿಪರಿಯಾಗಿ ಬೇಡಿಕೊಂಡರೂ ಅವರ ಮನಸ್ಸು ಕರಗಿಲ್ಲ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿ ಆಸ್ಪತ್ರೆಯಿಂದ ಹೊರಗೆ ಕಳುಹಿಸಿದ್ದರು.

ಬೆಂಗಳೂರಿಗೆ ಆಂಬುಲೆನ್ಸ್‌ನಲ್ಲಿ ತೆರಳಲು ಹಣ ಹೊಂದಿಸಲಾಗದ ಕಾರಣ ರಾತ್ರಿ ಮನೆಗೆ ವಾಪಸ್ಸಾಗಿದ್ದರು. ಗುರುವಾರ ಬೆಳಗಿನ ಜಾವ ಮತ್ತೆ ಹೆರಿಗೆ ನೋವು ಕಾಣಿಸಿಕೊಂಡು, ಮನೆಯಲ್ಲಿಯೇ ಹೆರಿಗೆಯಾಗಿದೆ.

6ನೇ ಪುಟ ನೋಡಿ

ತುಮಕೂರಿನ ಭಾರತಿ ನಗರದಲ್ಲಿ ಮಹಿಳೆ ಮೃತಪಟ್ಟ ಸ್ಥಳಕ್ಕೆ ಗುರುವಾರ ಮೇಯರ್ ಎಂ.ಪ್ರಭಾವತಿ, ಉಪಮೇಯರ್ ಟಿ.ಕೆ.ನರಸಿಂಹಮೂರ್ತಿ, ಸದಸ್ಯ ಶ್ರೀನಿವಾಸ್ ಭೇಟಿ ನೀಡಿ, ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ಮಹಿಳೆ ಸರೋಜಮ್ಮ ಅವರಿಂದ ಮಾಹಿತಿ ಪಡೆದರು

ತನಿಖೆಗೆ ಉನ್ನತ ಮಟ್ಟದ ಸಮಿತಿ ರಚನೆ

ತುಮಕೂರು: ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದೆ ಮಹಿಳೆ ಸಾವನ್ನಪ್ಪಿದ ಪ್ರಕರಣದ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಜಿಲ್ಲಾ ಆಸ್ಪತ್ರೆಗೆ ಗುರುವಾರ ರಾತ್ರಿ ಭೇಟಿ ನೀಡಿ ಮಾಹಿತಿ ಪಡೆದುಕೊಂಡ ಅವರು, ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

3A ಪುಟ ನೋಡಿ

ಸುಧಾಕರ್ ರಾಜೀನಾಮೆಗೆ ಆಗ್ರಹ

ಬೆಂಗಳೂರು: ತುಮಕೂರಿನಲ್ಲಿ ಬಾಣಂತಿ ಹಾಗೂ ಅವಳಿ ಶಿಶುಗಳು ಮೃತಪಟ್ಟಿರುವ ದುರಂತದ ನೈತಿಕ ಹೊಣೆ ಹೊತ್ತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ರಾಜೀನಾಮೆ ನೀಡಬೇಕು, ರಾಜೀನಾಮೆ ಕೊಡದಿದ್ದರೆ ಮುಖ್ಯಮಂತ್ರಿಯೇ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

3A ಪುಟ ನೋಡಿ

ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಮಗು, ಪತ್ನಿ ಮನೆಯಿಂದ ಹೊರಕ್ಕೆ

ರಾಮನಗರ: ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಮಗು ಅಪಶಕುನ ಎಂಬ ಮೂಢನಂಬಿಕೆಯಿಂದ ಚನ್ನಪಟ್ಟಣದ ವ್ಯಕ್ತಿಯೊಬ್ಬ ತನ್ನ ಎರಡು ವರ್ಷದ ಮಗು ಮತ್ತು ಹೆಂಡತಿಯನ್ನು ಮನೆಯಿಂದ ಹೊರ ಹಾಕಿದ್ದಾನೆ.

ಚನ್ನಪಟ್ಟಣದ ಮಂಜುನಾಥ ಬಡಾವಣೆ ನಿವಾಸಿ ವಿನಯ್, ಅವರ ತಂದೆ ಗಂಗಾಧರ ಆಚಾರ್, ತಾಯಿ ಶಕುಂತಲಾ ಹಾಗೂ ನಾಗರತ್ನ ಎಂಬುವರ ವಿರುದ್ಧ ವಿನಯ್ ಪತ್ನಿ ಶ್ರುತಿ ಎಂಬುವರು ರಾಮನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

2019ರಲ್ಲಿ ಮದುವೆಯಾಗಿದ್ದ ವಿನಯ್– ಶ್ರುತಿ ದಂಪತಿಗೆ ವರ್ಷದ ಬಳಿಕ ಗಂಡು ಮಗು ಜನಿಸಿತ್ತು. ಆದರೆ, ಮಗು ಮೂಲಾ ನಕ್ಷತ್ರದಲ್ಲಿ ಜನಿಸಿದೆ. ಇದರಿಂದ ಕುಟುಂಬಕ್ಕೆ ಕೇಡು ಸಂಭವಿಸಲಿದೆ ಎಂಬ ಮೂಢನಂಬಿಕೆಯಿಂದ ಪತಿ ವಿನಯ್, ಅವರ ಕುಟುಂಬದವರು ನಿರಂತರ ಕಿರುಕುಳ ನೀಡಲು ಆರಂಭಿಸಿದರು. ಅಲ್ಲದೇ ವರದಕ್ಷಿಣೆಗಾಗಿ ನಿರಂತರವಾಗಿ ಪೀಡಿಸುತ್ತಿದ್ದರು ಎಂದು ಶ್ರುತಿ ದೂರಿನಲ್ಲಿ ಆರೋಪಿಸಿದ್ದಾರೆ.

ಶ್ರುತಿಯ ಪೋಷಕರು ಇದೇ ಅಕ್ಟೋಬರ್ 25ರಂದು ಮಗಳನ್ನು ಕಾಣಲು ಚನ್ನಪಟ್ಟಣದ ಅಳಿಯನ ಮನೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ವಿನಯ್ ಕುಟುಂಬ ಅವರನ್ನು ಮನೆಯೊಳಗೆ ಬಿಟ್ಟು-ಕೊಂಡಿರಲಿಲ್ಲ.

6ನೇ ಪುಟ ನೋಡಿ

ವೈದ್ಯೆ, ಮೂವರು ನರ್ಸ್ ಅಮಾನತು

ಪ್ರಕರಣ ಸಂಬಂಧ ಕರ್ತವ್ಯ ಲೋಪ ಆರೋಪದ ಮೇಲೆ ಡಾ. ಉಷಾ ಅವರನ್ನು ಅಮಾನತು ಮಾಡಲಾಗಿದೆ. ಬುಧವಾರ ಸಂಜೆ ಕರ್ತವ್ಯದ ಮೇಲಿದ್ದ ನರ್ಸ್‌ಗಳಾದ ಯಶೋದ, ಸವಿತಾ, ವಿದ್ಯಾಭಾರತಿ ಅವರನ್ನು ಅಮಾನತು ಮಾಡಿ ತುಮಕೂರು ಜಿಲ್ಲಾ ಸರ್ಜನ್ ಡಾ.ವೀಣಾ ಆದೇಶಿಸಿದ್ದಾರೆ. ಡಾ.ವೀಣಾ ಅವರಿಗೆ ಕಾರಣ ಕೇಳಿ ಡಿಎಚ್‌ಒ ಡಾ.ಬಿ. ಎನ್.ಮಂಜುನಾಥ್ ನೋಟಿಸ್ ನೀಡಿದ್ದಾರೆ.

ಸಿಗ್ನಲ್‌ನಲ್ಲೇ ಪರದಾಡಿದ ತಾಯಿ–ಹಸುಗೂಸು

ಪ್ರಜಾವಾಣಿ ವಾರ್ತೆ

ಮಂಡ್ಯ: ಹೆಲ್ಮೆಟ್ ಧರಿಸದಿರುವುದಕ್ಕೆ ದಂಡ ಕಟ್ಟಲು ಎಟಿಎಂನಿಂದ ಹಣ ತರುವವರೆಗೂ ತಾಯಿ ಹಾಗೂ ಅನಾರೋಗ್ಯದಿಂದ ಬಳಲುತ್ತಿದ್ದ ಹಸುಗೂಸು ತುಂತುರು ಮಳೆಯಲ್ಲೇ ನೆನೆದ ಘಟನೆ ಇಲ್ಲಿಯ ಮಹಾವೀರ ವೃತ್ತದಲ್ಲಿ ಗುರುವಾರ ನಡೆದಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಯಗಚಕುಪ್ಪೆ ಗ್ರಾಮದ ಅಭಿಷೇಕ್ ಹಾಗೂ ಪತ್ನಿ ತಮ್ಮ ಏಳು ತಿಂಗಳ ಮಗುವನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ದಂಪತಿಯನ್ನು ಇಲ್ಲಿನ ಮಹಾವೀರ ವೃತ್ತದಲ್ಲಿ ತಡೆದ ಎಎಸ್‌ಐ ರಘುಪ್ರಕಾಶ್, ಹೆಲ್ಮೆಟ್ ಧರಿಸದಿರುವುದಕ್ಕೆ ದಂಡ ಪಾವತಿಸಲೇಬೇಕೆಂದು ಪಟ್ಟು ಹಿಡಿದರು.

> ಘಟನೆ ಬಗ್ಗೆ ವರದಿ ಮಾಡುವಂತೆ ಡಿವೈಎಸ್ಪಿಗೆ ಸೂಚಿಸಿದ್ದೇನೆ. ನಮ್ಮ ಸಿಬ್ಬಂದಿಯ ತಪ್ಪಿದ್ದರೆ ಕ್ರಮ ಕೈಗೊಳ್ಳಲಾಗುವುದು
>
> **ಎನ್. ಯತೀಶ್,** ಎಸ್ಪಿ

6ನೇ ಪುಟ ನೋಡಿ

ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಮೇಲೆ ಗುಂಡಿನ ದಾಳಿ

ಇಸ್ಲಾಮಾಬಾದ್ (ಪಿಟಿಐ): ರಾಜಕೀಯ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಮೇಲೆ ಗುರುವಾರ ಸಂಜೆ ಗುಂಡಿನ ದಾಳಿ ನಡೆದಿದೆ. ಅವರ ಬಲಗಾಲಿಗೆ ಗುಂಡು ತಗುಲಿದ್ದು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ದಾಳಿಕೋರನನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಇಮ್ರಾನ್ ಜತೆಗಿದ್ದ ಸೆನೆಟರ್ ಫೈಸಲ್ ಜಾವೆದ್ ಸೇರಿ ಏಳು ಜನರು ಗಾಯಗೊಂಡಿದ್ದಾರೆ. ಇಮ್ರಾನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ಹೇಳಿದ್ದಾರೆ.

ಪಂಜಾಬ್ ಪ್ರಾಂತ್ಯದ ವಜೀರಾಬಾದ್ ನಗರದ ಅಲ್ಲಾಹ್‌ವಾಲ ಚೌಕವನ್ನು ರ್‍ಯಾಲಿ ಸಮೀಪಿಸಿದಾಗ ಕಂಟೈನರ್ ಟ್ರಕ್‌ನಿಂದ ಇಳಿಯುತ್ತಿದ್ದ ಇಮ್ರಾನ್ ಅವರ ಹತ್ಯೆಗೆ ಶೂಟರ್ ಗುಂಡು ಹಾರಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಮ್ರಾನ್ ನೇತೃತ್ವದ ತೆಹರಿಕ್ — ಇನ್ಸಾಫ್ (ಪಿಟಿಐ) ಪಕ್ಷವು ಅವಧಿ ಪೂರ್ವ ಚುನಾವಣೆಗೆ ಒತ್ತಾಯಿಸಿ ಇಸ್ಲಾಮಾಬಾದ್ ವರೆಗೆ 'ಸುದೀರ್ಘ ನಡಿಗೆ' ಹಮ್ಮಿಕೊಂಡಿದೆ.

ಇನ್ನೊಂದು ಸುದ್ದಿ 4

ಮೋದಿ ತವರಲ್ಲಿ ಮತ ಸಮರಕ್ಕೆ ಸಜ್ಜು

ಗುಜರಾತ್ ವಿಧಾನಸಭೆ • ಡಿ.1 ಮತ್ತು 5ಕ್ಕೆ ಮತದಾನ • ಡಿ.8ಕ್ಕೆ ಮತಎಣಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ತವರು ರಾಜ್ಯ ಗುಜರಾತಿನಲ್ಲಿ ವಿಧಾನಸಭಾ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ. 182 ಸದಸ್ಯ ಬಲದ ವಿಧಾನಸಭೆಗೆ ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಮತ ಸಮರಕ್ಕೆ ಅಖಾಡ ಸಜ್ಜಾಗಿದೆ.

ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದ 20 ದಿನಗಳ ಬಳಿಕ ಗುಜರಾತ್ ವಿಧಾನಸಭಾ ಚುನಾವಣೆಗೆ ಆಯೋಗವು ವೇಳಾಪಟ್ಟಿ ಪ್ರಕಟಿಸಿದ್ದು, ಡಿಸೆಂಬರ್ 1ರಂದು ಹಾಗೂ ಡಿಸೆಂಬರ್ 5ರಂದು ಮತದಾನ ನಡೆಯಲಿದೆ. ಎರಡು ರಾಜ್ಯಗಳ ಮತ ಎಣಿಕೆ ಒಂದೇ ದಿನ (ಡಿಸೆಂಬರ್ 8) ನಡೆಯಲಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 99 ಸ್ಥಾನಗಳನ್ನು ಗಳಿಸಿ ಸತತ ಆರನೇ ಬಾರಿ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಬಿಜೆಪಿಗೆ ಸಮಬಲದ ಪೈಪೋಟಿ ನೀಡಿದ್ದ ಕಾಂಗ್ರೆಸ್ 77 ಕ್ಷೇತ್ರಗಳಲ್ಲಿ ಗೆಲುವಿನ ನಗೆ ಬೀರಿತ್ತು. ಕಾಂಗ್ರೆಸ್ ಶಾಸಕರ ಪಕ್ಷಾಂತರದಿಂದಾಗಿ ಬಿಜೆಪಿ ಬಲ 111ಕ್ಕೆ ಏರಿತ್ತು. ಕಾಂಗ್ರೆಸ್ ಸದಸ್ಯರ ಸಂಖ್ಯೆ 62ಕ್ಕೆ ಕುಸಿದಿತ್ತು. 2001ರಿಂದ 2014ರ ವರೆಗೆ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರೇ ಬಿಜೆಪಿಗೆ ಟ್ರಂಪ್ ಕಾರ್ಡ್. ಮೋದಿ ನಾಮಬಲದಿಂದಲೇ ಏಳನೇ ಬಾರಿ ಗದ್ದುಗೆ ಏರಬಹುದು ಎಂಬ ಅಮಿತ ವಿಶ್ವಾಸದಲ್ಲಿ ಬಿಜೆಪಿ ಇದೆ. ಪ್ರಧಾನಿ ಅವರು ರಾಜ್ಯದಲ್ಲಿ ನಾಲ್ಕೈದು ತಿಂಗಳ ಅವಧಿಯಲ್ಲೇ ₹1.10 ಲಕ್ಷ ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಬಿಜೆಪಿಗೆ ಪೂರಕವಾಗಿ ಕಣವನ್ನು ಹದಗೊಳಿಸಿದ್ದಾರೆ.

ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಆಮ್ ಆದ್ಮಿ ಪಕ್ಷವು (ಎಎಪಿ) ಗುಜರಾತ್‌ನಲ್ಲೂ ಮ್ಯಾಜಿಕ್ ಮಾಡುವ ಹುಮ್ಮಸ್ಸಿನಲ್ಲಿದೆ. ಚುನಾವಣಾ ಕಾರ್ಯತಂತ್ರ ಬದಲಿಸಿ-ಕೊಂಡಿರುವ ಕಾಂಗ್ರೆಸ್ ಪಾಳಯ, ಸರಿಸುಮಾರು ಮೂರು ದಶಕಗಳ ಬಳಿಕ ಅಧಿಕಾರದ ಚುಕ್ಕಾಣಿ ಹಿಡಿಯುವ ವಿಶ್ವಾಸದಲ್ಲಿದೆ.

11ನೇ ಪುಟ ನೋಡಿ

ಅಂಕಿ ಅಂಶಗಳು

- 182 ಒಟ್ಟು ಕ್ಷೇತ್ರಗಳು
- 13 ಕ್ಷೇತ್ರಗಳು ಎಸ್‌ಸಿ ಮೀಸಲು
- 27 ಕ್ಷೇತ್ರಗಳು ಎಸ್‌ಟಿ ಮೀಸಲು
- 4,90,89,765 ಒಟ್ಟು ಮತದಾರರು
- 3,24,420 ಹೊಸ ಮತದಾರರು

ಚುನಾವಣಾ ವೇಳಾಪಟ್ಟಿ

ವೇಳಾಪಟ್ಟಿ	ಮೊದಲ ಹಂತ (89 ಕ್ಷೇತ್ರಗಳು)	ಎರಡನೇ ಹಂತ (93 ಕ್ಷೇತ್ರಗಳು)
ಅಧಿಸೂಚನೆ ಪ್ರಕಟ	ನ.5	ನ.10
ನಾಮಪತ್ರ ಸಲ್ಲಿಕೆಗೆ ಕೊನೆ ದಿನ	ನ.14	ನ.17
ನಾಮಪತ್ರ ಪರಿಶೀಲನೆ	ನ.15	ನ.18
ನಾಮಪತ್ರ ವಾಪಸ್ ಪಡೆಯಲು ಕೊನೆ ದಿನ	ನ.17	ನ.21

ಸರ್ಕಾರಿ ಜಮೀನು ಅಕ್ರಮ ಮಂಜೂರು ಆರೋಪ

ನಂಜೇಗೌಡ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ. ನಂಜೇಗೌಡ ವಿರುದ್ಧ ಗುರುವಾರ ಮಾಲೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕಂದಾಯ ಇಲಾಖೆಗೆ ಸೇರಿದ ಸುಮಾರು ₹150 ಕೋಟಿ ಮಾರುಕಟ್ಟೆ ಮೌಲ್ಯದ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ನ್ಯಾಯಾಲಯ ಆದೇಶಿಸಿತ್ತು.



ಕೆ.ವೈ. ನಂಜೇಗೌಡ

ಈ ಘಟನೆ ನಡೆದಾಗ ಮಾಲೂರು ತಹಶೀಲ್ದಾರ್ ಆಗಿದ್ದ ನಾಗರಾಜ್ (ಈಗ ಕೋಲಾರ ತಹಶೀಲ್ದಾರ್), ದರಖಾಸ್ತು ಸಮಿತಿಯ ಅಧಿಕಾರೇತರ ಸದಸ್ಯರಾಗಿದ್ದ ದೊಮ್ಮಲೂರು ಡಿ. ನಾಗರಾಜ್, ನಲ್ಲಾಂಡಹಳ್ಳಿ ಎಸ್. ನಾಗಪ್ಪ, ಅಬ್ಬೇನಹಳ್ಳಿ ಎನ್. ಲಕ್ಷ್ಮಮ್ಮ ಹಾಗೂ ಇನ್ನಿತರರ ವಿರುದ್ಧವೂ ಪ್ರಕರಣ ದಾಖಲಾಗಿದೆ.

ಇವರೆಲ್ಲರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬೆಂಗಳೂರು ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮಾಲೂರು ಠಾಣಾಧಿಕಾರಿಗೆ ಅ. 21ರಂದು ಆದೇಶಿಸಿತ್ತು. ಕೋಲಾರದ ಸಾಮಾಜಿಕ ಕಾರ್ಯಕರ್ತ ಕೆ.ಸಿ. ರಾಜಣ್ಣ ಎಂಬುವರು ದೂರು ಸಲ್ಲಿಸಿದ್ದರು.

'ವಿಶೇಷ ನ್ಯಾಯಾಲಯದ ಸೂಚನೆ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸಲಾಗುವುದು' ಎಂದು ಮಾಲೂರು ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ಚಂದ್ರಧರ್ ತಿಳಿಸಿದ್ದಾರೆ.

ಶಾಸಕ ರೇಣುಕಾಚಾರ್ಯ ತಮ್ಮನ ಮಗ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ತಮ್ಮನ ಮಗ, ಐದು ದಿನಗಳ ಹಿಂದೆ ನಾಪತ್ತೆಯಾಗಿದ್ದ ಎಂ.ಆರ್. ಚಂದ್ರಶೇಖರ್ (25) ಗುರುವಾರ ಸಂಜೆ ಶವವಾಗಿ ಪತ್ತೆ-ಯಾಗಿದ್ದಾರೆ.

ರೇಣುಕಾಚಾರ್ಯ ಅವರ ಕಿರಿಯ ತಮ್ಮ ಎಂ.ಪಿ. ರಮೇಶ್ ಅವರ ಮಗ ಚಂದ್ರಶೇಖರ್ ಭಾನುವಾರ ಸಂಜೆ 7.30ಕ್ಕೆ ಮನೆಯಿಂದ ಕಾರಿನಲ್ಲಿ ತೆರಳಿದ್ದರು. ನಾಪತ್ತೆಯಾಗಿದ್ದ ಇವರಿಗಾಗಿ ಎಲ್ಲ ಕಡೆ ಹುಡುಕಾಟ ನಡೆಸಿದ ಬಳಿಕ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಚಂದ್ರಶೇಖರ್

ಹೊನ್ನಾಳಿ– ನ್ಯಾಮತಿ ನಡುವಿನ ಸೊರಟೂರು ಬಳಿಯ ಎಚ್.ಕಡದಕಟ್ಟೆ ತುಂಗಾ ಮೇಲ್ದಂಡೆ ಕಾಲುವೆಯಲ್ಲಿ ಮಧ್ಯಾಹ್ನ ಅವರ ಕಾರು ಪತ್ತೆಯಾಗಿತ್ತು.

6ನೇ ಪುಟ ನೋಡಿ

ಕಾನ್‌ಸ್ಟೆಬಲ್ ನೇಮಕಾತಿ ಗರಿಷ್ಠ ವಯೋಮಿತಿ ಹೆಚ್ಚಳ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಗೆ ನಿಗದಿಪಡಿಸಿದ್ದ ಗರಿಷ್ಠ ವಯೋಮಿತಿಯನ್ನು ಎರಡು ವರ್ಷಗಳಿಗೆ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 5,075 ಕಾನ್‌ಸ್ಟೆಬಲ್ ಹುದ್ದೆಗಳ (ಸಿವಿಲ್– 1,591 ಹಾಗೂ ಸಿಎಆರ್–ಡಿಎಆರ್– 3,484) ಭರ್ತಿಗಾಗಿ ಇತ್ತೀಚೆಗೆ ಅಧಿಸೂಚನೆ ಹೊರಡಿಸಲಾಗಿತ್ತು. ಹೊಸ ಆದೇಶದ ಪ್ರಕಾರ ಅರ್ಜಿ ಸಲ್ಲಿಸುವ ಸಾಮಾನ್ಯ ಅಭ್ಯರ್ಥಿಗಳಿಗೆ 27 ವರ್ಷ, ಎಸ್.ಸಿ, ಎಸ್.ಟಿ ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 29 ವರ್ಷಗಳು ಹಾಗೂ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಬುಡಕಟ್ಟು ಅಭ್ಯರ್ಥಿಗಳಿಗೆ 32 ವರ್ಷ ಗರಿಷ್ಠ ವಯೋಮಿತಿ ನಿಗದಿಪಡಿಸಲಾಗಿದೆ.

ದಿನಾಂಕ ವಿಸ್ತರಣೆ: ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಕೆ ದಿನಾಂಕವನ್ನು ನವೆಂಬರ್ 30ಕ್ಕೆ ವಿಸ್ತರಣೆ ಮಾಡಲಾಗಿದೆ.

ಒಳ ಪುಟ
ಉಗ್ರ ಆರಿಫ್‌ಗೆ ಮರಣದಂಡನೆ ತೀರ್ಪು ಎತ್ತಿಹಿಡಿದ 'ಸುಪ್ರೀಂ' 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೈಕೋರ್ಟ್ ಮಹತ್ವದ ತೀರ್ಪು: ಪ್ರಾಣೇಶ್ ಸ್ಥಾನಕ್ಕೆ ಕುತ್ತು?

ನಾಮನಿರ್ದೇಶಿತರ ಮತದಾನ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಕ್ಷೇತ್ರದಿಂದ ವಿಧಾನಪರಿಷತ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಜಯಗಳಿಸಿದ್ದ ಎಂ.ಕೆ. ಪ್ರಾಣೇಶ್ ಅವರ ಆಯ್ಕೆ ಪ್ರಶ್ನಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, 'ನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ನಾಮನಿರ್ದೇಶಿತ ಸದಸ್ಯರಿಗೆ ಮತದಾನ ಮಾಡುವ ಹಕ್ಕಿಲ್ಲ' ಎಂದು ಮಹತ್ವದ ತೀರ್ಪು ನೀಡಿದೆ.

ಎಂ.ಕೆ.ಪ್ರಾಣೇಶ್

ಆರು ಮತಗಳ ಅಂತರದಲ್ಲಿ ಸೋಲನುಭವಿಸಿದ್ದ ಕಾಂಗ್ರೆಸ್ ಪಕ್ಷದ ಗಾಯತ್ರಿ ಶಾಂತೇಗೌಡ ಈ ಸಂಬಂಧ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನಾಮನಿರ್ದೇಶಿತ ಸದಸ್ಯರು ಕೇವಲ ಸಲಹೆ-ಸೂಚನೆಗಳನ್ನು ಮಾತ್ರವೇ ನೀಡಬಹುದು' ಎಂದು ಹೇಳಿದೆ. ಏತನ್ಮಧ್ಯೆ, ಎಂ.ಕೆ.ಪ್ರಾಣೇಶ್ ಆಯ್ಕೆ ಅಸಿಂಧು ಕೋರಿ ಸಲ್ಲಿಸಲಾಗಿರುವ ಚುನಾವಣಾ ತಕರಾರು ಅರ್ಜಿ ಮತ್ತೊಂದು ನ್ಯಾಯಪೀಠದಲ್ಲಿ ವಿಚಾರಣೆಗೆ ಬಾಕಿ ಇದೆ.

'ಸಂವಿಧಾನದ 243 (6)ನೇ ವಿಧಿ ಮತ್ತು ಕರ್ನಾಟಕ ಮುನ್ಸಿಪಲ್ ಕಾಯ್ದೆ–1964ರ ಅನುಸಾರ ನಾಮನಿರ್ದೇಶಿತ ಸದಸ್ಯರಿಗೆ ವಿಧಾನಪರಿಷತ್ ಚುನಾವಣೆ ಮಾತ್ರವಲ್ಲದೆ, ಮುನಿಸಿಪಾಲಿಟಿ ಸಭೆಗಳಲ್ಲೂ ಮತದಾನ ಮಾಡುವ ಹಕ್ಕಿಲ್ಲ' ಎಂದು ನ್ಯಾಯಪೀಠ ವಿವರಿಸಿದೆ.

ಅರ್ಜಿದಾರರ ಪರ ವಕೀಲರು, 'ಮತದಾರರ ಪಟ್ಟಿಗೆ 4 ಪಟ್ಟಣ ಪಂಚಾಯ್ತಿಗಳ 12 ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ನೀಡಿರುವುದು ಕಾನೂನು ಬಾಹಿರ. ಸಂವಿಧಾನದ ನಿಯಮಗಳ ಪ್ರಕಾರ ನಾಮನಿರ್ದೇಶಿತ ಸದಸ್ಯರಿಗೆ ಸ್ಥಳೀಯ ಸಂಸ್ಥೆಗಳ ಸಭೆಗಳಲ್ಲಿ ಭಾಗವಹಿಸಬಹು-ದೇ ಹೊರತು, ಅವರಿಗೆ ಮತದಾನದ ಹಕ್ಕಿರುವುದಿಲ್ಲ' ಎಂಬ ವಾದ ಮಂಡಿಸಿದ್ದರು.

6ನೇ ಪುಟ ನೋಡಿ

ಆರು ಮತ ಅಂತರದ ಗೆಲುವು

ಚಿಕ್ಕಮಗಳೂರು: ವಿಧಾನ ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪ್ರಾಣೇಶ್ 1,188 ಹಾಗೂ ಕಾಂಗ್ರೆಸ್ ಅಭ್ಯರ್ಥಿ ಎ.ವಿ.ಗಾಯತ್ರಿ ಶಾಂತೇಗೌಡ 1,182 ಮತಗಳನ್ನು ಪಡೆದಿದ್ದರು. ಆರು ಮತಗಳಿಂದ ಪ್ರಾಣೇಶ್ ಗೆದ್ದಿದ್ದರು.

ಒಟ್ಟು 2,417 ಮತದಾರರು ಇದ್ದರು. ಈ ಪೈಕಿ 12 ನಾಮನಿರ್ದೇಶಿತ ಸದಸ್ಯರು ಇದ್ದರು. 2,410 ಮತಗಳು (ಶೇ 99.71) ಚಲಾವಣೆಯಾಗಿದ್ದವು. 2,371 ಮತಗಳು ಸಿಂಧು ಹಾಗೂ 39 ಮತಗಳು ಅಸಿಂಧುವಾಗಿದ್ದವು.

2021ರ ನವೆಂಬರ್ 16ರಂದು ಚುನಾವಣೆ ಅಧಿಸೂಚನೆ ಪ್ರಕಟವಾಗಿತ್ತು. ಐವರು ಅಭ್ಯರ್ಥಿಗಳು ಕಣದಲ್ಲಿದ್ದರು. ಡಿಸೆಂಬರ್ 10ರಂದು ಚುನಾವಣೆ ನಡೆದಿತ್ತು. 14ರಂದು ಮತ ಎಣಿಕೆ ನಡೆದಿತ್ತು.



भारतीय ताराभौतिकी संस्थान
INDIAN INSTITUTE OF ASTROPHYSICS
II ब्लॉक, कोरमंगला 2nd Block,
Koramangala, बेंगलूरु Bengaluru - 560034

रुचि की अभिव्यक्ति हेतु आमंत्रण सूचना
Notice Inviting for Expression of Interest

मुहरबंद निविदाएं निम्नवत कार्य के लिए आमंत्रित की जाती हैं
Sealed Expression of Interest (EOI) is invited for the following work:

1. मैसूर, कर्नाटक राज्य में आईआईए के लिए सिविल और एमईपी कार्यों के साथ तारामंडल भवन और संबद्ध भवनों का निर्माण।
   पीक्यू-निविदा सूचना संख्या आईआईए/बीएनजी/सिविल - एमईपी समग्र कार्य/मैसूर-तारामंडल/2022/ईओआई-सं.002 दिनांक 04.11.2022
   रुचि की अभिव्यक्ति (ईओआई) संस्थान की वेबसाइट www.iiap.res.in/tenders.htm से डाउनलोड की जा सकती है। रुचि की अभिव्यक्ति (ईओआई) प्राप्त करने की अंतिम तारीख 28 नवंबर 2022 को 15:00 बजे या उससे पहले है।
1. Construction of Planetarium Building and allied blocks with CIVIL and MEP works for IIA at Mysuru, Karnataka State.
   PQ-Tender Notice No. IIA/BNG/Civil – MEP Composite works/ Mysuru-Planetarium /2022/EOI-No.**002** dated 04.11.2022.

Detailed Expression of Interest (EOI) can be downloaded from Institute's Website **www.iiap.res.in/tenders.htm.** The last date for receipt of Expression of Interest (EOI) is on or before **28th November 2022 at 15:00 hours.**

प्रशासनिक अधिकारी
Administrative Officer

ಅಪೋಲೊ ಆಸ್ಪತ್ರೆಯಲ್ಲಿ ಮೋಸೆಸ್ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೋಲೊ ಆಸ್ಪತ್ರೆಯಲ್ಲಿ ಮೂತ್ರಕೋಶದ ಆರೈಕೆಗಾಗಿ (ಯುರೋಲೊಜಿ ಕೇರ್) ಮೋಸೆಸ್ 2.0 ತಂತ್ರಜ್ಞಾನವನ್ನು ಪ್ರಾರಂಭಿಸಲಾಗಿದೆ.

ಶೇಷಾದ್ರಿಪುರಂನಲ್ಲಿ ಇರುವ ಅಪೋಲೊ ಆಸ್ಪತ್ರೆಯಲ್ಲಿ ಈ ಸೇವೆಯನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಗಿದೆ.

ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ತೊಂದರೆ ಹಾಗೂ ಮೂತ್ರಪಿಂಡದಲ್ಲಿ ಕಲ್ಲು ಇರುವುದೂ ಸೇರಿ ಇತರೆ ಸಮಸ್ಯೆಗಳಿಗೆ ಸುಧಾರಿತ ಲೇಸರ್ ತಂತ್ರಜ್ಞಾನ ಮೂಲಕ ಚಿಕಿತ್ಸೆ ನೀಡಲು ಇದು ಸಹಕಾರಿ.

'ನೋವುರಹಿತ ಶಸ್ತ್ರಚಿಕಿತ್ಸೆ ಇದಾಗಿದ್ದು, ಕೇವಲ ಒಂದು ಗಂಟೆಯಲ್ಲಿ ಮೂತ್ರಪಿಂಡದಲ್ಲಿರುವ ಕಲ್ಲು ಮತ್ತು ಪ್ರಾಸ್ಟೇಟ್ ಅನ್ನು ತೆಗೆದುಹಾಕಲು ತಂತ್ರಜ್ಞಾನದಿಂದ ನೆರವು ಆಗಲಿದೆ' ಎಂದು ಆಸ್ಪತ್ರೆಯ ಪ್ರಕಟಣೆಯು ಗುರುವಾರ ತಿಳಿಸಿದೆ.

ಮೋಸೆಸ್ 2.0 ಎಂಬುದು ಹೋಲ್ಮಿಯಮ್ ಲೇಸರ್ ತಂತ್ರಜ್ಞಾನದಿಂದ ರಕ್ತ ಹೆಪ್ಪುಗಟ್ಟುವಿಕೆ ಮತ್ತು ರಕ್ತಸ್ರಾವ ತಡೆಯಲು ನೆರವಾಗುತ್ತದೆ. 120 ವ್ಯಾಟ್ ಮೂಲಕ ಹೋಲ್ಮಿಯಂ ಲೇಸರ್ ಚಿಕಿತ್ಸೆ ನೀಡಲಾಗುತ್ತದೆ. ಚೀನಾ ಮತ್ತು ಅಮೆರಿಕದಲ್ಲಿ ಈ ತಂತ್ರಜ್ಞಾನ ಬಳಸಿ ಚಿಕಿತ್ಸೆ ನೀಡಲಾಗುತ್ತದೆ.

'ಈ ಹಿಂದೆ ನಾವು ಮೂತ್ರಪಿಂಡದ ಕಲ್ಲು ಅಥವಾ ಪ್ರಾಸ್ಟೇಟ್ ತೆಗೆಯುವ ಶಸ್ತ್ರಚಿಕಿತ್ಸೆಗೆ ಮೊದಲು ರೋಗಿಗಳಿಗೆ ಸುಮಾರು 5ರಿಂದ 7 ದಿನಗಳವರೆಗೆ ರಕ್ತ ತೆಳುವಾಗುವುದನ್ನು ತಡೆಯುವ ಚಿಕಿತ್ಸೆ ನೀಡಬೇಕಿತ್ತು. ಇದು ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿತ್ತು. ಮೋಸೆಸ್ ತಂತ್ರಜ್ಞಾನದಿಂದ ರಕ್ತ ತೆಳುಗೊಳಿಸುವಿಕೆ ಚಿಕಿತ್ಸೆ ನೀಡುವ ಅಗತ್ಯವಿಲ್ಲ' ಎಂದು ಡಾ.ಟಿ.ಮನೋಹರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ 98867 8997 ಸಂಪರ್ಕಿಸಬಹುದು.

ವ್ಯಾಪಕ ಭ್ರಷ್ಟಾಚಾರದ ಆರೋಪ: ಲೋಕಾಯುಕ್ತ ಪೊಲೀಸರಿಂದ ಎಫ್‌ಐಆರ್

ಉಪ ನೋಂದಣಿ ಕಚೇರಿಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಮತ್ತು ಮಧ್ಯವರ್ತಿಗಳ ಹಾವಳಿ ಹೆಚ್ಚಿರುವ ಆರೋಪದ ಮೇಲೆ ಮೂರು ಎಫ್‌ಐಆರ್ ದಾಖಲು ಮಾಡಿರುವ ಲೋಕಾಯುಕ್ತ ಪೊಲೀಸರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ 21 ಉಪ ನೋಂದಣಿ ಕಚೇರಿಗಳ ಮೇಲೆ ಗುರುವಾರ ದಾಳಿಮಾಡಿ ಶೋಧ ನಡೆಸಿದ್ದಾರೆ.

ಲೋಕಾಯುಕ್ತದ ಪೊಲೀಸ್ ಮತ್ತು ನ್ಯಾಯಾಂಗ ವಿಭಾಗಗಳ ಅಧಿಕಾರಿಗಳ ಜಂಟಿ ತಂಡಗಳು ಜೂನ್ ತಿಂಗಳಲ್ಲಿ ಉಪ ನೋಂದಣಿ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ತಪಾಸಣೆ ನಡೆಸಿದ್ದವು. ಅಲ್ಲಿನ ಲೋಪಗಳು ಹಾಗೂ ಅಕ್ರಮಗಳ ಕುರಿತು ಲೋಕಾಯುಕ್ತರಿಗೆ ವರದಿ ಸಲ್ಲಿಸಿದ್ದವು.

ಆ ವರದಿಗಳನ್ನು ಆಧರಿಸಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಕಾರಿಗಳ ವಿರುದ್ಧ ಜುಲೈ ತಿಂಗಳಿನಲ್ಲಿ ವಿಚಾರಣೆ ಆರಂಭಿಸಿದ್ದರು. ಅದರ ಮುಂದುವರಿದ ಭಾಗವಾಗಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬನ್ನೇರುಘಟ್ಟ, ಯಲಹಂಕ, ಕಾಚರಕನಹಳ್ಳಿ, ಬಾಣಸವಾಡಿ, ಮಹದೇವಪುರ, ವರ್ತೂರು, ದೊಮ್ಮಲೂರು, ಬೇಗೂರು, ಜೆ.ಪಿ. ನಗರ, ಬನಶಂಕರಿ, ಬಸವನಗುಡಿ, ಕೆಂಗೇರಿ ಮತ್ತು ನಾಗವಾರ ಉಪ ನೋಂದಣಿ ಕಚೇರಿಗಳ ಮೇಲೆ ಗುರುವಾರ ಏಕಕಾಲಕ್ಕೆ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ತಡರಾತ್ರಿಯವರೆಗೂ ಶೋಧ ನಡೆಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ಆನೇಕಲ್, ಹೊಸಕೋಟೆ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ಹಾಗೂ ರಾಮನಗರ ಜಿಲ್ಲೆಯ ರಾಮನಗರ ಮತ್ತು ಕನಕಪುರ ಉಪ ನೋಂದಣಿ ಕಚೇರಿಗಳಲ್ಲೂ ಏಕಕಾಲಕ್ಕೆ ಶೋಧ ನಡೆಸಲಾಗಿದೆ.

ಮೂರು ಜಿಲ್ಲೆಗಳಲ್ಲೂ ಒಟ್ಟು 21 ಉಪ ನೋಂದಣಿ ಕಚೇರಿಗಳಲ್ಲಿ ಶೋಧನೆ ನಡೆಸಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲಾಗಿತ್ತು. ಎಲ್ಲ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿಮಾಡಲಾಯಿತು. ಒಟ್ಟು 21 ತಂಡಗಳನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ನಗದು, ದಲ್ಲಾಳಿಗಳು ವಶಕ್ಕೆ: ಆನೇಕಲ್, ಬೇಗೂರು, ಬನ್ನೇರುಘಟ್ಟ ಸೇರಿದಂತೆ ಹಲವು ಉಪ ನೋಂದಣಿ ಕಚೇರಿಗಳಲ್ಲಿ ಅಕ್ರಮವಾಗಿ ನಗದು ಸಂಗ್ರಹಿಸಿರುವುದು ಪತ್ತೆಯಾಗಿದೆ. ಕೆಲವು ಉಪ ನೋಂದಣಿ ಕಚೇರಿಗಳಲ್ಲಿ ಮಧ್ಯವರ್ತಿಗಳು ಕಂಡುಬಂದಿದ್ದು, ಅವರನ್ನೂ ವಶಕ್ಕೆ ಪಡೆಯಲಾಗಿದೆ. ಕೆಲವು ಕಚೇರಿಗಳಲ್ಲಿ ನಾಲ್ಕರಿಂದ ಐದು ಮಂದಿ ಮಧ್ಯವರ್ತಿಗಳು ಪತ್ತೆಯಾಗಿದ್ದಾರೆ ಎಂದು ಲೋಕಾಯುಕ್ತದ ಉನ್ನತ ಮೂಲಗಳು ಮಾಹಿತಿ ನೀಡಿವೆ.

ಬಂಧನಕ್ಕೆ ಸಿದ್ಧತೆ

'ಅಕ್ರಮವಾಗಿ ನಗದು ಸಂಗ್ರಹಿಸಿರುವ ಕಚೇರಿಗಳಲ್ಲಿನ ಸಿಬ್ಬಂದಿ ಮತ್ತು ಮಧ್ಯವರ್ತಿಗಳ ವಿಚಾರಣೆ ನಡೆಸಲಾಗುತ್ತಿದೆ. ವಿಚಾರಣೆ ಪೂರ್ಣಗೊಳಿಸಿದ ಬಳಿಕ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಇಲ್ಲಿ ಇನ್ನುಮುಂದೆ **ಷೆಡ್ಯೂಲ್ ಪ್ರಾಪರ್ಟಿ** ಎನ್ನಲಾಗುವ ಮತ್ತು ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ ಮತ್ತು ದಾಸರತಿಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, (1) ಸರ್ವೆ ನಂ. 87/12 (ಹಿಂದಿನ ಸರ್ವೆ ನಂ. 87/2ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 2 ಗುಂಟೆ, 0.25 ಗುಂಟೆ ಖರಾಬು ಹೊರತುಪಡಿಸಿ, (2) ಸರ್ವೆ ನಂ. 84/11 (ಹಿಂದಿನ ಸರ್ವೆ ನಂ. 84/8ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 5.5 ಗುಂಟೆ, (3) ಸರ್ವೆ ನಂ. 87/13 (ಹಿಂದಿನ ಸರ್ವೆ ನಂ. 87/2ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 2 ಗುಂಟೆ, 0.5 ಗುಂಟೆ ಖರಾಬು ಹೊರತುಪಡಿಸಿ, (4) ಸರ್ವೆ ನಂ. 87/15 (ಹಿಂದಿನ ಸರ್ವೆ ನಂ. 87/4ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 3.75 ಗುಂಟೆ, (5) ಸರ್ವೆ ನಂ. 84/12 (ಹಿಂದಿನ ಸರ್ವೆ ನಂ. 84/8ರಲ್ಲಿನ ಭಾಗ) ವಿಸ್ತೀರ್ಣ ಸುಮಾರು 10 ಗುಂಟೆ, (6) ಸರ್ವೆ ನಂ. 79/3 ವಿಸ್ತೀರ್ಣ ಸುಮಾರು 13.25 ಗುಂಟೆ ವಿಸ್ತೀರ್ಣವುಳ್ಳ ಕೃಷಿ ಜಮೀನುಗಳ ಎಲ್ಲಾ ಭೂಭಾಗಗಳನ್ನು, ಷೆಡ್ಯೂಲ್‌ನಲ್ಲಿ ನಿರ್ದಿಷ್ಟ ಐಟಂ ಎದುರಿಗೆ ಹೆಸರಿಸಲಾಗಿರುವ, ಅವುಗಳ ಪ್ರಸಕ್ತ ಮಾಲೀಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಅವುಗಳ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ ಅಥವಾ ವ್ಯಕ್ತಿಗಳಿಗಾಗಲಿ ಯಾವುದೇ ಸ್ವರೂಪದ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳಿದ್ದಲ್ಲಿ, ಅಥವಾ ಷೆಡ್ಯೂಲ್ ಸ್ವತ್ತಿಗೆ ವಿರುದ್ಧವಾಗಿ ಅಥವಾ ಸ್ವತ್ತಿನ ದಾಖಲಾತಿಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧವಾಗಲಿ ಯಾವುದೇ ಕ್ಲೇಮ್ ಹೊಂದಿದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ಈ ವ್ಯವಹಾರಕ್ಕೆ ಆಕ್ಷೇಪಣೆ ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಸದರಿ ನೋಟಿಸ್ ಹೊರಡಿಸಿದ ದಿನಾಂಕದಿಂದ **ಹದಿನೈದು ದಿನಗಳೊಳಗೆ** (15 ದಿನಗಳು), ತಾವು ಕ್ಲೇಮ್ ಮಾಡುವ ಷೆಡ್ಯೂಲ್ ಸ್ವತ್ತಿಗೆ ಅಥವಾ ಸ್ವತ್ತಿನ ಭಾಗಕ್ಕೆ ಸಂಬಂಧಿತ ಕ್ಲೇಮ್‌ನ್ನು ಪುರಸ್ಕರಿಸಬಲ್ಲ ಮತ್ತು ಖಚಿತಪಡಿಸಬಲ್ಲ ದಾಖಲಾತಿ ಪುರಾವೆಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಬರೆದು ತಿಳಿಸತಕ್ಕದ್ದು. ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಯಾವುದೇ ಸ್ವರೂಪದ ಕ್ಲೇಮ್‌ಗಳಿಲ್ಲ ಎಂದು ಪರಿಭಾವಿಸಿ ತಮ್ಮ ವ್ಯವಹಾರವನ್ನು ಮುಂದುವರಿಸುತ್ತಾರೆ.

ಷೆಡ್ಯೂಲ್

ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ ಮತ್ತು ದಾಸರತಿಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಎಲ್ಲಾ ಸೇರಿ ಒಟ್ಟು ಸುಮಾರು 36.5 ಗುಂಟೆ, ಜೊತೆಗೆ 0.75 ಗುಂಟೆ ಖರಾಬು ಎಲ್ಲಾ ಕೃಷಿ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸರ್ವೆ ನಂಬರ್ ವಿವರಗಳು ಹಾಗೂ ಚಕ್ಕುಬಂದಿ ಕೆಳಗಿನಂತಿರುತ್ತದೆ:–

ಐಟಂ ನಂ.	ಸರ್ವೆ ನಂ.	ಮಾಲೀಕರ ಹೆಸರು	ವಾಸ್ತವ ಕ್ಷೇತ್ರಫಲ		ಖರಾಬ್ ವಿಸ್ತೀರ್ಣ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
			ಎಕರೆ	ಗುಂಟೆ	ಎಕರೆ	ಗುಂಟೆ				
1.	87/12 (ಹಳೆಯ ನಂ. 87/2)	ಎನ್. ಬೈರೇಗೌಡ ಬಿನ್ ಬಿ.ಎಂ. ನಾರಾಯಣಸ್ವಾಮಿ	00	02	00	0.25	ಸರ್ವೆ ನಂ.86	ಸರ್ವೆ ನಂ. 91/7	ಸರ್ವೆ ನಂ. 87/2	ಸರ್ವೆ ನಂ. 87/13
2.	84/11 (ಹಳೆಯ ನಂ. 84/8)	ಎನ್. ಬೈರೇಗೌಡ ಬಿನ್ ಬಿ.ಎಂ. ನಾರಾಯಣಸ್ವಾಮಿ	00	5.5	00	00	ಸರ್ವೆ ನಂ. 84/12	ಸರ್ವೆ ನಂ. 93/9 & 93/10	ಸರ್ವೆ ನಂ. 84/7	ಸರ್ವೆ ನಂ. 84/9
3.	87/13 (ಹಳೆಯ ನಂ. 87/2)	ಬಿ.ಎಂ. ಬೈರಪ್ಪ ಬಿನ್ ಮುನಿವೆಂಕಟಪ್ಪ	00	02	00	0.5	ಸರ್ವೆ ನಂ. 86 & 87/4	ಸರ್ವೆ ನಂ. 91/1	ಸರ್ವೆ ನಂ. 87/12	ಸರ್ವೆ ನಂ. 87/3
4.	87/15 (ಹಳೆಯ ನಂ. 87/4)	ಬಿ.ಎಂ. ಬೈರಪ್ಪ ಬಿನ್ ಮುನಿವೆಂಕಟಪ್ಪ	00	3.75	00	00	ಸರ್ವೆ ನಂ. 87/16	ಸರ್ವೆ ನಂ. 87/14	ಸರ್ವೆ ನಂ. 87/4	ಸರ್ವೆ ನಂ. 87/11
5.	84/12 (ಹಳೆಯ ನಂ. 84/8)	ಬಿ.ಎಂ. ಬೈರಪ್ಪ ಬಿನ್ ಮುನಿವೆಂಕಟಪ್ಪ	00	10	00	00	ಸರ್ವೆ ನಂ. 84/8	ಸರ್ವೆ ನಂ. 84/11	ಸರ್ವೆ ನಂ. 84/7	ಸರ್ವೆ ನಂ. 84/9
6.	79/3	ಪ್ರಫುಲ್ಲಚಂದ್ರ	00	13.25	00	00	ಭೀಮಕನಹಳ್ಳಿ ಗ್ರಾಮದ ಸರಹದ್ದು	ಸರ್ವೆ ನಂ. 77/8	ಸರ್ವೆ ನಂ. 78/1	ಸರ್ವೆ ನಂ. 79/4
		ಒಟ್ಟು	00	36.5	00	0.75				

ಸಹಿ/– (ಕೆ.ಎನ್. ಗೀತಾ)
ಇಂಡಸ್‌ಲಾ
7ನೇ ಅಡ್ಡರಸ್ತೆ, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560001, ಫೋನ್ ನಂ.: 91–80–42423000

ಮತ್ತೆ ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ: ಬಿ.ಸಿ. ಪಾಟೀಲ

ಬೆಂಗಳೂರು: 'ಒಡೆದು ಹೋದ ಹಾಲು, ಮನಸ್ಸು ಮತ್ತೆ ಒಂದಾಗಲು ಸಾಧ್ಯವೇ ಇಲ್ಲ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

ಪಕ್ಷತ್ಯಜಿಸಿದವರೂ ಸೇರಿದಂತೆ ಎಲ್ಲರಿಗೂ ಕಾಂಗ್ರೆಸ್ ಸೇರಲು ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅಂತಹ ಜರೂರತ್ತು ಇಲ್ಲ. ಈಗಾಗಲೇ ವಿಚ್ಛೇದನ ಪಡೆದು ಬಂದಾಗಿದೆ. ಮತ್ತೆ ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ' ಎಂದರು.

'ಕಾಂಗ್ರೆಸ್‌ಗೆ ಹಳೆ ಗಂಡನ ಪಾದವೇ ಗತಿ ಎಂಬಂತೆ ಕರೆಯುತ್ತಿದ್ದಾರೆ. ಇಲ್ಲಿ (ಬಿಜೆಪಿ) ನಾವು ಚೆನ್ನಾಗಿದ್ದೇವೆ. ವಿಧಾನ ಸಭೆಯಲ್ಲಿ ಸಿದ್ದರಾಮಯ್ಯ ವೀರಾವೇಶದಿಂದ ಮಾತನಾಡಿರುವುದನ್ನು ಕೇಳಿದ್ದೇವೆ. ಅದಾದ ಮೇಲೂ ನಾವು ಯಾಕೆ ಹೋಗುತ್ತೇವೆ' ಎಂದು ತಿರುಗೇಟು ನೀಡಿದರು.

ಮೂವರು ಮುಖ್ಯ ಎಂಜಿನಿಯರ್ ವರ್ಗಾವಣೆ

ಬೆಂಗಳೂರು: ಬಿಬಿಎಂಪಿಯ ಇಬ್ಬರು ಮುಖ್ಯ ಎಂಜಿನಿಯರ್‌ಗಳನ್ನು ವರ್ಗಾವಣೆ ಮಾಡಿರುವ ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಸ್ಮಾರ್ಟ್ ಸಿಟಿಯಿಂದ ಒಬ್ಬರನ್ನು ಬಿಬಿಎಂಪಿಗೆ ವರ್ಗಾವಣೆ ಮಾಡಿದೆ.

ಬಿಬಿಎಂಪಿ ಯೋಜನೆ ವಿಭಾಗ ಹಾಗೂ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದ ಎಂ. ಲೋಕೇಶ್ ಅವರನ್ನು ದಾಸರಹಳ್ಳಿ ವಲಯ ಮುಖ್ಯ ಎಂಜಿನಿಯರ್ ಆಗಿ ವರ್ಗಾಯಿಸಲಾಗಿದೆ.

ಮಹದೇವಪುರ ವಲಯದ ಅಧೀಕ್ಷಕ ಎಂಜಿನಿಯರ್ ಪ್ರವೀಣ್ ಲಿಂಗಯ್ಯ ಅವರಿಗೆ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಬೆಂಗಳೂರು ಸ್ಮಾರ್ಟ್ ಸಿಟಿಯ ಮುಖ್ಯ ಎಂಜಿನಿಯರ್ ವಿಯಾಯಕ ಸೂಗೂರು ಅವರನ್ನು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿ ವರ್ಗಾವಣೆ ಮಾಡಲಾಗಿದೆ. ನ.2 ರಂದು ಈ ಆದೇಶವಾಗಿದ್ದರೂ, ಗುರುವಾರದ ಸಂಜೆಯವರೆಗೂ ವರ್ಗವಾದ ಹುದ್ದೆಯಲ್ಲಿ ಈ ಮೂವರೂ ಅಧಿಕಾರ ಸ್ವೀಕರಿಸಿಲ್ಲ.

ನೈಋತ್ಯ ರೈಲ್ವೆ
Azadi Ka Amrit Mahotsav
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/100/2022 ದಿನಾಂಕ : 26–10–2022

ಕೆಲಸದ ಹೆಸರು	ಅಂದಾಜು ಮೌಲ್ಯ
ಮಲುಗೂರ್ (ಚೈನೇಜ್:0.000) ಪಾಲಸಮುದ್ರಂ (ಚೈನೇಜ್:17180.000) ನಡುವೆ ಸಿಗ್ನಲಿಂಗ್ ಟೆಲಿಕಮ್ಯುನಿಕೇಶನ್ ಮತ್ತು ವಿದ್ಯುತ್ ಕಾಮಗಾರಿಗಳು ಒಳಗೊಂಡಂತೆ ಹೊಸ ವಿದ್ಯುದೀಕೃತ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣ (17.18 ಕಿ.ಮೀ). **(ಟೆಂಡರ್ ಉಲ್ಲೇಖ ಸಂ. ಎಂಎಲ್‌ಯು–ಪಾಲಸಮುದ್ರಂ–ಇಪಿಸಿ–01)**	ರೂ. 232,05,30,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **18–02–2023 ರಂದು 11:30 ಗಂಟೆವರೆಗೆ**

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/101/2022 ದಿನಾಂಕ : 28–10–2022

ಕೆಲಸದ ಹೆಸರು	ಅಂದಾಜು ಮೌಲ್ಯ
ಲೋಂಡಾ – ಮೀರಜ್ ಡಬ್ಲಿಂಗ್ ಯೋಜನೆ : ಹುಬ್ಬಳ್ಳಿ – ಲೋಂಡಾ ಸೆಕ್ಷನ್ – ಖಾನಾಪುರ್ – ಅಸೋಗಾ ರಸ್ತೆಯಲ್ಲಿ ಖಾನಾಪುರ ಯಾರ್ಡ್‌ನಲ್ಲಿ ಕಿ.ಮೀ.584/600–700ನಲ್ಲಿ ಎಲ್‌ಸಿ ಸಂ.360 ಬದಲಿಗೆ ಸಂಪರ್ಕಗಳನ್ನು ಒಳಗೊಂಡಂತೆ ಬಾಕ್ಸ್ ಪುಷಿಂಗ್ ಟೆಕ್ನಿಕ್‌ನಿಂದ ಆರ್‌ಸಿಸಿ ಬಾಕ್ಸ್‌ಗಳೊಂದಿಗೆ 2X5.5X5.0 ಮೀ ರೈಲು ಕೆಳಸೇತುವೆಯ ನಿರ್ಮಾಣ. **(ಟೆಂಡರ್ ಉಲ್ಲೇಖ ಸಂ. ಎಲ್‌ಡಿ–ಎಂಆರ್‌ಜೆ–71–ಎಲ್‌ಸಿ360)**	ರೂ. 16,36,51,534/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **21–11–2022 ರಂದು 15:00 ಗಂಟೆವರೆಗೆ**

ಹೆಚ್ಚಿನ ವಿವರಗಳಿಗಾಗಿ **www.ireps.gov.in** ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ
ಬೆಂಗಳೂರು ದಂಡು
ಪಿಯುಬಿ/462/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ಸತ್ಯ ಸಾಯಿಬಾಬಾ ಮ್ಯೂಸಿಯಂ ಉದ್ಘಾಟಿಸಿದ ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರ ಜೀವನ ಮತ್ತು ಬೋಧನೆಗಳ ಸಂಪೂರ್ಣ ಡಿಜಿಟಲ್ ಅನುಭವ ಕೇಂದ್ರವಾದ 'ಶ್ರೀ ಸತ್ಯಸಾಯಿ ದಿವ್ಯಸ್ಮೃತಿ' ಮ್ಯೂಸಿಯಂ ಉದ್ಘಾಟಿಸಿದರು.

ವೈಟ್‌ಫೀಲ್ಡ್ ರಸ್ತೆಯ ಕಾಡುಗುಡಿಯಲ್ಲಿರುವ ಶ್ರೀ ಸತ್ಯಸಾಯಿ ಬಾಬಾ ಆಶ್ರಮದ ಬೃಂದಾವನದಲ್ಲಿ ಮ್ಯೂಸಿಯಂ ಲೋಕಾರ್ಪಣೆ ಮಾಡಿ ಮಾತನಾಡಿದರು.

'ಸತ್ಯಸಾಯಿ ಬಾಬಾ ಅವರು ಮನುಕುಲಕ್ಕೆ ದೈವ ಮಾನವರು, ಪವಾಡ ಪುರುಷರು. ಇಲ್ಲಿಗೆ ಬಂದು ನಾನು ಪುನೀತನಾದೆ. ಮನುಷ್ಯನಿಗೆ ಸ್ವಲ್ಪವಾದರೂ ಭಕ್ತಿ-ಭಾವನೆ ತುಂಬಿರಬೇಕು. ಈ ಆಶ್ರಮ ನಿತ್ಯ ಶಾಂತಿಯುತ ಮಂದಿರವಾಗಿದ್ದು, ಇಲ್ಲಿಗೆ ಬರುವ ಭಕ್ತಿರಿಗೆ ಬಾಬಾ ಅವರು ಮಂಗಳವನ್ನುಂಟು ಮಾಡಲಿ' ಎಂದರು.

ಶಾಸಕ ಅರವಿಂದ್ ಲಿಂಬಾವಳಿ ಮಾತನಾಡಿ, 'ನಾನು ಚಿಕ್ಕವನಿದ್ದಾಗ ನಮ್ಮ ಗುರುಗಳು ಶಾಲೆಯಿಂದ ಇದೇ ಆಶ್ರಮಕ್ಕೆ ಪ್ರವಾಸಕ್ಕೆ ಕರೆದುಕೊಂಡು ಬಂದಿದ್ದರು. ಈಗ ಇದೇ ಕ್ಷೇತ್ರಕ್ಕೆ ಶಾಸಕನಾಗಿರುವುದು ನನ್ನ ಪುಣ್ಯ ಎಂದು ಭಾವಿಸುತ್ತೇನೆ' ಎಂದರು.

ಡಿಜಿಟಲ್ ಮ್ಯೂಸಿಯಂ ಸ್ಪರ್ಶ ಗೋಡೆಗಳು, ಬಹು ಭಾಷೆಗಳ ಆಡಿಯೋ ಕ್ಲಿಪ್‌ಗಳು ಮೊದಲಾದವನ್ನು ಸಿಬ್ಬಂದಿ ಮುಖ್ಯಮಂತ್ರಿಗೆ ವಿವರಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ರೀ ಸತ್ಯ ಸಾಯಿಬಾಬಾ ಮ್ಯೂಸಿಯಂ ಉದ್ಘಾಟಿಸಿದರು. ಶಾಸಕ ಅರವಿಂದ ಲಿಂಬಾವಳಿ, ಸತ್ಯ ಸಾಯಿ ಸೆಂಟ್ರಲ್ ಟ್ರಸ್ಟ್ ಮ್ಯಾನೇಜ್‌ಮೆಂಟ್ ಟ್ರಸ್ಟಿ ರತ್ನಾಕರ್, ನಾಗನಂದ್, ಮೋಹನ್, ಸರ್ಕಾರದ ಅಪಾರ ಮುಖ್ಯ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್, ವಿನಯ್ ಇದ್ದರು.

ಇಂಗ್ಲಿಷ್ ರೈಮ್ ಬದಲು ಕನ್ನಡ ಪ್ರಾಸಪದ್ಯ

ಬೆಂಗಳೂರು: ಮಕ್ಕಳನ್ನು ಭಾವನಾ ಲೋಕಕ್ಕೆ ಕರೆದೊಯ್ಯುವ 'ಟ್ವಿಂಕಲ್, ಟ್ವಿಂಕಲ್ ಲಿಟಲ್ ಸ್ಟಾರ್' ಮತ್ತು 'ಬಾ ಬಾ ಬ್ಲ್ಯಾಕ್ ಶೀಪ್'ನಂಥ ಇಂಗ್ಲಿಷ್ ರೈಮ್‌ಗಳನ್ನು ಶೀಘ್ರದಲ್ಲೇ 'ಕರ್ನಾಟಕ ಪಠ್ಯಕ್ರಮದ ಚೌಕಟ್ಟು' (ಕೆಸಿಎಫ್) ಅಡಿಯಲ್ಲಿ 'ಸ್ಥಳೀಯ' ವಿಷಯದೊಂದಿಗೆ ಬದಲಾಯಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ಕಿಂಡರ್‌ಗಾರ್ಟನ್ ಮತ್ತು ಅಂಗನವಾಡಿಗಳನ್ನು ಒಳಗೊಂಡಿರುವ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಶಿಕ್ಷಣ ವಿಷಯವನ್ನು ಕೆಸಿಎಫ್ ಒದಗಿಸುತ್ತದೆ. ಸದ್ಯ 1ನೇ ತರಗತಿಗೂ ಮೊದಲು ಮಕ್ಕಳಿಗೆ ಸರ್ಕಾರ ನಿಗದಿಪಡಿಸಿದ ಪಠ್ಯಕ್ರಮ ಇಲ್ಲ.

2ನೇ ತರಗತಿಯವರೆಗಿನ ಶಿಕ್ಷಣ ಶಾಸ್ತ್ರವನ್ನು ಸೂಚಿಸುವ ಬಾಲ್ಯದ ಶಿಕ್ಷಣಕ್ಕಾಗಿ ಕೆಸಿಎಫ್ ಮುಖ್ಯವಾಗಿ ಸ್ಥಳೀಯ ವಿಷಯಗಳು ಮತ್ತು ಮಾತೃಭಾಷೆ ಮೇಲೆ ಕೇಂದ್ರೀಕರಿಸುತ್ತದೆ. ಪ್ರಾಸಗಳು ಕೂಡಾ ಸ್ಥಳೀಯ ವಿಷಯಗಳ ಮೇಲೆ ಆಧಾರಿತವಾಗಿರುತ್ತವೆ. ಸ್ಥಳೀಯ ಕನ್ನಡ ಪ್ರಾಸಗಳನ್ನು ಇಂಗ್ಲಿಷ್‌ಗೆ ಅನುವಾದಿಸಲಾಗುವುದು. ಇದರಿಂದ ವಿದ್ಯಾರ್ಥಿಗಳ ಕಲಿಕೆ ಸ್ಥಳೀಯವಾಗಲಿದೆ.

'ಬಾಲ್ಯದ ಶಿಕ್ಷಣದ ಮಹತ್ವ ಮತ್ತು ಎನ್‌ಇಪಿಯ ಶಿಫಾರಸುಗಳನ್ನು ಪರಿಗಣಿಸಿ ಕೆಸಿಎಫ್ ಸಿದ್ಧಪಡಿಸಲಾಗುತ್ತಿದೆ. ಡಿ. 10ರ ಒಳಗೆ ಕೆಸಿಎಫ್ ಬಿಡುಗಡೆ ಮಾಡುತ್ತೇವೆ. ಆರಂಭಿಕ ಶಿಕ್ಷಣವು ಹೆಚ್ಚಾಗಿ ಚಟುವಟಿಕೆ ಆಧಾರಿತ ಆಗಿರುವುದರಿಂದ ಪಠ್ಯಕ್ರಮವನ್ನು ಸಿದ್ಧಪಡಿಸಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ' ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಶಿಕ್ಷಣ ಸಚಿವರೊಂದಿಗೆ ನವದೆಹಲಿಯಲ್ಲಿ ಬುಧವಾರ ಸಭೆ ನಡೆಸಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಸ್ಥಳೀಯ ವಿಷಯ ಆಧಾರಿತ ಪಠ್ಯಕ್ರಮ ಸಿದ್ಧಪಡಿಸುವಂತೆ ಸೂಚನೆ ನೀಡಿದ್ದಾರೆ. ಈ ಸಭೆಯಲ್ಲಿ ನಾಗೇಶ್ ಕೂಡಾ ಭಾಗವಹಿಸಿದ್ದರು.

'ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಗೆ ಮಹತ್ವ ನೀಡುವ ಜೊತೆಗೆ, ಪಠ್ಯಕ್ರಮವನ್ನು ಸ್ಥಳೀಯಗೊಳಿಸುವಂತೆ ಕೇಂದ್ರ ಸಚಿವರು ಸೂಚನೆ ನೀಡಿದ್ದಾರೆ. ಆರಂಭಿಕ ಶಿಕ್ಷಣಕ್ಕೆ ಪಠ್ಯಕ್ರಮ ಸೀಮಿತ ಆಗಿರುವುದರಿಂದ ಸ್ಥಳೀಯ ಸ್ವಾದ ತರುವುದು ಕಷ್ಟವಲ್ಲ' ಎಂದು ನಾಗೇಶ್ ಹೇಳಿದರು.

'ಉದಾಹರಣೆಗೆ, ಕರಾವಳಿ ಅಥವಾ ಮಲೆನಾಡು ಪ್ರದೇಶದ ಮಕ್ಕಳು ಸ್ಥಳೀಯ ಭೌಗೋಳಿಕತೆ, ಇತಿಹಾಸ, ವ್ಯಕ್ತಿಗಳು, ಸ್ಥಳಗಳು, ಆಹಾರ, ಹವಾಮಾನ, ಬೆಳೆಗಳು ಇತ್ಯಾದಿಗಳನ್ನು ಕಲಿಯಲಿದ್ದಾರೆ. ಉತ್ತರ ಕರ್ನಾಟಕದ ಮಗುವಿಗೆ ಬೆಂಗಳೂರಿನಲ್ಲಿರುವ ಕಬ್ಬನ್ ಪಾರ್ಕ್ ಅಥವಾ ಲಾಲ್‌ಬಾಗ್ ಬಗ್ಗೆ ಕಲಿಸುವ ಅಗತ್ಯವೇನು. ಅವರು ತಮ್ಮ ಪ್ರದೇಶ, ನೆರೆಹೊರೆಯ ಬಗ್ಗೆ ಮೊದಲು ತಿಳಿದುಕೊಳ್ಳಬೇಕು' ಎಂದೂ ಅವರು ಸಮರ್ಥಿಸಿದರು.

ಹೊರವರ್ತುಲ ರಸ್ತೆಯ ಕಂಪನಿಗಳ ಒಕ್ಕೂಟ, ಸಂಘಸಂಸ್ಥೆಗಳ ಪ್ರತಿನಿಧಿಗಳ ಜೊತೆ ಅಶ್ವತ್ಥನಾರಾಯಣ ಸಭೆ

ಹೊರವರ್ತುಲ ರಸ್ತೆ ಸಮಸ್ಯೆ: 14ರಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಹೊರವರ್ತುಲ ರಸ್ತೆ ಪ್ರದೇಶದಲ್ಲಿ ಕಂಪನಿಗಳು ಮತ್ತು ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದ ಇದೇ 14ರಂದು ಆ ಪ್ರದೇಶದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ವೀಕ್ಷಣೆ ನಡೆಸಿ, ಉದ್ಯಮಿಗಳು ಮತ್ತು ಜನಸಾಮಾನ್ಯರ ಜತೆ ಸಭೆ ನಡೆಸಲಿದ್ದಾರೆ' ಎಂದು ಐಟಿ-ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಹೊರವರ್ತುಲ ರಸ್ತೆಯ ಕಂಪನಿಗಳ ಒಕ್ಕೂಟ (ಓರ್ರಾ) ಮತ್ತು ಇತರ ಕೆಲವು ಸಂಘ–ಸಂಸ್ಥೆಗಳ ಪ್ರತಿನಿಧಿಗಳ ಜೊತೆ ನಗರದ ಮೂಲಸೌಲಭ್ಯ ಸಮಸ್ಯೆ ನಿವಾರಣೆ ಕುರಿತು ವಿಧಾನಸೌಧದಲ್ಲಿ ಗುರುವಾರ ಅವರು ಸಭೆ ನಡೆಸಿದರು. ಈ ಪ್ರದೇಶದ ಸಮಸ್ಯೆಗಳ ನಿವಾರಣೆಗೆ ಪ್ರತಿ ತಿಂಗಳೂ ಸಭೆ ನಡೆಸಲಾಗುವುದು ಎನ್ನುವ ಸರ್ಕಾರದ ತೀರ್ಮಾನದಂತೆ ಈ ಸಭೆ ಏರ್ಪಡಿಸಲಾಗಿತ್ತು.

ನಂತರ ಮಾತನಾಡಿದ ಸಚಿವರು, 'ಹೊರವರ್ತುಲ ರಸ್ತೆಯ 17 ಕಿ.ಮೀ. ಪ್ರದೇಶವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಉದ್ಯಮಿಗಳು ಸರ್ಕಾರದ ಗಮನ ಸೆಳೆದಿದ್ದಾರೆ. ಇಲ್ಲಿ ಸುಗಮ ಸಂಚಾರ, ಒಳಚರಂಡಿ, ಒತ್ತುವರಿ, ಮೆಟ್ರೊ ಕಾಮಗಾರಿ ಇತ್ಯಾದಿಗೆ ಆದ್ಯತೆ ನೀಡಲಾಗುವುದು. ಸರ್ವೀಸ್ ರಸ್ತೆಗಳನ್ನೂ ಮತ್ತಷ್ಟು ಸುಧಾರಿಸಲಾಗುವುದು' ಎಂದರು.

'50 ವರ್ಷಗಳಲ್ಲೇ ಕಂಡು ಕೇಳರಿಯದಂಥ ಮಳೆ ಈ ಬಾರಿ ಬಂದಿದೆ. ಇದರಿಂದ ಕೆಲವು ಸಮಸ್ಯೆಗಳಾಗಿರುವುದು ನಿಜ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಪರಿಹಾರ ಮಾರ್ಗೋಪಾಯಗಳನ್ನು ಸೂಚಿಸುತ್ತಿದ್ದಾರೆ' ಎಂದರು.

'ಸಂಚಾರ ನಿಯಮಗಳು, ಪಾರ್ಕಿಂಗ್, ಸಮೂಹ ಸಾರಿಗೆ ಇತ್ಯಾದಿಗಳ ಬಗ್ಗೆ ಮಕ್ಕಳಿಗೆ ನಾವು ಶಾಲಾ ಹಂತದಿಂದಲೇ ಜಾಗೃತಿ ಮೂಡಿಸಬೇಕು. ಅದರ ಜತೆಗೆ ಕಂಪನಿಗಳು ಹೊರವರ್ತುಲ ರಸ್ತೆ ಪ್ರದೇಶದ ಮೂಲಸೌಲಭ್ಯ ಸುಧಾರಣೆಗೆ ಸಿಎಸ್‌ಆರ್ ನಿಧಿಯನ್ನು ಹೇಗೆ ವಿನಿಯೋಗಿಸಬಹುದು ಎನ್ನುವ ಬಗ್ಗೆ ತೀರ್ಮಾನಿಸಬೇಕು' ಎಂದು ಅವರು ಅಭಿಪ್ರಾಯಪಟ್ಟರು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮಹದೇವಪುರ ವಲಯದ ವಿಶೇಷ ಆಯುಕ್ತ ಡಾ. ತ್ರಿಲೋಕಚಂದ್ರ, ಐಟಿ-ಬಿಟಿ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್, ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಡಾ. ರವಿಕಾಂತೇಗೌಡ ಇದ್ದರು.

ಉದ್ಯಮಿಗಳ ಪರವಾಗಿ ನಾಸ್ಕಾಂ ಪ್ರಾದೇಶಿಕ ಮುಖ್ಯಸ್ಥ ಭಾಸ್ಕರ್ ವರ್ಮ, ಏಬಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸರಾವ್ ಚಂದನ್, ಗೋಲ್ಡ್‌ಮನ್ ಸ್ಯಾಕ್ಸ್‌ನ ರವಿಕೃಷ್ಣನ್, ವಿಎಂ ವೇರ್‌ನ ರಾಮಕುಮಾರ್ ನಾರಾಯಣನ್, ಓರ್ರಾ ಸಂಘಟನೆಯ ಪ್ರತಿನಿಧಿಗಳಾದ ಮಾನಸ್ ದಾಸ್, ಅರ್ಚನಾ ತಾಯಡೆ, ಅರವಿಂದ್ ಅಯ್ಯಾಸ್ವಾಮಿ, ನಿಧಿ ಪ್ರತಾಪನೇನಿ, ಕೆ.ಎಂ. ಮೋಹನ್, ಕೃಷ್ಣಕುಮಾರ ಗೌಡ ಇದ್ದರು.

'ಮಲ್ಲೇಶ್ವರ ರಸ್ತೆ ಕಾಮಗಾರಿ ಡಿಸೆಂಬರ್‌ನಲ್ಲಿ ಮುಕ್ತಾಯ'

'ಮಲ್ಲೇಶ್ವರ ಕ್ಷೇತ್ರದಲ್ಲಿ ವೈಟ್ ಟಾಪಿಂಗ್, ಒಳಚರಂಡಿ ಮತ್ತು ಕುಡಿಯುವ ನೀರಿನ ಕೊಳವೆ ಜೋಡಣೆ, ಹೊಸ ಮ್ಯಾನ್‌ಹೋಲ್‌ಗಳ ಅಳವಡಿಕೆ, ಡಕ್ಟ್ ನಿರ್ಮಾಣ ಕಾಮಗಾರಿಗಳು ಭರದಿಂದ ನಡೆಯುತ್ತಿದ್ದು, ಡಿಸೆಂಬರ್ ವೇಳೆಗೆ ಬಹುತೇಕ ಕಾಮಗಾರಿ ಪೂರ್ಣವಾಗಲಿದೆ' ಎಂದು ಅಶ್ವತ್ಥನಾರಾಯಣ ತಿಳಿಸಿದರು.

'ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿ ಸುಲಭವಾಗಿ ನಡೆಯುತ್ತದೆ. ಆದರೆ, ವಸತಿಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ ಮಾಡುವಾಗ ಹಲವು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ರಸ್ತೆಗಳ ಗುಂಡಿ ಮುಚ್ಚುವ ಕೆಲಸ ಮಳೆಯಿಂದಾಗಿ ನಿಧಾನವಾಗಿದೆ. ಮಳೆ ನಿಂತ ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಂಡು, ಫೆಬ್ರುವರಿ ವೇಳೆಗೆ ಮುಗಿಸಲಾಗುವುದು' ಎಂದರು.

'ಇಷ್ಟು ವಿಪರೀತ ಮಳೆ ಕಳೆದ 50 ವರ್ಷಗಳಿಂದ ಕಂಡಿರಲಿಲ್ಲ. ಈ ವರ್ಷ ನವೆಂಬರ್‌ನಲ್ಲೂ ಮಳೆ ನಿಂತಿಲ್ಲ. ಹೀಗಾಗಿ ತೊಂದರೆ ಆಗುತ್ತಿರುವುದು ನಿಜ. ಕೇವಲ ಡಾಂಬರು ಹಾಕುವುದರಿಂದ ರಸ್ತೆಗಳ ಅಭಿವೃದ್ಧಿ ಮುಗಿಯುವುದಿಲ್ಲ. ಬದಲಿಗೆ ಪ್ರತಿಯೊಂದರಲ್ಲೂ ವೈಜ್ಞಾನಿಕ ವಿಧಾನಕ್ಕೆ ಈಗ ಒತ್ತು ಕೊಡಲಾಗುತ್ತಿದೆ' ಎಂದು ಹೇಳಿದರು.

'ನಗರದ ಹಳೆಯ ಬಡಾವಣೆಗಳಲ್ಲಿ ಮಲ್ಲೇಶ್ವರ ಒಂದಾಗಿದೆ. ಇಲ್ಲಿ ಬಹಳ ಹಿಂದೆ ಕೇವಲ ಆರು ಇಂಚಿನ ಡ್ರೈನೇಜ್ ಕೊಳವೆ ಹಾಕಲಾಗಿತ್ತು. ಈಗ 12 ಇಂಚಿನ ಪೈಪ್ ಹಾಕಲಾಗುತ್ತಿದೆ. ಜತೆಗೆ ಕುಸಿದು ಹೋಗಿದ್ದ ಹಳೆಯ ಮ್ಯಾನ್‌ಹೋಲ್‌ಗಳ ಜಾಗದಲ್ಲಿ ಹೊಸದಾಗಿ 3 ಸಾವಿರ ಮ್ಯಾನ್‌ಹೋಲ್‌ಗಳನ್ನು ನಿರ್ಮಿಸಲಾಗುತ್ತಿದೆ. ಹಾಗೆಯೇ, ಜನರ ಸುರಕ್ಷತೆ ದೃಷ್ಟಿಯಿಂದ ವಿದ್ಯುತ್ ಸಂಪರ್ಕಕ್ಕೆ ಡಕ್ಟ್‌ಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಪಾದಚಾರಿ ಮಾರ್ಗಗಳನ್ನು ಜನಸ್ನೇಹಿಯಾಗಿ ಮಾಡುತ್ತಿದ್ದೇವೆ. ಇವೆಲ್ಲವೂ ಮುಗಿದರೆ ಮುಂದಿನ 30 ವರ್ಷ ಕಾಲ ಪುನಃ ಕ್ಷೇತ್ರದಲ್ಲಿ ರಸ್ತೆಯನ್ನು ಅಗೆಯಬೇಕಾದ ಅಗತ್ಯವೇ ಇರುವುದಿಲ್ಲ' ಎಂದು ಸಚಿವರು ವಿವರಿಸಿದರು.

TORQUE

"ಹಾಡಿರಿ ಮಿಯಾ ಮಲ್ಹಾರ್ ಅಥವಾ ಭೀಮಪಲಾಸಿ, TOREX ಕಾಫ್ ಸಿರಪ್ ಇದ್ದಲ್ಲಿ ಕೆಮ್ಮಿಗೆ ಜಾಗವಿಲ್ಲ"

TOREX®
COUGH SYRUP HAI TO ALVIDA KHANSI

Follow us on: /TorexSyrup /TorexSyrup /TorexSyrup

For more information, please call or WhatsApp us: +91 977 921 4455 / care@torquepharma.com

ಫೆಬ್ರುವರಿಯಲ್ಲಿ ಬಜೆಟ್ ಮಂಡನೆ?

ಬೆಂಗಳೂರು: ಫೆಬ್ರುವರಿಯಲ್ಲಿ ಬಜೆಟ್ ಮಂಡಿಸುವ ಸಾಧ್ಯತೆ ಇದ್ದು, ಈ ಬಗ್ಗೆ ಚಿಂತನೆ ನಡೆದಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನ ನಡೆಯಲಿದ್ದು, ಈ ಸಂಬಂಧ ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಜನವರಿಯಲ್ಲಿ ಜಂಟಿ ಅಧಿವೇಶನ ನಡೆಸಬೇಕಿದೆ ಎಂದು ಸುದ್ದಿಗಾರರಿಗೆ ಹೇಳಿದರು.

‘ಹೊನ್ನಾಳಿ ಪ್ರಕರಣ: ಸೂಕ್ತ ತನಿಖೆ’

ಬೆಂಗಳೂರು: ಶಾಸಕ ರೇಣುಕಾಚಾರ್ಯ ಅವರ ಸೋದರನ ಮಗ ಮೃತಪಟ್ಟ ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ರೇಣುಕಾಚಾರ್ಯ ಅವರು ಆಘಾತಕ್ಕೆ ಒಳಗಾದಂತೆ ನನಗೂ ಆಘಾತವಾಗಿದೆ. ಅವರ ಸೋದರನ ಜತೆಗೂ ಮಾತನಾಡುವೆ. ಪ್ರಕರಣದ ಹಿನ್ನೆಲೆ ಅವರಿಗೆ ಗೊತ್ತಿರಬಹುದು. ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುವುದು. ಜಿಲ್ಲೆಯ ಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ’ ಎಂದರು.

ಹಣಕಾಸು ಇಲಾಖೆ ಒಪ್ಪಿಗೆ; ವಾರದಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ

ಮೆಟ್ರೊ 3ನೇ ಹಂತಕ್ಕೆ ಅನುಮೋದನೆ

• ನವೀನ್ ಮಿನೇಜಸ್

ಬೆಂಗಳೂರು: ನಗರದಲ್ಲಿ ಸಾರ್ವಜನಿಕ ಸೇವೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮಹತ್ವದ ನಿರ್ಧಾರವೊಂದನ್ನು ರಾಜ್ಯ ಸರ್ಕಾರ ಕೈಗೊಂಡಿದ್ದು, 3ನೇ ಹಂತದ ಮೆಟ್ರೊ ರೈಲು ಯೋಜನೆಗೆ ಹಣಕಾಸು ಇಲಾಖೆ ತಾತ್ವಿಕ ಅನುಮೋದನೆ ನೀಡಿದೆ.

ಮೆಟ್ರೊ 3ನೇ ಹಂತದ(ಎ) ಯೋಜನೆಯು ಎರಡು ಮಾರ್ಗಗಳನ್ನು ಒಳಗೊಂಡಿವೆ. ಪಶ್ಚಿಮದ ಹೊರ ವರ್ತುಲ ರಸ್ತೆಯಲ್ಲಿ ಕೆಂಪಾಪುರದಿಂದ ಜೆ.ಪಿ.ನಗರದ 4ನೇ ಹಂತದ ತನಕ 32.16 ಕಿಲೋ ಮೀಟರ್, ಮಾಗಡಿ ರಸ್ತೆಯಲ್ಲಿ ಹೊಸಹಳ್ಳಿ ಮೆಟ್ರೊ ನಿಲ್ದಾಣದಿಂದ ಕಡಬಗೆರೆ ತನಕ 12.82 ಕಿಲೋ ಮೀಟರ್ ಉದ್ದದ ಮಾರ್ಗ ನಿರ್ಮಾಣವಾಗಲಿದೆ.

ಈಗಾಗಲೇ ಅಸ್ತಿತ್ವದಲ್ಲಿರುವ ಮಾದರಿಯಲ್ಲೇ ಬಾಹ್ಯ ಮೂಲಗಳಿಂದ ಶೇ 60ರಷ್ಟು ಸಾಲ, ರಾಜ್ಯ ಮತ್ತು ಕೇಂದ್ರ ಸರ್ಕಾರ ಶೇ 20ರಷ್ಟು ಭರಿಸುವ ಮೂಲಕ ಹೊಸ ಮಾರ್ಗಗಳಿಗೆ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳಲಾಗುವುದು. ಒಟ್ಟಾರೆ ₹16,368 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದ್ದು, ಕೇಂದ್ರದ ಅನುಮೋದನೆ ದೊರೆತ ಬಳಿಕ ಕಾಮಗಾರಿ ಪೂರ್ಣಗೊಳ್ಳಲು 5 ವರ್ಷ ಬೇಕಾಗಲಿದೆ.

‘ರಾಜ್ಯ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆದಿದ್ದೇವೆ. ನಗರಾಭಿವೃದ್ಧಿ ಇಲಾಖೆ ಕೂಡ ಒಪ್ಪಿಗೆ ನೀಡಿದ್ದು, ಈ ಇಲಾಖೆ ಮೂಲಕವೇ ಕೇಂದ್ರ ಸರ್ಕಾರಕ್ಕೆ ಒಂದು ವಾರದಲ್ಲಿ ಪ್ರಸ್ತಾವನೆ ಸಲ್ಲಿಸಲಾಗುವುದು’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದರು.

32.16 ಕಿಲೋ ಮೀಟರ್‌ನಲ್ಲಿ ಬದಲಿಸುವ(ಇಂಟರ್ ಚೇಂಜ್) 6 ನಿಲ್ದಾಣಗಳು ಸೇರಿ 22 ನಿಲ್ದಾಣಗಳು, 12.82 ಕಿಲೋ ಮೀಟರ್ ಮಾರ್ಗದಲ್ಲಿ ಸುಮನಹಳ್ಳಿ ಬಳಿ ಇಂಟರ್ ಚೇಂಜ್ ನಿಲ್ದಾಣ ಇರಲಿದೆ. ಪೀಣ್ಯದಲ್ಲಿ ಇಂಟರ್ ಚೇಂಜ್ ನಿಲ್ದಾಣ ನಿರ್ಮಿಸುವ ಪ್ರಸ್ತಾಪ ಇಲ್ಲದಿದ್ದರೂ ಎರಡು ನಿಲ್ದಾಣಗಳ ನಡುವೆ ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

₹16,368 ಕೋಟಿ
ಯೋಜನೆ ಮೊತ್ತ

32.16 ಕಿ.ಮೀ
ಹೊರ ವರ್ತುಲ ರಸ್ತೆ ಕೆಂಪಾಪುರದಿಂದ ಜೆ.ಪಿ.ನಗರ 4ನೇ ಹಂತದ ತನಕ

12.82 ಕಿ.ಮೀ
ಮಾಗಡಿ ರಸ್ತೆಯಲ್ಲಿ ಹೊಸಹಳ್ಳಿಯಿಂದ ಕಡಬಗೆರೆ ತನಕ

ಸುಂಕದಕಟ್ಟೆ ಬಳಿ ದೊಡ್ಡ ಡಿಪೊ

3ನೇ ಹಂತದ ಈ ಹೊಸ ಯೋಜನೆಗಳನ್ನು ನಿರ್ವಹಿಸಲು ಸುಂಕದಕಟ್ಟೆ ಬಳಿ 70 ಎಕರೆ ಜಾಗದಲ್ಲಿ ಮೆಟ್ರೊ ರೈಲು ಡಿಪೊ ನಿರ್ಮಿಸಲು ಉದ್ದೇಶಿಸಲಾಗಿದೆ. ನಗರದಲ್ಲಿನ ಎರಡನೇ ಅತಿ ದೊಡ್ಡ ಮೆಟ್ರೊ ರೈಲು ಡಿಪೊ ನಿರ್ಮಾಣವಾಗುವ ಸಾಧ್ಯತೆ ಇದೆ.
ಪೀಣ್ಯ ಹೊರತುಪಡಿಸಿದರೆ ಹಾಲಿ ಕಾರ್ಯಾಚರಣೆಯಲ್ಲಿರುವ ಮತ್ತು ನಿರ್ಮಾಣ ಹಂತದಲ್ಲಿರುವ ಡಿಪೊಗಳು 40 ಎಕರೆಗಿಂತ ಹೆಚ್ಚಿನ ಜಾಗದಲ್ಲಿ ಇಲ್ಲ. ಆದರೆ, ಈ ಜಾಗ ವಿವಾದದಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಮುದ್ದಹನುಮೇಗೌಡ, ನಟ ಶಶಿಕುಮಾರ್ ಸೇರ್ಪಡೆ

ಬಿಜೆಪಿ ಸೇರಿದ ಹಲವು ಪ್ರಮುಖರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ, ಚಲನಚಿತ್ರ ನಟ ಶಶಿಕುಮಾರ್, ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್.ಅನಿಲ್ ಕುಮಾರ್ ಸೇರಿ ಹಲವು ಪ್ರಮುಖರು ಗುರುವಾರ ಬಿಜೆಪಿಯನ್ನು ಸೇರಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಅವರ ಸಮ್ಮುಖದಲ್ಲಿ ಪಕ್ಷದ ಬಾವುಟ ನೀಡಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಯಿತು. ದೆಹಲಿಯ ಮಾಜಿ ಮುಖ್ಯಮಂತ್ರಿ ದಿವಂಗತ ಶೀಲಾ ದೀಕ್ಷಿತ್ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ರಮೇಶ್ ಮುನಿಯಪ್ಪ, ಕಾಂಗ್ರೆಸ್ ಸೇವಾದಳದ ರಾಜ್ಯ ಉಪಾಧ್ಯಕ್ಷ ಹನುಮಂತರಾವ್ ಜವಳಿ ಅವರು ಬಿಜೆಪಿಯನ್ನು ಸೇರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಸವರಾಜ ಬೊಮ್ಮಾಯಿ, ‘ರಾಜಕಾರಣದಲ್ಲಿ ಈಗ ಸಮೀಕರಣ ಆಗುತ್ತಿದೆ. ಹಿಂದೆಲ್ಲ ಧ್ರುವೀಕರಣ ಎನ್ನಲಾಗುತ್ತಿತ್ತು. ಧ್ರುವೀಕರಣ ಎಂದರೆ ಎರಡು ದಿಕ್ಕುಗಳಲ್ಲಿ ಸೇರುವುದು. ಈಗ ಇನ್ನೊಂದು ದಿಕ್ಕು ಇಲ್ಲ. ಇರುವುದು ಒಂದೇ ದಿಕ್ಕು ಅದು ಬಿಜೆಪಿ. ಗುರುತ್ವಾಕರ್ಷಣೆ ಬಲ ಇರುವ ಬಿಜೆಪಿಯತ್ತ ಎಲ್ಲರೂ ಬರುತ್ತಿದ್ದಾರೆ’ ಎಂದು ಹೇಳಿದರು.

‘ಪಕ್ಷವನ್ನು ಸೇರಿದ ಎಲ್ಲರನ್ನೂ ಸಮಾನ ಪ್ರೀತಿ, ವಿಶ್ವಾಸ ಮತ್ತು ಗೌರವದಿಂದ ನೋಡಿಕೊಳ್ಳುತ್ತೇವೆ. ಪಕ್ಷದಲ್ಲಿ ಸ್ಥಾನಮಾನವನ್ನು ವರಿಷ್ಠರು ತೀರ್ಮಾನ ಮಾಡುತ್ತಾರೆ. ಚುನಾವಣೆ ಸಂದರ್ಭದಲ್ಲಿ ಟಿಕೆಟ್ ಅನ್ನು ಸಂಸದೀಯ ಮಂಡಳಿಯೇ ತೀರ್ಮಾನ ಮಾಡುತ್ತದೆ’ ಎಂದು ಬೊಮ್ಮಾಯಿ ಸೂಚ್ಯವಾಗಿ ನುಡಿದರು.

ನಳಿನ್ ಕುಮಾರ್ ಕಟೀಲ್ ಮಾತನಾಡಿ, ಇನ್ನು 15–20 ದಿನಗಳಲ್ಲಿ ಅಥವಾ ಚುನಾವಣೆ ಒಳಗೆ ಕಾಂಗ್ರೆಸ್ ತನ್ನ ಮನೆಯ ಬಾಗಿಲು ಮುಚ್ಚುತ್ತದೆ. ಕಾಂಗ್ರೆಸ್‌ನ ಹಲವು ನಾಯಕರು ಬಿಜೆಪಿ ಬಾಗಿಲು ತಟ್ಟುತ್ತಿದ್ದಾರೆ ಎಂದರು.

ಮುದ್ದಹನುಮೇಗೌಡ ಮಾತನಾಡಿ, ಸಂಸದನಾಗಿದ್ದಾಗ ಪ್ರಧಾನಿ ಮೋದಿಯವರ ಕೆಲಸಗಳನ್ನು ಹತ್ತಿರದಿಂದ ನೋಡಿದ್ದೇನೆ. ಪ್ರಧಾನಿ ಹುದ್ದೆಗೆ ಘನತೆ, ಗೌರವ ತಂದಿದ್ದಾರೆ. ಸದಾ ದೇಶದ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸುವ ಅವರು ಭಾರತದ ಹಿರಿಮೆಯನ್ನು ವಿಶ್ವದಲ್ಲಿ ಅತಿ ಎತ್ತರಕ್ಕೆ ಒಯ್ದಿದ್ದಾರೆ ಎಂದು ಹೇಳಿದರು.

ಮೋಡ ಕವಿದ ವಾತಾವರಣ: ದಿನವಿಡೀ ಮಳೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಗುರುವಾರ ದಿನವಿಡೀ ಬಿಡುವು ಕೊಡುತ್ತಲೇ ಮಳೆ ಸುರಿಯಿತು. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು.

ಕೆಲ ದಿನಗಳಿಂದ ನಗರದಲ್ಲಿ ಮಳೆ ಸುರಿಯುತ್ತಿದ್ದು, ಗುರುವಾರ ಬಹುತೇಕ ಕಡೆ ತುಂತುರು ಮಳೆ ಇತ್ತು. ಕೆಲ ಪ್ರದೇಶಗಳಲ್ಲಿ 10 – 20 ನಿಮಿಷದವರೆಗೂ ಜೋರು ಮಳೆ ಸುರಿಯಿತು.

ಜಯನಗರ, ಜೆ.ಪಿ.ನಗರ, ಹನುಮಂತನಗರ, ಗಿರಿನಗರ, ದೀಪಾಂಜಲಿನಗರ, ರಾಜರಾಜೇಶ್ವರಿನಗರ, ಜ್ಞಾನಭಾರತಿ, ಕೆಂಗೇರಿ, ನಾಯಂಡನಹಳ್ಳಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಮಡಿವಾಳ, ಕೋರಮಂಗಲ, ಶಾಂತಿನಗರ, ವಿಲ್ಸನ್ ಗಾರ್ಡನ್, ಶಾಂತಿನಗರ, ಗಾಂಧಿನಗರ, ಮೆಜೆಸ್ಟಿಕ್, ಚಿಕ್ಕಪೇಟೆ, ಶಿವಾಜಿನಗರ, ಎಂ.ಜಿ.ರಸ್ತೆ ಹಾಗೂ ಸುತ್ತಮುತ್ತ ಮಳೆ ಆಯಿತು.

ಸುರಿಯುವ ಮಳೆಯಲ್ಲಿ ವಾಹನಗಳು ಸಂಚರಿಸಿದವು. ಕೆಲ ಸವಾರರು ತಮ್ಮ ದ್ವಿಚಕ್ರ ವಾಹನಗಳನ್ನು ರಸ್ತೆ ಪಕ್ಕದಲ್ಲಿ ನಿಲ್ಲಿಸಿ, ಮಳಿಗೆಗಳಲ್ಲಿ ಆಶ್ರಯ ಪಡೆದಿದ್ದರು. ಕೆಲವರು, ಕೆಳಸೇತುವೆಯಲ್ಲಿ ವಾಹನಗಳನ್ನು ನಿಲ್ಲಿಸಿಕೊಂಡಿದ್ದು ಕಂಡುಬಂತು.

ತುಂತುರು ಮಳೆಯಿಂದಾಗಿ ನಗರದ ಹಲವೆಡೆ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಅದರ ಜೊತೆಯಲ್ಲೇ ದಟ್ಟಣೆಯೂ ಹೆಚ್ಚಿತ್ತು. ‘ನಗರದಲ್ಲಿ ಬಹುತೇಕ ಕಡೆ ಸಂಜೆಯಿಂದ ರಾತ್ರಿಯವರೆಗೂ ಉತ್ತಮ ಮಳೆ ಆಗಿದೆ. ಕೆಲ ರಸ್ತೆಗಳಲ್ಲಿ ಮರದ ಕೊಂಬೆಗಳು ಬಿದ್ದಿದ್ದ ದೂರುಗಳು ಬಂದಿದ್ದವು. ಸ್ಥಳೀಯರೇ ಅವುಗಳನ್ನು ತೆರವು ಮಾಡಿದ್ದಾರೆ. ಅದನ್ನು ಹೊರತುಪಡಿಸಿ ಯಾವುದೇ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನೂರರಷ್ಟು ಫಲಿತಾಂಶ ಬಂದರೆ ವಿದೇಶ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆಗಳಲ್ಲಿ ಶೇ 100ರಷ್ಟು ಫಲಿತಾಂಶ ಹೆಚ್ಚಾದರೆ ಅಯಾ ಮುಖ್ಯ ಶಿಕ್ಷಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಲಾಗುತ್ತದೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಡಾ. ವಿ. ರಾಮಪ್ರಸಾತ್ ಮನೋಹರ್ ತಿಳಿದ್ದಾರೆ.

‘ಫಲಿತಾಂಶವನ್ನು ವೃದ್ಧಿಸಲು ಬಳ್ಳಾರಿಯಲ್ಲಿಯೂ ಇದೇ ರೀತಿಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 70ರಿಂದ 80 ಶಾಲೆಗಳು ಶೇ 100ರಷ್ಟು ಫಲಿತಾಂಶ ಪಡೆದವು. ಒಂದು ವರ್ಷದ ನಂತರ ಇಲ್ಲಿಯೂ ಶಿಕ್ಷಕರಿಗೂ ಶೈಕ್ಷಣಿಕ ಪ್ರವಾಸದಂತಹ ಕೊಡುಗೆಗಳನ್ನು ನೀಡುವ ಯೋಜನೆ ಇದೆ’ ಎಂದರು.

‘ನಮ್ಮ ಶಿಕ್ಷಕರು ನಿಯಮಿತ ಸಂಪನ್ಮೂಲಗಳಲ್ಲೇ ಉತ್ತಮ ಕೆಲಸ ಮಾಡುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳಿಂದ ಅವರಿಗೆ ಮತ್ತಷ್ಟು ಉತ್ತೇಜನ ಸಿಗಲಿದ್ದು, ಇದರಿಂದ ಮಕ್ಕಳಿಗೆ ಹೆಚ್ಚು ಸಹಾಯವಾಗಲಿದೆ’ ಎಂದರು.

‘ಈ ಯೋಜನೆಯ ರೂಪುರೇಷೆಯನ್ನು ಅಧಿಕಾರಿಗಳು ರೂಪಿಸುತ್ತಿದ್ದಾರೆ. ಇದೆಲ್ಲ ಅಂತಿಮಗೊಂಡ ಮೇಲೆ ಉನ್ನತ ಅಧಿಕಾರಿಗಳಿಗೆ ಕಳುಹಿಸಿ, ಅವರ ಅನುಮತಿ ಸಿಕ್ಕ ಮೇಲೆ ಪ್ರಕಟಿಸಲಾಗುತ್ತದೆ. ಈ ಯೋಜನೆಗೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿ ಉಪಯೋಗಿಸಿಕೊಳ್ಳಲು ಯೋಚಿಸಲಾಗುತ್ತಿದೆ’ ಎಂದು ಹೇಳಿದರು.

‘ಕೊಡುಗೆಗಳಿಂತ ಮುಖ್ಯವಾಗಿ ಬಿಬಿಎಂಪಿ ಶಾಲೆಗಳಲ್ಲಿನ ಮೂಲಸೌಕರ್ಯವನ್ನು ಉನ್ನತೀಕರಿಸಬೇಕು. ಕೆಲವು ಶಾಲೆಗಳಲ್ಲಿ ಅಗತ್ಯ ಸೌಕರ್ಯಗಳೇ ಇಲ್ಲ. ಶಿಕ್ಷಕರನ್ನು ಉತ್ತೇಜಿಸಬೇಕು ಎಂಬುದೇನೋ ನಿಜ. ಆದರೆ, ಹಲವು ಶಾಲೆಗಳಲ್ಲಿ ಹಾಜರಾತಿ, ನೋಂದಣಿಯನ್ನು ಹೆಚ್ಚಿಸಬೇಕಿದೆ. ಹೀಗಾಗಿ ಹಣವನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಳ್ಳಬೇಕು’ ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಗಳು ಹೇಳಿದರು.

ತಮಿಳುನಾಡಿನಲ್ಲಿ ರೌಡಿ ಗೊಣ್ಣೆ ವಶಕ್ಕೆ

ಬೆಂಗಳೂರು: ಕರ್ತವ್ಯನಿರತ ಪೊಲೀಸರಿಗೆ ಡ್ರ್ಯಾಗರ್‌ನಿಂದ ಇರಿದು ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ರೌಡಿ ವಿಜಯ್ ಅಲಿಯಾಸ್ ಗೊಣ್ಣೆಯನ್ನು ತಮಿಳುನಾಡಿನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಹಲವು ಪ್ರಕರಣಗಳಲ್ಲಿ ಆರೋಪಿಯಾಗಿದ್ದ ವಿಜಯ್, ಹೊಸಕೆರೆಹಳ್ಳಿ ತಂಗುದಾಣ ಬಳಿ ಅ. 28ರಂದು ಮಧ್ಯಾಹ್ನ ನೋಂದಣಿ ಫಲಕವಿಲ್ಲದ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ. ಆತನನ್ನು ನೋಡಿದ್ದ ಕಾನ್‌ಸ್ಟೆಬಲ್‌ಗಳಾದ ನಾಗೇಂದ್ರ ತೇಲಿ, ಕಿರಣ್ ಮುಂದಿನಮನಿ ಹಾಗೂ ನೇತ್ರಾ ಹಿಡಿಯಲು ಹೋಗಿದ್ದರು. ಇದೇ ವೇಳೆಯೇ ವಿಜಯ್ ಹಲ್ಲೆ ಮಾಡಿ ಪರಾರಿಯಾಗಿದ್ದ. ಮೂವರು ಕಾನ್‌ಸ್ಟೆಬಲ್‌ಗಳು ಗಾಯಗೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಂಧನ ಭೀತಿಯಲ್ಲಿ ನಗರ ತೊರೆದಿದ್ದ ವಿಜಯ್, ತಮಿಳುನಾಡಿನಲ್ಲಿರುವ ಮಾಹಿತಿ ಲಭ್ಯವಾಗಿತ್ತು. ಅಲ್ಲಿಗೆ ಹೋದ ಚನ್ನಮ್ಮನ ಅಚ್ಚುಕಟ್ಟು ಠಾಣೆ ಪೊಲೀಸರ ತಂಡ, ಆರೋಪಿಯನ್ನು ವಶಕ್ಕೆ ಪಡೆದು ನಗರಕ್ಕೆ ಕರೆತರುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಇದೇ 5ಕ್ಕೆ ಮಸೀದಿ ದರ್ಶನಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದಲ್ಲಿರುವ ಸೌಹಾರ್ದ, ಸಹಬಾಳ್ವೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ಹಾಗೂ ಪರಸ್ಪರರಲ್ಲಿ ಮೂಡಿಸಿರುವ ಅಪನಂಬಿಕೆ, ಪೂರ್ವಾಗ್ರಹಗಳನ್ನು ದೂರ ಮಾಡಲು ಇದೇ 5ರಂದು ಬೆಂಗಳೂರಿನ ಮಿಲ್ಲರ್ಸ್ ರಸ್ತೆಯಲ್ಲಿರುವ ಮಸ್ಜಿದ್–ಎ–ಖಾದರಿಯಾದಲ್ಲಿ 'ಮಸೀದಿ ದರ್ಶನ' ಕಾರ್ಯಕ್ರಮ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಜುಮಾ ಮಸೀದಿ ಟ್ರಸ್ಟ್ ಬೋರ್ಡ್ ಆಡಳಿತ ಸಮಿತಿಯ ಕಾರ್ಯದರ್ಶಿ ಉಸ್ಮಾನ್ ಶರೀಫ್ ಅವರು, ಎಲ್ಲ ಧರ್ಮದ ಮಹಳೆಯರು ಮತ್ತು ಪುರುಷರು ಮಸೀದಿಯೊಳಗೆ ಬಂದು ಪ್ರಾರ್ಥನೆಯನ್ನು ವೀಕ್ಷಿಸಬಹುದು ಎಂದು ಹೇಳಿದರು.

ಸಂಜೆ 4ರಿಂದ ರಾತ್ರಿ 8 ಗಂಟೆಯವರೆಗೆ ಈ ಅವಕಾಶ ಇರುತ್ತದೆ. ಜನರ ಮಧ್ಯೆ ಮೂಡಿಸಿರುವ ಅಪನಂಬಿಕೆ, ಸಂದೇಹಗಳನ್ನು ದೂರ ಮಾಡುವುದು ಕಾಲದ ಅನಿವಾರ್ಯ ಬೇಡಿಕೆಯಾಗಿದೆ. ಪರಸ್ಪರ ಅರಿವು ನಮ್ಮಲ್ಲಿ ಸೌಹಾರ್ದವನ್ನು ಗಟ್ಟಿಗೊಳಿಸುತ್ತದೆ ಎಂಬ ನಂಬುಗೆಯಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕೆಲ ಕ್ಷೇತ್ರಗಳನ್ನು ನಿಗೂಢವಾಗಿಯೇ ಇಟ್ಟರೆ, ಅವು ಜನರಲ್ಲಿನ ಸಾಮರಸ್ಯವನ್ನು ಒಡೆಯುವ ಪಿತೂರಿ ನಡೆಸುವವರಿಗೆ ಸಹಕಾರಿಯಾಗುತ್ತವೆ. ಅದನ್ನು ಹೋಗಲಾಡಿಸಲು, ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂದೇಹಗಳ ಗೋಡೆಗಳನ್ನು ಕೆಡವಿ ಹೃದಯಗಳನ್ನು ಬೆಸೆಯುವ ಪ್ರಯತ್ನ ನಮ್ಮದಾಗಿದೆ ಎಂದು ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮುಹಮ್ಮದ್ ನವಾಝ್, ಫಿರೋಝ್ ಖಾನ್, ಅಫ್ಸರ್ ಅಹ್ಮದ್, ನವೀದ್ ಇರ್ಫಾನ್, ತೌಸೀಫ್ ಅಹ್ಮದ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ರಾಷ್ಟ್ರೀಯ ಗುರುಕುಲ ಸಂಗೋಷ್ಠಿ ಉದ್ಘಾಟನೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಕ್ತಾರ: ಸುರೇಶ ಸೋನಿ, ಆಯೋಜನೆ: ರಾಷ್ಟ್ರೀಯ ಗುರುಕುಲ ಸಂಗೋಷ್ಠಿ, ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಬೆಳಿಗ್ಗೆ 11

ಅಮೆರಿಕದ ಅಲಬಾಮಾ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಸಂಯೋಗ: ಅತಿಥಿಗಳು ಹೆಗ್ಗೆರೆ ರಂಗನಾಥ್, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11

ಭಾರತದ ನದಿಗಳ ಜೊತೆಗೊಂದು ಪಯಣ ಛಾಯಾಚಿತ್ರಗಳ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಸರ್ಜಾಪುರದಲ್ಲಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಮಧ್ಯಾಹ್ನ 12

ವೀಣಾ ತತ್ವ ಪ್ರಕಾಶಿಕಾ 4ನೇ ಅಂತರರಾಷ್ಟ್ರೀಯ ವೀಣಾ ಸಮ್ಮೇಳನ: ಸಾನ್ನಿಧ್ಯ: ಯತೀರಾಜ ಸ್ವಾಮೀಜಿ, ಅತಿಥಿಗಳು: ಬಿ.ಸಿ. ನಾಗೇಶ್, ಎಂ.ಆರ್ ದೊರೆಸ್ವಾಮಿ, ದಿನೇಶ್ ಗುರೂಜಿ, ತೇಜಸ್ವಿನಿ ಅನಂತಕುಮಾರ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯದ ಆವರಣ, ಹನುಮಂತನಗರ, ಬನಶಂಕರಿ, ಸಂಜೆ 5

ಜಾಗತಿಕ ಹೂಡಿಕೆದಾರರ ಸಮಾವೇಶ ಸಮಾರೋಪ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಭಗವಂತ ಖೂಬಾ, ಮುರುಗೇಶ ನಿರಾಣಿ, ಬಿ.ಸಿ ಪಾಟೀಲ, ವಿ ಸುನಿಲ್ ಕುಮಾರ್, ಅಧ್ಯಕ್ಷತೆ: ಡಾ.ಸಿ ಎನ್ ಅಶ್ವತ್ಥನಾರಾಯಣ, ಸ್ಥಳ: ಬೆಂಗಳೂರು ಅರಮನೆ, ಸಂಜೆ 4

ನಫೀಸಾ ಫಜಲ್ ಅವರ ಆತ್ಮಚರಿತ್ರೆ ‘ಬ್ರೇಕಿಂಗ್ ಬ್ಯಾರಿಯರ್ಸ್’ ಪುಸ್ತಕ ಬಿಡುಗಡೆ: ಅತಿಥಿಗಳು: ಎಸ್. ಎಂ ಕೃಷ್ಣ, ಸ್ಥಳ: ಬಾಲ್‌ರೂಮ್, ಫೋರ್ ಸೀಸನ್ಸ್ ಹೋಟೆಲ್, ಎಂಬೆಸ್ಸಿ ಒನ್, ಮೇಖ್ರಿ ವೃತ್ತದ ಹತ್ತಿರ, ಸಂಜೆ 5

ಸಿ ಸೋಮಶೇಖರ ಬರೆದ ‘ನೀನೊಲಿದ ಬದುಕು’ ಆತ್ಮಕಥನ ಪುಸ್ತಕ ಬಿಡುಗಡೆ: ಬಸವರಾಜ ಬೊಮ್ಮಾಯಿ, ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಶಿವರಾಜ್ ವಿ ಪಾಟೀಲ್, ಅತಿಥಿಗಳು: ವಿ ಸೋಮಣ್ಣ, ಸುನಿಲ್ ಕುಮಾರ್, ಉಪಸ್ಥಿತಿ: ಸಿ. ಸೋಮಶೇಖರ ಆಯೋಜನೆ: ಸಪ್ನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5

ಚಂದ್ರಶೇಖರ ಕಂಬಾರ

ಕಾರ್ತೀಕ ಮಾಸ ಮಹಾತ್ಮೆ ಪ್ರವಚನ: ಪ್ರಸ್ತುತಿ: ಬಳ್ಳಾರಿ ವೆಂಕಟೇಶಾಚಾರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಮಲ್ಲೇಶ್ವರ, ಸಂಜೆ 7

‘ಮಾನಿಷಾದ’ ನಾಟಕದ ಒಂದು ದೃಶ್ಯ

ಗಿರೀಶ್ ಕಾರ್ನಾಡ ಅವರ ‘ಮಾನಿಷಾದ’ ನಾಟಕ ಪ್ರದರ್ಶನ: ನಿರ್ದೇಶನ: ರೇವಂತ್ ಮಾಳಿಗೆ, ಆಯೋಜನೆ: ಕರಣ ಥಿಯೇಟರ್, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7.15

ಕೆಂಪೇಗೌಡರ ಪ್ರತಿಮೆ ಉದ್ಘಾಟನೆ: ಸಂಘಟನೆಗಳ ಜತೆ ಸಚಿವರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಇದೇ 11ರಂದು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಉದ್ಘಾಟಿಸಲು ಬರುತ್ತಿರುವುದರಿಂದ ಒಕ್ಕಲಿಗ ಸಮುದಾಯದ ಪ್ರಮುಖ ಸಂಘ–ಸಂಸ್ಥೆಗಳ ಮುಖಂಡರ ಜತೆ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಆರ್. ಅಶೋಕ ಅವರು ಗುರುವಾರ ಸಭೆ ನಡೆಸಿದರು.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಸಚಿವದ್ವಯರು, 'ಉದ್ದೇಶಿತ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮತ್ತು ಚಾರಿತ್ರಿಕ ರೀತಿಯಲ್ಲಿ ನಡೆಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರಲಿದ್ದಾರೆ. ನೀವು ಕೂಡ ಹೆಚ್ಚು ಜನರನ್ನು ಕರೆತರುವುದರ ಜತೆಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಪ್ರಧಾನಿ ಕಾರ್ಯಕ್ರಮವಾದ್ದರಿಂದ ಬಿಗಿ ಭದ್ರತಾ ವ್ಯವಸ್ಥೆ ಇರಲಿದೆ. ಸಾರ್ವಜನಿಕರು ಅಂದು 11 ಗಂಟೆಯ ವೇಳೆಗೆ ಸಮಾರಂಭದ ಸ್ಥಳವನ್ನು ತಲುಪಬೇಕು' ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಅಶ್ವತ್ಥ ನಾರಾಯಣ ಮನವಿ ಮಾಡಿದರು.

'ಪ್ರತಿಮೆ ಉದ್ಘಾಟನೆಯ ಅಂಗವಾಗಿ ನಡೆಯುತ್ತಿರುವ ಪವಿತ್ರ ಮೃತ್ತಿಕಾ ಸಂಗ್ರಹಣಾ ಅಭಿಯಾನದಲ್ಲಿರುವ ರಥಗಳು ಇದೇ 9ರಂದು ಬೆಂಗಳೂರಿಗೆ ಬರಲಿವೆ. ಈ ಮೃತ್ತಿಕೆಯನ್ನು ಕೆಂಪೇಗೌಡರ ಪ್ರತಿಮೆಯ ಗೋಪುರಗಳು ಮತ್ತು ಥೀಮ್ ಪಾರ್ಕಿನಲ್ಲಿ ಬಳಸಿಕೊಳ್ಳಲಾಗುವುದು' ಎಂದು ಅವರು ವಿವರಿಸಿದರು.

ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ವಿನಯ್ ದೀಪ್, ನಿರ್ದೇಶಕರಾದ ತಲಕಾಡು ಚಿಕ್ಕರಂಗೇಗೌಡ, ಗಂಗಹನುಮಯ್ಯ, ಹಲವು ಸಂಘಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿದ್ದರು.

ರಥದ ಮೇಲಿಂದ ಬಿದ್ದು ಪಟ ಕಲಾವಿದ ಸಾವು

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಬಸವನಗುಡಿ ಪಾಳ್ಯ ಸಮೀಪ ಕೆಂಪೇಗೌಡರ ಪ್ರತಿಮೆ ಮೃತ್ತಿಕೆ ಸಂಗ್ರಹ ರಥಯಾತ್ರೆ ವೇಳೆ ರಥದ ಮೇಲಿಂದ ಬಿದ್ದು ಪಟ ಕುಣಿತ ಕಲಾವಿದರೊಬ್ಬರು ಮೃತಪಟ್ಟಿದ್ದಾರೆ.

ಮಾಗಡಿಯ ಎಸ್. ಬ್ಯಾಡರಹಳ್ಳಿ ನಿವಾಸಿ, ಪಟ ಕುಣಿತ ಕಲಾವಿದ ಶ್ರೀನಿವಾಸ (29) ಮೃತರು. ಪೂಜಾ ಕುಣಿತ ಪ್ರದರ್ಶನದ ನಂತರ ವಿಶ್ರಾಂತಿ ಪಡೆಯುತ್ತಿದ್ದ ವೇಳೆ ರಥದ ಮೇಲಿಂದ ಕೆಳಗೆ ಬಿದ್ದರು. ಈ ಸಂದರ್ಭ ತಲೆಗೆ ತೀವ್ರ ಪೆಟ್ಟಾಗಿದ್ದು, ಸ್ಥಳದಲ್ಲೇ ಮೃತಪಟ್ಟರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಹೊರ ರಾಜ್ಯಗಳ ಪರೀಕ್ಷಾ ಮಂಡಳಿ ಹೆಸರಲ್ಲಿ ಅಂಕಪಟ್ಟಿ ತಯಾರು

ಎಂಟು ನಕಲಿ ಅಂಕಪಟ್ಟಿ ಪತ್ತೆ!

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು

- ಬೆಂಗಳೂರು ಉತ್ತರ ವಿ.ವಿ ವ್ಯಾಪ್ತಿಯ ಕಾಲೇಜುಗಳು
- ಪದವಿಗೆ ಪ್ರವೇಶಾತಿ ಪರಿಶೀಲನೆ ವೇಳೆ ಪತ್ತೆ
- ಕಾಲೇಜುಗಳ ಜೊತೆ ಒಪ್ಪಂದ ಶಂಕೆ

ಅಂಕಪಟ್ಟಿ ಪರಿಶೀಲಿಸದೆ ಪ್ರವೇಶಾತಿ ನೀಡಿರುವ ಕಾಲೇಜುಗಳಿಗೆ ನೋಟಿಸ್ ನೀಡಲಿದ್ದೇವೆ. ಇದಕ್ಕೆ ಸಂಬಂಧಿಸಿ ಆಯಾ ಕಾಲೇಜುಗಳೇ ಪೊಲೀಸ್ ಠಾಣೆಗೆ ದೂರು ದಾಖಲಿಸಬೇಕು

ಲಕ್ಷ್ಮಿ ನರಸಿಂಹಪ್ಪ, ಯುಯುಸಿಎಂಎಸ್ ನೋಡಲ್ ಅಧಿಕಾರಿ, ಬೆಂಗಳೂರು ಉತ್ತರ ವಿ.ವಿ

ವಿವಿಧ ರಾಜ್ಯಗಳಿಂದ ಪಿಯು ನಕಲಿ ಅಂಕಪಟ್ಟಿ ಪಡೆದು ಕಾಲೇಜಿಗೆ ದಾಖಲಾಗುತ್ತಿದ್ದಾರೆ. ನಮ್ಮ ವಿ.ವಿ ವ್ಯಾಪ್ತಿಯ ಕಾಲೇಜುಗಳಲ್ಲಿ ಪತ್ತೆಯಾಗಿದೆ. ಹಿಂದಿನ ವರ್ಷವೂ ನಡೆದಿತ್ತು

ಪ್ರೊ.ನಿರಂಜನ ವಾನಳ್ಳಿ, ಕುಲಪತಿ, ಬೆಂಗಳೂರು ಉತ್ತರ ವಿ.ವಿ, ಕೋಲಾರ

ಪ್ರಜಾವಾಣಿ ವಿಶೇಷ

ಕೋಲಾರ: ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿಯ ನಕಲಿ ಅಂಕಪಟ್ಟಿ ಸಲ್ಲಿಸಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳಲ್ಲಿ ಪ್ರಥಮ ವರ್ಷದ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ಪ್ರಕರಣ ಬಹಿರಂಗವಾಗಿದ್ದು, ಈ ದಂಧೆಯ ದೊಡ್ಡ ಜಾಲವೇ ರಾಜ್ಯದಲ್ಲಿ ಹರಡಿರುವ ಶಂಕೆ ವ್ಯಕ್ತವಾಗಿದೆ. ವಿವಿ ವ್ಯಾಪ್ತಿಯ ಕಾಲೇಜುಗಳಲ್ಲಿ ಇಂಥ 8 ನಕಲಿ ಅಂಕಪಟ್ಟಿ ಪತ್ತೆಯಾಗಿವೆ.

ಪದವಿಗೆ ಪ್ರವೇಶಾತಿ ಕೋರಿ ವಿದ್ಯಾರ್ಥಿಗಳು ಸಲ್ಲಿಸಿದ ಮೂಲ ದಾಖಲಾತಿಗಳನ್ನು ಆಯಾಯ ಕಾಲೇಜುಗಳು ಅಂತಿಮ ಪರಿಶೀಲನೆಗೆಂದು ಈ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿದೆ. ದೇವನಹಳ್ಳಿ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಹಾಗೂ ಹೊಸಕೋಟೆಯ ಕೆಲ ಸರ್ಕಾರಿ ಹಾಗೂ ಖಾಸಗಿ ಪದವಿ ಕಾಲೇಜುಗಳಲ್ಲಿ ನಕಲಿ ಅಂಕಪಟ್ಟಿ ಪಡೆದು ದಾಖಲಾತಿ ಮಾಡಿಕೊಳ್ಳಲಾಗಿದೆ.

ಕೇರಳ, ತಮಿಳುನಾಡು ರಾಜ್ಯದ ಪರೀಕ್ಷಾ ಮಂಡಳಿ ಹೆಸರಿನಲ್ಲೂ ನಕಲಿ ಅಂಕಪಟ್ಟಿ ತಯಾರು ಮಾಡಿಕೊಂಡು ಬಂದಿರುವುದು ಪತ್ತೆಯಾಗಿದೆ. ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳಲ್ಲಿ ಒಂದು ತಿಂಗಳ ಹಿಂದೆಯೇ ಪ್ರವೇಶಾತಿ ಪ್ರಕ್ರಿಯೆ ನಡೆದಿದೆ.

'ನಕಲಿ ಅಂಕಪಟ್ಟಿ ಜಾಲದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಮೂಗರ್ಜಿಯೊಂದು ಬಂದಿತ್ತು. ಪದವಿ ಕಾಲೇಜುಗಳಲ್ಲಿ ನಕಲಿ ಅಂಕಪಟ್ಟಿ ಪಡೆದು ಪ್ರವೇಶಾತಿ ನೀಡುತ್ತಿರುವ ಅಂಶವೂ ಆ ಪತ್ರದಲ್ಲಿತ್ತು. ಈ ಹಿನ್ನೆಲೆಯಲ್ಲಿ ಕೂಲಂಕಷವಾಗಿ ದಾಖಲಾತಿ ಪರಿಶೀಲನೆ ನಡೆಸಿದಾಗ ಎಂಟು ಪ್ರಕರಣ ಪತ್ತೆಯಾಗಿವೆ' ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಿರಂಜನ ವಾನಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಕಲಿ ಅಂಕಪಟ್ಟಿ ಸಲ್ಲಿಸಿರುವ ಪ್ರಕರಣಗಳನ್ನು ತಡೆದು ಪ್ರವೇಶಾತಿ ನಿರಾಕರಿಸಲಾಗಿದೆ. ಎಲ್ಲಾ ಅಂಕಪಟ್ಟಿಗಳನ್ನು ಸಮಗ್ರವಾಗಿ ಪರಿಶೀಲಿಸುತ್ತಿದ್ದೇವೆ' ಎಂದರು.

ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲ ಖಾಸಗಿ ಕಾಲೇಜುಗಳು ನಕಲಿ ಅಂಕಪಟ್ಟಿ ತಯಾರಿಸುವ ಜಾಲದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಶಂಕೆಯೂ ವ್ಯಕ್ತವಾಗಿದೆ. ಕಳೆದ ವರ್ಷವೂ ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ನಕಲಿ ಅಂಕಪಟ್ಟಿ ಸಲ್ಲಿಸಿರುವುದು ಪತ್ತೆಯಾಗಿತ್ತು.

'100ಕ್ಕೂ ಅಧಿಕ ನಕಲಿ ಅಂಕಪಟ್ಟಿ ಸಲ್ಲಿಕೆಯಾಗಿರುವ ಮಾಹಿತಿ ಇದೆ. ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಕಾಲೇಜುಗಳಲ್ಲಿನ ಮೂಲ ದಾಖಲಾತಿ ಪರಿಶೀಲನೆ ನಡೆದಿದೆ. ಇನ್ನೂ ಬೆಂಗಳೂರು ನಗರ ಹಾಗೂ ಕೋಲಾರ ಜಿಲ್ಲೆ ಕಾಲೇಜುಗಳ ದಾಖಲಾತಿ ಪರಿಶೀಲನೆ ನಡೆಯಬೇಕಿದೆ' ಎಂದು ವಿಶ್ವವಿದ್ಯಾಲಯದ ಯುಯುಸಿಎಂಎಸ್ ತಂತ್ರಾಂಶ ನೋಡಲ್ ಅಧಿಕಾರಿ ಲಕ್ಷ್ಮಿ ನರಸಿಂಹಪ್ಪ ಮಾಹಿತಿ ನೀಡಿದರು.

'ಕೇರಳ ರಾಜ್ಯ ಪರೀಕ್ಷಾ ಮಂಡಳಿಯ ಹೆಸರಿನಲ್ಲಿ 10ನೇ ತರಗತಿ ನಕಲಿ ಅಂಕಪಟ್ಟಿ ತಂದು ರಾಜ್ಯದಲ್ಲಿ ಐಟಿಐ ಮುಗಿಸಿ ಪದವಿಗೆ ಪ್ರವೇಶಾತಿ ಪಡೆದಿದ್ದ ವಿದ್ಯಾರ್ಥಿಯ ಅಂಕಪಟ್ಟಿಯನ್ನೂ ಪತ್ತೆ ಹಚ್ಚಿ ಪ್ರವೇಶ ನಿರಾಕರಿಸಿದ್ದೇವೆ' ಎಂದರು.

ಮಕ್ಕಳ ರಕ್ಷಣೆ ಜಾಗೃತಿ: ಸಭೆಗೆ ಹೈಕೋರ್ಟ್ ಸೂಚನೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳ ಬದಿಯಲ್ಲಿ ಮತ್ತು ಸಿಗ್ನಲ್‌ಗಳಲ್ಲಿ ಆಟಿಕೆ, ಪೆನ್ ಸೇರಿ ಹಲವು ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳಿಗೆ ಪುನರ್ ವಸತಿ ಕಲ್ಪಿಸಲು ಮತ್ತು ಶಿಕ್ಷಣ ನೀಡುವ ದಿಸೆಯಲ್ಲಿ ಅಗತ್ಯ ಸಲಹೆ ನೀಡುವುದಕ್ಕಾಗಿ; ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಸದಸ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಮಕ್ಕಳ ರಕ್ಷಣೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ಪಾಲುದಾರರ ಜೊತೆ ಸಭೆ ನಡೆಸುವಂತೆ ಹೈಕೋರ್ಟ್ ಸೂಚಿಸಿದೆ.

ಈ ಸಂಬಂಧ ನಗರದ ಲೆಟ್ಸ್ ಕಿಡ್ಸ್ ಫೌಂಡೇಷನ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ನಿರ್ದೇಶಿಸಿದ್ದು, 'ಇದಕ್ಕಾಗಿ ರಿಜಿಸ್ಟ್ರಾರ್ ಅವರು ಹೈಕೋರ್ಟ್ ಸಭಾಂಗಣದಲ್ಲಿ ಸಭೆ ನಡೆಸಲು ವ್ಯವಸ್ಥೆ ಮಾಡಬೇಕು' ಎಂದಿದೆ.

'2021ರ ಫೆಬ್ರುವರಿ 18ರಂದು ನ್ಯಾಯಪೀಠದ ಸೂಚನೆ ಅನುಸಾರ ಎಲ್ಲ ಪಾಲುದಾರರ ಸಭೆ ನಡೆಸಿ ಸಲಹೆಗಳನ್ನು ನೀಡಲಾಗಿದೆ. ಇದಕ್ಕೆ ಸಂಬಂಧಿಸಿ ಸರ್ಕಾರ ಅನುಪಾಲನಾ ವರದಿ ಸಲ್ಲಿಸಿದೆ. ಈ ವರದಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಬೇಕಾಗಿದ್ದು, ಈ ನಿಟ್ಟನಿಲ್ಲಿ ಮತ್ತೊಮ್ಮೆ ಇದೇ 15ರ ಸಂಜೆ 5.30ಕ್ಕೆ ಸಭೆ ನಡೆಸಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

ರಾಜ್ಯ ಸರ್ಕಾರ, ಮಕ್ಕಳ ರಕ್ಷಣೆಕುರಿತಂತೆ ಜಾಗೃತಿ ಮೂಡಿಸುವುದಕ್ಕಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಮಾಣಪತ್ರ ಸಲ್ಲಿಸಿದೆ. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಪ್ರಾದೇಶಿಕ ವಾಹಿನಿಗಳಾದ ದೂರದರ್ಶನ, ಖಾಸಗಿ ಟಿ.ವಿ, ಕೇಬಲ್ ಚಾನೆಲ್‌ಗಳಲ್ಲಿ ಕಾಲಕಾಲಕ್ಕೆ ಜಾಗೃತಿ ಮೂಡಿಸುವ ಡಿಜಿಟಲ್ ಸ್ಕ್ರೋಲ್‌ಗಳನ್ನು ಪ್ರದರ್ಶಿಸಲು ಸುತ್ತೋಲೆ ಹೊರಡಿಸಬೇಕು' ಎಂದು ಸೂಚಿಸಿ ವಿಚಾರಣೆ ಮುಂದೂಡಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Others

REQUIRED SALVAGE quote for BMW X3 XDRIV Luxury line, 2019 model, KA51 MP1881 with & without RC. Call: 9844036218.

PUBLIC NOTICE

IN HON'BLE COURT OF 1st ADDL SENIOR CIVIL JUDGE NELAMANGALA, FDP 4/2014
Potitionor: Smt. Lalitha,
V//S
Respondents : Smt. Mayamma.,others, R6 (C). Smt, Sushma, D/o late R.Narayanappa, 35 years, R/o Mahima Nilaya, Chikkabedarakallu, Nagasandra post, Bangalore-560073.
NOTICE UNDER ORDER 5 RULE 20(A) OF C.P.C
WHEREAS, the petitioner filed an petition against you in respect of suit properties bearing sy.no.3 measuring 1 acre 18 guntas located at Srikanthapura village, Dasanapura hobli, Bangalore north taluk, sy.no.73/1 measuring 4.15 guntas, sy.no.72 measuring 8 guntas at Talagattapura, The Hon'ble 1st addl senior civil Judge has posted the above case on 30/05/2022 at 11.00 AM for your appearance personally or through your counsel. Hence you are notice to appear before court on said date of hearing personally or through pleader, otherwise Hon'ble court will be deciding the matter in your absence by placing you ex-parte.
Given under my hand and seal of this court on the 19/4/22
Petitioner counsel
Sri, A. Siddaiah,
Advocate, Nelamangala.
BY ORDER OF THE COURT,
SD/- SHERISTEDAR,
COURT OF SENIOR CIVIL JUDGE & JMFC,
NELAMANGALA

JOB OPPORTUNITIES

General

WANTED EXPERIENCED COMPUTER OPERATORS, DRIVERS and OFFICE MANAGERS in Bangalore. Contact Immediately. Call: 9448171416

"WANTED SALES Boys/ Girls, Billing Assistants for Appliances Showroom Jayanagar, Salary 12 -18K, 9845088449 / 9978245139"

IMMEDIATE APPOINTMENT HRD,Administration,Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Part-Time Jobs

RETIRED/ VRS Persons And Age above 45 Years Earn 2nd Income 35K to 40K PM in their life here no Retirement: 9886641282/ 7019215243

Teachers/ Professors

WANTED TEACHERS with BA/MA (Eng and SS) with BEd, Salary 14000 to 25000, Contact Sidhartha International School,Peenya, Dasarahalli. Contact No. 9620100046/ 9964670328

MOOKAMBIKA SCHOOL, N.R. Colony Wanted TEACHER to teach COMPUTER SCIENCE. Email: mookambikaschool.nr@gmail.com . Contact: 74835-54511

Wanted

WANTED FEMALE executive Language English, hindi, Kannada Salary negotiable Contact :- 9703057999.

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

BUSINESS

Business to Business

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

Shares

EARN REGULAR daily income through online trading in a disciplined way. We give ONE TO ONE, personal training from basics to advanced level in FOREX, EQUITY and F&O segments.Call 8105303232

MATRIMONIAL

Matrimonial Bureaus

ASWATH MATRIMONIAL Services, High class First/ Second Marriages All ages, India/Abroad. Aswath G.V- 9739855599

RENTAL PROPERTIES

Accommodation Available

Commercial

AVAILABLE COMMERCIAL Building 10000 sqft for Rent at Banashankari 2nd Stage, K.R.Road. Contact: 9341234288/ 9663224353.

FIRST FLOOR- 1800 Sft immediately. Second floor- 1800 Sft from 15 Nov 2022. Address: #17, Third Cross Lalbagh Road, Bangalore. Contact Details: Col S Neeraj, M: 8095553485. Request: No Agents/ Brokers please.

Accommodation Wanted

General

FURNISHED room required for a bachelor girl in and around belandur or kadubasenahalli.Contact 9916571094

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Agricultural Land

Devanahalli

SALE 26 Guntas Farm land. 7 kms after Devanahally. 0.5 kms off NH44. Price 2 Cr. Clear title. Owner: 9986366366.

Commerical

Rajajinagar

PG FOR Sale Rs. 7 Crores, at 4th Block Rajajinagar, Area 2,400 Sqft, 2 Floors with all Amenities. Contact: Manohar Pai 9620777194.

Flat

Jayanagar

SALE- 3STORYED, EF, Corner Building with 7 Flats, Eastend Road, Jayanagar- 4th T Block 4050 Sqft, 30000 Contact: 7892149427

Tumkur

FLATS FOR SALE Industrial flat at Anthrasanahalli KSSIDC Industrial Area Tumkur. plant Building With machinery Area 16500 sqft for Sale 9343087899

TRAVEL CORNER

ಭಾರತೀಯ ರೈಲ್ವೆ
ಕಾಶಿ ರಾಮೇಶ್ವರಂ ರೈಲ್ವೆ ಯಾತ್ರೆ
ವಾರಣಾಸಿ -ಗಯಾ- ಪ್ರಯಾಗರಾಜ್ ಚಿತ್ರಕೂಟದಾಮ ಅಯೋಧ್ಯ -ಪೂರಿ ಕೊನಾರ್ಕ್-ರಾಮೇಶ್ವರಂ -ಮಧುರೈ
18.11.22 - 11 ದಿವಸ - 2SL Rs 23500
ರೈಲಿನಲ್ಲಿ ಪ್ರಯಾಣ- ವಸತಿ ಬಸ್-ಊಟ ಸೆಕ್ಯೂರಿಟಿ ಟುರ್-ಮ್ಯಾನೇಜರ್
87544 04260 | WWW.ULARAIL.COM

Sites

Lingarajapuram

BDA APPROVED KSFC EHBCS Layout Site for Sale 47X52 Oil Mill Road, Lingarajauram.Contact: 9481388064.

Padmanabha Nagar

COMMERCIAL SITE For Sale 30x42 W/F Rs.12,500/Sqft Near Mane Tindi Hotel Rajeev Nagar Main Road: 9980741687/9743315557

Vishweshwariah Layout

BDA 30X40 SITE No.745 VISHWESHWARAIAH LAYOUT 1st BLOCK SOUTH 40 FEET ROAD NEAR 100 FEET ROAD 8892901567, 9341733480

Vidyaranyapura

VILLA PLOTS for Sale in Premium Res Layout (BBMP Limits) at Vidyaranyapura Blr Ready for Construction and Bank Loans Available :9901833455/ 9686300772

PERSONAL

Change of Name

CHANGE OF NAME
I, **ARUL JYOTI** Spouse of No. 1086014X Rank : TSLD **M. KANAGESH** Residing at # TS 16, 1st Cross, Muneshwara Block, P.G. Halli, Post Office Malleshwaram, Bangalore-560003 have changed my name from **ARUL JYOTI** to **K ARUL JYOTHI** vide affidavit dated 28.10.2022 before Notary Y.R. Chandrasekar, Bangalore.

I, MARY W/o Chacko V.M no 06361855H Rank Havildar aged 80 years residing at No. 418, 4th B Cross, OMBR Layout, Bhuvanagiri Channasandra, Kalyan Nagar, Bangalore- 560043. have changed my name to Mary Chacko vide affidavit dated 3.11.2022 before notary Uday Kumar K, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CHANGE OF NAME
I, **NADER MIRZA,** Residing at 'Albert Cottage', No. 13/1, Albert Street, Richmond Town, Bengalru- 560025, have changed my name to **NADER KASHANI** vide affidavit dated 03.11.2022, before notary N. Narayanaswamy, Bengaluru. Henceforth I shall be called **NADER KASHANI** only.

I, ARBAAN PASHA SYED #18/53-1-1, 1st main, New Extension, Madivala, Bengaluru-68 have changed my name to SYED ARBAAN vide affidavit dated 02/11/2022 before notary K.V. Mani

CHANGE OF NAME
I, **AAYAN MIRZA,** Residing at 'Albert Cottage', No. 13/1, Albert Street, Richmond Town, Bengalru- 560025, have changed my name to **AAYAN KASHANI** vide affidavit dated 03.11.2022, before notary N. Narayanaswamy, Bengaluru. Henceforth I shall be called **AAYAN KASHANI** only.

I, RAMISETTY Narasimahaiah Ramesh, R/a 1388, 1st main road, Gandhinagar, Yelahanka, Bangalore North- 560064, have changed my daughter's name from HASINI RAMSHETTY to HASINI RAMISETTY, vide affidavit dated 29.10.2022 before Notary S.R. Ravikumar Bangalore

CHANGE OF NAME
I, **P. Rekha,** Residing at No. 127, 3rd Main, Simhadri Layout, Singapura, Vidyarangapura, Bengaluru - 560 097, have changed my name to **P. Rekha Mohan Kumar,** vide affidavit dated: 3.11.2022, before notary V. Rangaraju, Bengaluru. Henceforth, I shall be called **P. Rekha Mohan Kumar** only.

I, SHOBHA W/o Hareesha R/a #165, 1st Main, 2nd Cross, Magadi Main Road Gollarahatti Bangalore- 560091 Declare That in My Minor Son's Educational Records His Name wrongly Entered as SRIDHAR Y instead of SRIDHAR and His Father Name also Wrongly Entered as YOGESH instead of HAREESHA vide affidavit dated 27-10-2022 Before Notary H.S. Sakalesh Aradhya Bangalore

I, RAMSHETTY SUMALATHA, R/a 1388, 1st main road, Gandhinagar, Yelahanka, Bangalore North- 560064, have changed my name to RAMISETTY SUMALATHA, vide affidavit dated 29.10.2022 before Notary S.R. Ravikumar, Bangalore

Lost

LOST
I, **B.T. Purushotham** have lost my property document vide no. **S.Nos. 81/5, 81/8 to 81/7 HSK No. 1-13070/2020-21 to S.No. 80/2, 80/3, 82/1 HSK No. 1-13073-2020-21 (Lost Report No.: 0366986 / 2022)** while shifting the house.
Finders please contact:
99647 12582

PUBLIC NOTICE
Our Client, **Dr. Manjunath. K,** R/o Bangalore, intends to purchase the Residential Property from its lawful owner, **Sri B. Krishna,** S/o Late Ramachandra Sastri, No.12/D, 14th Main, Hanumanthanagar, Bangalore, which is morefully described in the Schedule hereunder and hereinafter referred to as Schedule Property. The general public is hereby informed that any person/s having or asserting any right, title and interest or making any claim in respect of the Schedule Property may send their objections in writing with documentary proof to the undersigned within **Ten (10) Days** from the date of this publication. If no claim or objection is received within the stipulated time, it shall be presumed that no one is having any right, title, claim or interest over the schedule property and our client will proceed with the completion of the sale in respect of the schedule property.
SCHEDULE PROPERTY
All that piece and parcel of the Residential Property bearing Municipal NewNo.4, Old No.12D, situated at D Cross, Hanumanthanagar, (earlier Sunkenahalli), measuring East to West 30 Feet and North to South 40 Feet, totally measuring 1200 Square Feet along with existing old building, coming within the limits of BBMP Ward No.155, Hanumanthanagar, Bangalore and bounded on: East by : Site No.12/C, West by : Site No.12/B, North by : Road, South by : Site No.11/B.
Address: **R PURSHOTAM,** Advocate, RPM Associates, No.7, I Floor, Yamunabai Road, Madhavanagar, Bangalore – 560001, Ph.: 9980200300

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752 9845114560 | 9886213331 | 080 - 45557163 / 164
Email: dhclassifieds@deccanherald.co.in

ರಾಜ್ಯೋತ್ಸವ ಸಡಗರ ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್‌ನಲ್ಲಿ ಕರವೇ ಪ್ರವೀಣ್ ಶೆಟ್ಟಿ ಬಣದಿಂದ 4 ಅಡಿ ಅಗಲದ ಮೂರು ಸಾವಿರ ಅಡಿ ಉದ್ದದ ಕನ್ನಡ ಬಾವುಟ ಪ್ರದರ್ಶನ ಮಾಡುವ ಮೂಲಕ 67ನೇ ಕನ್ನಡ ರಾಜ್ಯೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಫಿಲ್ಮ್ ಸಿಟಿ ಮುಂಭಾಗ ಕನ್ನಡಪರ ಸಂಘಟನೆಗಳ ಪ್ರತಿಭಟನೆ

'ಬಿಗ್‌ಬಾಸ್' ಮನೆಯಿಂದ ಸಂಬರಗಿ ಹೊರಹಾಕಲು ಒತ್ತಾಯ

ಪ್ರಜಾವಾಣಿ ವಾರ್ತೆ

ಇನೋವೇಟಿವ್ ಫಿಲ್ಮ್ ಸಿಟಿ ಮುಂಭಾಗ ಗುರುವಾರ ವಿವಿಧ ಸಂಘಟನೆಗಳ ಹೋರಾಟಗಾರರು ಪ್ರತಿಭಟನೆ ನಡೆಸಿದರು

ಬಿಡದಿ (ರಾಮನಗರ): ಕನ್ನಡದ ಖಾಸಗಿ ವಾಹಿನಿಯೊಂದರಲ್ಲಿ ಪ್ರಸಾರಗೊಳ್ಳುತ್ತಿರುವ ಬಿಗ್‌ಬಾಸ್ ರಿಯಾಲಿಟಿ ಶೋನಿಂದ ಸ್ಪರ್ಧಿ ಪ್ರಶಾಂತ್ ಸಂಬರಗಿ ಅವರನ್ನು ಹೊರ ಹಾಕಬೇಕು. ಇಲ್ಲವಾದಲ್ಲಿ ಚಿತ್ರೀಕರಣ ನಿಲ್ಲಿಸಬೇಕು ಎಂದು ಒತ್ತಾಯಿಸಿ ವಿವಿಧ ಕನ್ನಡಪರ ಸಂಘಟನೆಗಳ ಹೋರಾಟಗಾರರು ಗುರುವಾರ ಪ್ರತಿಭಟನೆ ನಡೆಸಿದರು.

ಶೋ ಚಿತ್ರೀಕರಣ ನಡೆದಿರುವ ಬಿಡದಿಯ ಇನೋವೇಟಿವ್ ಫಿಲ್ಮ್ ಸಿಟಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ವಾಹಿನಿ ಹಾಗೂ ಶೋ ನಿರ್ದೇಶಕರ ವಿರುದ್ಧ ಧಿಕ್ಕಾರ ಕೂಗಿದರು.

ಕನ್ನಡಪರ ಹೋರಾಟಗಾರ ರೂಪೇಶ್ ರಾಜಣ್ಣ ಸಹ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದಾರೆ. ಬಿಗ್‌ಬಾಸ್ ಮನೆಯೊಳಗೆ ರಾಜಣ್ಣ ಅವರನ್ನು ನಿಂದಿಸಿರುವ ಪ್ರಶಾಂತ್, ಕನ್ನಡಪರ ಹೋರಾಟಗಾರರ ಬಗ್ಗೆಯೂ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಹೀಗಾಗಿ ಕೂಡಲೇ ಅವರನ್ನು ಸ್ಪರ್ಧೆಯಿಂದ ಹೊರ ಹಾಕಬೇಕು ಎಂದು ಆಗ್ರಹಿಸಿದರು.

ಪ್ರಚಾರಕ್ಕೋಸ್ಕರ ಸಂಬರಗಿ ಕನ್ನಡಿಗರ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಅವರನ್ನು ಶೋನಿಂದ ಹೊರಹಾಕುವ ಜೊತೆಗೆ ಇಲ್ಲಿಂದ ಗಡಿಪಾರು ಮಾಡಬೇಕು. ಇಲ್ಲವಾದಲ್ಲಿ ಸರ್ಕಾರವೇ ಬಿಗ್‌ಬಾಸ್ ಚಿತ್ರೀಕರಣಕ್ಕೆ ನಿಷೇಧ ಹೇರಬೇಕು ಎಂದು ಆಗ್ರಹಿಸಿದರು.

ಶನಿವಾರದ ಒಳಗೆ ನಿರ್ಧಾರ ಪ್ರಕಟಿಸಬೇಕು. ಇಲ್ಲವಾದಲ್ಲಿ ಶನಿವಾರದಿಂದ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಎಚ್ಚರಿಸಿದರು. ಗುರುವಾರ ರಾತ್ರಿ ವರೆಗೂ ಪ್ರತಿಭಟನೆ ಮುಂದುವರಿದಿತ್ತು.

ತನಿಖೆಗೆ ಉನ್ನತ ಮಟ್ಟದ ಸಮಿತಿ ರಚನೆ

ಒಂದನೇ ಪುಟದಿಂದ...

ಆರೋಗ್ಯ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಮೂವರು ವೈದ್ಯರನ್ನು ಒಳಗೊಂಡ ತಂಡ ರಚಿಸಲಾಗುವುದು. ಎರಡು ವಾರದಲ್ಲಿ ವರದಿ ನೀಡಲಿದ್ದು, ನಂತರ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಆಸ್ಪತ್ರೆಗೆ ಬರುವ ಗರ್ಭಿಣಿ ಸೇರಿದಂತೆ ಯಾವೊಬ್ಬ ರೋಗಿಯ ದಾಖಲೆ, ಗುರುತಿನ ಕಾರ್ಡ್ ಪರಿಶೀಲಿಸದೆ ಚಿಕಿತ್ಸೆ ನೀಡಬೇಕು. ಚಿಕಿತ್ಸೆ ನೀಡಲು ನಿರಾಕರಿಸಿದರೆ ಅಂತಹ ವೈದ್ಯರು, ಸಿಬ್ಬಂದಿಯನ್ನು ವಜಾ ಮಾಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು. ಅದಕ್ಕೆ ಸಂಬಂಧಿಸಿದಂತೆ ಕಾನೂನಿಗೆ ತಿದ್ದುಪಡಿ ತರಬೇಕಿದ್ದು, ಮುಂದಿನ ಅಧಿವೇಶನದಲ್ಲಿ ಕಾನೂನು ರಚಿಸಲಾಗುವುದು ಎಂದು ಹೇಳಿದರು.

'ಜಿಲ್ಲಾ ಆಸ್ಪತ್ರೆಯಲ್ಲಿ ಇಂತಹ ಅಮಾನವೀಯ ಘಟನೆ ನಡೆಯಬಾರದಿತ್ತು. ಇದು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಮುಂದೆ ಇಂತಹ ಕೆಟ್ಟ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.

ಸುಧಾಕರ್ ರಾಜೀನಾಮೆಗೆ ಆಗ್ರಹ

ಒಂದನೇ ಪುಟದಿಂದ...

'ಮಂಡ್ಯದಲ್ಲಿ ಅನಾರೋಗ್ಯಕ್ಕೆ ತುತ್ತಾಗಿದ್ದ ಮಗುವನ್ನು ತಮ್ಮ ದ್ವಿಚಕ್ರವಾಹನದಲ್ಲಿ ಕರೆದೊಯ್ಯುತ್ತಿದ್ದ ದಂಪತಿಯನ್ನು ತಡೆದಿದ್ದ ಪೊಲೀಸರು, ದುಡ್ಡಿಗಾಗಿ ಕಿರುಕುಳ ನೀಡಿದ ಅಮಾನವೀಯ ಘಟನೆ ಗುರುವಾರ ನಡೆದಿತ್ತು. ಅದಾದ ಕೆಲವೇ ಹೊತ್ತಿಗೆ ತುಮಕೂರಿನಲ್ಲಿ ಕರುಳು ಹಿಂಡುವಂತಹ ರಾಜ್ಯವೇ ತಲೆ ತಗ್ಗಿಸುವ ಘಟನೆ ನಡೆದಿದೆ' ಎಂದಿದ್ದಾರೆ.

'ಸ್ವತಃ ವೈದ್ಯರೆಂದು ಹೇಳಿಕೊಳ್ಳುವ ಸಚಿವ ಸುಧಾಕರ್ ಉಸ್ತುವಾರಿಯಲ್ಲಿ ಆರೋಗ್ಯ ಇಲಾಖೆ ಎಷ್ಟರ ಮಟ್ಟಿಗೆ ಹಳ್ಳಹಿಡಿದಿದೆ ಎನ್ನುವುದಕ್ಕೆ ಈ ಸಾವುಗಳೇ ಸಾಕ್ಷಿ.ಮಾನವೀಯತೆ ಇಲ್ಲದ ವೈದ್ಯೆ ಹಾಗೂ ಸರ್ಕಾರವೇ ಮಾಡಿದ ಕೊಲೆಗಳಿವು. ತಬ್ಬಲಿಯಾದ ಮಗುವಿನ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಮೈಮೇಲೆ ಹರಿದ ಬಸ್: ಮಹಿಳೆ ಸಾವು

ಬೆಂಗಳೂರು: ಹಲಸೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ಅಪಘಾತ ಸಂಭವಿಸಿದ್ದು, ಮೇರಿ ಮಾರ್ಗರೇಟ್ (52) ಎಂಬುವವರು ಮೃತಪಟ್ಟಿದ್ದಾರೆ. ಅವರ ಪತಿ ಸೊಲೆಟ್ (59) ಗಾಯಗೊಂಡಿದ್ದಾರೆ.

'ಗೌತಮಪುರದ ನಿವಾಸಿಗಳಾದ ಮೇರಿ ಹಾಗೂ ಸೊಲೆಟ್, ಹಿರಿಯರ ಹಬ್ಬದ ಪ್ರಯುಕ್ತ ಸಮಾಧಿಗಳಿಗೆ ಪೂಜೆ ಮಾಡಲೆಂದು ಸಂಬಂಧಿಕರ ಜೊತೆ ಸ್ಮಶಾನಕ್ಕೆ ಹೋಗಿದ್ದರು. ದ್ವಿಚಕ್ರ ವಾಹನದಲ್ಲಿ ಮನೆಗೆ ವಾಪಸು ಹೊರಟಿದ್ದಾಗ, ಮಿನಿ ಬಸ್ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ' ಎಂದು ಹಲಸೂರು ಸಂಚಾರ ಪೊಲೀಸರು ಹೇಳಿದರು.

'ಆಂಜನೇಯ ಜಂಕ್ಷನ್ ಬಳಿ ಅಪಘಾತ ಸಂಭವಿಸಿದೆ. ಚಾಲಕ ವಿಶ್ವನಾಥ್, ವೇಗವಾಗಿ ಬಸ್ ಚಲಾಯಿಸಿದ್ದ. ಇದರಿಂದ ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ ಹೊಡೆದಿತ್ತು.'

'ಹಿಂಬದಿಯಲ್ಲಿ ಕುಳಿತಿದ್ದ ಮೇರಿ ರಸ್ತೆಗೆ ಬಿದ್ದಿದ್ದರು. ಅವರ ಮೈ ಮೇಲೆಯೇ ಬಸ್ಸು ಹರಿದಿತ್ತು.ಗಾಯಗೊಂಡಿರುವ ಸೊಲೆಟ್ ಅವರಿಗೆ ಚಿಕಿತ್ಸೆ ಮುಂದುವರಿದಿದೆ. ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದರು.

ಚಂದ್ರಮೌಳಿ, ವಾಣಿರಾವ್ ಅವರಿಗೆ ಅನಕೃ ಪ್ರಶಸ್ತಿ

ಬೆಂಗಳೂರು: ಅನಕೃ ಪ್ರತಿಷ್ಠಾನದ 2021ನೇ ಸಾಲಿನ ಅನಕೃ ಪ್ರಶಸ್ತಿಯನ್ನು ವಿಮರ್ಶಕ ಕೆ. ಚಂದ್ರಮೌಳಿ ಹಾಗೂ ವಸಂತದೇವಿ ಅನಕೃ ಪ್ರಶಸ್ತಿಯನ್ನು ಲೇಖಕಿ ಡಾ. ವಾಣಿ ರಾವ್ ಅವರಿಗೆ ಸಂದಿದೆ.



ಕೆ. ಚಂದ್ರಮೌಳಿ

ಕೆ. ಚಂದ್ರಮೌಳಿ ಅವರು ಚಿಕ್ಕಮಗಳೂರಿನವರಾಗಿದ್ದು, ಮುಂಬೈ, ಕೊಯಮತ್ತೂರು, ಬೆಳಗಾವಿಯಲ್ಲಿ ಎಂಜಿನಿಯರ್ ಆಗಿದ್ದರು. ಕೇಂದ್ರ ಜಲಸಂಪನ್ಮೂಲ ಮತ್ತು ಗಂಗಾ ಪುನರುಜ್ಜೀವನ ಸಮಿತಿಯ 'ಗಂಗೆಯನ್ನು ಉಳಿಸಿ' ಆಂದೋಲನಕ್ಕೆ ವಿಶೇಷ ಸಲಹೆಗಾರರಾಗಿದ್ದರು. ಕಾಶಿ ಬಗ್ಗೆ ಕನ್ನಡ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ.

ಡಾ. ವಾಣಿರಾವ್ ಅವರು ಉಡುಪಿಯವರಾಗಿದ್ದು, 28 ವರ್ಷ ಶಿಕ್ಷಕಿಯಾಗಿದ್ದರು. ಹೋಮಿಯೋಪತಿ ಪದವಿ ಪಡೆದಿದ್ದು, ನಾಲ್ಕು ಭಾಷಾಂತರ, 55 ಲೇಖನ, 120 ಸಣ್ಣಕತೆ, 62 ಕಾದಂಬರಿ, 60 ಮಕ್ಕಳ ಕತೆಗಳನ್ನು ರಚಿಸಿದ್ದಾರೆ. ಅವರ 'ಹೆಜ್ಜೆಗಳು' ಆತ್ಮಕಥೆ ಇತ್ತೀಚೆಗೆ ಪ್ರಕಟವಾಗಿದೆ.

ಅನಕೃ ಪ್ರಶಸ್ತಿ ₹50 ಸಾವಿರ ಹಾಗೂ ವಸಂತಾದೇವಿ ಅನಕೃ ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ಬಸವನಗುಡಿಯ ನ್ಯಾಷನಲ್ ಕಾಲೇಜಿನ ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣದಲ್ಲಿ ನ.13ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಗೌತಮ್ ಅನಕೃ ತಿಳಿಸಿದ್ದಾರೆ.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಗುರುವಾರದಿಂದ ಆರಂಭವಾದ ಕೃಷಿ ಮೇಳದಲ್ಲಿ ಸಾಧಕ ರೈತರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು (ಮೊದಲ ಚಿತ್ರ). ಶಾಲಾ ವಿದ್ಯಾರ್ಥಿಗಳು ತೋಟದಲ್ಲಿ ಅರಳಿದ್ದ ಹೂವುಗಳ ಅಂದವನ್ನು ಆಸ್ವಾದಿಸಿದರು (ಎರಡನೇ ಚಿತ್ರ). ಬೇಕರಿ ವಿಭಾಗದಲ್ಲಿ ಹಾಕಲಾಗಿದ್ದ ಮಳಿಗೆಯಲ್ಲಿ ಸಿಹಿತಿನಸು ತಯಾರಿ ಪ್ರಾತ್ಯಕ್ಷಿಕೆ ನೀಡಲಾಯಿತು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಕೃಷಿ ಮೇಳ: ಜನ ಹೇಳಿದ್ದೇನು..

ಕೃಷಿಗೆ ಅನುಕೂಲವಾಗುವ ಹೊಸ ಸಂಶೋಧನೆಗಳು, ನಮಗೆ ಬೇಕಾಗುವ ವಸ್ತುಗಳನ್ನು ಖರೀದಿಸಲು ಈ ಮೇಳ ಸಹಕಾರಿಯಾಗಿದೆ. ಹೊಸ ತಳಿಗಳ ಬೆಳೆ, ಹಣ್ಣು–ಹೂವು ಮತ್ತು ಕೋಳಿ, ಪ್ರಾಣಿಗಳ ತಳಿಗಳನ್ನು ನೋಡಲು ಸಿಗುತ್ತದೆ. ಪ್ರತಿವರ್ಷ ಇಲ್ಲಿಗೆ ಬರುತ್ತೇವೆ. ಮೇಳ ಖುಷಿಕೊಟ್ಟಿದೆ.

ರೇವಣ್ಣ ಸಿದ್ಧಯ್ಯ , ರೈತ ಚೋಳನಾಯಕನಹಳ್ಳಿ, ಮಾಗಡಿ

ನಾವು ಈಗಾಗಲೇ ಮಾಡುತ್ತಿರುವ ಕೃಷಿ ಪದ್ಧತಿಯನ್ನು ಸುಧಾರಿಸಬೇಕು. ಇಲ್ಲಿ ಹೊಸ ವಿಷಯಗಳನ್ನು ಕಂಡಿದ್ದೇವೆ. ಕೃಷಿ ಇಲಾಖೆ ನೆರವಿನಿಂದ ನಮ್ಮ ಬೇಸಾಯ ಪದ್ಧತಿಯಲ್ಲಿ ಅಳವಡಿಸಿಕೊಳ್ಳುತ್ತೇವೆ. ಕೃಷಿ ಮೇಳಕ್ಕೆ ಮೊದಲ ಬಾರಿಗೆ ಭೇಟಿ ನೀಡಿದ್ದು ಖುಷಿ ನೀಡಿದೆ.

ರಮೇಶ್, ರೈತ ಬರಾಳು ಗ್ರಾಮ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ

ನಾವು ಬಂದದ್ದು ವ್ಯರ್ಥ ಆಗಬಾರದು. ಇಲ್ಲಿ ಕಂಡ ಹೊಸ ಮಾಹಿತಿಯನ್ನು ನಮ್ಮ ಕೃಷಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳುತ್ತೇವೆ. ಹಲವು ಹೊಸ ವಿಷಯಗಳನ್ನು ಇಲ್ಲಿ ಕಂಡಿದ್ದೇವೆ. ಬಿತ್ತನೆ ಬೀಜಗಳ ಮಾಹಿತಿ, ನರ್ಸರಿಗಳಲ್ಲಿ ಸಸಿ ಬೆಳೆಸುವ ಬಗೆಗಿನ ತಿಳಿವಳಿಕೆಯಿಂದಾಗಿ ಮೇಳ ಖುಷಿ ನೀಡಿದೆ.

ಲಕ್ಷ್ಮಮ್ಮ, ರೈತ ಮಹಿಳೆ, ಸೊಮಪುರ ಹೋಬಳಿ ದಾಬಸಪೇಟೆ

ವಿಶ್ವವಿದ್ಯಾಲಯ ಬಿಡುಗಡೆಗೊಳಿಸಿದ ಹೊಸ ತಳಿಗಳು, ಎಂಜಿನಿಯರಿಂಗ್ ವಿಭಾಗ ಸೇರಿರುವುದರಿಂದ ಕೃಷಿಯಲ್ಲಿ ಹೊಸ ಆವಿಷ್ಕಾರಗಳಾಗುತ್ತಿರುವುದು ಬಹಳ ಖುಷಿ ನೀಡಿದೆ.

ಸುಮಾ, ವಿದ್ಯಾರ್ಥಿನಿ ಕೃಷಿ ಕಾಲೇಜು ಹಾಸನ

ಕೃಷಿ ಮೇಳದಲ್ಲಿ ಪ್ರದರ್ಶಿಸಲಾದ ಮೀನುಗಳ ತಳಿಗಳನ್ನು ಶಾಲಾ ಮಕ್ಕಳು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಮೇಳದಲ್ಲಿ ವಾಹನ ದಟ್ಟಣೆ

ಬೆಂಗಳೂರು: ಕೃಷಿ ಮೇಳಕ್ಕೆ ಮೊದಲ ದಿನವಾದ ಗುರುವಾರ ಒಮ್ಮೆಲೇ ಜನರು ಧಾವಿಸಿದ ಕಾರಣಕ್ಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗ ಹಾಗೂ ಜಿಕೆವಿಕೆ ಆವರಣದ ಮಾರ್ಗದಲ್ಲಿ ವಾಹನ ದಟ್ಟಣೆ ಕಂಡುಬಂತು. ಬೆಳಿಗ್ಗೆ 11ರಿಂದ ಸಂಜೆ 6ರ ತನಕ ಸಾಕಷ್ಟು ವಾಹನಗಳು ಸಂಚರಿಸಿದವು.

‘ಕೃಷಿ ಮೇಳ’ದಲ್ಲಿ ರೈತ ಜಾತ್ರೆ, ಮಳೆಯ ನಡುವೆಯೂ ಮೊದಲ ದಿನ ಉತ್ತಮ ಪ್ರತಿಕ್ರಿಯೆ

ತಾಂತ್ರಿಕತೆ ಅನಾವರಣ, ನವೋದ್ಯಮ ಆಕರ್ಷಣೆ

● ಆದಿತ್ಯ ಕೆ.ಎ.

ಬೆಂಗಳೂರು: ಸಿರಿಧಾನ್ಯಗಳ ವೈಭವ, ಔಷಧೀಯ ಹಾಗೂ ಸುಗಂಧ ದ್ರವ್ಯ ಸಸ್ಯಗಳ ಸೊಬಗು, ಕುರಿ–ಕೋಳಿ ಹೊಸ ತಳಿಗಳ ಆಕರ್ಷಣೆ, ಅನ್ನದಾತರಿಗೆ ನೆರವಾಗುವ ನವೋದ್ಯಮಗಳು, ಔಷಧ ಸಿಂಪಡಣೆಗೆ ಬಗೆಬಗೆಯ ಯಂತ್ರಗಳು, ಅಲಂಕಾರಿಕ ಮೀನುಗಳು, ಕಳೆ ತೆಗೆಯಲು ತರಹೇವಾರಿ ಯಂತ್ರಗಳು, ವಿವಿಧ ತಳಿಯ ಹಣ್ಣುಗಳು...

– ಇವು ಕಂಡುಬಂದಿದ್ದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದ ಕೃಷಿ ಮೇಳದಲ್ಲಿ.

ಮಳೆಯ ನಡುವೆಯೂ ಆರಂಭವಾದ ನಾಲ್ಕು ದಿನಗಳ ಕೃಷಿ ಮೇಳಕ್ಕೆ ಮೊದಲ ದಿನವಾದ ಗುರುವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಮೇಳವು ರೈತರ ಜಾತ್ರೆಯಂತೆ ಕಂಡುಬಂತು. ಕೃಷಿಕರ ಹುಮ್ಮಸ್ಸು ಹೆಚ್ಚಿಸಿತ್ತು.

ಮೇಳದಲ್ಲಿ ಸಾಧಕ ರೈತರ ಪರಿಶ್ರಮ, ಕೃಷಿಯಲ್ಲಿ ಲಾಭ ಕಂಡುಕೊಂಡ ಬಗೆ ಅನಾವರಣಗೊಂಡಿತ್ತು. ಖುಷ್ಕಿ ಬೇಸಾಯದ ಬೆಳೆ, ತೋಟಗಾರಿಕೆ ಮಳಿಗೆ, ಸಮಗ್ರ ಬೇಸಾಯ ಪದ್ಧತಿ ವಿಧಾನ, ಜಲಾನಯನ ನಿರ್ವಹಣೆ, ಹನಿ ನೀರಾವರಿ ಪದ್ಧತಿ, ಚಾವಣಿ ಹಾಗೂ ಮಳೆ ನೀರು ಸಂಗ್ರಹ ವಿಧಾನ, ಮಣ್ಣು ರಹಿತ ಕೃಷಿಯ ಆವಿಷ್ಕಾರ, ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಳು ಮೇಳದಲ್ಲಿ ಗಮನ ಸೆಳೆಯುತ್ತಿವೆ.

ಮೇಳದಲ್ಲಿ ನಿರ್ಮಿಸಿದ್ದ 697 ಮಳಿಗೆ ಪೈಕಿ ಮೊದಲ ದಿವಸ 500ರಷ್ಟು ಮಳಿಗೆಗಳಲ್ಲಿ ಭರ್ತಿಯಾಗಿದ್ದವು. ಪ್ರತಿ ಮಳಿಗೆಯೂ ವಿಭಿನ್ನ ರೀತಿ ಅನುಭವ ಕಟ್ಟಿಕೊಟ್ಟವು.

ದೂರದ ಊರುಗಳಿಂದ ಆಗಮಿಸಿದ್ದ ರೈತರು ಪ್ರತಿ ಮಳಿಗೆಯತ್ತಲೂ ಕಣ್ಣು ಹಾಯಿಸಿ ಮಾಹಿತಿ ಪಡೆದುಕೊಂಡರು. ಯಂತ್ರೋಪಕರಣ ಮಳಿಗೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ರೈತರ ನೆರವಿಗೆ ವಿವಿಧ ಕಂಪನಿಗಳು ನಿರ್ಮಿಸಿರುವ ಉಪಕರಣಗಳು ಮೇಳದಲ್ಲಿ ಗಮನ ಸೆಳೆಯುತ್ತಿವೆ. ಸ್ಥಳದಲ್ಲಿಯೇ ಮಡಿಕೆ ತಯಾರಿಕೆ ಪ್ರಾತ್ಯಕ್ಷಿಕೆ ಹಾಗೂ ಜಾನಪದ ಕಲಾವಿದರ ಹಾಡುಗಳು ಮನ ಸೆಳೆಯಿತು.

ಉದ್ಘಾಟನಾ ಸಮಾರಂಭಕ್ಕೂ ಮೊದಲು ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ನೆರೆದಿದ್ದರು. ವಿದೇಶಿ ಕುರಿ, ಕೋಳಿ ತಳಿಗಳು ಅವರ ಆಕರ್ಷಣೆ ಹೆಚ್ಚಿಸುವಂತೆ ಮಾಡಿತು.

ಹೊಸ ತಳಿಯತ್ತ ಚಿತ್ತ: ವಿವಿ ತಜ್ಞರು ಅಭಿವೃದ್ಧಿ ಪಡಿಸಿರುವ ಒಟ್ಟು 9 ತಳಿಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬಿಡುಗಡೆ ಮಾಡಿದರು. ಅವುಗಳ ಪ್ರಾತ್ಯಕ್ಷಿಕೆಯನ್ನು ರೈತರು ಮುಗಿಬಿದ್ದು ವೀಕ್ಷಿಸಿದರು.

ಕೃಷಿ ಇಲಾಖೆ, ರೇಷ್ಮೆ ಇಲಾಖೆ, ತೋಟಗಾರಿಕೆ ಇಲಾಖೆಯ ಮಳಿಗೆಗಳು, ಸರ್ಕಾರದಿಂದ ದೊರೆಯುವ ಯೋಜನೆಗಳ ಮಾಹಿತಿ ನೀಡಲಾಯಿತು. ನರ್ಸರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಮಳಿಗೆ ಸ್ಥಾಪಿಸಲಾಗಿತ್ತು.

ಕೃಷಿ ಮೇಳದಲ್ಲಿ ಮಾಡಲಾಗಿದ್ದ ವಿಶೇಷ ಹೂವಿನ ತೋಟದ ಪ್ರಾತ್ಯಕ್ಷಿಕೆಯನ್ನು ಆಸಕ್ತರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಅಂಕಿ-ಅಂಶಗಳು

1.60 ಲಕ್ಷ
ರೈತರಿಂದ ಮೊದಲ ದಿನ ಮೇಳ ವೀಕ್ಷಣೆ

7,650
ರಿಯಾಯಿತಿ ದರದಲ್ಲಿ ಊಟ ಸವಿದ ಜನರು

₹1.20 ಕೋಟಿ
ವಹಿವಾಟು

ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ

- ಚಿಕ್ಕಬಳ್ಳಾಪುರದ ಎಚ್‌ಜಿ.ಗೋಪಾಲಗೌಡರಿಗೆ ‘ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಪ್ರಶಸ್ತಿ’
- ದೊಡ್ಡಬಳ್ಳಾಪುರದ ಸಿ.ನವಿಕ್ರಮ್‌ಗೆ ‘ಡಾ.ಎಂ.ಎಚ್.ಮರಿಗೌಡ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿ’
- ಮದ್ದೂರಿನ ಸಿ.ಪಿ.ಕೃಷ್ಣಗೆ ‘ಕ್ಯಾನ್ ಬ್ಯಾಂಕ್ ರೈತ ಪ್ರಶಸ್ತಿ’
- ಹೊಳೆನರಸೀಪುರದ ಎಂ.ಕವಿತಾಗೆ ‘ಕ್ಯಾನ್ ಬ್ಯಾಂಕ್ ರೈತ ಮಹಿಳಾ ಪ್ರಶಸ್ತಿ’
- ಚಿಕ್ಕಬಳ್ಳಾಪುರದ ಎಂ.ಟಿ.ಮುನೇಗೌಡರಿಗೆ ‘ಡಾ.ಆರ್.ದ್ವಾರಕೀನಾಥ್‌ಗೆ ಅತ್ಯುತ್ತಮ ರೈತ ಪ್ರಶ್ತಸಿ’
- ಹಾಸನದ ಕೃಷಿ ವಿಜ್ಞಾನಿ ಡಾ.ರಾಜೇಗೌಡಗೆ ‘ಡಾ.ಆರ್.ದ್ವಾರಕೀನಾಥ್ ಪ್ರಶಸ್ತಿ’

ಕೃಷಿಗೆ ‘ಕೋಲಾರ ಮಾದರಿ’: ಪಾಟೀಲ

‘ಕೋಲಾರದ ರೈತರು ಬರ ಸ್ಥಿತಿಯ ನಡುವೆಯೂ ತುಂತುರು ನೀರಾವರಿ ಪದ್ಧತಿ ಅಳವಡಿಸಿಕೊಂಡು ಸಮಗ್ರ ಕೃಷಿಯಲ್ಲಿ ತೊಡಗಿದ್ದಾರೆ. ಇತರೆ ಭಾಗದ ರೈತರೂ ಈ ಮಾದರಿ ಅಳವಡಿಸಿಕೊಳ್ಳಬೇಕು’ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಸಲಹೆ ನೀಡಿದರು.

ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ‘ಇಸ್ರೇಲ್ ಮಾದರಿ ಬೇಕಿಲ್ಲ. ಕೋಲಾರ ಮಾದರಿಯೇ ಸೂಕ್ತ’ ಎಂದರು.

‘ಜಲಾನಯನ ನಿರ್ವಹಣೆಗೆ ರಾಜ್ಯದಲ್ಲಿ ‘ಉತ್ಕೃಷ್ಟತಾ ಕೇಂದ್ರ’ ಸ್ಥಾಪಿಸಲಾಗುವುದು. ಬೆಂಗಳೂರು ಕೃಷಿ ವಿವಿಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾಗುವುದು. ಅದು ಯಶಸ್ವಿಯಾದರೆ ಚಾಮರಾಜನಗರ, ಬಾಗಲಕೋಟೆ, ಶಿವಮೊಗ್ಗ, ಧಾರವಾಡ, ಗಂಗಾವತಿ ಸೇರಿದಂತೆ ರಾಜ್ಯದ ಏಳು ಕಡೆ ಈ ಕೇಂದ್ರ ಸ್ಥಾಪಿಸಲಾಗುವುದು’ ಎಂದರು.

‘9.33 ಲಕ್ಷ ವಿದ್ಯಾರ್ಥಿಗಳಿಗೆ ₹ 421 ಕೋಟಿ ವಿದ್ಯಾನಿಧಿ ವಿತರಿಸಲಾಗಿದೆ. ರೈತರಿಗೆ ಡೀಸೆಲ್‌ಗೆ ಸಬ್ಸಿಡಿ ನೀಡಲಾಗುತ್ತಿದೆ. ರಾಜ್ಯದಲ್ಲಿ ಕಳೆದ ಸಾಲಿಗಿಂತ ಈ ವರ್ಷ ಶೇ 10ರಷ್ಟು ಹೆಚ್ಚಿನ ಆಹಾರ ಉತ್ಪಾದನೆಯ ನಿರೀಕ್ಷೆಯಿದೆ’ ಎಂದು ತಿಳಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ಇಸ್ರೇಲ್ ಕೃಷಿಗೆ ಸೂಕ್ತವಾದ ಹವಾಮಾನ ಹೊಂದಿಲ್ಲ. ಆದರೂ ಅಲ್ಲಿನ ರೈತರು ತುಂತುರು ನೀರಾವರಿ ಪದ್ಧತಿ ಅಳವಡಿಸಿಕೊಂಡು ಯಶಸ್ಸು ಸಾಧಿಸಿದ್ದಾರೆ. ಭಾರತವು ಕೃಷಿ ಪ್ರಧಾನ ದೇಶ. ನಮ್ಮ ರೈತರು ಯಶಸ್ಸು ಸಾಧಿಸಬೇಕು. ಸರ್ಕಾರದ ಸೌಲಭ್ಯದ ಸದ್ಬಳಕೆಯ ಜೊತೆಗೆ ಆಧುನಿಕ ತಂತ್ರಜ್ಞಾನ ಅಳವಡಿಕೆ ಮಾಡಿಕೊಳ್ಳಬೇಕು’ ಎಂದರು.

ಕುಲಪತಿ ಡಾ.ಎಸ್.ವಿ.ಸುರೇಶ, ವಿವಿ ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ, ಡಾ.ಉಮೇಶ್ ಹಾಜರಿದ್ದರು.

ಕೆಸರುಮಯ ಮೈದಾನ

ಮಳೆಯ ಕಾರಣಕ್ಕೆ ಜಿಕೆವಿಕೆ ವಾತಾವರಣ ಕೆಸರುಮಯ ಆಗಿದ್ದು, ತೊಂದರೆ ಎದುರಾಯಿತು. ಇಡೀ ಆವರಣದಲ್ಲಿ ಓಡಾಟ ನಡೆಸಿ ಮೇಳ ವೀಕ್ಷಣೆ ಮಾಡುವವರು ಪರದಾಡಿದರು.

ಬಂದವರಿಗೆ ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ₹ 50 ನೀಡಿದರೆ ಅನ್ನ, ಸಾಂಬಾರು, ಪಲ್ಯ, ಸಿಹಿ ತಿಂಡಿ, ಬೇಯಿಸಿದ ಮೊಟ್ಟೆ, ಮುದ್ದೆ ನೀಡಲಾಯಿತು.

ಕೃಷಿ ಮೇಳದಲ್ಲಿ ಕಣ್ಮನ ಸೆಳೆದ ವಿದೇಶಿ, ಆಲಂಕಾರಿಕ ಕೋಳಿಗಳು

ಡಾಂಗ್ ತಾವ್ ಕೋಳಿ: ಜೋಡಿಗೆ ₹ 65 ಸಾವಿರ!

● ಖಲೀಲಅಹ್ಮದ ಶೇಖ

ಬೆಂಗಳೂರು: ಸಣ್ಣನೆಯ ಕೊಕ್ಕು, ದಪ್ಪ ಕಾಲುಗಳ ಡಾಂಗ್ ತಾವ್ (ಡ್ರ್ಯಾಗನ್ ಬರ್ಡ್) ಹುಂಜದ ಬೆಲೆ ಕೇಳಿದರೆ ನೀವು ಹೌಹಾರುತ್ತೀರಿ. 5–6 ಕೆ.ಜಿಯಷ್ಟು ತೂಗುವ ಇದರ ಸದ್ಯದ ಮಾರುಕಟ್ಟೆ ದರ ಬರೋಬ್ಬರಿ ₹ 30 ಸಾವಿರ! ಜೋಡಿಗೆ ₹65 ಸಾವಿರ.

ಕೃಷಿ ಮೇಳದಲ್ಲಿ ಸುಮಾರು 15 ಪ್ರಕಾರದ ವಿದೇಶಿ, ಆಲಂಕಾರಿಕ (ಫ್ಯಾನ್ಸಿ) ಕೋಳಿಗಳು ನೋಡಗರ ಕಣ್ಮನ ಸೆಳೆಯುತ್ತಿವೆ.

‘ವಿಯೆಟ್ನಾಂನ ಡಾಂಗ್ ತಾವ್ ಒಂದು ಅಪರೂಪದ ತಳಿ. ಅವುಗಳಿಗೆ ದೊಡ್ಡ ಕಾಲುಗಳು. ಹೀಗಾಗಿ ಮೊಟ್ಟೆಗೆ ಕಾವು ಕೊಡಲು ಕಷ್ಟವಾಗುವುದರಿಂದ ಸಂತಾನೋತ್ಪತ್ತಿ ಮಾಡುವುದೂ ಕಷ್ಟ. ಇವುಗಳನ್ನು ಬೆಳೆಸುವಾಗ ಹೆಚ್ಚಿನ ನಿರ್ವಹಣೆ ಮಾಡಬೇಕು’ ಎಂದು ರೈತ ಚೇತನಾ ಹ್ಯಾಚರೀಸ್‌ನ ಮುಖ್ಯಸ್ಥ ಚೇತನ ಬಿ.ಸಿ ಮಾಹಿತಿ ನೀಡಿದರು.

‘ಸಾಮಾನ್ಯವಾಗಿ ರೈತರು ವಾಣಿಜ್ಯ ಉದ್ದೇಶಕ್ಕೆ ಗಿರಿರಾಜ, ಕಾವೇರಿ, ಅಸೀಲ್ ಕ್ರಾಸ್, ಕಳಿಂಗ ಬ್ರೌನ್, ವೈಟ್ ಪೆಕಿನ್, ಖಾಕಿ ಕ್ಯಾಂಪ್‌ಬೆಲ್ ಕೋಳಿಗಳನ್ನು ಸಾಕಾಣಿಕೆ ಮಾಡುತ್ತಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ವಿಯೆಟ್ನಾಂ, ಅಮೆರಿಕ, ಜಪಾನ್, ಮಲೇಷಿಯಾ, ಚೀನಾ, ದೇಶಗಳ ಆಲಂಕಾರಿಕ ಕೋಳಿಗಳ ಸಾಕಾಣಿಕೆ ಮಾಡುವುದು ಟ್ರೆಂಡ್ ಆಗಿದ್ದು, ಸದ್ಯ ಬೇಡಿಕೆ ಹೆಚ್ಚಾಗಿದೆ’ ಎಂದು ತಿಳಿಸಿದರು.

‘ಕೊಲಂಬಿಯನ್ ಲೈವ್ ಬ್ರಹ್ಮ, ಅಮೆರಿಕನ್ ಬ್ರೀಡ್, ಪಾಲಿಶ್ ಕ್ಯಾಬ್, ಜಪಾನಿನ ಒನಗಧಾರಿ ತಳಿಯ ಕೋಳಿ 16–18 ಗರಿಗಳನ್ನು ಹೊಂದಿರುತ್ತದೆ. ಇದರ ಬಾಲ 12 ಮೀಟರ್‌ವರೆಗೆ ಬೆಳೆದರೆ ಒಂದಕ್ಕೆ ₹ 30 ಸಾವಿರ ಬೆಲೆ ಬರುತ್ತದೆ.

> **ಆಲಂಕಾರಿಕ ಕೋಳಿಗಳನ್ನು ವಾಣಿಜ್ಯ ಉದ್ದೇಶಗಳಿಗೆ ಸಾಕಾಣಿಕೆ ಮಾಡಬಾರದು, ಇದನ್ನು ಮನಸ್ಸಿಗೆ ಮುದ ನೀಡುವ ಸಲುವಾಗಿ ಹವ್ಯಾಸಕ್ಕಾಗಿ ಪಾಲನೆ ಮಾಡಬೇಕು.**
> **ಚೇತನ ಬಿ.ಸಿ,**
> **ಮುಖ್ಯಸ್ಥ,** ರೈತ ಚೇತನಾ ಹ್ಯಾಚರೀಸ್

ಇವುಗಳ ತಳಿ ವೃದ್ಧಿ ಮಾಡುವುದಕ್ಕೆ ಸಾಕಾಣಿಕೆ ಮಾಡಬಹುದು. ಪೋಲಿಷ್ ಕ್ಯಾಪ್ ಕೋಳಿಯ ತಲೆಯ ಭಾಗದ ಮೇಲೆ ಬಿಳಿ ಟೊಪ್ಪಿಗೆ ಇರುತ್ತದೆ. ಸಿರಾಮ್ ವಿಶ್ವದ ಅತಿ ಚಿಕ್ಕ ಕೋಳಿಯಾಗಿದೆ. ಆಲಂಕಾರಿಕ ಕೋಳಿಗಳಿಗೆ ಬೇರೆ ರಾಜ್ಯಗಳಲ್ಲಿ ಹೆಚ್ಚು ಬೇಡಿಕೆ ಇದೆ. ಇವುಗಳ ತಳಿ ಅಭಿವೃದ್ಧಿ ಮಾಡುವವರ ಸಂಖ್ಯೆ ಬಹಳ ಕಡಿಮೆ. ಎಲ್ಲಾ ಹವಾಮಾನಕ್ಕೂ ಹೊಂದಿಕೊಳ್ಳುವಂತಹ ಕೋಳಿಗಳಾಗಿವೆ’ ಎಂದರು.

ಕೃಷಿ ಮೇಳದಲ್ಲಿ ಪ್ರದರ್ಶಿಸಲಾದ ಡಾಂಗ್ ತಾವ್ ತಳಿ ಕೋಳಿ (ಎಡ ಚಿತ್ರ). ಖಡಕ್‌ನಾಥ ಕೋಳಿ ತಳಿಗಳನ್ನು ಶಾಲಾ ಮಕ್ಕಳು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ರೋಗಕ್ಕೆ ರಾಮಬಾಣ ‘ಖಡಕ್‌ನಾಥ’

ಕಪ್ಪುವರ್ಣದ ‘ಖಡಕ್‌ನಾಥ’ನ ಬಗ್ಗೆ ಕುಕ್ಕುಟಪ್ರಿಯರಿಗೆ ಬಹಳ ಪ್ರೀತಿ. ಮಳಿಗೆಗಳ ಸಾಲಿನಲ್ಲಿ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಹುಡುಕಿಕೊಂಡು ಬಂದು ಈ ಕೋಳಿಯ ದರ್ಶನ ಪಡೆಯುತ್ತಿದ್ದರು. ಮಧ್ಯಪ್ರದೇಶ ಹಾಗೂ ಛತ್ತೀಸ್ ಗಡ ರಾಜ್ಯಗಳ ಬುಡಕಟ್ಟು ಜನರು ಉಳಿಸಿಕೊಂಡು ಬಂದ ಕೋಳಿಯ ತಳಿ ಇದು. ಇದರ ರಕ್ತ ಕರಿವರ್ಣದ್ದು. wಮೂಳೆ, ಮಾಂಸ ಕಪ್ಪು. ಅವಸಾನದ ಅಂಚನ್ನು ತಲುಪಿದ್ದ ಈ ಕೋಳಿ ತಳಿಯನ್ನು ಮತ್ತೆ ಅಭಿವೃದ್ಧಿಪಡಿಸಲಾಗಿದೆ.

‘ಇವುಗಳ ಮೊಟ್ಟೆಗೆ ತುಂಬಾ ಬೇಡಿಕೆಯಿದೆ. ರಕ್ತದೊತ್ತಡ, ಮಧುಮೇಹ, ಅಸ್ತಮಾ, ಪಾರ್ಶ್ವವಾಯು ರೋಗಗಳಿಂದ ಬಳಲುತ್ತಿರುವವರಿಗೆ ಇದರ ಮಾಂಸ ಮತ್ತು ಮೊಟ್ಟೆ ರಾಮಬಾಣ’ ಎಂದು ವಿಕಡಕ್ನಾಥ್ ಕೋಳಿ ಫಾರ್ಮ್ಸ್‌ನ ವಿಜಯ್ ಕುಮಾರ್ ಅವರು ತಿಳಿಸಿದರು.

‘ಈ ಮೊಟ್ಟೆಗಳು ಶೇ 18–20ರಷ್ಟು ಪ್ರೊಟೀನ್, 60 ಗ್ರಾಂ ಕೊಲೆಸ್ಟ್ರಾಲ್, ಶೇ 1ರಷ್ಟು ಕೊಬ್ಬು, ಶೇ 24ರಷ್ಟು ಲಿನೋಲಿಕ್ ಆಮ್ಲ ಒಳಗೊಂಡಿರಲಿದೆ’ ಎಂದರು.

₹ 6 ಲಕ್ಷ ಬೆಲೆಯ ಕುರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರ್ಮಗಂಟು ರೋಗದ ಕಾರಣಕ್ಕೆ ಬೆಂಗಳೂರು ಕೃಷಿ ವಿವಿ ಆಯೋಜಿಸಿರುವ ‘ಕೃಷಿ ಮೇಳ’ದಲ್ಲಿ ಜಾನುವಾರು ಪ್ರದರ್ಶನಕ್ಕೆ ನಿರ್ಬಂಧ ಹೇರಿರುವುದು ರೈತರಿಗೆ ನಿರಾಸೆ ಮೂಡಿಸಿದ್ದರೂ ಮೇಳದಲ್ಲಿನ ವಿದೇಶಿ ಹಾಗೂ ದೇಶೀಯ ಕುರಿ ತಳಿಗಳು ಆಕರ್ಷಿಸುತ್ತಿವೆ. ಅವುಗಳ ಬೆಲೆ ಕೇಳಿದರೂ ಒಮ್ಮೆ ಅಚ್ಚರಿ ಆಗಲಿದೆ. ಒಂದಕ್ಕಿಂತ ಮತ್ತೊಂದು ತಳಿಗಳು ಭಿನ್ನವಾಗಿವೆ.

ಈ ತಳಿಗಳನ್ನು ಮಾಂಸಕ್ಕಾಗಿ ಸಾಕಣೆ ಮಾಡುವುದು ಕಡಿಮೆ ಆಗಿದ್ದರೂ ತಳಿಯ ಅಭಿವೃದ್ಧಿಗೆ ವಿವಿಧ ಫಾರಂನಲ್ಲಿ ಸಾಕಾಣಿಕೆ ಮಾಡಲಾಗುತ್ತಿದೆ. ಅವುಗಳನ್ನು ವೀಕ್ಷಿಸಬೇಕಿದ್ದರೆ ಜಿ.ಕೆ.ವಿ.ಕೆ ಆವರಣಕ್ಕೆ ಬರಬೇಕು.

ಮೇಳದಲ್ಲಿ ₹ 6 ಲಕ್ಷ ಮೌಲ್ಯದ ದಕ್ಷಿಣ ಆಫ್ರಿಕಾ ಮೂಲದ ‘ಡಾರ್ಪರ್’ ಕುರಿ ತಳಿ, ₹ 2 ಲಕ್ಷ ಬೆಲೆಯ ‘ಡುಂಬ’ ಕುರಿ ತಳಿ ಗಮನ ಸೆಳೆಯುತ್ತಿದೆ.

ಇದರೊಂದಿಗೆ ಮಂಡ್ಯ ಜಿಲ್ಲೆಯ ದಾಸನದೊಡ್ಡಿಯ ಪಾಪಣ್ಣಗೌಡ ಕುರಿ ಫಾರಂನ ಬಂಡೂರು ಕುರಿಯೂ ಮೇಳದಲ್ಲಿದೆ. ಬಂಡೂರದ ಮರಿಗೆ ₹ 15ರಿಂದ ₹ 20 ಸಾವಿರ ಬೆಲೆಯಿದ್ದರೆ ದೊಡ್ಡಗಾತ್ರದ ಕುರಿಗೆ ₹ 80ರಿಂದ ₹ 90 ಸಾವಿರದ ತನಕ ಬೆಲೆಯಿದೆ ಎನ್ನುತ್ತಾರೆ ಸಾಕಾಣಿಕೆದಾರರು.

‘ರೈತರ ಪಾಲಿಗೆ ಕುರಿಗಳು ನಡೆದಾಡುವ ಬ್ಯಾಂಕ್‌ಗಳು...’ ಎಂದೇ ಕರೆಯಲಾಗುತ್ತಿದ್ದು ಮೇಳದಲ್ಲಿ ಎತ್ತರ ಚಿತ್ತ ಇವುಗಳತ್ತ ಹರಿದಿದೆ.

1930ರಲ್ಲಿ ಡಾರ್ಸೆಟ್ ಹಾರ್ನ್ ಹಾಗೂ ಕಪ್ಪುತಲೆ ಪರ್ಶಿಯನ್ ಕುರಿಯಿಂದ ಡಾರ್ಪರ್ ತಳಿ ಅಭಿವೃದ್ಧಿ ಪಡಿಸಲಾಗಿದೆ. ಯಲಹಂಕದ ಮಾರೇನಹಳ್ಳಿಯ ಸಿಂಚನಾ ಮೇಕೆ, ಕುರಿ ಫಾರಂ, ತುಮಕೂರು ಜಿಲ್ಲೆ ಸುಂಕದಹಳ್ಳಿಯ ಬಿಆರ್‌ಎಸ್ ಫಾರಂನಿಂದ ಡಾರ್ಪರ್ ತಳಿ ತರಲಾಗಿದೆ.

‘ಡಾರ್ಪರ್ ತಳಿ ಕುರಿಯಲ್ಲೇ ಉತ್ಕೃಷ್ಟ ತಳಿ. ಇವುಗಳಿಗೆ ಕೊಂಬು ಇರುವುದಿಲ್ಲ. ಉದ್ದನೆ ದೇಹಾಕೃತಿ ಹೊಂದಿದ್ದು, ಕಡಿಮೆ ಕೂದಲು ಇರಲಿದೆ. ಕುರಿ ಬೆಳೆದಂತೆ ಕೂದಲು ಉದುರಿ ಬೀಳಲಿದೆ’ ಎಂದು ಕುರಿ ಸಾಕಾಣಿಕೆದಾರ ಸತೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ತಳಿಯನ್ನು ಮಾಂಸ ಹಾಗೂ ಆಸಕ್ತಿಗೆ ಸಾಕಾಣಿಕೆ ಮಾಡುತ್ತಾರೆ. ಡಾರ್ಪರ್ ತನ್ನ ದೇಹದ ತೂಕವನ್ನು 3ರಿಂದ 4 ತಿಂಗಳಲ್ಲಿಯೇ 30ರಿಂದ 40 ಕೆ.ಜಿಯಷ್ಟು ಹೆಚ್ಚಿಸಿಕೊಳ್ಳುತ್ತವೆ. ಕೊಬ್ಬು ಕಡಿಮೆ. ಮಾಂಸ ಮೃದು. ಕಡಿಮೆ ಸಮಯದಲ್ಲಿ ಖಾದ್ಯ ತಯಾರಿಸಲು ಸಾಧ್ಯ. ಹೆಣ್ಣುಕುರಿ 70ರಿಂದ 80 ಕೆ.ಜಿಯಿದ್ದರೆ, ಗಂಡು ಕುರಿ ಕೆ.ಜಿ.ಯಷ್ಟು ಇರಲಿದೆ’ ಎಂದು ಹೇಳಿದರು.

ಮಾಂಸ ಸೇವನೆಯಿಂದ ರೋಗ ದೂರ: ‘ಡುಂಬ ಕುರಿಗಳು ಉತ್ತಮ ದೇಹ ರಚನೆ, ಉದ್ದವಾದ ಕಾಲು ಹಾಗೂ ದಪ್ಪ ಬಾಲದ ಜತೆಗೆ ಬಿಳಿ ಬಣ್ಣವನ್ನು ಹೊಂದಿದೆ. ಇದರ ಮಾಂಸ ಸೇವನೆಯಿಂದ ಪಾರ್ಶ್ವವಾಯು ಹಾಗೂ ಹೃದ್ರೋಗ ಅಪಾಯ ಕಡಿಮೆ ಆಗಲಿದೆ’ ಎಂದು ಕುರಿ ಸಾಕಾಣಿಕೆದಾರರು ಹೇಳುತ್ತಾರೆ.

ಜಮುನಾಪಾರಿ ಮೇಕೆ

ಕೃಷಿ ಮೇಳಕ್ಕೆ ತಂದಿರುವ ಬಿಆರ್‌ಎಸ್ ಫಾರಂನ ಡಾರ್ಪರ್ ಕುರಿ ತಳಿ

ನೋಯ್ಡಾ: ಆನ್‌ಲೈನ್ ತರಗತಿಗೆ ಆದೇಶ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಗಾಳಿಯ ಗುಣಮಟ್ಟ ದಿನೇ ದಿನೇ ಹದಗೆಡುತ್ತಿರುವುದರಿಂದ ಮಕ್ಕಳ ಹೊರಾಂಗಣ ಚಟುವಟಿಕೆಗಳನ್ನು ನಿರ್ಬಂಧಿಸಲು ಶಾಲಾ ಆಡಳಿತ ಮಂಡಳಿಗಳು ತೀರ್ಮಾನಿಸಿವೆ.

ನೋಯ್ಡಾ ಮತ್ತು ಗ್ರೇಟರ್ ನೋಯ್ಡಾದಲ್ಲಿನ ಎಲ್ಲ ಶಾಲೆಗಳು ನ.8ರ ತನಕ 8ನೇ ತರಗತಿ ವರೆಗೆ ಆನ್‌ಲೈನ್ ಮೂಲಕ ಬೋಧನೆ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

9ರಿಂದ 12ನೇ ತರಗತಿ ವರೆಗಿನ ಬೋಧನೆಯನ್ನು ಸಾಧ್ಯವಾದಷ್ಟು ಆನ್‌ಲೈನ್ ಮೂಲಕವೇ ನಡೆಸುವಂತೆಯೂ ಸೂಚಿಸಲಾಗಿದೆ.

‘ದೆಹಲಿ ನಗರ ವ್ಯಾಪ್ತಿಯ ಗಾಳಿಯ ಗುಣಮಟ್ಟ ಗುರುವಾರ ಮತ್ತಷ್ಟು ಬಿಗಡಾಯಿಸಿದೆ’ ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ನಿಷೇಧ: ಮಾಲಿನ್ಯ ನಿಯಂತ್ರಣಕ್ಕೆ ಹಲವು ಕ್ರಮ ಕೈಗೊಂಡಿರುವ ಕಮಿಷನ್ ಫಾರ್ ಏರ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ (ಸಿಎಕ್ಯೂಎಂ) ನಗರದೊಳಗೆ ಟ್ರಕ್‌ಗಳ ಪ್ರವೇಶಕ್ಕೆ ನಿರ್ಬಂಧ ಹೇರಿದೆ. ಡೀಸೆಲ್ ಚಾಲಿತ ಲಘು ವಾಹನಗಳ ಸಂಚಾರವನ್ನೂ ನಿಷೇಧಿಸಿದೆ.

ಬಿಎಂಟಿಸಿ ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯ ಸುಮನಹಳ್ಳಿ ಮೇಲ್ಸೇತುವೆ ಬಳಿ ಬಿಎಂಟಿಸಿಪಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಪ್ರಮೋದ್‌ಕುಮಾರ್ (25) ಎಂಬುವವರು ಮೃತಪಟ್ಟಿದ್ದಾರೆ.

‘ಲಗ್ಗೆರೆ ನಿವಾಸಿ ಪ್ರಮೋದ್ ಕುಮಾರ್ ಖಾಸಗಿ ಕಂಪನಿಯೊಂದರಲ್ಲಿ ಎಲೆಕ್ಟ್ರಿಕ್ ವಿಭಾಗದ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿಕೊಂಡು ಬುಧವಾರ ರಾತ್ರಿ ಬೈಕ್‌ನಲ್ಲಿ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

‘ಪ್ರಮೋದ್ ಅವರು ನಾಗರಬಾವಿ ಕಡೆಯಿಂದ ಸುಮನಹಳ್ಳಿ ಮೇಲ್ಸೇತುವೆ ಮೂಲಕ ಲಗ್ಗೆರೆಗೆ ಹೊರಟಿದ್ದರು. ಅದೇ ಮಾರ್ಗದಲ್ಲಿ ಬಿಎಂಟಿಸಿ ಬಸ್ ತೆರಳುತ್ತಿತ್ತು. ಮೇಲ್ಸೇತುವೆ ಇಳಿಯುವ ಸಂದರ್ಭದಲ್ಲಿ ಬೈಕ್‌ಗೆ ಬಸ್ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಬಿದ್ದ ಪ್ರಮೋದ್ ತಲೆಗೆ ತೀವ್ರ ಪೆಟ್ಟು ಬಿದ್ದು ಮೃತಪಟ್ಟರು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ’ ಎಂದು ತಿಳಿಸಿದರು.

ಚಾಲಕನಿಗೆ ಥಳಿತ: ಅಪಘಾತ ಸ್ಥಳದಲ್ಲಿ ಸೇರಿದ್ದ ಸ್ಥಳೀಯರು, ಬಸ್ ಚಾಲಕ ಕಾಸೀಂ ಪತ್ತಾರ್ ಅವರನ್ನು ಹಿಡಿದು ಥಳಿಸಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಚಾಲಕನನ್ನು ರಕ್ಷಿಸಿ ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರ ಸುಪರ್ದಿಗೆ ಒಪ್ಪಿಸಿದ್ದಾರೆ.

‘ಪ್ರಮೋದ್ ಕುಮಾರ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಕಾಸೀಂ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಜಾಗತಿಕ ಹೂಡಿಕೆದಾರರ ಸಮಾವೇಶದ ಎರಡನೇ ದಿನ ಇಂಧನ ವಲಯ, ಲಿಂಗ ಸಮಾನತೆ ಕುರಿತು ಗೋಷ್ಠಿ

‘ಸುಸ್ಥಿರ ಬೆಳವಣಿಗೆಗೆ ಉದ್ಯಮ ರಂಗ ಸ್ಪಂದಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಹೂಡಿಕೆದಾರರ ಸಮಾವೇಶದ ಎರಡನೇ ದಿನವಾದ ಗುರುವಾರ ಇಂಧನ ವಲಯ, ಲಿಂಗ ಸಮಾನತೆ, ಪರಿಸರ, ಸಂಚಾರ ವ್ಯವಸ್ಥೆ, ರಕ್ಷಣಾ ವಲಯ ಕುರಿತ ಗೋಷ್ಠಿಗಳಲ್ಲಿ ತಜ್ಞರು ಅಭಿಪ್ರಾಯಗಳನ್ನು ಮಂಡಿಸಿ ವಿಶ್ಲೇಷಿಸಿದರು.

ವನ್ಯಜೀವಿ ಚಲನಚಿತ್ರ ನಿರ್ಮಾಪಕ ಚದ್ದೆನ್ ಹಂಟರ್ ತಮ್ಮ ವೃತ್ತಿ ಬದುಕಿನ ರೋಚಕ ವಿಷಯಗಳನ್ನು ಹಂಚಿಕೊಂಡರು,. ‘ಹವಾಮಾನ ಬಿಕ್ಕಟ್ಟನ್ನು ತಡೆಯುವಲ್ಲಿ ಭಾರತ ಪ್ರಮುಖ ಪಾತ್ರವಹಿಸುತ್ತಿದೆ. ಸುಸ್ಥಿರ ಬೆಳವಣಿಗೆ ಮತ್ತು ಆರ್ಥಿಕ ವೃದ್ಧಿಗಾಗಿ ಭಾರತವು ಹಸಿರು ಇಂಧನಕ್ಕೆ ಹೆಚ್ಚು ಒತ್ತು ಕೊಡಬೇಕು. ಉದ್ಯಮ ವಲಯ ಈ ನಿಟ್ಟಿನಲ್ಲಿ ಸಜ್ಜಾಗಬೇಕು’ ಎಂದು ಅಭಿಪ್ರಾಯಪಟ್ಟರು.

ಕೋವಿಡ್ ನಂತರ ಉದ್ಯಮ ವಲಯ ಮತ್ತು ಆವಿಷ್ಕಾರಗಳ ಕುರಿತು ವಿಶ್ಲೇಷಿಸಿದ ಜುಕರ್‌ಬರ್ಗ್ ಮಿಡಿಯಾ ಸಂಸ್ಥಾಪಕಿ ರ್‍ಯಾಂಡಿ ಜುಕರ್‌ಬರ್ಗ್, ‘ಉದ್ಯಮಿಯ ತಲೆ ಮತ್ತು ಕಲಾವಿದನ ಹೃದಯ ತನ್ನ ವೃತ್ತಿಜೀವನವನದ ಯಶಸ್ಸಿನ ಗುಟ್ಟು ಎಂದು ಹೇಳಿದರು.

‘2010ರಲ್ಲಿ ಮೊದಲ ಬಾರಿ ಫೇಸ್‌ಬುಕ್ ಲೈವ್ ಆರಂಭಿಸಿದಾಗ ಕೇವಲ ನನ್ನ ತಂದೆ ಮತ್ತು ತಾಯಿ ವೀಕ್ಷಿಸಿದ್ದರು. ಬದಲಾಗುತ್ತಿರುವ ಜಗತ್ತಿನಲ್ಲಿ ಆವಿಷ್ಕಾರಗಳು ನಿರಂತರವಾಗಿ ನಡೆಯಬೇಕು. ಜನರ ಜತೆ ನಿರಂತರವಾಗಿ ಸಂಪರ್ಕದಲ್ಲಿರುವ ಉದ್ದೇಶದಿಂದ ಪುಸ್ತಕಗಳನ್ನು ಸಹ ನಾನು ಬರೆಯುತ್ತೇನೆ’ ಎಂದು ಹೇಳಿದರು.

ಲಿಂಗ ಸಮಾನತೆ ಕುರಿತ ಗೋಷ್ಠಿಯಲ್ಲಿ ಮಹಿಳೆ ಎದುರಿಸುತ್ತಿರುವ ಸವಾಲುಗಳ ಕುರಿತು ವಿಶ್ಲೇಷಿಸಿದ ಬಯೊಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ‘ಉದ್ಯಮ ಆರಂಭಿಸಿದಾಗ ಮೊದಲು ವೈಫಲ್ಯಗಳನ್ನೇ ಎದುರಿಸಬೇಕಾಗುತ್ತದೆ. ವೈಫಲ್ಯಗಳು ಮತ್ತು ಸವಾಲುಗಳನ್ನು ಮೀರಿ ಯಶಸ್ಸು ಸಾಧಿಸುವತ್ತ ಸಾಗಬೇಕು’ ಎಂದು ಹೇಳಿದರು.

ಸೇಲ್ಸ್‌ಫೋರ್ಸ್ ಇಂಡಿಯಾದ ಮುಖ್ಯಸ್ಥೆ ಅರುಂಧತಿ ಭಟ್ಟಾಚಾರ್ಯ ಮಾತನಾಡಿ, ‘ತಂತ್ರಜ್ಞಾನ ಬದಲಾದಂತೆ ಹಳೆಯದನ್ನು ಮರೆತು ಹೊಸತನ್ನು ಕಲಿಯಬೇಕು. ಕಲಿಕೆ ನಿರಂತರವಾದರೆ ಮಾತ್ರ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬೇಕು’ ಎಂದು ಸಲಹೆ ನೀಡಿದರು.

ಬೆಂಗಳೂರಿನಲ್ಲಿ ಗುರುವಾರ ನಡೆದ ‘ಲಿಂಗ ಸಮಾನತೆ’ ಕುರಿತ ಗೋಷ್ಠಿಯಲ್ಲಿ ಸೇಲ್ಸ್ ಫೋರ್ಸ್ ಇಂಡಿಯಾದ ಅಧ್ಯಕ್ಷೆ ಮತ್ತು ಸಿಇಒ ಅರುಂಧತಿ ಭಟ್ಟಾಚಾರ್ಯ ಮಾತನಾಡಿದರು. ಸಚಿವ ಹಾಲಪ್ಪ ಆಚಾರ್, ಇಂಕ್ ಸಂಸ್ಥೆಯ ಸಂಸ್ಥಾಪಕಿ ಲಕ್ಷ್ಮಿ ಪ್ರಚುರಿ, ಬಯೋಕಾನ್ ಸಂಸ್ಥೆಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಮತ್ತು ಗೋದ್ರೇಜ್ ಗ್ರಾಹಕರ ಉತ್ಪನ್ನಗಳ ಸಂಸ್ಥೆಯ ಮುಖ್ಯಸ್ಥೆ ನಿಸಬಾ ಗೋದ್ರೇಜ್ ಇದ್ದಾರೆ –ಪ್ರಜಾವಾಣಿ ಚಿತ್ರ

ರ್‍ಯಾಂಡಿ ಜುಕರ್‌ಬರ್ಗ್ ಮಾತನಾಡಿದರು

₹1500 ಕೋಟಿ ಹೂಡಿಕೆಗೆ ಒಪ್ಪಂದ

ಎಸ್‌ಟಿಟಿ ಜಿಡಿಸಿ ಇಂಡಿಯಾ ಕಂಪನಿ ರಾಜ್ಯದಲ್ಲಿ ₹1500 ಕೋಟಿ ಹೂಡಿಕೆ ಮಾಡಲು ಕರ್ನಾಟಕ ಸರ್ಕಾರದ ಜತೆ ಒಪ್ಪಂದ ಮಾಡಿಕೊಂಡಿದೆ.

ಮುಂದಿನ 8ರಿಂದ 10 ವರ್ಷಗಳಲ್ಲಿ ಈ ಹೂಡಿಕೆಯಾಗಲಿದ್ದು, ಒಂದು ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ದತ್ತಾಂಶ ಕೇಂದ್ರಗಳನ್ನು ಸ್ಥಾಪಿಸಲು ಈ ಕಂಪನಿ ಉದ್ದೇಶಿಸಿದೆ.

ಇಸ್ರೇಲ್: ನೇತನ್ಯಾಹು ಮತ್ತೆ ಪ್ರಧಾನಿ

ಬೆಂಜಮಿನ್ ನೇತನ್ಯಾಹು

ಜೆರುಸಲೇಂ (ಪಿಟಿಐ): ಇಸ್ರೇಲ್ ಸಂಸತ್ ಚುನಾವಣೆಯಲ್ಲಿ ಬಲಪಂಥೀಯ ಒಕ್ಕೂಟವು ಸರಳ ಬಹುಮತ ಪಡೆದಿದ್ದು, ಬೆಂಜಮಿನ್ ನೇತನ್ಯಾಹು ಅವರು ಮತ್ತೆ ಪ್ರಧಾನಿ ಗದ್ದುಗೆ ಏರಲಿದ್ದಾರೆ.

ಗುರುವಾರ ಮತ ಎಣಿಕೆ ಕಾರ್ಯ ನಡೆಯಿತು. ಸಂಸತ್‌ನ 120 ಸ್ಥಾನಗಳ ಪೈಕಿ ನೇತನ್ಯಾಹು ನೇತೃತ್ವದ ಒಕ್ಕೂಟವು 64 ಸ್ಥಾನಗಳಲ್ಲಿ ಗೆಲುವು ಸಾಧಿಸಿ, ಸರಳ ಬಹುಮತ ತನ್ನದಾಗಿಸಿಕೊಂಡಿದೆ.

ಸೋಲನ್ನು ಒಪ್ಪಿಕೊಂಡಿರುವ ಪ್ರಧಾನಿ ಯೈರ್ ಲ್ಯಾಪಿಡ್ ಅವರು, ನೇತನ್ಯಾಹು ಅವರನ್ನು ಅಭಿನಂದಿಸಿದ್ದಾರೆ. ಇಸ್ರೇಲ್‌ನ ಜನತೆಗೆ ನಾಲ್ಕು ವರ್ಷದಲ್ಲಿ ಇದು ಐದನೇ ಚುನಾವಣೆಯಾಗಿದೆ.

ತುಮಕೂರು, ಹುಬ್ಬಳ್ಳಿಯಲ್ಲಿ ವಿಶೇಷ ಹೂಡಿಕೆ ವಲಯ

ಬೃಹತ್ ಹೂಡಿಕೆದಾರರ ನೆರವಿಗೆ ಪ್ರತ್ಯೇಕ ಪ್ರಾಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಂಡವಾಳ ಹೂಡಿಕೆಗಿರುವ ತೊಡಕುಗಳನ್ನು ತ್ವರಿತಗತಿಯಲ್ಲಿ ನಿವಾರಿಸಿ, ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವ ‘ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಅಧಿನಿಯಮ’ಕ್ಕೆ ಗುರುವಾರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ‘ಮುಂದಿನ ಸಂಪುಟ ಸಭೆಯಲ್ಲಿ ಮತ್ತೊಮ್ಮೆ ಪರಾಮರ್ಶೆ ನಡೆಸಿ, ವಿಧಾನಮಂಡಲ ಅಧಿವೇಶನದಲ್ಲಿ ಅಧಿನಿಯಮವನ್ನು ಮಂಡಿಸಲಾಗುವುದು’ ಎಂದು ಅವರು ಹೇಳಿದರು.

ಬಂಡವಾಳ ಹೂಡಿಕೆಗೆ ಇನ್ನೂ ಹಲವು ಅಡೆತಡೆಗಳು ಇವೆ. ಇದರಿಂದಾಗಿ ಹೂಡಿಕೆದಾರರಿಗೆ ತ್ವರಿತಗತಿಯಲ್ಲಿ ಅನುಮತಿ ಸಿಗುತ್ತಿಲ್ಲ. ಹೊಸ ಕಾಯ್ದೆಯಿಂದ ರಾಜ್ಯ ಮಟ್ಟದ ಪ್ರಾಧಿಕಾರವೊಂದನ್ನು ರಚಿಸಲಾಗುವುದು. ಅಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ನಿರ್ದೇಶಕರೂ ಸದಸ್ಯರಾಗಿರುತ್ತಾರೆ. ಒಂದೇ ಕಡೆ ಒಪ್ಪಿಗೆ ಪಡೆಯಲು ಸಾಧ್ಯವಾಗುತ್ತದೆ. ಈ ಪ್ರಾಧಿಕಾರವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿಗೆ (ಕೆಐಎಡಿಬಿ) ಪೂರಕವಾಗಿರುತ್ತದೆ. ಆರಂಭದಲ್ಲಿ ಕೆಐಎಡಿಬಿಯೇ ಉಸ್ತುವಾರಿ ವಹಿಸುತ್ತದೆ ಎಂದು ಹೇಳಿದರು.

ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆ, ವಸಾಹತುಗಳ ಸ್ಥಾಪನೆ, ಅವುಗಳ ಕಾರ್ಯಾಚರಣೆ, ನಿಯಂತ್ರಣ, ನಿರ್ವಹಣೆಯನ್ನು ಪ್ರಾಧಿಕಾರವೇ ನೋಡಿಕೊಳ್ಳಲಿದೆ. ಎಲ್ಲೆಲ್ಲಿ ಬಂಡವಾಳ ಹೂಡಿಕೆ ಮಾಡಲು ಸಾಧ್ಯವಿದೆ ಎಂದು ಜಾಗವನ್ನು ಗುರುತಿಸುವ ಜವಾಬ್ದಾರಿಯನ್ನು ಪ್ರಾಧಿಕಾರಕ್ಕೇ ನೀಡಲಾಗುತ್ತದೆ. ಭೂಸ್ವಾಧೀನದಿಂದ ಹಿಡಿದು ತೆರಿಗೆ ನಿಗದಿ ಮತ್ತು ಸಂಗ್ರಹದವರೆಗೆ ಎಲ್ಲವನ್ನೂ ಪ್ರಾಧಿಕಾರವೇ ನೋಡಿಕೊಳ್ಳುತ್ತದೆ. ಆರಂಭದಲ್ಲಿ ತುಮಕೂರು ಮತ್ತು ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ವಿಶೇಷ ಹೂಡಿಕೆ ವಲಯ ಸ್ಥಾಪಿಸಲಾಗುವುದು ಎಂದು ಮಾಧುಸ್ವಾಮಿ ಹೇಳಿದರು.

ಪ್ರಾಧಿಕಾರ ಸಂಗ್ರಹಿಸಿದ ತೆರಿಗೆಯಲ್ಲಿ ಶೇ 30 ರಷ್ಟನ್ನು ಅಲ್ಲಿನ ಸ್ಥಳೀಯ ಸಂಸ್ಥೆಗೆ ಪಾವತಿ ಮಾಡಬೇಕಾಗುತ್ತದೆ ಎಂದೂ ಅವರು ತಿಳಿಸಿದರು.

ಸಂಪುಟ ಸಭೆಯ ಇತರ ನಿರ್ಣಯಗಳು

- ಬಳ್ಳಾರಿಯಲ್ಲಿ 5 ಎಕರೆ 10 ಗುಂಟೆ ಮತ್ತು ದಕ್ಷಿಣ ಕನ್ನಡದ ಪುತ್ತೂರಿನಲ್ಲಿ 23 ಎಕರೆ 25 ಗುಂಟೆ ಭೂಮಿಯನ್ನು ಕ್ರಿಕೆಟ್ ಮೈದಾನ ರೂಪಿಸಲು ಕೆಎಸ್‌ಸಿಎಗೆ ಲೀಸ್ ಆಧಾರದಲ್ಲಿ ನೀಡಲು ನಿರ್ಧಾರ
- ಐಟಿ ಮತ್ತು ಐಟಿಯೇತರ ಮೂಲ ಸೌಕರ್ಯವನ್ನು ಉನ್ನತೀಕರಿಸಲು ಮತ್ತು ಸಂಪರ್ಕ ಜಾಲದ ವ್ಯಾಪ್ತಿಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿವರೆಗೆ ವಿಸ್ತರಿಸಲು ₹931.15 ಕೋಟಿ ಅನುದಾನ ನೀಡಲು ಆಡಳಿತಾತ್ಮಕ ಅನುಮೋದನೆ
- ಜಲಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸಲು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಿಗೆ ₹1,565 ಕೋಟಿ, ಹಾಸನ ಜಿಲ್ಲೆ ಚನ್ನರಾಯಪಟ್ಟಣಕ್ಕೆ ₹391 ಕೋಟಿ, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿಗೆ ₹422 ಕೋಟಿ, ತೀರ್ಥಹಳ್ಳಿ ತಾಲ್ಲೂಕಿಗೆ ₹344 ಕೋಟಿ ಬಿಡುಗಡೆಗೆ ಅನುಮೋದನೆ
- ಮೈಸೂರಿನಲ್ಲಿ ಕಿದ್ವಾಯಿ ಆಸ್ಪತ್ರೆಯ ಶಾಖೆಯನ್ನು ತೆರೆಯಲು ₹50 ಕೋಟಿ ಬಿಡುಗಡೆಗೆ ಅನುಮೋದನೆ

ಮೊಸಳೆ ದಾಳಿ: ವ್ಯಕ್ತಿ ಸಾವು

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): ಕುಳಗಿ ರಸ್ತೆಯ ಈಶ್ವರ ದೇವಸ್ಥಾನದ ಬಳಿ ಗುರುವಾರ ಬೆಳಿಗ್ಗೆ ಈಜಲು ಕಾಳಿ ನದಿಗೆ ಇಳಿದ ವ್ಯಕ್ತಿಯನ್ನು ಮೊಸಳೆ ಎಳೆದುಕೊಂಡು ಹೋಗಿದೆ.

ಬಂಗೂರನಗರ ನಿವಾಸಿ ಪಿತಾಂಬರದಾಸ ಮಹೇಶ್ವರಿ (65) ಮೃತರು. ಎರಡು ತಾಸು ಕಾರ್ಯಾಚರಣೆಯ ನಂತರ ವ್ಯಕ್ತಿಯ ಶವ ಪತ್ತೆಯಾಗಿದೆ.

ಮಾನಸಾ ರಾಫ್ಟಿಂಗ್ ತಂಡ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸಿದರು.

ಪ್ರತ್ಯಕ್ಷದರ್ಶಿ ಕೃಷ್ಣಾ ಪೂಜಾರಿ ಪ್ರಕಾರ, ‘ಈಶ್ವರ ದೇವಸ್ಥಾನದ ಮೆಟ್ಟಿಲು ಇಳಿದು ವ್ಯಕ್ತಿ ನದಿಯಲ್ಲಿ ಈಜುತ್ತಿದ್ದಾಗ ಎರಡು ಮೊಸಳೆಗಳು ಒಮ್ಮೆಲೇ ದಾಳಿ ಮಾಡಿ ವ್ಯಕ್ತಿಯನ್ನು ಎಳೆದುಕೊಂಡು ಹೋಗಿವೆ. ನಾನು ವಾಯುವಿಹಾರಕ್ಕೆಂದು ಹೋಗುತ್ತಿದ್ದಾಗ ಸೇತುವೆ ಮೇಲಿಂದ ಈ ದೃಶ್ಯವನ್ನು ನೋಡಿದೆ’ ಎಂದು ತಿಳಿಸಿದ್ದಾರೆ.

ದಾಂಡೇಲಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿಯ ಕುತ್ತಿಗೆ,ಎಡ ತೊಡೆ, ಕಾಲುಗಳಿಗೆ ಗಂಭೀರ ಗಾಯಗಳಾಗಿವೆ

ಇಮ್ರಾನ್ ಹತ್ಯೆಗೆ ಯತ್ನ: ಶೂಟರ್ ಹೇಳಿದ್ದೇನು?

ಇಸ್ಲಾಮಾಬಾದ್ (ಪಿಟಿಐ): ‘ದೇಶದ ಜನತೆಯನ್ನು ಹಾದಿ ತಪ್ಪಿಸುತ್ತಿರುವ ಕಾರಣಕ್ಕೆ ಇಮ್ರಾನ್ ಖಾನ್ ಅವರನ್ನು ಹತ್ಯೆ ಮಾಡಲು ನಿರ್ಧರಿಸಿದ್ದೆ’ ಎಂದು ಆರೋಪಿ ಶೂಟರ್ ಗುರುವಾರ ಪೊಲೀಸರ ಎದುರು ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ.

ಪಂಜಾಬ್ ಪ್ರಾಂತ್ಯದ ವಜೀರಾಬಾದ್ ನಗರದ ಅಲ್ಲಾಹ್‌ವಾಲ ಚೌಕದ ಬಳಿ ಪಿಟಿಐ ಪಕ್ಷದ ರಾಜಕೀಯ ರ‍್ಯಾಲಿಯಲ್ಲಿ ಭಾಗವಹಿಸಲು ಕಂಟೈನರ್ ಟ್ರಕ್‌ನಿಂದ ಇಳಿಯುತ್ತಿದ್ದ ಪಿಟಿಐ ಅಧ್ಯಕ್ಷರೂ ಆದ ಮಾಜಿ ಕ್ರಿಕೆಟಿಗ ಇಮ್ರಾನ್ ಖಾನ್ ಮತ್ತು ಅವರ ಬೆಂಬಲಿಗರ ಮೇಲೆ ಆರೋಪಿ ಗುಂಡು ಹಾರಿಸಿದ್ದ.

ಈತನನ್ನು ಸ್ಥಳದಲ್ಲೇ ವಶಕ್ಕೆ ಪಡೆದ ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಕ್ಯಾಮೆರಾ ಮುಂದೆ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ.

‘ಇಮ್ರಾನ್ ಖಾನ್ ಅವರು ಜನತೆಯನ್ನು ಹಾದಿ ತಪ್ಪಿಸುತ್ತಿರುವುದನ್ನು ಸಹಿಸಲಾಗಲಿಲ್ಲ. ಇಮ್ರಾನ್ ಖಾನ್ ಅವರೊಬ್ಬರನ್ನು ಮಾತ್ರವೇ ಹತ್ಯೆ ಮಾಡುವ ಗುರಿ ಹೊಂದಿದ್ದೆ (ಸಿರ್ಫ್ ಇಮ್ರಾನ್ ಖಾನ್ ಕೋ ಮಾರ್ನಾ ಥಾ). ಇದಕ್ಕಾಗಿ ಗುಜ್ರಾನ್‌ವಾಲಾಗೆ ಬೈಕ್‌ನಲ್ಲಿ ಬಂದಿದ್ದೆ. ಬೈಕ್ ಅನ್ನು ಸೋದರ ಸಂಬಂಧಿ ಮನೆ ಬಳಿ ನಿಲ್ಲಿಸಿದ್ದೇನೆ. ಈ ಕೃತ್ಯವನ್ನು ಸ್ವಇಚ್ಛೆಯಿಂದ ಮಾಡಿದ್ದೇನೆ. ನಾನು ಯಾವುದೇ ಧಾರ್ಮಿಕ, ರಾಜಕೀಯ ಅಥವಾ ಭಯೋತ್ಪಾದಕ ಸಂಘಟನೆಗೆ ಸೇರಿದವನಲ್ಲ’ ಎಂದು ಆರೋಪಿ ಹೇಳಿಕೊಂಡಿದ್ದಾನೆ.

ಇಬ್ಬರು ಶೂಟರ್‌ಗಳು ಇಮ್ರಾನ್ ಖಾನ್ ಮತ್ತು ಅವರ ಬೆಂಬಲಿಗರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಒಬ್ಬನ ಬಳಿ ಪಿಸ್ತೂಲ್ ಇತ್ತು. ಮತ್ತೊಬ್ಬನ ಬಳಿ ಸ್ವಯಂಚಾಲಿತ ರೈಫಲ್ ಇತ್ತು ಎಂದು ಕೆಲವು ವರದಿಗಳು ಹೇಳಿವೆ.

‘ಅಲ್ಲಾ ನನಗೆ ಮತ್ತೊಂದು ಅವಕಾಶ ನೀಡಿದ್ದು, ನನ್ನ ಹೋರಾಟ ಮುಂದುವರಿಸುತ್ತೇನೆ’ ಎಂದು ಮಾಜಿ ಕ್ರಿಕೆಟಿಗರೂ ಆದ 70ರ ಹರೆಯದ ಇಮ್ರಾನ್ ಖಾನ್ ಪ್ರತಿಕ್ರಿಯಿಸಿದ್ದಾರೆ.

ಗುಪ್ತಚರ ಇಲಾಖೆ ಎಚ್ಚರಿಕೆ: ರಾಜಕೀಯ ರ‍್ಯಾಲಿ ನಡೆಸದಂತೆ ಇತ್ತೀಚೆಗಷ್ಟೇ ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್ ಇಮ್ರಾನ್ ಖಾನ್ ಅವರಿಗೆ ಎಚ್ಚರಿಕೆ ನೀಡಿತ್ತು. ಇದರ ಬೆನ್ನಲ್ಲೇ ಈಗ ಗುಂಡಿನ ದಾಳಿ ನಡೆದಿದೆ. ಕಳೆದ ಏಪ್ರಿಲ್‌ನಲ್ಲಿ ಇಮ್ರಾನ್ ಖಾನ್ ಅವರನ್ನು ಪ್ರಧಾನಿ ಸ್ಥಾನದಿಂದ ಪದಚ್ಯುತಿಗೊಳಿಸಲಾಗಿತ್ತು. ಇದಾದ ನಂತರ ಅವರು ದೇಶದಾದ್ಯಂತ ನಿರಂತರ ರ‍್ಯಾಲಿ ಮೂಲಕ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ವರದಿ ಸಲ್ಲಿಕೆಗೆ ಸೂಚನೆ: ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಗುಂಡಿನ ದಾಳಿಯನ್ನು ಖಂಡಿಸಿದ್ದು, ಪಂಜಾಬ್ ಪ್ರಾಂತ್ಯದ ಐಜಿಪಿ ಮತ್ತು ಮುಖ್ಯ ಕಾರ್ಯದರ್ಶಿಯಿಂದ ವರದಿ ಪಡೆಯಲು ಆಂತರಿಕ ವ್ಯವಹಾರಗಳ ಸಚಿವ ರಾಣಾ ಸನಾವುಲ್ಲಾ ಅವರಿಗೆ ಸೂಚಿಸಿದ್ದಾರೆ.

‘ದಾಳಿ: ಪ್ರಧಾನಿ ಸೇರಿ ಮೂವರ ಕೈವಾಡ’

ಲಾಹೋರ್: ‘ತಮ್ಮನ್ನು ಹತ್ಯೆ ಮಾಡಲು ನಡೆಸಿದ ಈ ವಿಫಲ ಯತ್ನದ ಹಿಂದೆ ಪ್ರಧಾನಿ ಶೆಹಬಾಜ್ ಶರೀಫ್, ಆಂತರಿಕ ವ್ಯವಹಾರಗಳ ಸಚಿವ ರಾಣಾ ಸನಾವುಲ್ಲಾ ಹಾಗೂ ಮೇಜರ್ ಜನರಲ್ ಫೈಸಲ್ ನಸೀರ್ ಅವರ ಕೈವಾಡ ಇದೆ ಎಂಬುದಾಗಿ ಮಾಜಿ ಪ್ರಧಾನಿ ಇಮ್ರಾನ್‌ಖಾನ್ ಆರೋಪಿಸಿದ್ದಾರೆ’ ಎಂದು ಅವರ ಆಪ್ತ, ಪಿಟಿಐ ಮುಖಂಡ ಅಸಾದ್ ಉಮರ್ ಹೇಳಿದ್ದಾರೆ.

ಈ ಕುರಿತು ಉಮರ್ ಅವರು ವಿಡಿಯೊ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. ‘ನನ್ನ ಹತ್ಯೆಗೆ ನಡೆದ ಯತ್ನದಲ್ಲಿ ಈ ಮೂವರ ಕೈವಾಡವಿರುವ ವಿಷಯವನ್ನು ದೇಶದ ಜನತೆಗೆ ತಿಳಿಸುವಂತೆ ಇಮ್ರಾನ್ ಖಾನ್ ನಮಗೆ ತಿಳಿಸಿದರು’ ಎಂದಿದ್ದಾರೆ.

ಸಚಿವ ಸನಾವುಲ್ಲಾ ಈ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ‘ಈ ಘಟನೆ ಕುರಿತ ತನಿಖೆಗೆ ಸರ್ಕಾರವು ಸಂಪೂರ್ಣ ಸಹಕಾರ ನೀಡಲಿದೆ’ ಎಂದಿದ್ದಾರೆ.

ರಸ್ತೆ ಗುಂಡಿ ಮುಚ್ಚಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಯಿಂದ ದ್ವಿಚಕ್ರ ವಾಹನದಿಂದ ಬಿದ್ದ ಪತಿಯ ಸ್ಥಿತಿ ಕಂಡ ಮಹಿಳೆಯೊಬ್ಬರು ಕಲ್ಲು ಮಣ್ಣಿನಿಂದ ಆ ಗುಂಡಿಯನ್ನು ಮುಚ್ಚಿದ್ದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇದಕ್ಕೆ ಹಲವರು ಸಹಮತ ವ್ಯಕ್ತಪಡಿಸಿದ್ದು, ರಸ್ತೆ ಗುಂಡಿ ಮುಚ್ಚದ ಬಿಬಿಎಂಪಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ತಾಣ ಫೇಸ್‌ಬುಕ್‌ನಲ್ಲಿ ನಾಗಮಣಿ ಬರೆದುಕೊಂಡಿರುವ ವಿವರ ಹೀಗಿದೆ...

‘ಗುರುವಾರ ಬೆಳಿಗ್ಗೆ ಮಲ್ಲೇಶ್ವರ 75 ಬಸ್ ಸ್ಟ್ಯಾಂಡ್, 18ನೇ ಕ್ರಾಸ್‌ನಲ್ಲಿ ರಸ್ತೆ ಗುಂಡಿಯಿಂದ ನನ್ನ ಗಂಡ ಆಕ್ಟಿವಾದಲ್ಲಿ ಬರುವಾಗ ಪ್ರಾಣಾಪಾಯದಿಂದ ಕೂದಲೆಳೆಯಲ್ಲಿ ಬಚಾವಾದರು. ಹಾಗಾಗಿ ಆ ಗುಂಡಿಯನ್ನು ಈಗ ಹೋಗಿ ಕಲ್ಲು ಮಣ್ಣಿನಿಂದ ಗುಂಡಿಯನ್ನು ಮುಚ್ಚಿ ಬಂದೆವು. ಮಲ್ಲೇಶ್ವರದ ಅವ್ಯವಸ್ಥೆಯನ್ನು ಇನ್ನಾದರೂ ಸರಿಮಾಡಲು ಸಾರ್ವಜನಿಕರು ಒತ್ತಾಯ ಮಾಡಿ’ – ಎಂ.ನಾಗಮಣಿ.

ಈ ವಿಡಿಯೊವನ್ನು ಗುರುವಾರ ರಾತ್ರಿಯವರೆಗೆ 50 ಸಾವಿರಕ್ಕೂ ಹೆಚ್ಚು ಮಂದಿ ಫೇಸ್‌ಬುಕ್‌ನಲ್ಲಿ ವೀಕ್ಷಿಸಿದ್ದು, ಅನೇಕರು ರಸ್ತೆಗುಂಡಿಗಳಿಂದ ಆಗುತ್ತಿರುವ ಅನಾಹುತದ ಕುರಿತು ಪ್ರತಿಕ್ರಿಯೆ ಬರೆದಿದ್ದಾರೆ.

‘ಮಲ್ಲೇಶ್ವರ 18 ಅಡ್ಡರಸ್ತೆ ಮಾತ್ರವಲ್ಲ, ಮಲ್ಲೇಶ್ವರದಾದ್ಯಂತ ನಮಗೆ ರಸ್ತೆ ಗುಂಡಿಗಳ ಬಗ್ಗೆ ದೂರುಗಳು ಬಂದಿವೆ. ಮಳೆಯಿಂದಾಗಿ ರಸ್ತೆಯ ಗುಂಡಿಗಳನ್ನು ಮುಚ್ಚಲಾಗಿಲ್ಲ. ಮಳೆದ ನಿಂತ ಒಂದೆರಡು ದಿನಗಳಲ್ಲಿ ಎಲ್ಲ ಗುಂಡಿಗಳನ್ನೂ ಮುಚ್ಚಲಾಗುತ್ತದೆ’ ಎಂದು ರಸ್ತೆ ಮೂಲಸೌಕರ್ಯ ವಿಭಾಗದ ಕಿರಿಯ ಎಂಜಿನಿಯರ್ ಜಯಂತ್ ಕುಮಾರ್ ತಿಳಿಸಿದರು.

ರಸ್ತೆ ಗುಂಡಿ ಮುಚ್ಚಿ ವಿಡಿಯೊ ಹಂಚಿಕೊಂಡ ಮಹಿಳೆ

ಸುದ್ದಿ 2 ನಿಮಿಷ

‘ಚೆಕ್ ಬೌನ್ಸ್: ಪತ್ನಿ ಆರೋಪಿ ಅಲ್ಲ’

ಬೆಂಗಳೂರು: ‘ಪತಿಯ ಸಹಿಯಿರುವ ಚೆಕ್ ಬೌನ್ಸ್ ಆದರೆ ಪತ್ನಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅವಕಾಶವಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ನಗರದ ವೀಣಾಶ್ರೀ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ಪತ್ನಿಯ ವಿರುದ್ಧ ದಾಖಲಾಗಿದ್ದ ಚೆಕ್ ಬೌನ್ಸ್ ದೂರನ್ನು ರದ್ದುಪಡಿಸಿದೆ.

‘ಪ್ರಕರಣದಲ್ಲಿ ಚೆಕ್‌ಗೆ ಅರ್ಜಿದಾರ ಪತ್ನಿ ಸಹಿ ಹಾಕಿಲ್ಲ. ವಿತರಿಸಲಾಗಿರುವ ಚೆಕ್‌ಗೆ ಸಂಬಂಧಿಸಿದ ಖಾತೆ ಜಂಟಿ ಖಾತೆಯೂ ಅಲ್ಲ. ಚೆಕ್ ನೀಡಿರುವುದು ಪತಿ. ಈ ಪ್ರಕರಣದಲ್ಲಿ ಇನ್ನೂ ಮೂವರು ಆರೋಪಿಗಳಿದ್ದು, ಅವರು ಕಂಪನಿ, ಸಂಸ್ಥೆ ಅಥವಾ ಸಂಘವನ್ನೇನೂ ಆರಂಭಿಸಿಲ್ಲ. ಇಂತಹ ಸಂದರ್ಭದಲ್ಲಿ ಪತಿ ವಿತರಿಸಿದ ಚೆಕ್ ಬೌನ್ಸ್ ಆದರೆ ಅದಕ್ಕೆ ಅವರ ಪತ್ನಿಯನ್ನು ಆರೋಪಿ ಮಾಡಲು ಆಗುವುದಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.

ಕಾಶಿ: ನ.23ರಂದು 2ನೇ ತಂಡ

ಬೆಂಗಳೂರು: ಕಾಶಿ ದರ್ಶನ ಪ್ರವಾಸದ ಮೊದಲ ತಂಡದ ಪ್ರವಾಸಕ್ಕೆ ಮೂರು ದಿನದಲ್ಲೇ ಪೂರ್ಣ ಬುಕ್ಕಿಂಗ್ ಆಗಿದ್ದು, ನ.23ರಂದು ತೆರಳುವ ಎರಡನೇ ರೈಲಿಗೆ 100ಕ್ಕೂ ಹೆಚ್ಚು ಆಸನಗಳ ಬುಕ್ಕಿಂಗ್ ಆಗಿದೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ನಿಲ್ದಾಣದಲ್ಲಿ ಕರ್ನಾಟಕ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ‘ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ’ ಯೋಜನೆಯಡಿ ಸಿದ್ಧವಾಗುತ್ತಿರುವ ರೈಲನ್ನು ಗುರುವಾರ ಪರಿಶೀಲಿಸಿ ಅವರು ಮಾತನಾಡಿದರು.

‘ಯೋಜನೆಯ ಪ್ರಥಮ ಪ್ರವಾಸ ನ.11 ಆರಂಭವಾಗಲಿದೆ. ವಾರಾಣಸಿ, ಅಯೋಧ್ಯೆ ಮತ್ತು ಪ್ರಯಾಗರಾಜ್ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ ಬೆಂಗಳೂರಿಗೆ ಹಿಂದಿರುಗಲಿದೆ. ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಭಾರತ್ ಗೌರವ್ ರೈಲನ್ನು ಪ್ರಾರಂಭಿಸುತ್ತಿರುವ ಹೆಗ್ಗಳಿಕೆ ನಮ್ಮ ರಾಜ್ಯದ್ದಾಗಿದೆ’ ಎಂದರು.

‘ಈ ರೈಲಿನಲ್ಲಿ 3 ಟಯರ್ ಎಸಿಯ ವ್ಯವಸ್ಥೆಯನ್ನು ಮಾಡಲಾಗಿದ್ದು, 14 ಬೋಗಿಗಳ ಮೇಲೆ ರಾಜ್ಯದ 28 ದೇವಸ್ಥಾನಗಳ ಛಾಯಾಚಿತ್ರಗಳ ಬ್ರಾಂಡಿಂಗ್ ಮಾಡಲಾಗಿದೆ. ರಾಜ್ಯದ ದೇವಸ್ಥಾನಗಳನ್ನು ಭಾರತದ ಉದ್ದಗಲಕ್ಕೂ ಸಂಚರಿಸಲಿರುವ ಟ್ರೈನ್ ಮೂಲಕ ಪ್ರಚಾರ ಮಾಡುವುದು ನಮ್ಮ ಉದ್ದೇಶವಾಗಿದೆ’ ಎಂದು ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ನ.11ರಂದು ಬೆಂಗಳೂರಿಗೆ ಆಗಮಿಸುತ್ತಿದ್ದು, ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಈ ಮಹತ್ವಾಕಾಂಕ್ಷಿ ಯೋಜನೆಯಾದ ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ ರೈಲಿಗೂ ಚಾಲನೆ ನೀಡಲಿ ಎನ್ನುವುದು ನಮ್ಮ ಆಶಯವಾಗಿದೆ. ಈ ಬಗ್ಗೆ ಮುಖ್ಯಮಂತ್ರಿಯವರು ಪ್ರಧಾನಮಂತ್ರಿ ಕಾರ್ಯಾಲಯಕ್ಕೆ ಮಾಹಿತಿ ನೀಡಿದ್ದು ಒಪ್ಪಿಗೆ ಬರುವ ಸಾಧ್ಯತೆಯಿದೆ’ ಎಂದು ಹೇಳಿದರು.

ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತೆ ರೋಹಿಣಿ ಸಿಂಧೂರಿ, ಐಆರ್‌ಸಿಟಿಸಿ ಹಾಗೂ ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿತ್ರಾವಳಿ

ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲಕ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣಕ್ಕೆ ಎರಡು ವರ್ಷಗಳ ಹಿಂದೆ ತಾವು ನೀಡಿದ್ದ ಜಮೀನಿಗೆ ಸಂಬಂಧಿಸಿ ಪರಿಹಾರ ನೀಡುವಲ್ಲಿ ಬಿಡಿಎ ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ ಕೆಂಗೇರಿಯ ಅರ್ಚಕರ ಬಡಾವಣೆ ನಿವಾಸಿ, 75 ವರ್ಷದ ವಯೋವೃದ್ಧರೊಬ್ಬರು ನಿರ್ಮಾಣ ಹಂತದಲ್ಲಿರುವ ರಸ್ತೆಗೆ ಬೇಲಿ ಹಾಕಿದ್ದಾರೆ. ರಸ್ತೆ ನಿರ್ಮಾಣಕ್ಕೆ ಈ ವಯೋವೃದ್ಧರು 14 ಗುಂಟೆ ಜಮೀನು ನೀಡಿದ್ದು, ಅವರಿಗೆ ಬಿಡಿಎ 4 ಸಾವಿರ ಚದರಡಿ ಅಭಿವೃದ್ಧಿಪಡಿಸಿದ ನಿವೇಶನ ನೀಡಬೇಕಿದೆ

ಕೆ.ಆರ್‌.ಪುರ ಸಮೀಪದ ವೈಟ್‌ಫೀಲ್ಡ್‌ನ ನಾಗೊಂಡನಹಳ್ಳಿಯಲ್ಲಿ ಭೀಮರಾವ್ ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ನೂತನ ಕಚೇರಿಯನ್ನು ಚಲನಚಿತ್ರ ನಟ ಚೇತನ್ ಹಾಗೂ ಜ್ಞಾನಕೋಶ ಭಂತೇಜಿ ಉದ್ಘಾಟಿಸಿದರು. ಮಹಾ ಒಕ್ಕೂಟದ ಅಧ್ಯಕ್ಷ ಬಿ.ಎಂ.ವೆಂಕಟೇಶ್, ಕಾರ್ಯಾಧ್ಯಕ್ಷ ಬೆಳತೂರು ವೆಂಕಟೇಶ್, ಗೌರವ ಅಧ್ಯಕ್ಷ ಬಿ.ಕೃಷ್ಣಪ್ಪ, ಮುಳ್ಳೂರು ಶ್ರೀನಿವಾಸ್, ಉಪಾಧ್ಯಕ್ಷರಾದ ಎ.ರಾಜು, ಸೊಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಎಂ.ಕೃಷ್ಣಪ್ಪ ಇದ್ದರು

ಕನ್ನಡ ರಾಜ್ಯೋತ್ಸವದ ಅಂಗವಾಗಿ, ‘ಬೆಂಗಳೂರು ವಕೀಲರ ಸಾಹಿತ್ಯ ಕೂಟ’ ಹಮ್ಮಿಕೊಂಡಿದ್ದ ಬೈಕ್ ಜಾಥಾದಲ್ಲಿ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ವಕೀಲರ ಸಾಹಿತ್ಯ ಕೂಟದ ಅಧ್ಯಕ್ಷ ಎಲ್. ಜಗದೀಶ್ ಹಾಗೂ ಪದಾಧಿಕಾರಿಗಳು ಇದ್ದರು. ‘ವಿಚಾರಣಾ ನ್ಯಾಯಾಲಯಗಳ ಕಲಾಪಗಳನ್ನು ಶುದ್ಧ ಕನ್ನಡದಲ್ಲಿ ನಡೆಸಬೇಕು’ ಎಂಬ ಬೇಡಿಕೆಯನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಇಬ್ಬರ ಮೇಲೆ ಗುಂಡಿನ ದಾಳಿ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ನೇಪಾಳ ಮೂಲದ ಒಬ್ಬರು ಸೇರಿದಂತೆ ಇಬ್ಬರು ವಲಸೆ ಕಾರ್ಮಿಕರ ಮೇಲೆ ಉಗ್ರರು ಗುಂಡು ಹಾರಿಸಿದ್ದಾರೆ.

ಎಸ್‌ಎಪಿಎಸ್ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರ ಮೇಲೆ (ಬಿಹಾರ ಮತ್ತು ನೇಪಾಳ) ಉಗ್ರರು ಗುಂಡು ಹಾರಿಸಿದ್ದಾರೆ. ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಗುಂಡಾಂಜನೇಯ ಸ್ವಾಮಿ ಜಾತ್ರೆ ನಾಳೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ರಾವುಗೋಡ್ಲುವಿನಲ್ಲಿ ಇರುವ ಗುಂಡಾಂಜನೇಯ ಸ್ವಾಮಿ ಜಾತ್ರಾ ಮಹೋತ್ಸವವು ಇದೇ 5ರಂದು ನಡೆಯಲಿದೆ.

ಬೆಳಿಗ್ಗೆ ದೇವರ ಮೂರ್ತಿಗೆ ಅಭಿಷೇಕದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಆರಂಭ ಆಗಲಿದ್ದು, ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಪಾಲ್ಗೊಳ್ಳಲಿದ್ದಾರೆ. ಭಕ್ತರಿಗಾಗಿ ಅನ್ನ ಸಂತರ್ಪಣೆ ಇರಲಿದೆ. ರಾತ್ರಿ 9ಕ್ಕೆ ಗ್ರಾಮದಲ್ಲಿ ರಾಮ, ಸೀತಾ, ಲಕ್ಷ್ಮಣ ಹಾಗೂ ಗುಂಡಾಂಜನೇಯ ಸ್ವಾಮಿಯ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ಪ್ರಕಟಣೆಯು ತಿಳಿಸಿದೆ.

ಬೆಂಗಳೂರು– ಮೈಸೂರು ಹೆದ್ದಾರಿ; ನಿರ್ಮಾಣವಾಗದ ಕಾರಿಡಾರ್: ಪ್ರಾಣಿಗಳ ಸಂಚಾರಕ್ಕೆ ಸಂಚಕಾರ

ವನ್ಯಜೀವಿಗಳಿಗೆ ಉರುಳಾದ ದಶಪಥ!

• ಆರ್. ಜಿತೇಂದ್ರ

ರಾಮನಗರ: ಬೆಂಗಳೂರು– ಮೈಸೂರು ನಡುವಿನ ಅಂತರವನ್ನು ಕಡಿಮೆ ಮಾಡಿರುವ ದಶಪಥ ವನ್ಯಜೀವಿಗಳ ಪ್ರಾಣಕ್ಕೆ ಕಂಟಕವಾಗಿ ಪರಿಣಮಿಸಿದೆ.

ದಶಪಥವಾಗಿ ವಿಸ್ತರಣೆಯಾಗುತ್ತಿರುವ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವನ್ಯಜೀವಿಗಳ ಮುಕ್ತ ಓಡಾಟಕ್ಕೆ ಪ್ರತ್ಯೇಕ ಕಾರಿಡಾರ್ ಇಲ್ಲದ ಕಾರಣ ಅನೇಕ ಪ್ರಾಣಿಗಳು ಶರವೇಗದಲ್ಲಿ ವೇಗದಲ್ಲಿ ಸಂಚರಿಸುವ ವಾಹನಗಳಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿವೆ.

ಹೆದ್ದಾರಿ ಹಾಯ್ದು ಹೋಗುವ ಕಾಡಿನಂಚಿನ ಪ್ರದೇಶದಲ್ಲಿ ವನ್ಯಜೀವಿಗಳ ಮುಕ್ತ ಓಡಾಟಕ್ಕೆ ವೈಜ್ಞಾನಿಕವಾಗಿ ಕಾರಿಡಾರ್ ನಿರ್ಮಿಸದಿರುವುದು ವನ್ಯಜೀವಿಗಳ ಪ್ರಾಣಕ್ಕೆ ಸಂಚಕಾರ ತಂದೊಡ್ಡುತ್ತಿದೆ.

ಬೆಂಗಳೂರು–ಮೈಸೂರು ನಡುವೆ ಒಟ್ಟು 116 ಕಿ.ಮೀ. ಉದ್ದದ ಹತ್ತು ಪಥಗಳ ಹೆದ್ದಾರಿ ನಿರ್ಮಾಣ ಆಗುತ್ತಿದೆ. ಅನೇಕ ಕಡೆಗಳಲ್ಲಿ ಕಾಡನ್ನು ಸೀಳಿ ಹೊಸ ಬೈಪಾಸ್ ರಸ್ತೆ ನಿರ್ಮಾಣ ಆಗಿದೆ. ಇದರಿಂದಾಗಿ ವನ್ಯಜೀವಿಗಳ ಓಡಾಟ ದಿಕ್ಕು ತಪ್ಪುತ್ತಿದೆ. ರಸ್ತೆ ದಾಟುವ ಧಾವಂತದಲ್ಲಿ ಈಗಾಗಲೇ ಎರಡು ಚಿರತೆಗಳು ಪ್ರಾಣ ಕಳೆದುಕೊಂಡಿವೆ.

ರಾಮನಗರ ಜಿಲ್ಲೆಯಲ್ಲಿ ಹುಲ್ತಾರ್, ಹಂದಿಗುಂದಿ, ರಾಮದೇವರ ಬೆಟ್ಟ, ಮಾಕಳಿ ಅರಣ್ಯ ಪ್ರದೇಶಗಳಲ್ಲಿ ಹೆದ್ದಾರಿ ಹಾದು ಹೋಗಿದೆ. ಇಲ್ಲಿ ಕಾಡಾನೆ, ಚಿರತೆ, ಕರಡಿ ಮೊದಲಾದ ವನ್ಯಜೀವಿಗಳ ಓಡಾಟ ಹೆಚ್ಚಿದೆ. ಆದರೆ, ಹೊಸ ಹೆದ್ದಾರಿ ಕಾಮಗಾರಿಯಿಂದಾಗಿ ಅವುಗಳು ನಿತ್ಯ ಸಂಚರಿಸುವ ಜಾಗ ಅಸ್ತವ್ಯಸ್ತಗೊಂಡಿದೆ.

ಆನೆಗಳೂ ಸೇರಿದಂತೆ ಕಾಡುಪ್ರಾಣಿಗಳ ಓಡಾಟಕ್ಕೆಂದು ಪ್ರತ್ಯೇಕ ಕಾರಿಡಾರ್ ನಿರ್ಮಿಸುವಂತೆ ಪ್ರಾದೇಶಿಕ ಅರಣ್ಯ ಇಲಾಖೆಯು ಹೆದ್ದಾರಿ ಪ್ರಾಧಿಕಾರಕ್ಕೆ ಮನವಿ ಮಾಡಿತ್ತು. ಆದರೆ, ಎರಡು ಕಡೆ ವಿಶಾಲವಾದ ಅಂಡರ್‌ಪಾಸ್, ರಾಮದೇವರ ಬೆಟ್ಟ– ಹಂದಿಗುಂದಿ ಬೆಟ್ಟದ ನಡುವಿನ ಹೆದ್ದಾರಿಯಲ್ಲಿ ಅವೈಜ್ಞಾನಿಕ ಪುಟ್ಟ ಮೇಲ್ಸೇತುವೆ ನಿರ್ಮಿಸಿ ಅದನ್ನೇ ‘ಕಾರಿಡಾರ್’ ಎಂದು ತೋರಿಸಿ ಹೆದ್ದಾರಿ ಪ್ರಾಧಿಕಾರ ಕೈತೊಳೆದುಕೊಂಡಿದೆ. ಇಲ್ಲಿ ದಿನದ 24 ಗಂಟೆಯೂ ಬಿಟ್ಟು ಬಿಡದೆ ವಾಹನಗಳ ದಟ್ಟ ಸಂಚಾರ ಇದೆ. ಹೀಗಾಗಿ ವನ್ಯಜೀವಿಗಳು ನಿರ್ಭೀತಿಯಿಂದ ಸಂಚರಿಸಲು ಸಾಧ್ಯವಾಗುತ್ತಿಲ್ಲ.

ಅಧ್ಯಯನವಿಲ್ಲ: ಹೆದ್ದಾರಿ ವಿಸ್ತರಣೆಗೂ ಮುನ್ನ ಇದರಿಂದ ಇಲ್ಲಿನ ವನ್ಯಜೀವಿಗಳ ಮೇಲಾಗುವ ಪರಿಣಾಮಗಳ ಕುರಿತು ಅಧ್ಯಯನ ನಡೆದಿಲ್ಲ. ಅರಣ್ಯ ಇಲಾಖೆ ಗುರುತಿಸಿದ ಸ್ಥಳಗಳಲ್ಲಿಯೂ ಕಾರಿಡಾರ್ ನಿರ್ಮಾಣ ಆಗಿಲ್ಲ.

ಆರು ಪಥಗಳ ಎಕ್ಸ್‌ಪ್ರೆಸ್ ವೇನಲ್ಲಿ ಬೆಂಗಳೂರು ಬಳಿಯ ಕುಂಬಳ ಗೋಡಿನಿಂದ ನಿಡಘಟ್ಟವರೆಗೂ ಸದ್ಯ ಸಂಚಾರ ಮುಕ್ತವಾಗಿದ್ದು, ವಾಹನಗಳು ಶರವೇಗದಲ್ಲಿ ಸಂಚರಿಸುತ್ತಿವೆ. ಈ ಮಧ್ಯೆ ವನ್ಯಜೀವಿಗಳು ಓಡಾಡುವ ಕಡೆ ಎಲ್ಲಿಯೂ ಹಂಪ್ಸ್ ಆಗಲಿ, ಸೂಚನಾ ಫಲಕಗಳಾಗಲಿ ಅಳವಡಿಸಿಲ್ಲ. ಹೀಗಾಗಿ ವಾಹನಗಳ ಓಡಾಟಕ್ಕೆ ಸಿಕ್ಕು ಚಿರತೆಗಳು ಸಾಯುತ್ತಿವೆ. ಈ ಭಾಗದಲ್ಲಿ ಹೆಚ್ಚಾಗಿ ಸಂಚರಿಸುವ ಆನೆಗಳು ದಿಕ್ಕು ತಪ್ಪಿ ಸುತ್ತಮುಲಿನ ಗ್ರಾಮಗಳತ್ತ ದಾಳಿ ಇಡುತ್ತಿವೆ.

ಇನ್ನಾದರೂ ಪರಿಸರ ತಜ್ಞರ ಮೂಲಕ ಅಧ್ಯಯನ ನಡೆಸಿ ವನ್ಯಜೀವಿಗಳಿಗಾಗಿ ಪ್ರತ್ಯೇಕ ಕಾರಿಡಾರ್ ನಿರ್ಮಿಸಬೇಕು ಎನ್ನುವುದು ಇಲ್ಲಿನ ಪರಿಸರ ಪ್ರಿಯರ ಆಗ್ರಹವಾಗಿದೆ.

ರಾಮನಗರದ ರಾಮದೇವರ ಬೆಟ್ಟ– ಹಂದಿಗುಂದಿ ಬೆಟ್ಟದ ನಡುವೆ ಹೆದ್ದಾರಿಯ ಮೇಲೆ ನಿರ್ಮಾಣವಾದ ಸೇತುವೆ (ಕಾರಿಡಾರ್)

ರಾಮನಗರದ ಬಿಳಗುಂಬ ಸಮೀಪ ಹೆದ್ದಾರಿ ಅಪಘಾತದಲ್ಲಿ ಮೃತಪಟ್ಟ ಚಿರತೆ

ಪ್ರಾಣಿಗಳ ಓಡಾಟ ಹೆಚ್ಚಿರುವ ಕಡೆ ಕಾರಿಡಾರ್ ನಿರ್ಮಾಣಕ್ಕೆ ಕೋರಿದ್ದೆವು. ಎರಡು ಕಡೆ ಅಂಡರ್ ಪಾಸ್, ಒಂದು ಮೇಲ್ಸೇತುವೆ ನಿರ್ಮಿಸಿಕೊಟ್ಟಿದೆ. ಶೀಘ್ರವೇ ಸೂಚನಾ ಫಲಕ ಅಳಪಡಿಸಲಾಗುವುದು

ದೇವರಾಜು ಡಿಸಿಎಫ್, ಪ್ರಾದೇಶಿಕ ಅರಣ್ಯ ವಿಭಾಗ

ಹೆದ್ದಾರಿಯಲ್ಲಿ ಆನೆ–ಚಿರತೆ ಓಡಾಟ ಹೆಚ್ಚಿರುವ ಕಡೆ ವೈಜ್ಞಾನಿಕ ರೀತಿಯಲ್ಲಿ ಪ್ರತ್ಯೇಕ ಕಾರಿಡಾರ್ ನಿರ್ಮಿಸಬೇಕಿತ್ತು. ಆದರೆ ಹೆದ್ದಾರಿ ಪ್ರಾಧಿಕಾರ ಬೇಕಾಬಿಟ್ಟಿ ರಸ್ತೆ ನಿರ್ಮಿಸಿದೆ

ಬಿ. ಶಶಿಕುಮಾರ್ ಕಾರ್ಯದರ್ಶಿ, ಕರ್ನಾಟಕ ರಣಹದ್ದು ಸಂರಕ್ಷಣಾ ಟ್ರಸ್ಟ್

ರಣಹದ್ದು ಸಂತತಿಗೂ ಹಾನಿ?

ರಾಮನಗರದ ರಾಮದೇವರ ಬೆಟ್ಟದ ಬುಡದಲ್ಲೇ ಹೊಸ ಬೈಪಾಸ್ ಹೆದ್ದಾರಿ ಹಾದುಹೋಗಿದೆ. ಪರಿಸರ ಸೂಕ್ಷ್ಮ ವಲಯದಲ್ಲಿಯೇ ನಿತ್ಯ ಸಾವಿರಾರು ವಾಹನ ಓಡಾಡುತ್ತಿವೆ. ಅಳಿವಿನ ಅಂಚಿನಲ್ಲಿರುವ ಉದ್ದ ಕೊಕ್ಕಿನ ರಣಹದ್ದುಗಳಿಗೆ ಇದರಿಂದ ತೊಂದರೆ ಆಗುವ ಸಾಧ್ಯತೆ ಇದ್ದು, ಈ ಬಗ್ಗೆ ಜೀವವಿಜ್ಞಾನಿಗಳಿಂದ ಅಧ್ಯಯನ ನಡೆಸಬೇಕು ಎನ್ನುತ್ತಾರೆ ಕರ್ನಾಟಕ ರಣಹದ್ದು ಸಂರಕ್ಷಣಾ ಟ್ರಸ್ಟ್ ಸದಸ್ಯರು.

ವಿಶ್ವೇಶ್ವರ ಭಟ್ ಕ್ಷಮೆಯಾಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕುರಿತು ಅವಹೇಳನಕಾರಿಯಾಗಿ ಬರೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕನ್ನಡ ದಿನಪತ್ರಿಕೆ 'ವಿಶ್ವವಾಣಿ'ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ರಾಷ್ಟ್ರೀಯ ಮಹಿಳಾ ಆಯೋಗದ ಎದುರು ಹಾಜರಾಗಿ ಬೇಷರತ್ ಕ್ಷಮೆಯಾಚಿಸಿದ್ದಾರೆ.

'ವಿಶ್ವೇಶ್ವರ ಭಟ್ ಆಯೋಗದ ಮುಂದೆ ಹಾಜರಾಗಿ ಕ್ಷಮೆಯಾಚಿಸಿದ್ದಾರೆ. ಈ ಸಂಬಂಧ ಲಿಖಿತವಾಗಿಯೂ ಕ್ಷಮೆ ಕೇಳಿದ್ದಾರೆ' ಎಂದು ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ 'ಪ್ರಜಾವಾಣಿ'ಗೆ ತಿಳಿಸಿದರು. 'ಭಾರತದ ರಾಷ್ಟ್ರಪತಿ ಅವರನ್ನು ಅವಮಾನಿಸುವ ಯಾವುದೇ ದುರುದ್ದೇಶ ತನಗೆ ಇಲ್ಲ ಎಂಬುದಾಗಿ ವಿಶ್ವೇಶ್ವರ ಭಟ್ ಸ್ಪಷ್ಟಪಡಿಸಿದ್ದಾರೆ' ಎಂದೂ ತಿಳಿಸಿದರು.

ಆಯೋಗವು ಕ್ಷಮಾಪಣೆ ಪತ್ರದೊಂದಿಗೆ ಪ್ರಕರಣದ ವಿವರಗಳನ್ನು ರಾಷ್ಟ್ರಪತಿ ಭವನಕ್ಕೆ ಕಳುಹಿಸಲಿದೆ ಎಂದೂ ಅವರು ಮಾಹಿತಿ ನೀಡಿದರು.

ರಾಷ್ಟ್ರಪತಿ ವಿರುದ್ಧ ಅವಹೇಳನಕಾರಿಯಾಗಿ ಬರೆದುದರ ಬಗ್ಗೆ ಮಾಡಲಾಗಿದ್ದ ಪೋಸ್ಟ್ ಅನ್ನು ಗಂಭೀರವಾಗಿ ಪರಿಗಣಿಸಿದ ಆಯೋಗವು, ಖುದ್ದಾಗಿ ಹಾಜರಾಗುವಂತೆ ನೋಟಿಸ್ ನೀಡಿತ್ತು.

ಮೊಹಮ್ಮದ್ ಮಫಾಜ್ ಎಂಬುವವರು ಈ ಬಗ್ಗೆ ಅಕ್ಟೋಬರ್ 9ರಂದು ಟ್ವೀಟ್ ಮಾಡಿದ್ದರು. '(ಕನ್ನಡ ದಿನಪತ್ರಿಕೆ ವಿಶ್ವವಾಣಿ) ಪತ್ರಕರ್ತ (ಪ್ರಧಾನ ಸಂಪಾದಕ) ರಾಷ್ಟ್ರಪತಿ ಅವರನ್ನು ಅವಹೇಳನ ಮಾಡಿದ್ದಾರೆ' ಎಂದು ಮಫಾಜ್ ಟ್ವೀಟ್ ಮಾಡಿದ್ದರು.

ಪತ್ರಿಕೆಯ ಸಂಪಾದಕೀಯ ಪುಟದಲ್ಲಿ ಪ್ರಕಟವಾಗಿದ್ದ ಲೇಖನದ ಎರಡು ಚಿತ್ರಗಳನ್ನೂ ಅವರು ಹಂಚಿಕೊಂಡಿದ್ದರು. ಜತೆಗೆ ಟ್ವೀಟ್ ಅನ್ನು ರಾಷ್ಟ್ರಪತಿ ಭವನದ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದರು.

ಮಂಗಳೂರಿನ ನೀರುಮಾರ್ಗದಲ್ಲಿ ಆಫ್ರಿಕನ್ ಹಂದಿ ಜ್ವರ ಪತ್ತೆ

ಮಂಗಳೂರು: ತಾಲ್ಲೂಕಿನ ನೀರುಮಾರ್ಗ ಗ್ರಾಮದ ಕೆಲರಾಯಿ ಪ್ರದೇಶದಲ್ಲಿರುವ ಹಂದಿ ಸಾಕಾಣಿಕೆ ಕೇಂದ್ರವೊಂದರ ಹಂದಿಗಳಲ್ಲಿ ಆಫ್ರಿಕನ್ ಹಂದಿ ಜ್ವರ ಇರುವುದು ದೃಢಪಟ್ಟಿದೆ.

ಈ ಹಂದಿ ಸಾಕಾಣಿಕಾ ಕೇಂದ್ರದಿಂದ 1 ಕಿ.ಮೀ ವ್ಯಾಪ್ತಿಯನ್ನು ರೋಗಪೀಡಿತ ವಲಯ ಮತ್ತು 10 ಕಿ.ಮೀ ವ್ಯಾಪ್ತಿಯನ್ನು ಜಾಗೃತ ವಲಯ ಎಂದು ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ತಿಳಿಸಿದ್ದಾರೆ.

ರೋಗಪೀಡಿತ ಹಂದಿಗಳನ್ನು ವಧೆ ಮಾಡಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ಆ ಸ್ಥಳದಲ್ಲಿ ಕ್ರಿಮಿನಾಶಕ ಸಿಂಪಡಿಸಲು, ಸಾರ್ವಜನಿಕರು ಭೇಟಿ ನೀಡದಂತೆ ನಾಮಫಲಕ ಅಳವಡಿಸುವಂತೆ ಸೂಚಿಸಲಾಗಿದೆ. ಹಂದಿ ಜ್ವರವು ಹಂದಿಗಳಿಂದ ಅಥವಾ ಮಾಂಸ ಸೇವಿಸುವುದರಿಂದ ಮನುಷ್ಯರಿಗೆ ಹರಡುವುದಿಲ್ಲ ಎಂದು ಅವರು ಹೇಳಿದ್ದಾರೆ.

KENDRIYA VIDYALAYA DONIMALAI

ಕೇಂದ್ರೀಯ ವಿದ್ಯಾಲಯ, ದೋಣಿಮಲೈ / केन्द्रीय विद्यालय दोणिमलै

BALLARI DIST. KARNATAKA- 583 118

Tele: 08395 274604 E-mail: kvdonimalai0@gmail.com

WALK-IN INTERVIEW FOR SPECIAL EDUCATOR ON PART-TIME CONTRACTUAL BASIS FOR THE YEAR 2022-23 ON 09-11-2022 IN THE VIDYALAYA PREMISES FROM 10.00 AM

- Reporting time for candidates is 09.30 AM on 09-11-2022 (Wednesday).
- For details about eligibility, educational qualifications and remuneration, please visit the Vidyalaya website: https://ndmcdonimalai.kvs.ac.in

Date: 03.11.2022 Sd/- PRINCIPAL

SAINIK SCHOOL BIJAPUR - 586 108 (KARNATAKA)

(Under Sainik Schools Society, Ministry of Defence, New Delhi)

CORRIGENDUM - II

1. Wanted for the post of TGT (English). Reference is made to our advertisement in the following news papers for the post of TGT (English): -
(a) Employment News - 08-14 Oct 2022
(b) Prajavani (Kannada) - 08 Oct 2022
2. Last date of receipt of application is hereby extended till 15 Nov 2022.
3. Rest is no change.

Sd/- Principal
Sainik School Bijapur

ಕರ್ನಾಟಕ ಸರ್ಕಾರ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052

ದೂರವಾಣಿ ಸಂಖ್ಯೆ: 080–22250017/22250018 ಇ–ಮೇಲ್ mdkmvstdc@gmail.com

ಸಂಖ್ಯೆ: ಕಮವಾಪಪಂಅನಿ:ಟೆಂಡರ್‌ಗಂಕಯೋ: 2022–23 ದಿನಾಂಕ: 31.10.2022

"ಇ–ಟೆಂಡರ್ ಪ್ರಕಟಣೆ"
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

2019–20/2020–21ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆದ ಪರಿಶಿಷ್ಟ ಪಂಗಡದ ಫಲಾನುಭವಿಗಳ ಕೊಳವೆಬಾವಿಗಳ ಘಟಕಗಳ ಪಂಪ್‌ಸೆಟ್‌ಗಳಿಗೆ ರಿಮೋಟ್ ಮೊಬೈಲ್ ಸ್ಟಾರ್ಟರ್‌ಗಳನ್ನು ಅಳವಡಿಸುವ ಸಂಬಂಧ ಅನುಭವವುಳ್ಳ ಉತ್ತಮ ಸಂಸ್ಥೆಗಳನ್ನು (Individual Companies/Firms) ಗುರುತಿಸಲು ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಪ್ರಕಟಣೆ ಪ್ರತಿಗಳನ್ನು ಈ ಪತ್ರದ ಜೊತೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

Sl. No.	Description of Goods	Quantity	Estimated Total Cost (in lakhs)	EMD Amount (1.5%) Rs.in Lakhs	Final Destination as specified in Annex to Section VI
1	Supply, Delivery and Installation of Remote mobile starters to Submersible pump set using Mobile phones for Karnataka Maharshi Valmiki Scheduled Tribes Development Corporation Ltd, Karnataka (Phase-1)	6100 Nos	950.00	14.25	Supply, Delivery, and Installation for Ganga Kalyana Scheme 2018-19, 2019-20, and 2020-21 Beneficiaries of Karnataka in Phase-1

ಟೆಂಡರ್‌ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ ನಿಬಂಧನೆಗಳು, ಇ.ಎಂ.ಡಿ ಮೊತ್ತ ಆಯಾ ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https//eproc.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

1) ದಿನಾಂಕ: 02.11.2022ರಂದು ಟೆಂಡರ್ ದಾಖಲಾತಿಗಳನ್ನು ಇ–ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2) ಫ್ರೀ–ಬಿಡ್ ಮೀಟಿಂಗ್ ದಿನಾಂಕ:09.11.2022 ಬೆಳಿಗ್ಗೆ 11.00 ಗಂಟೆ ನಿಗಮದ ಕೇಂದ್ರ ಕಛೇರಿಯಲ್ಲಿ ಆಹ್ವಾನಿಸಲಾಗಿರುತ್ತದೆ.
3) ಇ–ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:01.12.2022 ಆಗಿರುತ್ತದೆ.
4) ಟೆಂಡರ್‌ಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
5) ಕಂಡೀಷನ್ ಟೆಂಡರ್‌ಗಳನ್ನು ಮಾನ್ಯ ಮಾಡುವುದಿಲ್ಲ.

ಪ್ಯಾಕೇಜ್‌ವಾರು ಆಸಕ್ತ ಗುತ್ತಿಗೆದಾರರಿಂದ ಇ–ಟೆಂಡರ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ, ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಸಹಿ/–
ಲೆಕ್ಕಾಧಿಕಾರಿಗಳು ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕ.ಮ.ವಾ.ಪ.ಪಂ.ಅನಿ, ಬೆಂಗಳೂರು

DIPR/CP/2896/Zenkar/2022-23

ಬನ್ನೇರುಘಟ್ಟ ಜೈವಿಕ ಉದ್ಯಾನವನ

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: bannerghattazoo@gmail.com

ಸಂಖ್ಯೆ:ಎ3/ಟಿಬಿಎ/ಟೆಂಡರ್/ಸಿವಿಲ್ ಕಾಮಗಾರಿ/ಟಿಆರ್–8/2022–23 ದಿನಾಂಕ: 29–10–2022

ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನದ ವ್ಯಾಪ್ತಿಯಲ್ಲಿ ಆಯೋಜಿಸಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಗದಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 18–11–2022ರಂದು ಸಂಜೆ 4.00 ಗಂಟೆಯಾಗಿರುತ್ತದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 21–11–2022ರಂದು ಬೆಳಿಗ್ಗೆ 11.30 ರ ನಂತರ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 24–11–2022ರಂದು ಬೆಳಿಗ್ಗೆ 11.30 ರ ನಂತರ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/2902/ಅಡ್ವರ್ಟೋ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ,
ಯೋಜನೆ ಕೇಂದ್ರ–6 ಬೃ.ಬೆಂ.ಮ.ಪಾಲಿಕೆ,, ಬೆಂಗಳೂರು–02.

ಸಂಖ್ಯೆ: ಕಾಪಾಅ/ಯೋಕೇ–6/ಟೆಂಡರ್/03/2022–23 ದಿನಾಂಕ: 03.11.2022

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) 2ನೇ ಕರೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ಬೆಂಗಳೂರಿನ ಮಹದೇವಪುರ ವಲಯದ ವಿಜಿನಾಪುರ ಮತ್ತು ದಾಸರಹಳ್ಳಿ ವಲಯದ ಶೆಟ್ಟಿಹಳ್ಳಿಯಲ್ಲಿ ಶಾಲೆ/ಕಾಲೇಜು ಕಟ್ಟಡ ನಿರ್ಮಾಣ ಮಾಡುವುದು. (2ನೇ ಕರೆ)	1261.00	15.00 ಲಕ್ಷ (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 14.11.2022ರ ಸಂಜೆ 5:30 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ದಾಖಲೆಗಳನ್ನು ಇ–ಪೋರ್ಟಲ್ ಮೂಲಕ ದಿನಾಂಕ 03.11.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ 09.11.2022ರ ಸಂಜೆ 5:30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ. (4) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ ಇಲ್ಲಿ ದಿನಾಂಕ 10.11.2022ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ 16.11.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯೋಜನೆ ಕೇಂದ್ರ–6

GOVERNMENT OF INDIA

DIRECTOR-GENERAL OF INCOME-TAX (INVESTIGATION)
Karnataka & Goa, Bengaluru

3rd Floor, Central Revenue Buildings, Queen's Road, Bengaluru-560001

NOTICE FOR EMPANELMENT OF JEWELLERS AS REGISTERED VALUERS

The Income-tax Department, Bengaluru, proposes to engage the services of **Jewellers as Registered Valuers** for its Investigation Wing for all the districts in the States of Karnataka & Goa.

Jewellers wishing to be empanelled should send in their application in the prescribed proforma - Form N - which is available at **www.incometaxbengaluru.org / https://incometaxindia.gov.in** and contains the details of qualifications as prescribed in the Wealth Tax Act / Rules, 1957.

The applicants may contact the following officer for any further clarification on this matter.

Shri. S. Sundara Raghavan, Asst. Director of Income-tax (Inv) (Hq), Room No. 309, 3rd Floor, C.R. Building, Queen's Road, Bengaluru-560001. Ph: 080-22865595.

The applications should reach the above address on or **before 21.11.2022**.

Incomplete applications are liable to be rejected without assigning any reasons. The applicants should furnish their mail-ID, Mobile Numbers in the application, for further communication.

Sd/-
Joint Director of Income-tax(Hqrs)(Inv)
For Director-General of Income-tax (Inv), Karnataka & Goa, Bengaluru.

Dated: 3.11.2022

ಕರ್ನಾಟಕ ಸರ್ಕಾರ

ಕಾರ್ಯಕಾರಿ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

e-mail: eepwdudp02@gmail.com website: www.kpwd.gov.in

ನಂ.ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–44/2022–23/ಎಇ2 ದಿನಾಂಕ: 31–10–2022

ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗೆ 'ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್' https://www.eproc.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 14–11–2022ರ ಸಂಜೆ 5.30 ಗಂಟೆವರೆಗೆ
ಅರ್ಹ ಗುತ್ತಿಗೆದಾರರು: 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಅಂದಾಜು ಮೊಬಲಗು (ರೂ. ಲಕ್ಷಗಳಲ್ಲಿ)
1.	ಬೈಲೂರು ಮಹಿಷ ಮರ್ದಿನಿ ದೇವಸ್ಥಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿ	₹ 1,22,49,940.00

ಕೆಲಸದ ಕುರಿತಾದ ಯಾವುದೇ ಇತರ ವಿವರಗಳನ್ನು ಕಚೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಸಮಗ್ರ ಶಿಕ್ಷಣ–ಕರ್ನಾಟಕ

ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560 001.

ವೆಬ್‌ಸೈಟ್: www.schooleducation.kar.nic.in, ಇ–ಮೇಲ್: ssakarnataka@gmail.com

ಸಂಖ್ಯೆ : ಸಶಿಕ/ಸ.ಶಾ/ಪ್ರೋಟೋಕಾಲ್/2022–23 ದಿನಾಂಕ: 02.11.2022

ಮರು–ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಸಮಗ್ರ ಶಿಕ್ಷಣ – ಕರ್ನಾಟಕ, ಕಛೇರಿಯಲ್ಲಿ ನಡೆಯುವ ಸಭೆಗಳಿಗೆ ಊಟೋಪಚಾರದ ಸೇವೆಗಾಗಿ ಅಲ್ಪಾವಧಿ ಮರು–ಇ–ಟೆಂಡರ್ ಆಹ್ವಾನಿಸುವ ಬಗ್ಗೆ.

ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ನಡೆಯುವ ಸಭೆಗಳಿಗೆ ಊಟೋಪಚಾರದ ಸೇವೆಗಾಗಿ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು–ಇ–ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಹಾಗೂ ಸಮಯ: 17.11.2022ರ ಸಂಜೆ 05:00 ಗಂಟೆಯವರೆಗೆ.**
2) ವಿವರಗಳಿಗಾಗಿ https://eproc.karnataka. gov.in ಗಮನಿಸುವುದು.

ಸಹಿ/–
ನಿರ್ದೇಶಕರು (ಕಾರ್ಯಕ್ರಮ)
ಸಮಗ್ರ ಶಿಕ್ಷಣ–ಕರ್ನಾಟಕ.

ವಾಸಾಸಂಇ/ವಾಪ್ರ/ಜಿಎ/2899/2022–23

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು ದೂ:0816–2278387

Email: dhotumkur@gmail.com ph:0816-2278387

ಸಂಖ್ಯೆ:DBCS:69/2022–23 ದಿನಾಂಕ: 30.10.2022

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2022–23ನೇ ಸಾಲಿಗೆ NPCB ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲೆಯಲ್ಲಿ ಕಣ್ಣಿನ ತೊಂದರೆಯುಳ್ಳ 45 ವರ್ಷ ಮೇಲ್ಪಟ್ಟ ಬಿ.ಪಿ.ಎಲ್ ಕಾರ್ಡು ಹೊಂದಿರುವ ವಯೋವೃದ್ಧರಿಗೆ ಉಚಿತ ಕನ್ನಡಕಗಳನ್ನು ವಿತರಿಸಲು ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದ್ದು, ನಿಬಂದನೆ ಹಾಗೂ ಷರತ್ತಿಗೆ ಒಳಪಟ್ಟಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ವಯ ಷರತ್ತುಗಳು:
1. ಇ–ಟೆಂಡರ್ ವಿವರಗಳನ್ನು ಅಪ್ಲೋಡ್ ಮಾಡಿರುವ ದಿನಾಂಕ: 19.10.2022
2. ಇ–ಟೆಂಡರ್‌ನಲ್ಲಿ ತಾಂತ್ರಿಕ ಬಿಡ್ ಮತ್ತು ದರ ನಮೂದಿಸುವ ಕೊನೆಯ ದಿನಾಂಕ: 18.11.2022 3. ಭರ್ತಿ ಮಾಡಿದ ಇ–ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.11.2022. 4.ಆರ್ಥಿಕ ಬಿಡ್‌ನ್ನು ತಾಂತ್ರಿಕಕ ಮತ್ತು ಕನ್ನಡ ಮಾದರಿ ಪರೀಕ್ಷೆಯ ನಂತರ, ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಮೇಲ್ಕಂಡ ಕಛೇರಿಯನ್ನು ಅಥವಾ ವೆಬ್‌ಸೈಟ್ https;/eproc.Karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

DIPR/TUM/657MCA/2022-23

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ರಾಮನಗರ ವಿಶೇಷ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/22–23/2ನೇ ಕರೆ ದಿನಾಂಕ : 02–10–2022

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2022–23 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 02 ಸಂಖ್ಯೆಯ ಅಂದಾಜು ಮೊತ್ತ ರೂ. 130.00 ಲಕ್ಷಗಳಿಂದ ರೂ. 200.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಎರಡನೇ ಕರೆಯ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು http://www.eproc.karnataka.gov.in. ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 02–11–2022 ರಿಂದ 17–11–2022 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 17–11–2022 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಪ್ರೀ–ಬಿಡ್ ಸಭೆಯ ದಿನಾಂಕ : 09–11–2022, 11.30 ಗಂಟೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 18–11–2022 ವೇಳೆ 16.30 ಗಂಟೆ. (ಸಾಧ್ಯವಾದಲ್ಲಿ). 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ನಂತರದಲ್ಲಿ ತಿಳಿಸಲಾಗುವುದು. "ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು".

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/312/ಮಣಿಪಾಲ್/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 27/2022-23 ದಿನಾಂಕ:31.10.2022.(Call-2)
ಉಲ್ಲೇಖ : ಟೆಂಡರ್ ನೋಟಿಫಿಕೇಶನ್: 23/2022-23 ದಿನಾಂಕ:14.10.2022.
(ದ್ವಿ ಟೆಂಡರ್ ದಾಖಲೆ & ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **KPWD Class-III & above** ದರ್ಜೆಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಸಾಗರ ತಾಲ್ಲೂಕಿನ ವ್ಯಾಪ್ತಿಯಲ್ಲಿಯ ಕೆರೆ ಅಭಿವೃದ್ಧಿಯ ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತ ರೂ. 67.71 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 1.40 ಲಕ್ಷಗಳು. (1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ : 31.10.2022 ರಿಂದ 08.11.2022 ಸಂಜೆ 4.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 09.11.2022 ಸಂಜೆ 5.00 ಗಂಟೆಗೆ. (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ವಾ.ಸಾ.ಸಂ.ಇ./ಶಿ/ನಂ 27-11 ಝೇಂಕಾರ್/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:KW-2,3&4:ಟೆಂ:2022–23:2797 ದಿನಾಂಕ:31.10.2022

–: ಟೆಂಡರ್ ಮುಂದೂಡುವ ಪ್ರಕಟಣೆ :–

022–23ನೇ ಸಾಲಿನ **ಲೆಕ್ಕ ಶೀರ್ಷಿಕೆ: 3054–ರಾಜ್ಯ ಹೆದ್ದಾರಿಗಳ ನಿರ್ವಹಣೆ, 3054–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW–2 3&4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಈ ಕಛೇರಿಯ ಟೆಂಡರ ಪ್ರಕಟಣೆ ಸಂಖ್ಯೆ:2582:ದಿನಾಂಕ:07–10–2022 ರಂದು ಟೆಂಡರನ್ನು ಆಹ್ವಾನಿಸಲಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಈ ಕೆಳಗಿನಂತೆ ಟೆಂಡರ ಅವಧಿ ಮುಂದೂಡಲಾಗಿದ್ದು, ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ **ವರ್ಕ ಇಂಡೆಂಟ್ ಸಂಖ್ಯೆ: 158509, 158572, 158570, 158517, 158577 & 158575 (ಒಟ್ಟು 6 ಕಾಮಗಾರಿಗಳು) ಅಂದಾಜು ಮೊತ್ತ ಗರಿಷ್ಠ ರೂ. 104.74 ಲಕ್ಷಗಳು, ಕನಿಷ್ಟ ರೂ. 35.48 ಲಕ್ಷಗಳು** ಇರುತ್ತದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 09–11–2022 ಸಮಯ 16.00 ಗಂಟೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 10–11–2022 ಸಮಯ 16.30 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 15–11–2022 ಸಮಯ 11.00 ಗಂಟೆ, ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ ಮತ್ತು ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/414/ಎಂಸಿಎ/2022–23

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಟೆಂಡರ್ ಪ್ರಕಟಣೆ ಸಂಖ್ಯೆ: 19/2022-23, Date: 31.10.2022

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು ಕೆ.ಡಬ್ಲ್ಯೂ–3 ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ PWD Class-IV and above of any State/Central Government/Public Sector organization ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ಏಕ ಲಕೋಟೆ ಪದ್ಧತಿಯಲ್ಲಿ 1 ಕಾಮಗಾರಿಗೆ, PWD Class-III and above of any State/Central Government/Public Sector organization ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ 2 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.82.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಮೊತ್ತ ರೂ.12.63ಲಕ್ಷ. ಇಎಂಡಿ ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://eproc.karnataka.gov.in ಮೂಲಕ ದಿನಾಂಕ: 09.11.2022 ರಿಂದ 24.11.2022 ರ ವರೆಗೆ ಪಡೆಯಬಹುದು (Down load), ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ 25.11.2022 ರ ಸಂಜೆ 5.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://eproc.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/691/2022–23

ಜಿಲ್ಲಾ ಪಂಚಾಯತ, ಬೆಳಗಾವಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ, ಬೆಳಗಾವಿ

ಪೋ.ನಂ:0831–2407241 ಫ್ಯಾಕ್ಸ್:0831–2407242 E-mail : ncdbelagavi2019@gmail.com

No. DSU/HWC/131/2022–23 Date: 3/11/2022

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ–2

ಬೆಳಗಾವಿ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿಯಲ್ಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರೋಗ್ಯ ಮತ್ತು ಕ್ಷೇಮ ಕಾರ್ಯಕ್ರಮದಡಿಯಲ್ಲಿ ಅಗತ್ಯವಿರುವ ಈ ಕೆಳಗಿನ ರಸಾಯನಿಕ/ಸಾಧನ ಸಲಕರಣೆ ಹಾಗೂ ವೈದ್ಯಕೀಯ ಉಪಕರಣಗಳ ಸಂಗ್ರಹಣೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ನಿಯಮ 1999–2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮೂರು (03) ಪ್ರತ್ಯೇಕ ಅಲ್ಪಾವಧಿ ಮರು ಇ–ಟೆಂಡರ್–2 ಕರೆಯಲಾಗಿದೆ. ಅರ್ಹ ತಯಾರಕರು /ಪೂರೈಕೆದಾರರು / ವಿತರಕರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

A)Tender Information

Sl No 1. Tender No and Date NO :DSU/HWC/01/2021-22 dt: 4.11.2022 Supply of MEDICAL EQUIPMENTS Approx Tender Amount (in Lakh) 141.97 EMD (in Lakh) 2.84 Sl No 2 .Tender No and Date : DSU/HWC/02/2021-22 dt: 4.11.2022 Supply of LAB EQUIPMENTS AND CONSUMABLES Approx Tender Amount (in Lakh) 84.35 EMD (in Lakh) 1.69 Sl No 3. Tender No and Date NO :DSU/HWC/19/2021-22 dt: 4.11.2022 Supply of FURNITURE Approx Tender Amount (in Lakh) 131.85 EMD (in Lakh) 2.64

A)Tender Events

Sl No 1. Events Last date to download The Tender Document Dates. 4.11.2022 11.00 AM to 13.11.2022 gÀ 4.00 PM Sl No 2. Pre Bid meeting Date and Place Dates. 8.11.2022 11.00 AM DHO Office Belagavi Sl No 3. Sample Verification Date and Place Dates. 9.11.2022 11.00 AM DHO Office Belagavi Sl No 4. Last Date of Submission of the Tender Dates. 14.11.2022 4.00 PM Sl No 5. Opening of the Technical Bid Dates. 15.11.2022 5.30 PM

ಹೆಚ್ಚಿನ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ದಲ್ಲಿ ಅಡಕಗೊಳಿಸಿದ ದಾಸ್ತಾವೇಜು ದಾಖಲೆಗಳಿಂದ ಪಡೆಯಬಹುದು ಹಾಗೂ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ಕಛೇರಿ ಬೆಳಗಾವಿ ಇಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು,
ಬೆಳಗಾವಿ.

DIPR/BGM/RO-NO-1105/MCA/2022-23

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

#10, 3ನೇ ಮಹಡಿ, ಖಾದಿಭವನ, ಜಸ್ಮಾದೇವಿಭವನ ರಸ್ತೆ, ವಸಂತನಗರ, ಬೆಂಗಳೂರು–52

ದೂರವಾಣಿ ಸಂಖ್ಯೆ: 080–29901193, ಇ–ಮೇಲ್: mdkmvstdc@gmail.com

WEB: http://www.karnataka.gov.in/kmvstdcl/Pages/home.aspx

ಸಂಖ್ಯೆ: ಕಮವಾಪಪಂಅನಿನಿ/ಟೆಂಡರ್/ಸೋಲಾರ್ ತರಬೇತಿ/2022–23/1999 ದಿನಾಂಕ: 02.11.2022

ಪ್ರಕಟಣೆ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ 2022–23ನೇ ಸಾಲಿನ ಸರ್ಕಾರದ ಆದೇಶ ಸಂಖ್ಯೆ: ಸಕಿ 42 ಎಸ್‌ಟಿಸಿ 2022 ದಿನಾಂಕ: 29.06.2022ರಲ್ಲಿ ಅನುಮೋದಿಸಿದಂತೆ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ ಸ್ವಾವಲಂಭಿಗಳನ್ನಾಗಿಸಲು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ತರಬೇತಿ ಸೋಲಾರ್ ಪ್ಯಾನಲ್ ರಿಪೇರಿ (solar panel repair and servicing of its appliances) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದು. ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಭವವುಳ್ಳ ಉತ್ತಮ ಸಂಸ್ಥೆಗಳು/ ಸಂಸ್ಥೆಗಳಿಂದ (Individual Companies/Firms) ಇ–ಪೋರ್ಟಲ್ ಮುಖಾಂತರ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಪ್ರಕಟಣೆ ಪ್ರತಿಗಳನ್ನು ಈ ಪತ್ರದ ಜೊತಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ. ಟೆಂಡರ್ ಸಲ್ಲಿಸುವ ವಿಧಾನ ನಿಬಂಧನೆಗಳು. ಇಎಂಡಿ ಮೊತ್ತದ ವಿವರಗಳ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https://eproc.karnataka.gov.in ನಲ್ಲಿ ಅಥವಾ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

1) ಇ–ಪೋರ್ಟಲ್‌ನಲ್ಲಿ ದಿನಾಂಕ: 03.11.2022 ರಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 17.11.2022 ಸಂಜೆ 5.30 ಗಂಟೆಯವರೆಗೆ ಇ–ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿದೆ. 2) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 07.11.2022 ಸಂಜೆ 04.00 ಗಂಟೆ. 3) ಇ–ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲು ಕೊನೆಯ ದಿನಾಂಕ: 17.11.2022 ಬೆಳಿಗ್ಗೆ 11.00 ಗಂಟೆ. 4) ಟೆಂಡರ್‌ಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. 5) ಕಂಡೀಷನ್ ಟೆಂಡರ್‌ಗಳನ್ನು ಮಾನ್ಯ ಮಾಡುವುದಿಲ್ಲ.

ಆಸಕ್ತ ಸಂಸ್ಥೆಗಳು/ಸಂಸ್ಥೆಗಳಿಂದ (Individual Companies/Firms) ಇ–ಟೆಂಡರ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಸಹಿ/– ಲೆಕ್ಕಾಧಿಕಾರಿಗಳು
ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕ.ಮ.ವಾ.ಪ.ಪಂ.ಅನಿ, ಬೆಂಗಳೂರು

DIPR/CP/2908/BCPL/2022-23

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ: ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು–560 038.
ದೂರವಾಣಿ:080–25196124–29
ವೆಬ್‌ಸೈಟ್: www.kuidfc.com ಇ–ಮೇಲ್: info@kuidfc.com

ಸಂಖ್ಯೆ:ಕೆಯುಐಡಿಎಫ್‌ಸಿ/ADMN/F&A/IT/KUWSMP Posts/2022–23 ದಿನಾಂಕ:03.11.2022

ಗುತ್ತಿಗೆ ಆಧಾರದ ನೇಮಕಾತಿ ಪ್ರಕಟಣೆ

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ, ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ **ಹಣಕಾಸು & ಲೆಕ್ಕಪತ್ರ, ಮಾಹಿತಿ ತಂತ್ರಜ್ಞಾನ ವಿಭಾಗ ಹಾಗೂ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" (KUWSMP), ಯೋಜನೆಗೆ, ಯೋಜನಾ ಅವಧಿಗೆ ಸೀಮಿತಗೊಳಿಸಿ ಅವಶ್ಯಕವಿರುವ ಒಟ್ಟು 11 ಹುದ್ದೆಗಳಿಗೆ ಹೆಚ್.ಆರ್.ಪಾಲಿಸಿಯನ್ವಯ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು** ಅರ್ಹ ಅಭ್ಯರ್ಥಿಗಳಿಂದ online ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರ, ವಿದ್ಯಾರ್ಹತೆ, ಅನುಭವ, ವೇತನ/ಭತ್ಯೆ, ಗುತ್ತಿಗೆ ನೇಮಕಾತಿ ಷರತ್ತುಗಳು ಹಾಗೂ ಇತರೆ ಎಲ್ಲ ಮಾಹಿತಿಗಳು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿ ನಮೂನೆಗಳು ನಿಗಮದ ಅಧಿಕೃತ ಅಂತರ್ಜಾಲ **"www.kuidfc.com/Careers"** ನಲ್ಲಿ **ದಿನಾಂಕ: 04.11.2022 ರಿಂದ** ಲಭ್ಯವಿದ್ದು, online ಮುಖಾಂತರ **ದಿನಾಂಕ 28.11.2022 ರೊಳಗಾಗಿ** ಸಲ್ಲಿಸತಕ್ಕದ್ದು. ಖುದ್ದಾಗಿ ಅಥವಾ ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ವಿದ್ಯಾರ್ಹತೆ, ಅನುಭವ ಹಾಗೂ ಇತರೆ ಸಂಬಂಧಪಟ್ಟ ದಾಖಲೆಗಳನ್ನು ಅರ್ಜಿಗಳೊಂದಿಗೆ upload ಮಾಡದಿರುವ ಅಪೂರ್ಣ ಅರ್ಜಿಗಳನ್ನು ಹಾಗೂ ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನೇಮಕಾತಿ ವಿಷಯದಲ್ಲಿ ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ), ತಾ: ಸಿಂದಗಿ, ಜಿ: ವಿಜಯಪುರ.

CIN L 85320 KA 1994 SGC 016101 ದೂರವಾಣಿ ಸಂಖ್ಯೆ: 08488–224328, ಇ–ಮೇಲ್:kbjnleerampur@gmail.com.

ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಟಿಬಿ–2/2022–23/1691 ದಿನಾಂಕ:02.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ 2022–23 ನೇ ಸಾಲಿನ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 04 ವಿಶೇಷ ದುರಸ್ತಿ ಕಾಮಗಾರಿಗೆ ರೂ: 23.00 ಲಕ್ಷಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ತೃತೀಯ ದರ್ಜೆ ಮತ್ತು ಮೇಲ್ಪಟ್ಟ ದರ್ಜೆಯ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ಏಕಮಾತ್ರ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ (http://eproc.karnataka.gov.in) ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ (http://eproc.karnataka.gov.in) ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 03.11.2022 ರಿಂದ 10.11.2022** ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸುವುದು.
2) ಗುತ್ತಿಗೆದಾರರು **ದಿನಾಂಕ: 03.11.2022 ರಿಂದ 10.11.2022** ರ ಸಾಯಂಕಾಲ 5.00 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
3) ಭರ್ತಿಗೊಳಿಸಿದ ಇ–ಟೆಂಡರ್ ಪುಸ್ತಕವನ್ನು **ದಿನಾಂಕ: 03.11.2022 ರಿಂದ 10.11.2022** ರ ಸಾಯಂಕಾಲ 5.00 ಘಂಟೆಯವರೆಗೆ ಸಲ್ಲಿಸುವದು.
4) ಕವರ್–1 (ತಾಂತ್ರಿಕ ಬಿಡ್) ಏಕಮಾತ್ರ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ **ದಿನಾಂಕ: 15.11.2022** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
5) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ (http://eproc.karnataka. gov.in) ವೆಬ್‌ಸೈಟ್ ನಿಂದ ಪಡೆಯಬಹುದು.
6) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
7) ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ ರಾಂಪೂರ (ಪಅ)

ವಾಸಾಸಂಇ/ವಿಜಯಪುರ/507/ಎಂಸಿಎ/2022–23

ಸಿಗ್ನಲ್‌ನಲ್ಲೇ ಪರದಾಡಿದ ತಾಯಿ–ಹಸುಗೂಸು

ಒಂದನೇ ಪುಟದಿಂದ

'ಮಗು ಅನಾರೋಗ್ಯದಿಂದ ಬಳಲುತ್ತಿದ್ದು, ಆಸ್ಪತ್ರೆಗೆ ಕರೆದೊಯ್ಯುವ ಗಾಬರಿಯಲ್ಲಿದ್ದರಿಂದ ಹೆಲ್ಮೆಟ್ ತರಲಾಗಲಿಲ್ಲ. ದಂಡ ಕಟ್ಟಲು ಹಣ ಕೂಡ ಇಲ್ಲ, ಗಾಡಿ ಬಿಡಿ' ಎಂದು ದಂಪತಿ ಪರಿಪರಿಯಾಗಿ ಕೇಳಿಕೊಂಡರು. ಮಗುವನ್ನು ಆಟೊರಿಕ್ಷಾದಲ್ಲಿ ಆಸ್ಪತ್ರೆಗೆ ಕರೆದೊಯ್ಯಿರಿ; ₹ 500 ದಂಡ ಕಟ್ಟದಿದ್ದರೆ ವಾಹನ ಬಿಡುವುದಿಲ್ಲ' ಎಂದು ಎಎಸ್‌ಐ ಪಟ್ಟುಹಿಡಿದರು.

ಇದರಿಂದ ಗೊಂದಲಕ್ಕೀಡಾದ ಅಭಿಷೇಕ್ ಸಿಗ್ನಲ್‌ನಲ್ಲೇ ಪತ್ನಿ-ಮಗುವನ್ನು ಬಿಟ್ಟು ಎಟಿಎಂನಿಂದ ಹಣ ತರಲು ತೆರಳಿದರು. ಹಲವು ಎಟಿಎಂ ಕೇಂದ್ರಗಳಲ್ಲಿ ತಾಂತ್ರಿಕ ತೊಂದರೆ ಇದ್ದ ಕಾರಣ ಹಣ ತರಲು ಅರ್ಧ ಗಂಟೆ ಬೇಕಾಯಿತು. ದಂಡ ಕಟ್ಟದ ನಂತರವೇ ಎಎಸ್‌ಐ ವಾಹನ ಬಿಟ್ಟು ಕಳುಹಿಸಿದರು. ಅಲ್ಲಿವರೆಗೆ ಮಳೆಯಲ್ಲೇ ತಾಯಿಯು ಮಗುವನ್ನು ಮಡಿಲಲ್ಲಿಟ್ಟುಕೊಂಡು ರಸ್ತೆ ಬದಿಯಲ್ಲಿ ಕುಳಿತಿದ್ದರು.

'ಚಳಿಯಿಂದ ನಡುಗುತ್ತಿದ್ದ ಮಗುವನ್ನು ನೋಡಿದರೂ ಪೊಲೀಸ್ ಅಧಿಕಾರಿ ದುರ್ವರ್ತನೆ ತೋರಿದರು. ಎಷ್ಟೇ ವಿನಂತಿಸಿದರೂ ಸ್ಪಂದಿಸಲಿಲ್ಲ' ಎಂದು ಸ್ಥಳದಲ್ಲಿದ್ದ ವ್ಯಕ್ತಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸೂಚನೆಗೆ ಸಿದ್ದರಾಮಯ್ಯ ಕಿಡಿ

ಶಾಲೆಗಳಲ್ಲಿ 'ಧ್ಯಾನ'ಕ್ಕೆ ತೀವ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನಿತ್ಯ 10 ನಿಮಿಷ ಧ್ಯಾನ ಮಾಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಬೇಕು' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಟಿಪ್ಪಣಿ ಕಳುಹಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

'ವಿದ್ಯಾರ್ಥಿಗಳಲ್ಲಿ ದೃಢತೆ, ಏಕಾಗ್ರತೆ, ಆರೋಗ್ಯ ವೃದ್ಧಿ, ದೈಹಿಕ ಮತ್ತು ಮಾನಸಿಕ ಒತ್ತಡ ಕಡಿಮೆಯಾಗಲು ಧ್ಯಾನ ಮಾಡಿಸುವುದು ಅಗತ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಸ್ಪಂದನೆ, ಒಳ್ಳೆಯ ಹವ್ಯಾಸ ಬೆಳೆಸಿಕೊಂಡು ಉತ್ತಮ ಪ್ರಜೆಯಾಗಲು ಸಹಕಾರಿಯಾಗುತ್ತದೆ. ಈಗಾಗಲೇ ಕೆಲವು ಶಾಲೆಗಳಲ್ಲಿ ಧ್ಯಾನ ಮಾಡಿಸಲಾಗುತ್ತಿದೆ. ಎಲ್ಲ ಶಾಲೆಗಳಲ್ಲೂ ಇದನ್ನು ಅಳವಡಿಸಲು ಅವಕಾಶ ಕಲ್ಪಿಸುವಂತೆ ರಾಜ್ಯ ಪ್ರಾಥಮಿಕ ಶಿಕ್ಷಣ ಸಂಘ ಮನವಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳಿಗೆ ಧ್ಯಾನ ಮಾಡಿಸಲು ಸಮಯ ನಿಗದಿಪಡಿಸಬೇಕು' ಎಂದೂ ಟಿಪ್ಪಣಿಯಲ್ಲಿ ಸಚಿವರು ಉಲ್ಲೇಖಿಸಿದ್ದಾರೆ.

ಸಿದ್ದರಾಮಯ್ಯ ಟೀಕೆ: 'ಕೋವಿಡ್ ಅನ್ನು ಸರಿಯಾಗಿ ನಿಯಂತ್ರಿಸಲಾಗದೆ ಶಾಲೆಗಳನ್ನು ಮುಚ್ಚಿ, ಆನ್‌ಲೈನ್ ತರಗತಿಗಳ ಮೂಲಕ ವಿದ್ಯಾರ್ಥಿಗಳಲ್ಲಿ ಮೊಬೈಲ್ ಹುಚ್ಚು ಹಚ್ಚಿಸಿರುವ ಬಿಜೆಪಿ ಸರ್ಕಾರ, ಈಗ ಆ ಹುಚ್ಚು ಬಿಡಿಸಲು ಧ್ಯಾನ ನಡೆಸಲು ಮುಂದಾಗಿರುವುದು ಹುಚ್ಚುತನವಲ್ಲದೆ ಮತ್ತೇನು?' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಯೋಗ-ಧ್ಯಾನ ಯಾವುದಕ್ಕೂ ನನ್ನ ವಿರೋಧ ಇಲ್ಲ. ಆದರೆ, ಶಾಲೆಗಳಲ್ಲಿ ಯಾವುದು ಮುಖ್ಯ. ಶಿಕ್ಷಣ ಸಚಿವ ಯಾವುದಕ್ಕೆ ಆದ್ಯತೆ ನೀಡಬೇಕು ಎನ್ನುವುದಷ್ಟೇ ಪ್ರಶ್ನೆ' ಎಂದಿದ್ದಾರೆ.

'ಎಳೆಯ ಮಕ್ಕಳನ್ನು ಕೋಣೆಯಲ್ಲಿ ಕೂಡಿ ಹಾಕಿ ಬಲವಂತವಾಗಿ ಯೋಗ-ಧ್ಯಾನಗಳ ಕಸರತ್ತು ಮಾಡಿಸಿದರೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಇನ್ನಷ್ಟು ಕುಗ್ಗಿ ಹೋಗುತ್ತಾರೆ. ಮೊದಲು ಅಗತ್ಯ ಸಂಖ್ಯೆಯಲ್ಲಿ ಶಿಕ್ಷಕರನ್ನು ನೇಮಿಸಿ ಅವಶ್ಯಕವಾದ ಬೋಧನಾ ಸಲಕರಣೆಗಳನ್ನು ಸರ್ಕಾರ ಒದಗಿಸಬೇಕು. ಶಾಲೆಗಳಲ್ಲಿ ಕಲೆ, ಸಂಗೀತ ಮತ್ತು ಕ್ರೀಡೆಗಳಲ್ಲಿ ತರಬೇತಿ ನೀಡುವ ಶಿಕ್ಷಕರನ್ನು ನೇಮಿಸಬೇಕು. ಅದನ್ನು ಬಿಟ್ಟು ರಾಜಕೀಯ ಕಾರ್ಯಸೂಚಿಗಾಗಿ ಮಕ್ಕಳ ಬದುಕಿನಲ್ಲಿ ಚೆಲ್ಲಾಟ ಆಡಬಾರದು' ಎಂದೂ ಹೇಳಿದ್ದಾರೆ.

'ಸಚಿವರ ನಡೆ ಕಾನೂನುಬಾಹಿರ'

ಬೆಂಗಳೂರು: 'ಸಾಂವಿಧಾನಿಕವಾಗಿ ಮತ್ತು ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ಸಮಾನತೆ ನೆಲೆಯಲ್ಲಿ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸುವುದನ್ನು ಬಿಟ್ಟು ಶಿಕ್ಷಣ ಸಚಿವರು ಏಕಪಕ್ಷೀಯ ತೀರ್ಮಾನಗಳಿಂದ ದಿನಕ್ಕೊಂದು ಹೊಸ ಬಗೆಯ ವಿವಾದಗಳನ್ನು ಹುಟ್ಟು ಹಾಕುತ್ತಿದ್ದಾರೆ. ಜಾತ್ಯತೀತ, ವೈಜ್ಞಾನಿಕ ನೆಲೆಯಲ್ಲಿ ಆಧುನಿಕ ಶಿಕ್ಷಣ ನೀಡುವ ಬದಲು, ಶಾಲಾ ಶಿಕ್ಷಣವನ್ನು ಅಸ್ತವ್ಯಸ್ತಗೊಳಿಸಲು ಪಣ ತೊಟ್ಟಂತೆ ವರ್ತಿಸುತ್ತಿದ್ದಾರೆ' ಎಂದು ಲೇಖಕರು, ಸಾಹಿತಿಗಳು ಜಂಟಿ ಹೇಳಿಕೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿ.ಪಿ. ನಿರಂಜನಾರಾಧ್ಯ, ಎಸ್.ಜಿ. ಸಿದ್ದರಾಮಯ್ಯ, ವಿಜಯಮ್ಮ, ಕಾಳೇಗೌಡ ನಾಗವಾರ, ಹಿ.ಶಿ. ರಾಮಚಂದ್ರೇಗೌಡ, ಡಾ. ಶ್ರೀನಿವಾಸ ಕಕ್ಕಿಲ್ಲಾಯ, ಪಿ.ವಿ. ಭಂಡಾರಿ, ಡಾ. ಯೋಗಾನಂದ ರೆಡ್ಡಿ ಈ ಹೇಳಿಕೆ ನೀಡಿದ್ದಾರೆ.

'ಇಲಾಖೆ ಸೂಚಿಸದೇ ಇರುವ ಧ್ಯಾನ ಇತ್ಯಾದಿಗಳನ್ನು ಶಾಲೆಗಳಲ್ಲಿ ನಡೆಸುವುದಕ್ಕೆ ಶಿಕ್ಷಕರ ಸಂಘಕ್ಕೆ ಅಧಿಕಾರ ಇಲ್ಲ. ಅವು ಈಗಾಗಲೇ ಹಾಗೆ ಮಾಡಿರುವುದು ನ್ಯಾಯಬಾಹಿರ. ಅದನ್ನು ಸಮರ್ಥಿಸಿ, ವಿಸ್ತರಿಸಲು ಹೇಳುತ್ತಿರುವ ಸಚಿವರ ನಡೆ ವಿಷಾದನೀಯವೂ, ಆಘಾತಕಾರಿಯೂ ಆಗಿದೆ. ಸರ್ವಾಧಿಕಾರಿಯಂತೆ ವರ್ತಿಸುತ್ತಿರುವ ಸಚಿವರ ನಡೆಯನ್ನು ಒಕ್ಕೊರಲಿನಿಂದ ಖಂಡಿಸುತ್ತೇವೆ. ಸರ್ಕಾರಿ ಶಾಲೆಗಳನ್ನು ಸರಸ್ವತಿ ಶಿಶು ಮಂದಿರಗಳನ್ನಾಗಿಸಲು ಸಚಿವರು ಹುನ್ನಾರ ನಡೆಸುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

'ಈ ಸರ್ಕಾರ ಸಂವೇದನಾರಹಿತವೂ, ಅವೈಜ್ಞಾನಿಕವೂ ಆಗಿದೆ ಎನ್ನುವುದಕ್ಕೆ ಈ ಟಿಪ್ಪಣಿ ಸ್ಪಷ್ಟ ಪುರಾವೆ. ಕೋವಿಡ್ ಸಮಯದಲ್ಲಿ ಸುಮಾರು ಎರಡು ವರ್ಷ ಶಾಲೆಗಳನ್ನು ಮುಚ್ಚಿ, ಮಕ್ಕಳನ್ನು ಕಲಿಕೆಯಿಂದ ವಂಚಿತರಾಗಿಸಿ, ಆನ್‌ಲೈನ್ ಶಿಕ್ಷಣದ ನೆಪದಲ್ಲಿ ಮೊಬೈಲ್ ಸಾಧನಗಳ ದಾಸ್ಯಕ್ಕೆ ತಳ್ಳಿದ ಸರ್ಕಾರ, ಈಗ ಅದಕ್ಕೆ ಪರಿಹಾರವಾಗಿ ಧ್ಯಾನ ಮಾಡಬೇಕೆಂದು ಸುತ್ತೋಲೆ ಹೊರಡಿಸುತ್ತಿರುವುದು ಇನ್ನೂ ದೊಡ್ಡ ಅಪಚಾರ' ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿ 2 ನಿಮಿಷ

ಕರ್ನಾಟಕ– ಮಹಾರಾಷ್ಟ್ರ ರಾಜ್ಯಪಾಲರ ಸಭೆ ಇಂದು

ಬೆಳಗಾವಿ: ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗದ ಜನಜೀವನ ಸುಧಾರಣೆ ಹಾಗೂ ಮೂಲ ಸಮಸ್ಯೆಗಳ ನಿವಾರಣೆಗೆ ಚರ್ಚಿಸಲು, ಶುಕ್ರವಾರ ಕೊಲ್ಹಾಪುರದ ಛತ್ರಪತಿ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಎರಡೂ ರಾಜ್ಯಗಳ ರಾಜ್ಯಪಾಲರ ನೇತೃತ್ವದಲ್ಲಿ ಸಭೆ ನಡೆಯಲಿದೆ.

ಕರ್ನಾಟಕದ ಥಾವರ್‌ಚಂದ್ ಗೆಹಲೋತ್ ಹಾಗೂ ಮಹಾರಾಷ್ಟ್ರ ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಈ ಸಭೆ ಕರೆದಿದ್ದಾರೆ. ರಾಜ್ಯದಿಂದ ಬೆಳಗಾವಿ, ವಿಜಯಪುರ, ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಮಹಾರಾಷ್ಟ್ರದ ಅಧಿಕಾರಿಗಳೂ ಚರ್ಚೆಯಲ್ಲಿ ಪಾಲ್ಗೊಳ್ಳುವರು.

ಕುಡಿಯುವ ನೀರು, ನೀರಾವರಿ, ರಸ್ತೆ, ಶೈಕ್ಷಣಿಕ ಸಮಸ್ಯೆಗಳ ಚರ್ಚೆ, ಅಪರಾಧ ಕೃತ್ಯಗಳ ನಿಯಂತ್ರಣ ಸಂಬಂಧ ಈ ಸಭೆ ಮಹತ್ವ ಪಡೆದಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

'ಇದು ಗಡಿ ವಿವಾದಕ್ಕೆ ಸಂಬಂಧಿಸಿದ ಸಭೆ ಅಲ್ಲ. ಗಡಿಭಾಗದ ಜನರ ಜೀವನಕ್ಕೆ ಸಂಬಂಧಿಸಿದೆ. ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಪರಿಹಾರ ಕಂಡುಕೊಳ್ಳಲಾಗುವುದು. ಎರಡೂ ರಾಜ್ಯಗಳ ಅಧಿಕಾರಿಗಳ ನಡುವೆ ಇರಬೇಕಾದ ಸಂವಹನದ ಬಗ್ಗೆಯೂ ಚರ್ಚೆ ನಡೆಯಲಿದೆ' ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.



ಕ್ರಮಕ್ಕಾಗಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಮನವಿ

ಜೈಲಿನಲ್ಲಿ ಮುರುಘರಿಗೆ ವಿಶೇಷ ಆತಿಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮದೇ ಮಠದಲ್ಲಿ ವ್ಯಾಸಂಗ ಮಾಡುತ್ತಿದ್ದ ಹಲವು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ) ಮತ್ತು ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಆರೋಪದಡಿ ಜೈಲಿನಲ್ಲಿರುವ ಚಿತ್ರದುರ್ಗ ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರಿಗೆ ವಿಶೇಷ ಆತಿಥ್ಯ ಕಲ್ಪಿಸಲಾಗುತ್ತಿದ್ದು, ಈ ಸಂಬಂಧ ಚಿತ್ರದುರ್ಗ ಬಂದಿಖಾನೆಯ ಸೂಪರಿಂಟೆಂಡೆಂಟ್ ವಿರುದ್ಧ ಸೂಕ್ತ ಕ್ರಿಮಿನಲ್ ಕಾನೂನು ಕ್ರಮ ಜರುಗಿಸಬೇಕು' ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ (ಸಿಜೆ) ಮನವಿ ಮಾಡಲಾಗಿದೆ.

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಕಾರ್ಯಕರ್ತ ಟಿ.ನರಸಿಂಹ ಮೂರ್ತಿ ಈ ಕುರಿತಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರಿಗೆ ಲಿಖಿತ ಮನವಿ ಸಲ್ಲಿಸಿದ್ದು, ಚಿತ್ರದುರ್ಗ ಬಂದಿಖಾನೆಯ ಸೂಪರಿಂಟೆಂಡೆಂಟ್ ಅವರು ಜೈಲು ಕೈಪಿಡಿ ಉಲ್ಲಂಘಿಸಿರುವ ಬಗ್ಗೆ ಅಧಿಕೃತ ವಿವರಗಳನ್ನು ಒದಗಿಸಿದ್ದಾರೆ.

ನರಸಿಂಹಮೂರ್ತಿ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಚಿತ್ರದುರ್ಗ ಜಿಲ್ಲಾ ಜೈಲು ಸೂಪರಿಂಟೆಂಡೆಂಟ್ ಅವರಿಂದ ಪಡೆದಿರುವ ದಾಖಲೆಗಳ ಅನುಸಾರ ಮುರುಘಾ ಶ್ರೀಗಳನ್ನು (ಕೈದಿ ನಂಬರ್ 2611) 2022ರ ಸೆಪ್ಟೆಂಬರ್ 7ರಿಂದ ಸೆಪ್ಟೆಂಬರ್ 29ರ ಮಧ್ಯದ 23 ದಿನಗಳ ಅವಧಿಯಲ್ಲಿ ಮುರುಘಾಮಠದ ಹಂಗಾಮಿ ಆಡಳಿತಾಧಿಕಾರಿ ಎಸ್.ಬಿ.ವಸ್ತ್ರದಮಠ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿ, ಬಸವ ಮಾಚಿದೇವ ಸ್ವಾಮಿ, ಬಸವ ಶಾಂತಲಿಂಗ ಸ್ವಾಮಿ ಸೇರಿದಂತೆ ಒಟ್ಟು 20 ಜನರು ಭೇಟಿ ಮಾಡಿದ್ದಾರೆ.

'ಭಾರತದಲ್ಲಿನ ಜೈಲುಗಳ ನಿರ್ವಹಣೆ ನಿಟ್ಟಿನಲ್ಲಿ ಸೂಪರಿಂಟೆಂಡೆಂಟ್‌ಗಳಿಗಾಗಿ 2003ರಲ್ಲಿ ರೂಪಿಸಲಾಗಿರುವ ಮಾದರಿ ಜೈಲು ಕೈಪಿಡಿ ಅನುಸಾರ ಕೈದಿಗಳ ಕುಟುಂಬದ ಸದಸ್ಯರು, ಬಂಧುಗಳು, ಸ್ನೇಹಿತರು ಮತ್ತು ಕಾನೂನು ಸಲಹೆಗಾರರು ಹದಿನೈದು ದಿನಗಳಲ್ಲಿ ಒಮ್ಮೆ ಮಾತ್ರವೇ ಜೈಲಿನಲ್ಲಿ ಸಂದರ್ಶಿಸಲು ಅವಕಾಶ ಇದೆ. ಆದರೆ, ಈ ಪ್ರಕರಣದಲ್ಲಿ ಶ್ರೀಗಳನ್ನು ಬೇಕೆಂದವರು ಬೇಕೆಂದಾಗಲೆಲ್ಲಾ ನಿಯಮ ಮೀರಿ ಭೇಟಿಯಾಗಿದ್ದಾರೆ. ಇದು ಜೈಲಿನಲ್ಲಿ ಅವರಿಗೆ ವಿಶೇಷ ಆತಿಥ್ಯ ನೀಡುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ' ಎಂದು ಮನವಿಯಲ್ಲಿ ದೂರಲಾಗಿದೆ.

ಕಾರಾಗೃಹಗಳ ಎಡಿಜಿಪಿ ಮತ್ತು ಐಜಿ ಅವರನ್ನು ಉದ್ದೇಶಿಸಿ ಬರೆಯಲಾಗಿರುವ ಈ ಮನವಿ ಪತ್ರದ ಪ್ರತಿಯನ್ನು ಸಿಜೆ ಮತ್ತು ಗೃಹ ಮಂತ್ರಿಗಳಿಗೂ ರವಾನಿಸಲಾಗಿದೆ.

ಶಿವಮೂರ್ತಿ ಶರಣರು ಮತ್ತೆ ಪೊಲೀಸ್ ವಶಕ್ಕೆ

ಚಿತ್ರದುರ್ಗ: ಪೋಕ್ಸೊ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿ ಬಂಧಿತರಾಗಿರುವ ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಎರಡನೇ ಪ್ರಕರಣದ ವಿಚಾರಣೆಗಾಗಿ ಗುರುವಾರ ಪೊಲೀಸ್ ವಶಕ್ಕೆ ನೀಡಲಾಗಿದೆ.



ಶಿವಮೂರ್ತಿ ಮುರುಘಾ ಶರಣ

ನ್ಯಾಯಾಂಗ ಬಂಧನದ ಅವಧಿ ಮುಕ್ತಾಯವಾಗಿದ್ದರಿಂದ ಮುರುಘಾಶ್ರೀ ಸೇರಿ ಮೂವರು ಆರೋಪಿಗಳನ್ನು ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಎರಡನೇ ಪ್ರಕರಣದ ತನಿಖೆ ನಡೆಸುತ್ತಿರುವ ಗ್ರಾಮಾಂತರ ಠಾಣೆಯ ಪೊಲೀಸರು ಶಿವಮೂರ್ತಿ ಮುರುಘಾ ಶರಣರನ್ನು ಎಂಟು ದಿನ ತಮ್ಮ ವಶಕ್ಕೆ ನೀಡುವಂತೆ ನ್ಯಾಯಾಧೀಶರಿಗೆ ಮನವಿ ಸಲ್ಲಿಸಿದರು.

ಎಂಟು ದಿನ ಪೊಲೀಸ್ ವಶಕ್ಕೆ ನೀಡುವುದಕ್ಕೆ ಶರಣರ ಪರ ವಕೀಲರು ಆಕ್ಷೇಪ ಸಲ್ಲಿಸಿದರು. ನ.5ರ ಸಂಜೆ 4 ಗಂಟೆಯವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಬಿ.ಕೆ. ಕೋಮಲಾ ಆದೇಶ ನೀಡಿದರು.

ಪೋಕ್ಸೊ ಪ್ರಕರಣದ 2ನೇ ಆರೋಪಿ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಹಾಗೂ 4ನೇ ಆರೋಪಿ ಪರಮಶಿವಯ್ಯ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ನ.8 ರವರೆಗೆ ವಿಸ್ತರಿಸಿದರು.

ಮುರುಘಾಶ್ರೀ ಅವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ಪೊಲೀಸರು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ಬಳಿಕ ಡಿವೈಎಸ್‌ಪಿ ಕಚೇರಿಗೆ ಕರೆತಂದು ತನಿಖಾಧಿಕಾರಿ ಬಾಲಚಂದ್ರ ನಾಯ್ಕ್ ನೇತೃತ್ವದ ತಂಡ ವಿಚಾರಣೆಗೆ ಒಳಪಡಿಸಿತು.

ರೇಣುಕಾಚಾರ್ಯ ತಮ್ಮನ ಮಗ ಶವವಾಗಿ ಪತ್ತೆ

ಒಂದನೇ ಪುಟದಿಂದ...

ಕಾರಿನ ಹಿಂಬದಿ ಸೀಟಿನಲ್ಲಿ ಕೊಳೆತ ಸ್ಥಿತಿಯಲ್ಲಿ ಮೃತದೇಹವೂ ಪತ್ತೆಯಾಗಿದೆ. ಕಾರು ನಜ್ಜುಗುಜ್ಜಾಗಿದೆ. ಕಾರಲ್ಲಿ ಒಬ್ಬರೇ ಇದ್ದು, ಶವವು ಹಿಂಬದಿ ಸೀಟಿನಲ್ಲಿ ಕಂಡುಬಂದಿದ್ದರಿಂದ ಸಂಶಯ ಮೂಡಿದೆ. 'ಇದೊಂದು ಅಪಘಾತವೇ, ಆತ್ಮಹತ್ಯೆಯೇ, ಕೊಲೆಯೇ' ಎಂಬುದು ಇನ್ನೂ ಖಚಿತವಾಗಿಲ್ಲ.

'ಮೃತದೇಹ ಪತ್ತೆಯಾದ ರೀತಿ ನೋಡಿದರೆ ಅನುಮಾನಗಳು ಮೂಡುತ್ತಿವೆ. ಈ ಬಗ್ಗೆ ತನಿಖೆ ನಡೆದು ಸತ್ಯ ಹೊರಬರಬೇಕು' ಎಂದು ಸ್ಥಳದಲ್ಲಿದ್ದ ಎಂ.ಪಿ. ರೇಣುಕಾಚಾರ್ಯ ಆಗ್ರಹಿಸಿದ್ದಾರೆ.. ಎಸ್ಪಿ ಸಿ.ಬಿ. ರಿಷ್ಯಂತ್ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಎಲ್ಲ ಆಯಾಮಗಳಲ್ಲಿ ತನಿಖೆ(ಬೆಂಗಳೂರು ವರದಿ): 'ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ತಮ್ಮನ ಮಗನ ಸಾವಿನ ಪ್ರಕರಣವನ್ನು ಎಲ್ಲ ಆಯಾಮಗಳಲ್ಲಿ ತನಿಖೆ ಮಾಡಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಕೋಡಿಹಳ್ಳಿ– ಬಸವರಾಜಪ್ಪ ಬಣಗಳ ನಡುವೆ ವಾಗ್ವಾದ

ದಾವಣಗೆರೆ: ರೈತ ಸಂಘದ ಹೆಸರಿಗೆ ಕೋಡಿಹಳ್ಳಿ ಚಂದ್ರಶೇಖರ್ ಅವರು ಮಸಿ ಬಳಿದಿದ್ದಾರೆ. ಅವರನ್ನು ರೈತ ಸಂಘದಿಂದ ಹೊರಹಾಕಲಾಗಿದೆ ಎಂದು ರೈತ ಸಂಘದ ಎಚ್.ಆರ್ ಬಸವರಾಜಪ್ಪ ಬಣದ ಕೆಲವು ರೈತರು ಇಲ್ಲಿನ ಎಪಿಎಂಸಿ ಆವರಣದಲ್ಲಿ ಗುರುವಾರ ಕೈಗೆ ಕಪ್ಪುಪಟ್ಟಿ ಧರಿಸಿ, ಧಿಕ್ಕಾರ ಕೂಗಿದ್ದರಿಂದ ಉಭಯ ಬಣಗಳ ನಡುವೆ ವಾಕ್ಸಮರ ನಡೆದಿದ್ದು, ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

'ರೈತ ಸಂಘದ ರಾಜ್ಯ ಸಮಿತಿ ಸಭೆ ಹಾಗೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಕೋಡಿಹಳ್ಳಿ ಚಂದ್ರಶೇಖರ್ ನಗರಕ್ಕೆ ಬರುತ್ತಿದ್ದಾರೆ' ಎಂಬ ಸುದ್ದಿ ತಿಳಿದು ಎಪಿಎಂಸಿ ಆವರಣಕ್ಕೆ ಬಂದಿದ್ದ ಎಚ್.ಆರ್. ಬಸವರಾಜಪ್ಪ ಬಣದ ಸದಸ್ಯರು, 'ಕೋಡಿಹಳ್ಳಿ ಚಂದ್ರಶೇಖರ್ ರೈತರ ಹಣ ಲೂಟಿ ಹೊಡೆದು, ರೈತ ಸಂಘದ ಹೆಸರು ಕೆಡಿಸಿದ್ದಾರೆ' ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಬಣದ ರೈತರು ರೊಚ್ಚಿಗೆದ್ದಿದ್ದರಿಂದ ಎರಡೂ ಬಣಗಳ ನಡುವೆ ವಾಗ್ವಾದ ನಡೆಯಿತು. ವಾದ, ವಿವಾದವು ಅತಿರೇಕಕ್ಕೆ ಹೋಗುತ್ತಿದ್ದಂತೆಯೇ ಪೊಲೀಸರು ಎರಡೂ ಬಣದ ರೈತರನ್ನು ಚದುರಿಸಿದರು.

ಅರಣ್ಯ ಅಧಿಕಾರಿಗಳಿಗೆ ಸಿಎಂ ಚಾಟಿ

ಬೆಂಗಳೂರು: 'ಬೆಂಗಳೂರಿನಲ್ಲಿ 35–36 ಐಎಫ್‌ಎಸ್ ಅಧಿಕಾರಿಗಳು ಠಿಕಾಣಿ ಹೂಡಿದ್ದೀರಿ. ಕಾಡುಗಳತ್ತ ಯಾರೂ ಹೋಗುತ್ತಿಲ್ಲ. ಅಲ್ಲಿ ಏನು ನಡೆಯುತ್ತಿದೆ ಎಂದು ನಿಗಾ ವಹಿಸುವ ಕೆಲಸ ಆಗುತ್ತಿಲ್ಲ. ಬಂದ ಪ್ರಸ್ತಾವನೆಗಳ ಬಗ್ಗೆ ಯಾವುದೇ ಪರಿಶೀಲನೆ ನಡೆಸದೆ ಯಥಾವತ್ತಾಗಿ ಸಭೆಯ ಮುಂದಿಡುತ್ತೀರಿ' ಎಂದು ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಅರಣ್ಯ ಅಧಿಕಾರಿಗಳ ವಿರುದ್ಧ ಮುಖ್ಯಮಂತ್ರಿ ಬೊಮ್ಮಾಯಿ ಕಿಡಿಕಾರಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ನಡೆದ ಸಭೆಯಲ್ಲಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಅರಣ್ಯ ಪ್ರದೇಶದ ಮೂಲಕ ಪೈಪ್‌ಲೈನ್ ಅಳವಡಿಸುವ ಕುರಿತ 5–6 ಪ್ರಸ್ತಾವನೆಗಳಿಗೆ ಮಾತ್ರ ಅನುಮೋದನೆ ನೀಡಲಾಗಿದೆ. ಉಳಿದ ಎಲ್ಲ ಪ್ರಸ್ತಾವನೆಗಳನ್ನು ಮುಂದೂಡಲಾಗಿದೆ.

ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ವನ್ಯಜೀವಿ ಮಂಡಳಿಯ ಸದಸ್ಯರು ಬಯಸಿದರೆ ಅವರನ್ನೂ ಜೊತೆಗೆ ಕರೆದೊಯ್ದು ಎಲ್ಲ ಪ್ರಸ್ತಾವನೆಗಳ ಬಗ್ಗೆ ಪರಿಶೀಲನೆ ನಡೆಸಿ ಸಭೆಗೆ ಬರಬೇಕು' ಎಂದು ಸೂಚಿಸಿದ್ದಾರೆ.

'ಕೆಲವು ಪ್ರಸ್ತಾವನೆಗಳ ಕುರಿತಂತೆ ಕಾನೂನು ವ್ಯಾಪ್ತಿಯಲ್ಲೂ ಚರ್ಚಿಸಬೇಕಾಗುತ್ತದೆ. ಹೀಗಾಗಿ, ಕಾನೂನು ಸಚಿವರನ್ನು ಮಂಡಳಿಯ ಸದಸ್ಯರನ್ನಾಗಿ ಮಾಡಿ ಮುಂದಿನ ಸಭೆಗೆ ಆಹ್ವಾನಿಸಬೇಕು. ಕೆಲವು ಕಾನೂನು ಗೊಂದಲಗಳನ್ನು ಸಭೆಯಲ್ಲಿಯೇ ಪರಿಹರಿಸಿಕೊಂಡು ಅನುಮೋದನೆ ನೀಡಬಹುದು' ಎಂದಿದ್ದಾರೆ.

'ಪ್ರಾಣಿಗಳಿಂದ ಮನುಷ್ಯರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಮಾತನಾಡುವ ನಾವು, ಅವುಗಳಿಗೆ ಎಷ್ಟು ಕಾಟ ಕೊಡುತ್ತಿದ್ದೇವೆ ಎಂಬ ಬಗ್ಗೆ ಯೋಚಿಸುವುದೇ ಇಲ್ಲ. ನಿಯಮಿತವಾಗಿ ಕಾಡಿಗೆ ಹೋದರೆ ಆ ವಾಸ್ತವವನ್ನು ಅರಿಯಲು ಸಾಧ್ಯ' ಎಂದೂ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

'ಹೆಸರಘಟ್ಟ: ಅಭಿಪ್ರಾಯ ಸಂಗ್ರಹಿಸಿ'

'ಹೆಸರಘಟ್ಟದ ಹುಲ್ಲುಗಾವಲು ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸುವ ಕುರಿತ ಪ್ರಸ್ತಾವನೆಯನ್ನು ರಾಜ್ಯ ವನ್ಯಜೀವಿ ಮಂಡಳಿ ಸಭೆಗೆ ಮಂಡಿಸುವ ಮೊದಲು, ಸಾರ್ವಜನಿಕವಾಗಿ ಅಹವಾಲು ಆಲಿಸಬೇಕು' ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.

ಹಾವೇರಿ ತಹಶೀಲ್ದಾರ್ ಗಿರೀಶ ಸ್ವಾದಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿಯ ತಹಶೀಲ್ದಾರ್ ಗಿರೀಶ ಸ್ವಾದಿ ಅವರು ಮೂರು ದಿನಗಳಿಂದ ನಾಪತ್ತೆಯಾಗಿರುವ ಬಗ್ಗೆ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅವರ ಮೊಬೈಲ್ ಸ್ವಿಚ್ ಆಫ್ ಆಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಗಿರೀಶ ಸ್ವಾದಿ

ಅ.31ರಂದು ರಾತ್ರಿ 9.30ಕ್ಕೆ ತಹಶೀಲ್ದಾರ್ ಗಿರೀಶ್ ಸ್ವಾದಿ ಅವರು, ತಮಗೆ ಪರಿಚಿತರಿರುವ ಬೆಳಗಾವಿಯ ಅಜಂ ನಗರದ ಜಹೂರ ಅಂಗಡಿ ಅವರ ಮೊಬೈಲ್‌ನಿಂದ ಪತ್ನಿ ಭಾಗ್ಯಶ್ರೀ ಅವರಿಗೆ ಕಡೆಯ ಬಾರಿ ಕರೆ ಮಾಡಿದ್ದರು.

'ರಾತ್ರಿ ನಾನು ಮನೆಗೆ ಬರುವುದಿಲ್ಲ. ನಾಳೆ ನವೆಂಬರ್ 1 ಕರ್ನಾಟಕ ರಾಜ್ಯೋತ್ಸವ ಇದೆ. ಇಲ್ಲೇ ಹಾವೇರಿಯ ಪ್ರವಾಸಿ ಮಂದಿರದಲ್ಲಿ ಇಲ್ಲವೇ ಹಾನಗಲ್ ರಸ್ತೆಯಲ್ಲಿರುವ ಶಿವಾ ರೆಸಿಡೆನ್ಸಿಯಲ್ಲಿ ಉಳಿದುಕೊಳ್ಳುತ್ತೇನೆ' ಎಂದು ಪತಿ ಹೇಳಿದ್ದಾಗಿ ಭಾಗ್ಯಶ್ರೀ ಅವರು ದೂರಿನಲ್ಲಿ ತಿಳಿಸಿದ್ದಾರೆ.

> **ಗಿರೀಶ ಸ್ವಾದಿ ಅನಾರೋಗ್ಯದ ನಿಮಿತ್ತ ನ.3ರಿಂದ ಒಂದು ತಿಂಗಳು ರಜೆ ಹಾಕಿದ್ದಾರೆ. ಬ್ಯಾಡಗಿ ತಹಶೀಲ್ದಾರ್ ಅವರಿಗೆ ಹೆಚ್ಚುವರಿ ಕಾರ್ಯಭಾರ ಕೊಟ್ಟಿದ್ದೇನೆ**
>
> **ರಘುನಂದನಮೂರ್ತಿ,** ಹಾವೇರಿ ಜಿಲ್ಲಾಧಿಕಾರಿ

ನವೆಂಬರ್ 1ರಂದು ಬೆಳಿಗ್ಗೆ 6 ಗಂಟೆಗೆ ಕಚೇರಿಯ ವಾಹನ ಚಾಲಕ ಹಾವೇರಿಯ ಸಿದ್ದೇಶ್ವರ ನಗರದ ತಹಶೀಲ್ದಾರ್ ಅವರ ಮನೆಗೆ ಬಂದು ವಿಚಾರಿಸಿದಾಗ, ತಹಶೀಲ್ದಾರ್ ಅವರು ರಾತ್ರಿ ಮನೆಗೆ ಬಂದಿಲ್ಲ ಎಂದು ಪತ್ನಿ ತಿಳಿಸಿದ್ದಾರೆ. ನಂತರ ಕುಟುಂಬಸ್ಥರು ಮತ್ತು ಕಚೇರಿಯ ಸಿಬ್ಬಂದಿ ಶಿವಾ ರೆಸಿಡೆನ್ಸಿಗೆ ಹೋಗಿ ವಿಚಾರಿಸಿದಾಗ, ನ.1ರಂದು ಬೆಳಗಿನ ಜಾವ 5 ಗಂಟೆಗೆ 112ನೇ ಕೊಠಡಿಯನ್ನು ಖಾಲಿ ಮಾಡಿ, ಏನೂ ಹೇಳದೇ ಹೋಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

'ಬೆಳಗಾವಿ ಮೂಲದವರಾದ ಗಿರೀಶ ಸ್ವಾದಿ ಅವರು ಹಾವೇರಿ ಮನೆಗೆ ಬಂದಿದ್ದಾರೆ. ಅನಾರೋಗ್ಯದ ನಿಮಿತ್ತ ಕಚೇರಿಗೆ ಎರಡು ದಿನ ಗೈರು ಹಾಜರಾಗಿದ್ದರು. ಮತ್ತೆ, ಅನಾರೋಗ್ಯದ ನಿಮಿತ್ತ ಒಂದು ತಿಂಗಳು ರಜೆ ಬೇಕು ಎಂದು ಜಿಲ್ಲಾಧಿಕಾರಿ ಕಚೇರಿಗೆ ಮನವಿಪತ್ರ ಸಲ್ಲಿಸಿದ್ದಾರೆ' ಎಂದು ಉಪವಿಭಾಗಾಧಿಕಾರಿ ಶಿವಾನಂದ ಉಳ್ಳೇಗಡ್ಡಿ ಮಾಹಿತಿ ನೀಡಿದ್ದಾರೆ.

ಸತ್ಯಾಂಶ ಹೊರಬರಲಿ: 'ಅತಿವೃಷ್ಟಿಯಿಂದ ತಾಲ್ಲೂಕಿನಲ್ಲಿ ಸಂಭವಿಸಿದ ಮನೆ ಕುಸಿತ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡುವಲ್ಲಿ ಉಂಟಾದ ಗೊಂದಲ ಮತ್ತು ಕೆಲಸದ ಒತ್ತಡದಿಂದ ಬೇಸತ್ತು ತಹಶೀಲ್ದಾರ್ ತಮ್ಮ ಮೊಬೈಲ್ ಅನ್ನು ಸ್ವಿಚ್ ಆಫ್ ಮಾಡಿಕೊಂಡು ಏಕಾಏಕಿ ಕಚೇರಿಗೆ ಗೈರು ಹಾಜರಾಗಿದ್ದಾರೆ' ಎಂದು ಕಚೇರಿಯ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ತಾಲ್ಲೂಕಿನಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾದ ಈ ಪ್ರಕರಣದ ಬಗ್ಗೆ ತನಿಖೆ ನಡೆದು, ಸತ್ಯಾಂಶ ಹೊರಬರಲಿ ಎಂಬುದು ಸಾರ್ವಜನಿಕರ ಆಗ್ರಹ.

ಬೆಂಗಳೂರಿನ ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ಆರಂಭವಾದ ಕೃಷಿ ಮೇಳದಲ್ಲಿ ಶಾಲಾ ವಿದ್ಯಾರ್ಥಿಗಳು ಹೂವಿನ ತೋಟದಲ್ಲಿ ಅರಳಿದ್ದ ಹೂವುಗಳ ಅಂದವನ್ನು ಆಸ್ವಾದಿಸಿದರು —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ನಾಮನಿರ್ದೇಶಿತರ ಮತದಾನ ರದ್ದು

ಒಂದನೇ ಪುಟದಿಂದ

ಕೇಂದ್ರ ಚುನಾವಣಾ ಆಯೋಗದ ಪರ ವಕೀಲ ಶರತ್ ದೊಡ್ಡವಾಡ, 'ನಾಮ ನಿರ್ದೇಶಿತ ಸದಸ್ಯರಿಗೆ ಸ್ಥಳೀಯ ಸಂಸ್ಥೆಗಳ ಸಭೆಗಳಲ್ಲಿ ಮತದಾನದ ಹಕ್ಕಿಲ್ಲ ಎಂದಾಕ್ಷಣ ವಿಧಾನ ಪರಿಷತ್ ಚುನಾವಣೆಯಲ್ಲೂ ಮತದಾನದ ಹಕ್ಕಿಲ್ಲವೆಂದು ಹೇಳಲಾಗದು.

ಸ್ಥಳೀಯ ಸಂಸ್ಥೆಗಳ ಸಭೆ ಬೇರೆ ಮತ್ತು ವಿಧಾನ ಪರಿಷತ್ ಚುನಾವಣೆಯೇ ಬೇರೆ. ನಾಮ ನಿರ್ದೇಶಿತರಿಗೆ ಪರಿಷತ್ ಚುನಾವಣೆಯಲ್ಲಿ ಮತದಾನದ ಹಕ್ಕಿಗೆ ಎಲ್ಲೂ ನಿರ್ಬಂಧ ಹೇರಿಲ್ಲ' ಎಂದು ಸ್ಪಷ್ಟಪಡಿಸಿದ್ದರು.

'ಮೂಡಿಗೆರೆ, ನರಸಿಂಹರಾಜಪುರ, ಶೃಂಗೇರಿ ಮತ್ತು ಕೊಪ್ಪ ಪಟ್ಟಣ ಪಂಚಾಯ್ತಿಗಳ 12 ನಾಮ ನಿರ್ದೇಶಿತ ಸದಸ್ಯರಿಗೆ ಕಾನೂನು ಬಾಹಿರವಾಗಿ ಮತದಾನದ ಹಕ್ಕು ನೀಡಲಾಗಿದೆ' ಎಂಬುದು ಪರಾಜಿತ ಅಭ್ಯರ್ಥಿ ಗಾಯತ್ರಿ ಶಾಂತೇಗೌಡರ ಆಕ್ಷೇಪವಾಗಿತ್ತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಿಧನ ವಾರ್ತೆ

ಲೇಖಕ ಬಸವರಾಜು ಕುಕ್ಕರಹಳ್ಳಿ

ಮೈಸೂರು: ಲೇಖಕ ಬಸವರಾಜು ಕುಕ್ಕರಹಳ್ಳಿ (67) ಅವರು ಇಲ್ಲಿನ ರಾಮಕೃಷ್ಣನಗರದ ಮನೆಯಲ್ಲಿ ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪುತ್ರ ಇದ್ದಾರೆ.



ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ಗ್ರಂಥಪಾಲಕರಾಗಿ ನಿವೃತ್ತರಾಗಿದ್ದ ಅವರು, 'ಮೊಕಾರ', 'ಜೀವಾಳ', 'ಪುನುಗ' ಹಾಗೂ 'ಬಾಳಾಟ' ಕಥಾ ಸಂಕಲನ, 'ಕಾಲನೊದ್ದವರು' ನೀಳ್ಗತೆ, 'ಅವ್ವ ಬರಲೇ ಇಲ್ಲ' ಕವನ ಸಂಕಲನವನ್ನು ಪ್ರಕಟಿಸಿದ್ದರು.

ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದ ಅವರು, ಸಾವಯವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು 'ನಿಸರ್ಗ ಟ್ರಸ್ಟ್– ನೈಸರ್ಗಿಕ ಆಹಾರೋತ್ಪನ್ನ ಕೇಂದ್ರ' ಸ್ಥಾಪಿಸಿ, ಹೊನ್ನೂರು ಸೇರಿದಂತೆ ಹಲವೆಡೆ ಸಾಮೂಹಿಕ ಹೈನುಗಾರಿಕೆ ಬೇಸಾಯ ಪ್ರಯೋಗವನ್ನು ಮಾಡಿದ್ದರು.

'ಮೊಕಾರ' ಸಂಕಲನದ 'ನೀರು' ಕಥೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಾಗೂ ಶಿವಮೊಗ್ಗ ತೋಟಗಾರಿಕೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪಠ್ಯವಾಗಿತ್ತು. 'ಬಾಳಾಟ' ಸಂಕಲನದ 'ಅವ್ವ' ಪದ್ಯ, 'ನಾನೇಕೆ ಬರೆಯುತ್ತೇನೆ' ಲೇಖನವು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಪಠ್ಯವಾಗಿದೆ.

ಶುಕ್ರವಾರ ಬೆಳಿಗ್ಗೆ 10ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಾಯಿ, ಅವಳಿ ಶಿಶುಗಳ ಸಾವು

ಒಂದನೇ ಪುಟದಿಂದ

ಮೊದಲಿಗೆ ಗಂಡು ಮಗು ಜನಿಸುವ ಹೊತ್ತಿಗೆ ತೀವ್ರ ರಕ್ತ ಸ್ರಾವವಾಗಿದ್ದು, ಆ ವೇಳೆಗೆ ಮಗುವೂ ಸಾವನ್ನಪ್ಪಿದೆ. ಮತ್ತೊಂದು ಗಂಡು ಮಗು ಜನಿಸುವ ಮುನ್ನವೇ ಮಹಿಳೆ ಮೃತಪಟ್ಟಿದ್ದಾರೆ.

ಈ ವಿಷಯ ತಿಳಿಯುತ್ತಲೇ ಅಕ್ಕಪಕ್ಕದ ಮನೆಯವರು ಸೇರಿ ಗಲಾಟೆ ಮಾಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಬಿ. ಎನ್.ಮಂಜುನಾಥ್, ಜಿಲ್ಲಾ ಸರ್ಜನ್ ಡಾ.ವೀಣಾ ಅವರು ಸೇರಿದ್ದ ಜನರಿಂದ ಮಾಹಿತಿ ಪಡೆದರು.

'ತುಂಬು ಗರ್ಭಿಣಿಯನ್ನು ದಾಖಲಿಸಿಕೊಂಡು ಚಿಕಿತ್ಸೆ ನೀಡದೆ ವೈದ್ಯರು ಮತ್ತು ಆಸ್ಪತ್ರೆಯ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿರುವುದು ಕಂಡುಬಂದಿದೆ. ಕರ್ತವ್ಯ ಲೋಪ ಎದ್ದು ಕಾಣುತ್ತದೆ. ವೈದ್ಯೆ ಮತ್ತು ಸಿಬ್ಬಂದಿ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದರು.

ಮಹಿಳೆ ಮೃತಪಟ್ಟ ಸ್ಥಳಕ್ಕೆ ಮೇಯರ್ ಎಂ.ಪ್ರಭಾವತಿ, ಉಪಮೇಯರ್ ಟಿ.ಕೆ. ನರಸಿಂಹಮೂರ್ತಿ, ಸದಸ್ಯ ಶ್ರೀನಿವಾಸ್ ಭೇಟಿ ನೀಡಿ ಸ್ಥಳೀಯರಿಂದ ಮಾಹಿತಿ ಪಡೆದರು.

ಗಾರೆ ಕೆಲಸ ಮಾಡುತ್ತಿದ್ದ ಅನಾಥೆ!

ಮೂಲತಃ ತಮಿಳುನಾಡಿನವರಾದ ಕಸ್ತೂರಿ ಹಾಗೂ ಆಕೆಯ ಗಂಡ ಈ ಮೊದಲು ಬೆಂಗಳೂರಿನಲ್ಲಿ ಗಾರೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

ನಾಲ್ಕು ತಿಂಗಳ ಹಿಂದೆ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದ. ನಂತರ ತನ್ನ ಆರು ವರ್ಷದ ಮಗಳ ಜತೆಯಲ್ಲಿ ಕಸ್ತೂರಿ ನಗರಕ್ಕೆ ವಲಸೆ ಬಂದಿದ್ದರು. ಇಲ್ಲೂ ಸರಿಯಾಗಿ ಕೆಲಸ ಸಿಗದೆ ಸಣ್ಣಪುಟ್ಟ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು.

ಭಾರತೀನಗರದಲ್ಲಿ ಸರೋಜಮ್ಮ ಎಂಬುವರು ನೀಡಿದ್ದ ಒಂದು ಸಣ್ಣ ಮನೆಯಲ್ಲಿ ವಾಸವಿದ್ದರು. ಕೂಲಿ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಈಗ ಮಹಿಳೆ ಸಾವಿನೊಂದಿಗೆ ಆಕೆಯ ಆರು ವರ್ಷದ ಮಗಳು ಅನಾಥವಾಗಿದ್ದಾಳೆ.

ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಮಗು, ಪತ್ನಿ ಮನೆಯಿಂದ ಹೊರಕ್ಕೆ

ಒಂದನೇ ಪುಟದಿಂದ

'ಅಂದು ನನ್ನ ಹಾಗೂ ಮಗುವಿನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುವುದಾಗಿ ಗಂಡನ ಮನೆಯವರು ಬೆದರಿಕೆ ಒಡ್ಡಿದ್ದರು. ನಂತರ ನಮ್ಮನ್ನು ಮನೆಯಿಂದ ಹೊರಹಾಕಲಾಯಿತು' ಎಂದು ಶ್ರುತಿ ಆರೋಪಿಸಿದ್ದಾರೆ. ರಾಮನಗರ ಮಹಿಳಾ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಗಳಿಗಾಗಿ ಹುಡುಕಾಟ ನಡೆಸಿದ್ದಾರೆ.

ವಿನಯ್

ಪ್ರಜಾವಾಣಿ@75 ಅಮೃತ ಮಹೋತ್ಸವ

ಈಗಲೂ ಅದೇ ಪ್ರೀತಿ

ನಮ್ಮ ಊರು ಚಂದ್ರಶೇಖರಪುರ. ಇಲ್ಲಿ ಸುಮಾರು 1970ರ ಹೊತ್ತಿಗೆ ನನಗೆ 10 ವರ್ಷ ವಯಸ್ಸು. ಪ್ರಜಾವಾಣಿ, ಸುಧಾ, ಮಯೂರ ನಮ್ಮ ಮನೆ ಪಕ್ಕದ ಹೋಟೆಲ್‌ನವರಾದ ಮಲ್ಲಣ್ಣ ತರಿಸುತ್ತಿದ್ದರು. ಇದಕ್ಕೆ ನಾನು ಕಾಯಂ ಗಿರಾಕಿ. ಆಗಲೇ ನನಗೆ ಪ್ರಜಾವಾಣಿಯನ್ನು ಓದುವ ಹವ್ಯಾಸ ಅಂಟಿಕೊಂಡಿತ್ತು.

ನಾವು ಎಂಟನೇ ತರಗತಿಗೆ ಬಂದಾಗ, ಶಾಲೆ ಪ್ರಾರಂಭಕ್ಕಿಂತ ಮುಂಚೆ ರಾಷ್ಟ್ರಗೀತೆ ಅದು ಆದ ಮೇಲೆ ಪ್ರಜಾವಾಣಿಯಲ್ಲಿ ಬರುವ ಮುಖ್ಯ ವಿಷಯಗಳನ್ನು ಒಬ್ಬರು ಓದಬೇಕಾಗಿತ್ತು. ನಾನು 10ನೇ ತರಗತಿಗೆ ಬಂದಾಗ ಈ ಹೊಣೆ ನನ್ನದಾಗಿತ್ತು. ನಾನು ಬಹಳ ಅಚ್ಚುಕಟ್ಟಾಗಿ ಮುಖ್ಯ ವಿಷಯಗಳನ್ನು ಓದಿ ನಂತರ ತಪ್ಪದೆ ಸುಭಾಷಿತ ಓದಬೇಕಾಗಿತ್ತು. ಆಗ ಬರುತ್ತಿದ್ದ ಫ್ಯಾಂಟಮ್ ನನ್ನ ಇಷ್ಟದ ಕಥೆ ಆಗಿತ್ತು. ಅದೇ ಪ್ರೀತಿ ಈಗಲೂ ಇದೆ. ಪ್ರಜಾವಾಣಿ ಓದದೇ ನಮ್ಮ ಬೆಳಗಿನ ಕಾರ್ಯ ಶುರುವಾಗುವುದಿಲ್ಲ.

ಸಿ. ಎನ್.ರಾಮಚಂದ್ರ, ಬೆಂಗಳೂರು.

ಪ್ರಜಾಪ್ರಭುತ್ವವಾದಿ ಪತ್ರಿಕೆ

ಕನ್ನಡದ ಸಾಂಸ್ಕೃತಿಕ ಲೋಕ ಶ್ರೀಮಂತವಾಗಿರುವಂತೆ ಸಾಕ್ಷಿಪ್ರಜ್ಞೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಬಂದಿರುವುದು ಪ್ರಜಾವಾಣಿ. ಇದರ ಅಮೃತ ಮಹೋತ್ಸವ ನಡೆಯುತ್ತಿರುವ ಸಂದರ್ಭ ಕೂಡ ಮಹತ್ವಪೂರ್ಣವಾದದ್ದು. ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಸ್ಥಿತ್ಯಂತರಗಳ ಆರೋಗ್ಯಪೂರ್ಣತೆಗೆ ಸಂಬಂಧಿಸಿದಂತೆ ಎಚ್ಚರದ ಧ್ವನಿಯಾಗಿ ಕೆಲಸ ಮಾಡುತ್ತಾ ಬಂದಿದೆ. 'ವಾಚಕರ ವಾಣಿ' ವಿಭಾಗ ನಾನಾ ರೀತಿಯ ಆರೋಗ್ಯಪೂರ್ಣ ವಾಗ್ವಾದಗಳಿಗೆ ಸಾಕ್ಷಿಭೂತವಾಗಿದೆ.

ಇತಿಹಾಸದ ಪುಟಗಳನ್ನ ಹಿಂದಿರುಗಿ ನೋಡಿಕೊಳ್ಳುವಂತೆ ಅದರ ಅಸ್ತಿತ್ವ ಗಟ್ಟಿಗೊಳ್ಳುತ್ತಲೇ ಹೋಗುತ್ತಿದೆ. ಜಗತ್ತಿನ ಕೆಲವೇ ಶ್ರೇಷ್ಠ ದಿನಪತ್ರಿಕೆಗಳಲ್ಲಿ ಇದೂ ಒಂದು ಎಂದು ಧಾರಾಳವಾಗಿ ಹೇಳಬಹುದು. ನನ್ನ ಮಾಧ್ಯಮಿಕ ಶಾಲೆಯ ದಿನಗಳಿಂದಲೂ ಸಾಮಾಜಿಕ ರೂಪಕಗಳನ್ನ ವಿಸ್ತರಿಸುತ್ತಲೇ ಬಂದಿದೆ. ಪ್ರತಿದಿನವೂ ಅರಿವಿನ ಬಾಗಿಲುಗಳನ್ನು ತೆರೆಯುತ್ತಲೇ ನಮ್ಮ ನಮ್ಮ ಮನೆಯ ಬಾಗಿಲುಗಳನ್ನ ತೆರೆದು ಒಳಗೆ ಬರುತ್ತದೆ. ಇಂಥ ಪತ್ರಿಕೆ ಬೆಳೆಯುತ್ತಲೇ ಹೋಗಲಿ ಎಂದು ಆಶಿಸುವೆ.

ಶೂದ್ರ ಶ್ರೀನಿವಾಸ್, ಬೆಂಗಳೂರು

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಸಮಾಜಮುಖಿ ಪತ್ರಿಕೆ

ಪ್ರಜಾವಾಣಿ ತನ್ನ ಸುದೀರ್ಘ ಪಯಣದುದ್ದಕ್ಕೂ ಅತ್ಯಂತ ಜವಾಬ್ದಾರಿಯುತವಾಗಿ ನಡೆದುಕೊಂಡುಬಂದಿದೆ. ಹಗರಣ, ಹಕ್ಕುಚ್ಯುತಿಗಳಿಗೆ ಒಳಗಾಗದಂತೆ, ಲಾಭ ನಷ್ಟಗಳನ್ನು ಲೆಕ್ಕಿಸದೇ, ಸಮಾಜಮುಖಿ ಧ್ಯೇಯೊದ್ದೇಶಗಳೊಂದಿಗೆ ಪತ್ರಿಕಾ ಧರ್ಮ ಪಾಲಿಸಿಕೊಂಡು ಬಂದಿದೆ. ರಾಷ್ಟ್ರ ಮಟ್ಟದ ಪತ್ರಿಕೋದ್ಯಮ ಕ್ಷೇತ್ರದಲ್ಲೂ ಈ ಪತ್ರಿಕೆಗೆ ವಿಶಿಷ್ಟ ಸ್ಥಾನವಿರುವುದು ಕನ್ನಡಿಗರೆಲ್ಲರ ಹೆಮ್ಮೆ. ಪ್ರಜಾವಾಣಿ ಕುಟುಂಬಕ್ಕೆ ಶುಭಹಾರೈಕೆಗಳು.

ಕಲ್ಪನ ಎನ್., ಪ್ರಾಂಶುಪಾಲೆ, ನ್ಯೂ ಇಂಡಿಯನ್ ಸ್ಕೂಲ್, ಕನಕಪುರ.

ಕನ್ನಡಿ ಇದ್ದಂತೆ...

'ಪ್ರಜಾವಾಣಿ'...ಹೆಸರೇ ಸೂಚಿಸುವ ಹಾಗೆ ಪ್ರಜೆಗಳ ವಾಣಿ!! ಜನರಿಗಾಗಿ, ಜನರಿಂದ ಬರುವ ಹೃದಯದ ವಾಣಿಯೇ ಪ್ರಜಾವಾಣಿ!! ಜ್ಞಾನ -ವಿಜ್ಞಾನ, ಸಾಹಿತ್ಯ - ಸಂಗೀತ, ನಾಡು - ನಡೆ - ನುಡಿ,...ಹೀಗೆ ಭೂಮಿಯಿಂದ ಆಗಸದವರೆಗೂ ದಿನನಿತ್ಯ ನಡೆಯುವ, ಕ್ಷಣಕ್ಷಣದ ಆಗು ಹೋಗುಗಳ ಬಗ್ಗೆ, ಅತ್ಯಂತ ಸರಳವಾದ, ಸುಂದರವಾದ ಭಾಷೆಯಲ್ಲಿ, ಹಲವಾರು ದಶಕಗಳಿಂದ ಜನಸಾಮಾನ್ಯರಿಗೆ, ಈ ದಿನ ಪತ್ರಿಕೆಯು ಸುದ್ದಿ ತಲುಪಿಸಿದ ರೀತಿ ಪ್ರತಿಯೊಬ್ಬ ಕನ್ನಡಿಗನಿಗೆ... ಕನ್ನಡಿ ಇದ್ದಂತೆ!! ಈ ಸುಸಂಸ್ಕೃತ ಪತ್ರಿಕೆಗೆ ಈಗ ಅಮೃತ ಸಂಭ್ರಮ!! ನಾವೆಲ್ಲರೂ ಅಭಿನಂದನೆಗಳನ್ನು ಹೇಳುತ್ತಾ, ನೂರು, ನೂರಾರು ವರುಷಗಳ ಕಾಲ 'ಪ್ರಜಾವಾಣಿ' ಸಂಭ್ರಮಿಸಲಿ ಎಂದು ಹಾರೈಸುತ್ತೇನೆ.

– **ಸಂಗೀತಾ ಕಟ್ಟಿ,** ಗಾಯಕಿ

ಬದ್ಧತೆ ಉಳಿಸಿಕೊಂಡ ಪತ್ರಿಕೆ

ಪತ್ರಿಕೆ ಹಾಕುವವರು ಪ್ರಜಾವಾಣಿ ಬದಲು ಬೇರೆ ಪತ್ರಿಕೆ ಹಾಕಿದಾಗ ಕಿರಿಕಿರಿಯಾಗುತ್ತದೆ. ಈ ಪತ್ರಿಕೆ ನನ್ನ ಬಾಲ್ಯಸ್ನೇಹಿತನಂತೆ. ತನ್ನ ಮೂಲ ಬದ್ಧತೆಯನ್ನು ಈಗಲೂ ಉಳಿಸಿಕೊಂಡಿದೆ. 75ನೇ ವರ್ಷಾಚರಣೆ ಸಂದರ್ಭದಲ್ಲಿ ಪತ್ರಿಕೆಯ ಸ್ಥಾಪಕರಿಗೆ ವಂದನೆಗಳು.

ಎಸ್.ಲಿಂಗರಾಜು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು.



ಶೀಘ್ರದಲ್ಲೇ ತೆರೆಗೆ '19.20.21'

'ಹರಿವು', 'ನಾತಿಚರಾಮಿ', 'ಆ್ಯಕ್ಟ್‌–1978' ಸಿನಿಮಾಗಳ ಖ್ಯಾತಿಯ ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮಂಸೋರೆ ಅವರ ಹೊಸ ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಬಿಡುಗಡೆ ದಿನಾಂಕವನ್ನು ಶೀಘ್ರ ಘೋಷಿಸುವುದಾಗಿ ಚಿತ್ರತಂಡ ತಿಳಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ(ಯುಎಪಿಎ) ಬಂಧನಕ್ಕೊಳಗಾದ ವ್ಯಕ್ತಿಯ ಜೀವನದ ನೈಜ ಘಟನೆಗಳನ್ನು ಆಧರಿಸಿ ಈ ಸಿನಿಮಾ ನಿರ್ಮಾಣವಾಗಿದೆ. ಚಂದನವನದಲ್ಲಿ ವಿಭಿನ್ನವಾದ ಕಥೆಗಳ ಮೂಲಕ ಪ್ರೇಕ್ಷಕರ ಎದುರಿಗೆ ಬಂದಿದ್ದ ಮಂಸೋರೆ, ಈ ಚಿತ್ರದಲ್ಲೂ ಸಾಕಷ್ಟು ಚರ್ಚೆಗೆ ಒಳಗಾದ ವಿಷಯವೊಂದನ್ನು ಪ್ರಸ್ತಾಪಿಸುತ್ತಿದ್ದಾರೆ. '2018ರಿಂದ 2022ರ ನಡುವೆ ಯುಎಪಿಎಯಡಿ ಬಂಧಿತರಾದ 4,690 ಮಂದಿ ಆರೋಪಿಗಳಲ್ಲಿ 149 ಮಂದಿ ಮಾತ್ರ ಅಪರಾಧಿಗಳು'–ಹೀಗೊಂದು ದಾಖಲೆಯನ್ನು ಮುಂದಿಡುತ್ತಾ ಕಳೆದ ಸ್ವಾತಂತ್ರ್ಯ ದಿನದಂದು ಮಂಸೋರೆ ಚಿತ್ರದ ಹೊಸ ಪೋಸ್ಟರ್ ಒಂದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ನೈಜ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಹೆಣೆದ ಕಥೆ ಚಿತ್ರದಲ್ಲಿದ್ದು, ಸೋಶಿಯಲ್ ಥ್ರಿಲ್ಲರ್ ಕಥಾಹಂದರವನ್ನು ಒಳಗೊಂಡಿದೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ. ರಂಗಭೂಮಿ ಕಲಾವಿದರರಾದ ಶೃಂಗ ಬಿ.ವಿ. ಚಿತ್ರದಲ್ಲಿ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದು, ಬಾಲಾಜಿ ಮನೋಹರ್, ಸಂಪತ್, ಎಂ.ಡಿ ಪಲ್ಲವಿ, ಮಹದೇವ್ ಹಡಪತ್, ಉಗ್ರಂ ಸಂದೀಪ್ ತಾರಾಗಣದಲ್ಲಿದ್ದಾರೆ. ಯಲ್ಲಾಪುರ, ಧಾರವಾಡ, ಮಂಗಳೂರು, ಕುಂದಾಪುರ ಕಡೆ ಚಿತ್ರೀಕರಣ ನಡೆದಿದೆ. ದೇವರಾಜ್ ಆರ್. ನಿರ್ಮಾಪಕರು ❖

ಫೆ. 10ಕ್ಕೆ 'ರಿಜಿಸ್ಟ್ರೇಷನ್'

ಎಲ್ಲದ್ದಕ್ಕೂ ನೋಂದಣಿ ಕಡ್ಡಾಯವಲ್ಲವೇ. ಪ್ರೀತಿಗೂ 'ರಿಜಿಸ್ಟ್ರೇಷನ್' ಕಡ್ಡಾಯವಾದರೆ ಹೇಗೆ?... ಹೀಗೊಂದು ಕತೆ ಹೇಳಲು ಬರುತ್ತಿದೆ 'ಫಾರ್ ರಿಜಿಸ್ಟ್ರೇಷನ್'.

ಪೃಥ್ವಿ ಅಂಬಾರ್ - ಮಿಲನ ನಾಗರಾಜ್ ಅಭಿನಯದ 'ಫಾರ್ ರಿಜಿಸ್ಟ್ರೇಷನ್' ಚಿತ್ರ ಮುಂದಿನ ವರ್ಷ ಫೆ. 10ರಂದು ಬಿಡುಗಡೆಯಾಗಲಿದೆ. ನ. 1ರಂದು ಫಸ್ಟ್ ಲುಕ್ ಅನಾವರಣಗೊಂಡಿದೆ. ನಿರ್ಮಾಪಕ ನವೀನ್ ರಾವ್ ಹಾಗೂ ನಿರ್ದೇಶಕ ನವೀನ್ ದ್ವಾರಕಾನಾಥ್ ಅವರ ಪೋಷಕರು ಫಸ್ಟ್ ಲುಕ್ ಹಾಗೂ ಬಿಡುಗಡೆ ದಿನಾಂಕವನ್ನು ಅನಾವರಣಗೊಳಿಸಿದರು. 'ಮಂಗಳೂರಿನಲ್ಲಿ ಭೇಟಿಯಾದ ನಿರ್ದೇಶಕರು ಈ ಚಿತ್ರದ ಕಥೆ ಹೇಳಿದರು. ಇಷ್ಟವಾಯಿತು' ಎನ್ನುತ್ತಾರೆ ನಾಯಕ ಪೃಥ್ವಿ ಅಂಬಾರ್.

'ಒಳ್ಳೆಯ ತಂಡದೊಂದಿಗೆ ಒಳ್ಳೆಯ ಚಿತ್ರ ಮಾಡಿದ್ದು ಖುಷಿಯಾಗಿದೆ. ನನ್ನ ಪಾತ್ರ ಕೂಡ ಚೆನ್ನಾಗಿದೆ. ಫೆಬ್ರವರಿ ತಿಂಗಳು ನನಗೆ ಲಕ್ಕಿ. ಈ ಚಿತ್ರ ಕೂಡ ಅದೇ ತಿಂಗಳಲ್ಲಿ ತೆರೆಗೆ ಬರುತ್ತಿರುವುದು ಮತ್ತಷ್ಟು ಖುಷಿಯಾಗಿದೆ' ಎಂದರು ನಾಯಕಿ ಮಿಲನ ನಾಗರಾಜ್.

ರವಿಶಂಕರ್, ಬಾಬು ಹಿರಣ್ಣಯ್ಯ, ಸ್ವಾತಿ, ಸುಧಾ ಬೆಳವಾಡಿ, ತಬಲನಾಣಿ, ರಮೇಶ್ ಭಟ್, ಸಿಹಿಕಹಿ ಚಂದ್ರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಪೃಥ್ವಿ ಅಂಬಾರ್, ಮಿಲನ ನಾಗರಾಜ್

ಸೋನಲ್ ಮೊಂತೆರೋ

ಕೋಸ್ಟಲ್‌ವುಡ್‌ನಿಂದ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟ ಸೋನಲ್ ಮೊಂತೆರೋ, ಸದ್ಯ ಚಂದನವನದಲ್ಲಿ ಹೆಚ್ಚಿನ ಸಿನಿಮಾ ಬ್ಯಾಂಕ್ ಹೊಂದಿದ ನಟಿಯರ ಪೈಕಿ ಮುಂಚೂಣಿಯಲ್ಲಿದ್ದಾರೆ. ಸದ್ಯ 'ಬನಾರಸ್' ಗುಂಗಿನಲ್ಲಿರೋ ಇವರ ಜೊತೆಗೆ ಮಾತುಕತೆಯ ಸುತ್ತು...

ಚೆಲುವಿನ ಗಣಿ 'ಬನಾರಸ್' ಧನಿ

ಅಭಿಲಾಷ್ ಪಿ.ಎಸ್.

● **ಸೋನಲ್ ಸಿನಿಮಾ ಬ್ಯಾಂಕ್ ತಿಂಗಳುರುಳಿದಂತೆ ಹಿಗ್ಗುತ್ತಿದೆ ಅಲ್ಲವೇ?**

ಹೀಗೊಮ್ಮೆ ಹಿಂದಿರುಗಿ ನೋಡಿದಾಗ ನನಗೂ ಹೆಮ್ಮೆ ಆಗುತ್ತದೆ. ಕೋಸ್ಟಲ್‌ವುಡ್‌ನಿಂದ(ತುಳು ಸಿನಿಮಾ) ನನ್ನ ಸಿನಿಪಯಣ ಆರಂಭವಾಗಿದ್ದೇ ಆಕಸ್ಮಿಕ. 'ಎಕ್ಕಸಕ' ಸಿನಿಮಾ 100 ದಿನ ಓಡಿದಾಗ, ನನ್ನ ಸಿನಿಜೀವನವೇ ಬದಲಾಯಿತು. ಅಲ್ಲಿಂದೀಚೆಗೆ ಒಂದಲ್ಲಾ ಒಂದು ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ಪ್ರತಿಯೊಬ್ಬ ಕಲಾವಿದನ ಬದುಕಿನಲ್ಲಿ ಒಂದು ಬ್ರೇಕ್ ಎನ್ನುವುದು ಇರುತ್ತದೆ. ಅದು ಸಿಕ್ಕಿದ್ದು ಯೋಗರಾಜ್ ಭಟ್ ನಿರ್ದೇಶನದ 'ಪಂಚತಂತ್ರ' ಸಿನಿಮಾದಲ್ಲಿ. ಗಾಂಧಿನಗರಕ್ಕೆ ಸೋನಲ್ ಯಾರೆಂಬುದು ತಿಳಿಯಿತು. ನನ್ನ ಸಿನಿಗ್ರಾಫ್‌ಗೆ ಕಿಕ್‌ಸ್ಟಾರ್ಟ್ ನೀಡಿದ ಸಿನಿಮಾ ಅದು. ತರುಣ್ ಸುಧೀರ್ ನಿರ್ದೇಶನದ 'ರಾಬರ್ಟ್' ಸಿನಿಪಯಣಕ್ಕೆ ಅತಿ ದೊಡ್ಡ ತಿರುವು ನೀಡಿತು. ನನ್ನ ವೃತ್ತಿ ಬದುಕು ರಾಕೆಟ್‌ನಂತೆ ಏರಿತು. ಒಳ್ಳೊಳ್ಳೆಯ ಕಥೆಯುಳ್ಳ ಸಿನಿಮಾಗಳ ಆಫರ್‌ಗಳು ಬಂದವು. 'ಬನಾರಸ್' ಇದರಲ್ಲೊಂದು.

ಸದ್ಯ ನನ್ನ ಕೈಯಲ್ಲಿ ವಿನೋದ್ ಪ್ರಭಾಕರ್ ನಟನೆಯ 'ಮಾದೇವ', ವಸಿಷ್ಠ ಸಿಂಹ ಅವರ ಜೊತೆಗೆ ಒಂದು ಸಿನಿಮಾ, ಡಾರ್ಲಿಂಗ್ ಕೃಷ್ಣ ಅವರ ಜೊತೆಗಿನ 'ಶುಗರ್ ಫ್ಯಾಕ್ಟರಿ', ಉಪೇಂದ್ರ ಅವರ ಜೊತೆಗೆ 'ಬುದ್ಧಿವಂತ–2', ಯೋಗರಾಜ್ ಭಟ್ ನಿರ್ದೇಶನದ 'ಗರಡಿ' ಹಾಗೂ ವಿನಯ್ ಚಂದ್ರ ನಿರ್ದೇಶನದ 'ಭಾರತದ ಕೋಗಿಲೆ' ಎಂದೇ ಜನಪ್ರಿಯರಾಗಿದ್ದ ಸರೋಜಿನಿ ನಾಯ್ಡು ಅವರ ಜೀವನಾಧಾರಿತ ಸಿನಿಮಾವಿದೆ. ಹರಿಪ್ರಸಾದ್ ಅವರ ನಿರ್ದೇಶನದ 'ಪದವಿಪೂರ್ವ', ಅನೂಪ್ ಆಂಟೋನಿ ನಿರ್ದೇಶನದ 'ಭಗವಾನ್ ಶ್ರೀ ಕೃಷ್ಣ ಪರಮಾತ್ಮ'ವೂ ಈ ಪಟ್ಟಿಯಲ್ಲಿದೆ.

● **'ಗರಡಿ' ಪ್ರವೇಶ ಅನಿರೀಕ್ಷಿತವಾಗಿತ್ತಲ್ಲವೇ?**

ಖಂಡಿತವಾಗಿಯೂ. ಯೋಗರಾಜ್ ಭಟ್ ಅವರು ತಮ್ಮ ಸಿನಿಮಾಗಳಲ್ಲಿ ಹೊಸ ನಟಿಯನ್ನೇ ಕಾಸ್ಟ್ ಮಾಡುತ್ತಾರೆ. ಹೀಗಿದ್ದಾಗ, ಅವರ ಸಿನಿಮಾದಲ್ಲಿ ಎರಡನೇ ಅವಕಾಶ ಸಿಕ್ಕಿರುವುದು ನನ್ನ ಪುಣ್ಯ. ನನ್ನ ಸಿನಿಪಯಣದಲ್ಲಿ ನಿರೀಕ್ಷೆಯನ್ನು ಇಟ್ಟುಕೊಂಡು ನಾನು ಕೆಲಸ ಮಾಡಿಲ್ಲ. ಆಗಿರುವುದೆಲ್ಲ, ಸಿಕ್ಕಿರುವ ಅವಕಾಶಗಳೆಲ್ಲ ಹರಿಯುವ ನದಿಯಂತೆ ಬಂದಿವೆ. ನಾಳೆಯನ್ನು ನಂಬಿಕೊಂಡು ಬದುಕಿಲ್ಲ.

● **'ಬನಾರಸ್' ಅನುಭವ...?**

ಈ ಸಿನಿಮಾ ನನಗೆ ಬಹಳ ವಿಶೇಷ ವಾದದ್ದು. ಏಕೆಂದರೆ ಇದು ನನ್ನ ಮೊದಲ ಪ್ಯಾನ್ ಇಂಡಿಯಾ ಸಿನಿಮಾ. ಜಯತೀರ್ಥ ಅವರ ಸಿನಿಮಾ ಒಂದು ರೀತಿ ದೃಶ್ಯಕಾವ್ಯವಿದ್ದಂತೆ. ಚಂದನವನಕ್ಕೆ ಕಾಲಿಟ್ಟ ಸಂದರ್ಭದಲ್ಲಿ, ನನಗೆ ಯೋಗರಾಜ್ ಭಟ್, ತರುಣ್ ಸುಧೀರ್ ಹಾಗೂ ಜಯತೀರ್ಥ ಅವರ ಜೊತೆ ಕೆಲಸ ಮಾಡಬೇಕು ಎನ್ನುವ ಆಸೆ ಇತ್ತು. ಈ ಮೂರೂ ಆಸೆಯೂ ಈಡೇರಿದೆ. ಜಯತೀರ್ಥ ಅವರು ಸಿನಿಮಾವನ್ನು ನೋಡುವ ರೀತಿಯೇ ಅದ್ಭುತ. ಅವರ ಸಿನಿಮಾಗಳಲ್ಲಿ ನಟಿಗೆ ಹೆಚ್ಚಿನ ಪ್ರಾಧಾನ್ಯ ಇದೆ. 'ಬನಾರಸ್' ಚಿತ್ರದಲ್ಲೂ ಕಥೆ ಎತ್ತ ಸಾಗಿದರೂ, ನನ್ನ ಪಾತ್ರವಾದ 'ಧನಿ' ಸುತ್ತ ಸುತ್ತುತ್ತದೆ. ಇಲ್ಲಿ ಪ್ರತಿಯೊಂದು ದೃಶ್ಯವೂ ಕಲಾಕೃತಿಯಂತಿದೆ. ಬನಾರಸ್‌ನ ಎಲ್ಲ ಘಾಟ್‌ಗಳಲ್ಲೂ ಚಿತ್ರೀಕರಣ ಮಾಡಿದ್ದೇವೆ. ಇದನ್ನು ಅದ್ಭುತವಾಗಿ ತೋರಿಸಿದ್ದಾರೆ. ಜಯತೀರ್ಥ ಅವರ ಪ್ರತಿ ಸಿನಿಮಾದಲ್ಲೂ ಒಂದು ಜಾನಪದ ಸ್ಪರ್ಶ ಇರುತ್ತದೆ. ಅವರೊಬ್ಬ ಪರಿಪೂರ್ಣ ನಿರ್ದೇಶಕ.

'ಬನಾರಸ್' ಒಂದು ಇಂಟೆನ್ಸ್ ಲವ್‌ಸ್ಟೋರಿ. ಅದಕ್ಕಿಂತ ಹೆಚ್ಚಾಗಿ ಇದೊಂದು ವಿಭಿನ್ನ ಜಾನರ್‌ನ ಸಿನಿಮಾ. ಪ್ರೇಮಕಥೆ, ಟೈಂ ಟ್ರಾವೆಲ್, ಸೈ–ಫೈ, ಥ್ರಿಲ್, ಸಸ್ಪೆನ್ಸ್ ಹೀಗೆ ಎಲ್ಲ ಜಾನರ್‌ನ ಮಿಶ್ರಣ ಈ ಸಿನಿಮಾ.

● **ಝೈದ್ ಖಾನ್ ಅವರನ್ನು ನಟನಾಗಿ ಕಂಡ ಬಗೆ...**

ರಾಜಕೀಯ ಕುಟುಂಬದ ವ್ಯಕ್ತಿ, ಶೋಆಫ್ ಇರುತ್ತೆ ಎಂದೆಲ್ಲಾ ಝೈದ್ ಅವರ ಬಗ್ಗೆ ಆರಂಭದಲ್ಲಿ ಅಂದುಕೊಂಡಿದ್ದೆ. ಅತ್ತ ಝೈದ್ ಕೂಡಾ ನನ್ನ ಬಗ್ಗೆ ಈ ರೀತಿಯೇ ಅಂದುಕೊಂಡಿದ್ದರು. 'ಸಿನಿಮಾಗಳನ್ನು ಮಾಡಿದ್ದಾಳೆ, ಇವಳಿಗೆ ಆ್ಯಟಿಟ್ಯೂಡ್ ಇರುತ್ತೆ' ಎಂದು ಅವರು ಅಂದುಕೊಂಡಿದ್ದರು. ಇಬ್ಬರ ತಲೆಯಲ್ಲೂ ನಕಾರಾತ್ಮಕ ಅಭಿಪ್ರಾಯಗಳೇ ತುಂಬಿದ್ದವು. ಈ ಪ್ರಶ್ನೆಗಳು ಬಗೆಹರಿದಿದ್ದು, ಬನಾರಸ್ ಸೆಟ್‌ನಲ್ಲಿ. ಅವರೊಬ್ಬ ಅತ್ಯುತ್ತಮ ಕಲಾವಿದ. ಯಾವ ಹಮ್ಮುಬಿಮ್ಮು ಇಲ್ಲದ ವ್ಯಕ್ತಿ. ಅನುಪಮ್ ಖೇರ್ ನಟನಾ ಶಾಲೆಯಲ್ಲಿ ತರಬೇತಿ ಪಡೆದು ನಟನೆಗೆ ಹೆಜ್ಜೆ ಇಟ್ಟವರು ಅವರು. ಅವರ ಅಭಿನಯ ಮೊದಲ ಸಿನಿಮಾದಂತಿಲ್ಲ. ಉರ್ದು ಮಿಶ್ರಿತ ಕನ್ನಡ ಸ್ಲ್ಯಾಂಗ್ ಸಮಸ್ಯೆ ಎದುರಾಗುತ್ತಿತ್ತು. ಇದನ್ನೂ ಅವರು ಸರಿಪಡಿಸಿಕೊಂಡಿದ್ದರು.

● **ಬನಾರಸ್ ಸ್ಥಳದಲ್ಲಿನ ಶೂಟಿಂಗ್ ಅನುಭವದ ಬಗ್ಗೆ..**

ಬನಾರಸ್ ಮಣ್ಣಿನಲ್ಲಿ ಒಂದು ಶಕ್ತಿಯಿದೆ. ಅಲ್ಲಿ ಹೆಜ್ಜೆ ಇಟ್ಟ ಕೂಡಲೇ ಧರ್ಮ ಎನ್ನುವುದನ್ನು ಮರೆತು ಬಿಡುತ್ತೇವೆ. ಮನಸ್ಸಿನೊಳಗೆ ಏನೇ ಪ್ರಕ್ಷುಬ್ಧ ಸ್ಥಿತಿ ಇದ್ದರೂ ಅಲ್ಲಿನ ವಾತಾವರಣವೇ ನಿಮ್ಮನ್ನು ಶಾಂತಿಯತ್ತ ಕೊಂಡೊಯ್ಯುತ್ತದೆ. 45 ದಿನ ಬನಾರಸ್‌ನಲ್ಲಿ ಚಿತ್ರೀಕರಿಸಿದ್ದೇವೆ. ಅದೊಂದು ಪುಣ್ಯಕ್ಷೇತ್ರ. ಅಲ್ಲಿಗೆ ಹೋದರೆ ಖಂಡಿತವಾಗಿಯೂ ನೀವು ಬದಲಾಗಿ ಹೊರಲೋಕಕ್ಕೆ ಹೆಜ್ಜೆ ಇಡುತ್ತೀರಿ. ವಯಸ್ಸಾದ ಬಳಿಕ ಇಂಥ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಬೇಕು ಎನ್ನುತ್ತಾರೆ. ಆದರೆ ನನ್ನ ಪ್ರಕಾರ ಯುವಜನತೆ ಇಲ್ಲಿಗೆ ಭೇಟಿ ಕೊಡಬೇಕು. ಜೀವನವನ್ನು ಅದ್ಭುತವಾಗಿ, ಕಟ್ಟುವ ವಾತಾವರಣ ಅಲ್ಲಿದೆ. ದ್ವೇಷ, ಕೋಪ ಬಿಟ್ಟು ಬದುಕೋಣ ಎನ್ನುವ ವೈಬ್ರೇಷನ್ ಅಲ್ಲಿದೆ. ❖

ಭಾರತದಾದ್ಯಂತ 1,250 ಪರದೆಗಳಲ್ಲಿ ಸಿನಿಮಾ

ಜಯತೀರ್ಥ ಅವರ ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ 'ಬನಾರಸ್' ಇಂದು(ನ.4) ದೇಶದಾದ್ಯಂತ 1,250 ಪರದೆಗಳಲ್ಲಿ 2,500ಕ್ಕೂ ಅಧಿಕ ಪ್ರದರ್ಶನ ಕಾಣಲಿದೆ. ರಾಜ್ಯದಲ್ಲಿ ಸುಮಾರು 125 ಚಿತ್ರಮಂದಿರ ಹಾಗೂ 60 ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ಬಿಡುಗಡೆಗೊಳ್ಳಲಿದೆ. ಹಿಂದಿಯಲ್ಲಿ ಅತಿ ಹೆಚ್ಚು(450) ಪರದೆಗಳು ಈ ಸಿನಿಮಾಗೆ ಸಿಕ್ಕಿವೆ. ಹಿಂದಿಯಲ್ಲಿ ನಟ ಅಜಯ್ ದೇವಗನ್ ಅವರ ವಿತರಣಾ ಸಂಸ್ಥೆ ಪನೋರಮಾ ಸ್ಟುಡಿಯೋಸ್ ಬನಾರಸ್ ಅನ್ನು ವಿತರಣೆ ಮಾಡುತ್ತಿದೆ. ಮಲಯಾಳಂನಲ್ಲಿ ಮುಲಕ್ಕುಪ್ಪಡಂ ಹಾಗೂ ತಮಿಳುನಾಡಿನಲ್ಲಿ ಶಕ್ತಿ ಫಿಲಂ ಫ್ಯಾಕ್ಟರಿ ಸಿನಿಮಾ ವಿತರಣೆ ಮಾಡುತ್ತಿದೆ. ಸಿನಿಮಾ ಬಿಡುಗಡೆಯಾದ ಒಂದು ವಾರದೊಳಗೆ ವಿದೇಶದಲ್ಲೂ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ. ಈಗಾಗಲೇ ಉತ್ತರ ಪ್ರದೇಶ ಸರ್ಕಾರ 'ಬನಾರಸ್' ಸಿನಿಮಾಗೆ ತೆರಿಗೆ ವಿನಾಯಿತಿ ನೀಡಿದ್ದು ಜೊತೆಗೆ ಸಬ್ಸಿಡಿಯನ್ನೂ ಘೋಷಿಸಿದೆ ಎಂದಿದ್ದಾರೆ ನಿರ್ಮಾಪಕ ತಿಲಕ್ ರಾಜ್ ಬಲ್ಲಾಳ್.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಹೃದಯವನ್ನು ಸುಶಿಕ್ಷಿತಗೊಳಿಸದೆ ಬುದ್ಧಿಗಷ್ಟೇ ಶಿಕ್ಷಣ ಕೊಡುವುದು ಶಿಕ್ಷಣವೇ ಅಲ್ಲ.

–ಅರಿಸ್ಟಾಟಲ್

ಕ್ರಿಕೆಟ್: ಏಕರೂಪದ ಸಂಭಾವನೆ ಲಿಂಗ ಸಮಾನತೆಯತ್ತ ಮೊದಲ ಹೆಜ್ಜೆ

ರೋಜರ್ ಬಿನ್ನಿ ಅಧ್ಯಕ್ಷತೆಯ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ದೇಶದ ಕ್ರಿಕೆಟ್ ಕ್ಷೇತ್ರದಲ್ಲಿ ಲಿಂಗ ಸಮಾನತೆಯನ್ನು ತರುವತ್ತ ಒಂದು ಮಹತ್ವದ ಹೆಜ್ಜೆಯಿಟ್ಟಿದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ಪುರುಷರ ತಂಡದ ಆಟಗಾರರು ಪಡೆಯುವಷ್ಟೇ ಪಂದ್ಯ ಸಂಭಾವನೆಯನ್ನು ಮಹಿಳೆಯರಿಗೂ ನೀಡಲು ಮಂಡಳಿ ನಿರ್ಧರಿಸಿದೆ. ಮಹಿಳೆಯರ ಕ್ರಿಕೆಟ್‌ಗೆ ಉತ್ತೇಜನ ನೀಡುವಂತಹ ಈ ತೀರ್ಮಾನವು ಸ್ವಾಗತಾರ್ಹ. ಇಲ್ಲಿಯವರೆಗೂ ಪುರುಷ ಹಾಗೂ ಮಹಿಳೆಯರ ಪಂದ್ಯ ಸಂಭಾವನೆಯಲ್ಲಿದ್ದ ಅಜಗಜಾಂತರವನ್ನು ಮಂಡಳಿಯು ತೊಡೆದುಹಾಕಿದೆ. ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಿಗೆ ಮಹಿಳಾ ಕ್ರಿಕೆಟಿಗರು ಈಗ ₹ 1 ಲಕ್ಷ ಸಂಭಾವನೆ ಪಡೆಯುತ್ತಿದ್ದಾರೆ. ಈ ಮೊತ್ತ ಇನ್ನು ಮುಂದೆ ₹ 6 ಲಕ್ಷ ಆಗಲಿದೆ. ಟಿ20 ಪಂದ್ಯದ ಸಂಭಾವನೆಯು ₹ 1 ಲಕ್ಷದಿಂದ ₹ 3 ಲಕ್ಷಕ್ಕೆ ಹಾಗೂ ಟೆಸ್ಟ್ ಪಂದ್ಯದ ಸಂಭಾವನೆಯು ₹ 4 ಲಕ್ಷದಿಂದ ₹ 15 ಲಕ್ಷಕ್ಕೆ ಏರಿಕೆ ಆಗಲಿದೆ. ಬಿಸಿಸಿಐನ ಕೇಂದ್ರ ಗುತ್ತಿಗೆಯಲ್ಲಿರುವ ಆಟಗಾರ್ತಿಯರಿಗೆ ಇದರ ಪ್ರಯೋಜನ ದಕ್ಕಲಿದೆ. ಈ ನಿಯಮವನ್ನು ಜಾರಿಗೆ ತಂದ ವಿಶ್ವದ ಎರಡನೇ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ನ್ಯೂಜಿಲೆಂಡ್‌ನಲ್ಲಿ ಈಗಾಗಲೇ ಈ ನೀತಿ ಇದೆ.

ಈ ತೀರ್ಮಾನದಿಂದಾಗಿ ಮಹಿಳಾ ಕ್ರಿಕೆಟ್‌ಗೆ ಸಂಬಂಧಿಸಿದ ಉಳಿದ ಬೇಡಿಕೆಗಳಿಗೂ ಸ್ಪಂದನ ಲಭಿಸುವ ಭರವಸೆ ಚಿಗುರಿದೆ

ಮಂಡಳಿಯು ಈ ಪರಿಷ್ಕರಣೆಯನ್ನು ಬಹಳ ಹಿಂದೆಯೇ ಮಾಡಬೇಕಿತ್ತು. ಆದರೆ, ಈಗ ಎಚ್ಚೆತ್ತುಕೊಳ್ಳಲು ಭಾರತ ಮಹಿಳಾ ತಂಡ ಮಾಡಿರುವ ಗಮನ ಸೆಳೆಯುವಂತಹ ಸಾಧನೆಗಳು ಕಾರಣ ಎನ್ನುವುದರಲ್ಲಿ ಅನುಮಾನವಿಲ್ಲ. ಈಚೆಗೆ ಏಷ್ಯಾ ಕಪ್ ಜಯಿಸಿದ್ದ ತಂಡವು ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗಳಿಸಿತ್ತು. ಮಹಿಳಾ ಕ್ರಿಕೆಟಿಗರಿಗೂ ಅಭಿಮಾನಿಗಳ ಸಂಖ್ಯೆ ಹೆಚ್ಚುತ್ತಿದೆ. ಪುರುಷರಿಗೆ ಕಮ್ಮಿಯಿಲ್ಲದ ರೀತಿಯಲ್ಲಿ ಕೌಶಲಗಳನ್ನೂ ರೂಢಿಸಿಕೊಳ್ಳುತ್ತಿದ್ದಾರೆ. ಕ್ರಿಕೆಟ್ ಆಟಗಾರ್ತಿಯರಿಗೂ ಜಾಹೀರಾತುಗಳಲ್ಲಿ ಮಿಂಚುವ ಅವಕಾಶಗಳು ಸಿಗುತ್ತಿವೆ. ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ನೇತೃತ್ವದ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ರಚನೆಯಾದ ನಿಯಮಾವಳಿಯಲ್ಲಿ ಕ್ರಿಕೆಟ್‌ನಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯಕ್ಕಾಗಿ ಒತ್ತು ನೀಡಲಾಗಿದೆ. ಅದರಿಂದಾಗಿಯೇ ಈಗ ಅಪೆಕ್ಸ್ ಕೌನ್ಸಿಲ್‌ನಲ್ಲಿ ಮಹಿಳಾ ಪ್ರತಿನಿಧಿ ಇದ್ದಾರೆ. ಕೌನ್ಸಿಲ್ ರಚನೆಯಾದಾಗ ಕರ್ನಾಟಕದ ಶಾಂತಾ ರಂಗಸ್ವಾಮಿ ಅವರಿಗೆ ಅವಕಾಶ ಕಲ್ಪಿಸಲಾಗಿತ್ತು. ಅವರ ಅವಧಿ ಇತ್ತೀಚೆಗಷ್ಟೇ ಪೂರ್ಣಗೊಂಡಿದ್ದು, ಆ ಸ್ಥಾನಕ್ಕೆ ಶುಭಾಂಗಿ ಕುಲಕರ್ಣಿ ಅವರು ನೇಮಕವಾಗಿದ್ದಾರೆ. ಮಹಿಳಾ ಕ್ರಿಕೆಟ್ ಬೆಳವಣಿಗೆಯ ಪರವಾಗಿ ಬಿಸಿಸಿಐ ಸಭೆಗಳಲ್ಲಿ ದನಿಯೆತ್ತುವ ಕಾರ್ಯವನ್ನು ಈ ಪ್ರತಿನಿಧಿಗಳು ಮಾಡುತ್ತಿದ್ದಾರೆ.

ಈಗ ಜಾರಿಯಾಗಿರುವ ನಿಯಮದಿಂದ ಪ್ರಯೋಜನ ಪಡೆಯುವವರ ಸಂಖ್ಯೆ ಬಹಳ ಕಡಿಮೆ. ಆದ್ದರಿಂದ ಈ ನೀತಿಯು ದೇಶಿ ಕ್ರಿಕೆಟ್‌ಗೂ ವಿಸ್ತರಣೆಯಾಗಬೇಕು. ಇತ್ತೀಚಿನ ದಿನಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದಲೂ ಕ್ರಿಕೆಟ್ ಕಲಿಯಲು ಬರುತ್ತಿರುವ ಬಾಲಕಿಯರ ಸಂಖ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ದೇಶಿ ಟೂರ್ನಿಗಳಲ್ಲಿ ಆಡುವ ಆಟಗಾರ್ತಿಯರಿಗೆ ಪುರುಷರಿಗೆ ನೀಡುವಷ್ಟೇ ಸಂಭಾವನೆ ಸಿಗುವಂತಾದರೆ ಬಹಳಷ್ಟು ಜನರಿಗೆ ಅನುಕೂಲವಾಗುತ್ತದೆ. ಅಷ್ಟೇ ಅಲ್ಲ, ಮಹಿಳೆಯರಿಗಾಗಿ ದೀರ್ಘ ಮಾದರಿಯ ದೇಶಿ ಟೂರ್ನಿಗಳ ಸಂಖ್ಯೆಯನ್ನೂ ಹೆಚ್ಚಿಸಬೇಕು ಎಂಬ ಬೇಡಿಕೆ ಬಹಳ ವರ್ಷಗಳಿಂದಲೂ ಇದೆ. 2023ರಲ್ಲಿ ಮಹಿಳೆಯರಿಗಾಗಿಯೇ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿ ಆಯೋಜಿಸುವುದಾಗಿ ಬಿಸಿಸಿಐ ಘೋಷಿಸಿರುವುದರಿಂದ ಹೆಚ್ಚು ಪ್ರತಿಭೆಗಳಿಗೆ ಅವಕಾಶ ಸಿಗುವ ಭರವಸೆ ಮೂಡಿದೆ. ವಾರ್ಷಿಕ ಗುತ್ತಿಗೆಯ ಮೊತ್ತದಲ್ಲೂ ಸಮಾನತೆ ತರುವ ದಿಸೆಯಲ್ಲಿ ಮಂಡಳಿ ಚಿತ್ತ ಹರಿಸಬೇಕು ಎಂಬ ಕೂಗು ಸಹ ಇದೆ. ಸದ್ಯ ಬಿಸಿಸಿಐ ತೆಗೆದುಕೊಂಡಿರುವ ತೀರ್ಮಾನದಿಂದಾಗಿ ಮಹಿಳಾ ಕ್ರಿಕೆಟ್‌ನ ಹಳೆಯ ಬೇಡಿಕೆಗಳಿಗೂ ಸ್ಪಂದನ ಲಭಿಸುವ ಭರವಸೆ ಚಿಗುರಿದೆ. ಬಿಸಿಸಿಐನ ಈ ನಡೆಯು ದೇಶದ ಬೇರೆ ಕ್ರೀಡೆಗಳ ಆಡಳಿತಗಾರರಿಗೂ ಮಾದರಿಯಾಗುವಂತಿದೆ. ವಿವಿಧ ಕ್ರೀಡೆಗಳಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ಗಿಟ್ಟಿಸಲು ಪುರುಷರಷ್ಟೇ ಮಹಿಳೆಯರೂ ಶ್ರಮಪಡುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳನ್ನು ಪುರುಷರಿಗಿಂತ ಹೆಚ್ಚಾಗಿ ಎದುರಿಸುತ್ತಾರೆ. ಆದರೂ ದೇಶದ ಕೀರ್ತಿಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸುವಲ್ಲಿ ಹಿಂದೆ ಬಿದ್ದಿಲ್ಲ. ಆದ್ದರಿಂದ ಅವರೆಲ್ಲರಿಗೂ ಹೆಚ್ಚಿನ ಪ್ರೋತ್ಸಾಹ ನೀಡುವತ್ತ ಕ್ರೀಡಾ ಫೆಡರೇಷನ್‌ಗಳು ಮುಂದಾಗಬೇಕು.

ದಿನದ ಟ್ವೀಟ್

ಅಪರಾಧಕ್ಕಿಂತ ಕಡಿಮೆಯಲ್ಲ

ದೆಹಲಿಯಲ್ಲಿ ವಾಯುಮಾಲಿನ್ಯದಿಂದ ಆಗುತ್ತಿರುವ ಪರಿಣಾಮಗಳು ಮನುಕುಲದ ವಿರುದ್ಧ ನಡೆಯುತ್ತಿರುವ ಅಪರಾಧಕ್ಕಿಂತ ಕಡಿಮೆಯೇನಲ್ಲ! ಸುಪ್ರೀಂ ಕೋರ್ಟ್ ಈ ವಿಷಯವನ್ನು ಸ್ವಯಂ ಪ್ರೇರಿತವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ದೆಹಲಿಯ ಮುಖ್ಯಮಂತ್ರಿ ಮತ್ತು ಅವರ ಬುದ್ಧಿವಂತ ಸಚಿವರಿಗೆ ಅದು ಸಮನ್ಸ್ ಕೊಡುತ್ತದೆಂದು ನಾನು ಭಾವಿಸುತ್ತೇನೆ. ದೆಹಲಿಯಲ್ಲಿ ಉತ್ತರದಾಯಿತ್ವ ಸಂಪೂರ್ಣವಾಗಿ ನೆಲಕಚ್ಚಿದೆ.

ಸುಹೇಲ್ ಸೇಠ್, ಲೇಖಕ, ನಟ

ಕಿಡಿನುಡಿ

ರಾಜ್ಯದಲ್ಲಿ ಬಿ.ಸಿ.ನಾಗೇಶ್ ಅವರು ಶಿಕ್ಷಣ ಸಚಿವರಾದ ದಿನದಿಂದ ಪಠ್ಯಪುಸ್ತಕ ವಿವಾದದಿಂದ ಹಿಡಿದು ಶಾಲಾ ಶಿಕ್ಷಕರ ನೇಮಕದವರೆಗೆ ಬರೀ ಹಗರಣಗಳಲ್ಲೇ ಈಜಾಡುತ್ತಿದ್ದಾರೆ. ಅವರ ಮನಸ್ಸು ಸ್ಥಿಮಿತದಲ್ಲಿದ್ದ ಹಾಗಿಲ್ಲ. ನಿಜವಾಗಿ ಯೋಗ ಮತ್ತು ಧ್ಯಾನದ ಅಗತ್ಯ ಎಲ್ಲರಿಗಿಂತ ಹೆಚ್ಚಾಗಿ ಶಿಕ್ಷಣ ಸಚಿವರಿಗಿದೆ.

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 4-11-1997

- **ಆಕ್ಟ್ರಾಯ್ ಪದ್ಧತಿ ಮರು ಜಾರಿಗೆ ಬಹುತೇಕ ಪೌರ ಸಂಸ್ಥೆಗಳ ಒಲವು**

ಬೆಂಗಳೂರು, ನ. 3– ಆಕ್ಟ್ರಾಯ್ ಪದ್ಧತಿ ಪುನರ್ ಜಾರಿಗೆ ರಾಜ್ಯದ ಬಹುತೇಕ ಪೌರ ಸಂಸ್ಥೆಗಳು ಒಲವು ವ್ಯಕ್ತಪಡಿಸಿವೆ. ಈ ವಿಚಾರದಲ್ಲಿ ಉದ್ಯಮ– ವ್ಯಾಪಾರಿ ಸಮುದಾಯದ ಪ್ರತಿನಿಧಿಗಳು ಹಾಗೂ ವಿರೋಧ ಪಕ್ಷಗಳ ಜೊತೆಗೆ ಚರ್ಚೆ ನಡೆಸಿ ಎರಡು ಮೂರು ತಿಂಗಳಲ್ಲಿ ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ.

ಅಭಿವೃದ್ಧಿ ಕಾರ್ಯಗಳು ಹಾಗೂ ವೇತನ ನೀಡಲು ಹಣಕಾಸು ಕೊರತೆ ಎದುರಿಸುತ್ತಿರುವ ಪೌರ ಸಂಸ್ಥೆಗಳ ಸಮಸ್ಯೆ ಕುರಿತು ಚರ್ಚಿಸಲು ಇಂದು ಕರೆದಿದ್ದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳ ಮೇಯರ್, ಅಧ್ಯಕ್ಷರು, ಆಯುಕ್ತರು ಹಾಗೂ ಮುಖ್ಯಾಧಿಕಾರಿಗಳ ಸಭೆಯಲ್ಲಿ ಆಕ್ಟ್ರಾಯ್ ಪದ್ಧತಿ ಪುನರ್ ಜಾರಿಗೆ ಒಲವು ವ್ಯಕ್ತವಾಯಿತು.

- **ಕಾಂಗ್ರೆಸ್‌ನಲ್ಲಿ ಒಡಕಿನ ಭೀತಿ: 9ರಂದು ಕಾರ್ಯಕಾರಿ ಸಭೆ**

ನವದೆಹಲಿ, ನ.3 (ಪಿಟಿಐ): ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಆದ ಒಡಕಿನಿಂದ ತಲ್ಲಣಗೊಂಡಿರುವ ಕಾಂಗ್ರೆಸ್ ಪಕ್ಷ, ಕೇಂದ್ರದಲ್ಲೂ ಇಂತಹುದೇ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮಹತ್ವದ ಸಭೆ ಈ ತಿಂಗಳ 9ರಂದು ನಡೆಯಲಿದೆ. ಉತ್ತರ ಪ್ರದೇಶದಲ್ಲಿ ರಾಜಕೀಯ ಬೆಳವಣಿಗೆಯಿಂದಾಗಿ ಪಕ್ಷಕ್ಕೆ ಉಂಟಾದ ಹಿನ್ನಡೆಯ ಬಗ್ಗೆ ಪಕ್ಷದ ನಾಯಕರು ಚಿಂತೆಗೊಳಗಾಗಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 4-11-1972

- **ವಿಯಟ್ನಾಂನಲ್ಲಿ ಶಾಂತಿ ಇನ್ನೂ ದೂರ- ನಿಕ್ಸನ್**

ವಾಷಿಂಗ್ಟನ್, ನ. 3– ವಿಯಟ್ನಾಂನಲ್ಲಿ ಯುದ್ಧ ನಿಂತು ಶಾಂತಿ ಉಂಟಾಗಲು ಇನ್ನೂ ಕೆಲವು ವಾರಗಳು ಬೇಕಾಗಬಹುದು ಎಂದು ಅಮೆರಿಕ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು ಗುರುವಾರ ಇಲ್ಲಿ ಸೂಚಿಸಿದರು.

‘ವಿಯಟ್ನಾಂ ಶಾಂತಿ ಒಪ್ಪಂದ ಇತ್ಯರ್ಥಗೊಳಿಸಲು ನಾವು ಸಿದ್ಧರಿದ್ದೇವೆ. ಆದರೆ ಶಾಂತಿ ಒಪ್ಪಂದ ಮಾಡಿಕೊಳ್ಳುವಂತೆ ನಮ್ಮನ್ನು ಒತ್ತಾಯದಲ್ಲಿ ಸಿಕ್ಕಿಸುವಂಥ ಚುನಾವಣಾ ಗಡುವು ಅಥವಾ ಇನ್ನಾವುದೇ ರೀತಿಯಲ್ಲಿ ಗಡುವನ್ನು ಒಪ್ಪಿಕೊಳ್ಳುವುದಿಲ್ಲ. ಇಂಥ ಒಪ್ಪಂದ ಹಂಗಾಮಿ ಕದನವಿರಾಮವಾದೀತೆ ಹೊರತು ಶಾಶ್ವತ ಶಾಂತಿ ಒಪ್ಪಂದವಾಗದು’ ಎಂದು ಅವರು ಗುರುವಾರ ಇಲ್ಲಿ ತಿಳಿಸಿದರು.

- **ಏಷ್ಯಾ ರಾಷ್ಟ್ರಗಳ ಏಕತೆ, ಸಹಕಾರಕ್ಕೆ ಪ್ರಧಾನಮಂತ್ರಿ ಕರೆ**

ನವದೆಹಲಿ, ನ. 3– ಆರ್ಥಿಕವಾಗಿ ಸಶಕ್ತವಾಗಲು, ಸ್ವಾವಲಂಬಿಯಾಗಲು ಹಾಗೂ ಹೊರಗಡೆಯ ಶಕ್ತಿಯಿಂದ ಈ ವಿಭಾಗವನ್ನು ಮುಕ್ತಗೊಳಿಸಲು ಏಷ್ಯಾ ರಾಷ್ಟ್ರಗಳು ಒಗ್ಗೂಡಬೇಕೆಂದು ಪ್ರಧಾನಿ ಇಂದಿರಾ ಗಾಂಧಿ ಇಲ್ಲಿ ಕರೆ ನೀಡಿದರು.

ಮೇಳದ ಹಂಸಧ್ವನಿ ವರ್ತುಲ ನಾಟಕ ಶಾಲೆಯಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಮೂರನೇ ‘ಏಷ್ಯಾ-72’ ಅನ್ನು ಉದ್ಘಾಟಿಸಿದ ಪ್ರಧಾನಿ ಅವರು, ಯಾವುದೇ ಖಂಡಗಳ ವಿರುದ್ಧ ಏಷ್ಯಾ ರಾಷ್ಟ್ರಗಳು ಒಟ್ಟಾಗಬೇಕಿಲ್ಲ, ಆದರೆ ತಮ್ಮ ಹಾಗೂ ವಿಶ್ವದ ಪ್ರಗತಿಗಾಗಿ ಅದು ಒಗ್ಗೂಡಬೇಕು ಎಂದರು.

ಎಲ್ಲರಲ್ಲಿರುವುದು ಒಬ್ಬನೇ ಭಗವಂತ ಎಂದು ಶಂಕರರು ಘೋಷಿಸಿದಾಗಲೇ ಜಾತಿ ಸಾಯಬೇಕಿತ್ತು

ಜಾತಿ: ಏಕೆ ಇಂದಿಗೂ ಜೀವಂತ?

ವಿಶ್ಲೇಷಣೆ

ಅರುಣ್ ಸಿನ್ಹಾ

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರು ಈಚೆಗೆ, ‘ಜಾತಿಯನ್ನು ಸಮಾಧಿ ಮಾಡೋಣ’ ಎಂಬ ಅರ್ಥದಲ್ಲಿ ಕರೆ ನೀಡಿದ್ದಾರೆ. ‘ಜಾತಿ ಸತ್ತುಹೋಗಿದೆಯೇ? ಯಾವಾಗ ಸತ್ತಿದೆ?’ ಎಂಬ ಪ್ರಶ್ನೆಗಳನ್ನು ನಾವು ಅವರಿಗೆ ಕೇಳಬೇಡವೇ?

ಎಲ್ಲರಲ್ಲಿಯೂ ಇರುವುದು ಒಬ್ಬನೇ ಭಗವಂತ, ಇದನ್ನು ಅರಿಯದ ಕಾರಣದಿಂದಾಗಿ ಒಬ್ಬರು ಇನ್ನೊಬ್ಬರ ಮೇಲೆ ದ್ವೇಷ ಸಾಧಿಸುವ ಕೆಟ್ಟ ಕೆಲಸ ಆಗುತ್ತಿದೆ ಎಂದು ಆದಿ ಶಂಕರರು ಎಂಟನೆಯ ಶತಮಾನದಲ್ಲಿ ಘೋಷಿಸಿದಾಗಲೇ ಜಾತಿ ಸತ್ತುಹೋಗಬೇಕಿತ್ತು. ಆದರೆ ಅದು ಉಳಿದುಕೊಂಡಿತು. ಭಕ್ತಿ ಚಳವಳಿಯ ಸಂತರು, ಮನುಷ್ಯ ಮತ್ತು ದೇವರು ಒಬ್ಬನೇ ಎಂಬ ಭಜನೆಗಳನ್ನು 13ನೆಯ ಶತಮಾನದಿಂದ 16ನೆಯ ಶತಮಾನದವರೆಗೆ ಹಾಡುತ್ತಿದ್ದಾಗ, ಜಾತಿ ಸಾಯುವ ನಿರೀಕ್ಷೆ ಇತ್ತು. ಆದರೂ ಅದು ಬೆಳೆಯಿತು.

ಸಮಾಜ ಸುಧಾರಕರಾದ ರಾಜಾರಾಮಮೋಹನ ರಾಯ್ ಮತ್ತು ಭೀಮರಾವ್ ಅಂಬೇಡ್ಕರ್ ಅವರು 19 ಮತ್ತು 20ನೆಯ ಶತಮಾನದಲ್ಲಿ ನಡೆಸಿದ ಹೋರಾಟಗಳ ಪರಿಣಾಮವಾಗಿ ಜಾತಿ ಮರೆಯಾಗುವ ನಿರೀಕ್ಷೆ ಇತ್ತು. ಆದರೆ ತೀರಾ ಚಿಕ್ಕಪುಟ್ಟ ಗಾಯಗಳೊಂದಿಗೆ ಅದು ಉಳಿದುಕೊಂಡಿತು. ದೇಶದ ಸಂವಿಧಾನವು ಇಲ್ಲಿ ಎಲ್ಲರೂ ಸಮಾನರು ಎಂದು ಘೋಷಿಸಿದಾಗ ಜಾತಿ ಅಂತ್ಯವಾಗಬೇಕಿತ್ತು. ಆದರೆ ಅದು ಉಳಿದುಕೊಂಡಿತು.

ನಮ್ಮೆದುರು ಗಹಗಹಿಸಿ ನಗುತ್ತಿರುವ ದೈತ್ಯನ ರೀತಿಯಲ್ಲಿ ನಿಂತಿರುವ ಜಾತಿಯನ್ನು ನಾವು ಸಮಾಧಿ ಮಾಡುವುದು ಹೇಗೆ? ಅದನ್ನು ಸಮಾಧಿ ಮಾಡುವ ಮೊದಲು ಕೊಲ್ಲಬೇಕು. ಆದರೆ, ನಮ್ಮ ಕಾಲದ ಯಾವುದೇ ನಾಯಕ ಅಥವಾ ಯಾವುದೇ ಸಂಘಟನೆಯು– ಅದರಲ್ಲಿ ಭಾಗವತ್ ಮತ್ತು ಅವರ ಆರ್‌ಎಸ್‌ಎಸ್ ಕೂಡ ಸೇರಿದೆ– ಜಾತಿಯ ಎದೆಯನ್ನು ಸೀಳುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಲ್ಲ ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗುತ್ತದೆ. ವಾಸ್ತವದಲ್ಲಿ ಜಾತಿಗೆ ಎಲ್ಲರೂ ನೀರೆರೆದಿದ್ದಾರೆ.

ಗಾಂಧೀಜಿ ಅವರಿಂದಲೇ ಆರಂಭಿಸೋಣ. ರಾಜಕೀಯ ಮತ್ತು ಸಾಮಾಜಿಕ ನೆಲೆಯಲ್ಲಿ ಅವರು ಕ್ರಾಂತಿಕಾರಿ ಆಗಿದ್ದರು. ವರ್ಣಾಶ್ರಮದ ವಿಚಾರದಲ್ಲಿ ಅವರು ಅತಿಯಾದ ಸಂಪ್ರದಾಯವಾದಿ ಆಗಿದ್ದರು. ಹಿಂದೂ ಸಮಾಜವನ್ನು ನಾಲ್ಕು ಭಾಗಗಳನ್ನಾಗಿ ವಿಭಜಿಸಿರುವುದು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ) ಆದರ್ಶಪ್ರಾಯವಾದ ಸಾಮಾಜಿಕ ವ್ಯವಸ್ಥೆ. ತಮ್ಮ ಪೂರ್ವಿಕರ ವೃತ್ತಿಯನ್ನು ಪಾಲಿಸಿಕೊಂಡು ಬಂದವರು ಅದರಲ್ಲಿ ಸಂತೃಪ್ತಿ ಹೊಂದಿದ್ದರು. ಈ ವ್ಯವಸ್ಥೆಯಲ್ಲಿ ದುರಾಸೆ, ಸ್ಪರ್ಧೆ ಮತ್ತು ಹೊಟ್ಟೆಕಿಚ್ಚಿಗೆ ಅವಕಾಶವೇ ಇಲ್ಲ. ವರ್ಣಾಶ್ರಮ ವ್ಯವಸ್ಥೆಯನ್ನು ವಿಶ್ವದ ಇತರ ರಾಷ್ಟ್ರಗಳು ಕೂಡ ತಮ್ಮ ಅನುಕೂಲಕ್ಕಾಗಿ ಅನುಕರಣೆ ಮಾಡಬಹುದು ಎಂದು ಗಾಂಧೀಜಿ ಹೇಳಿದ್ದರು!

ಎಲ್ಲ ಜಾತಿಗಳನ್ನೂ ಸಮಾನವಾಗಿ, ಗೌರವದಿಂದ ಕಾಣಬೇಕು ಎಂದು ಗಾಂಧೀಜಿ ಬಯಸಿದ್ದರು. ವೃತ್ತಿಯನ್ನು ಪೂರ್ವಿಕರಿಂದ ಬಳುವಳಿಯಾಗಿ ಪಡೆಯುವುದನ್ನು ಗಾಂಧೀಜಿ ಸಮರ್ಥಿಸಿಕೊಂಡಿದ್ದರೂ, ವೃತ್ತಿಯಲ್ಲಿ ಮೇಲು–ಕೀಳು ಎಂಬ ವಾದವನ್ನು ಒಪ್ಪುತ್ತಿರಲಿಲ್ಲ. ಜಾತಿ ಆಧಾರಿತ ಅಸಮಾನತೆ ಮತ್ತು ಅಸ್ಪೃಶ್ಯತೆಯು ಅವರ ಪ್ರಕಾರ ವರ್ಣಾಶ್ರಮ ವ್ಯವಸ್ಥೆಯ ವಿಕಾರ ರೂಪವಾಗಿತ್ತು. ಇದನ್ನು ತೊಡೆದುಹಾಕಿ ಆದರ್ಶಪ್ರಾಯವಾದ ವ್ಯವಸ್ಥೆಯನ್ನು ಮತ್ತೆ ಕಟ್ಟಬೇಕು ಎಂಬುದು ಅವರ ನಿಲುವಾಗಿತ್ತು. ಚುಟುಕಾಗಿ ಹೇಳಬೇಕು ಎಂದಾದರೆ, ಗಾಂಧೀಜಿ ಅವರಿಗೆ ಆರಂಭದಲ್ಲಿ ಜಾತಿ ವ್ಯವಸ್ಥೆ ನಿರ್ಮೂಲವಾಗುವುದು ಬೇಕಿರಲಿಲ್ಲ; ಅದರಲ್ಲಿ ಸುಧಾರಣೆ ಆಗುವುದು ಬೇಕಿತ್ತು.

ಜಾತಿ ಇಲ್ಲವಾಗಬೇಕು ಎಂದು ನೆಹರೂ ತಾತ್ವಿಕವಾಗಿ ಬಯಸಿದ್ದರು. ಆದರೆ ಪ್ರಧಾನಿಯಾಗಿ ಒಂದಿಷ್ಟು ರಾಜಿ ಮಾಡಿಕೊಂಡು, ಜಾತಿ ಆಧಾರಿತ ಮೀಸಲಾತಿಗೆ ಅವಕಾಶ ಕೊಟ್ಟರು. ಮೀಸಲಾತಿಯು ಆರ್ಥಿಕ ಮಾನದಂಡ ಆಧರಿಸಿ ಇರಬೇಕು ಎಂದು ಅಂದಿನ ಉದಾರವಾದಿ ಬುದ್ಧಿಜೀವಿ ವರ್ಗ ಹೇಳಿತ್ತಾದರೂ, ನೆಹರೂ ಅವರು ಖಚಿತ ನಿಲುವು ತಾಳಲಿಲ್ಲ. ಹಿಂದುಳಿದ ವರ್ಗಗಳಿಗೆ ಎಲ್ಲ ವಲಯಗಳಲ್ಲಿಯೂ ಶೇ 60ರಷ್ಟು ಮೀಸಲಾತಿ ಕಲ್ಪಿಸಿ ಎಂದು ಲೋಹಿಯಾ ಹೇಳಿದ ಮಾತು ಕೊನೆಗೆ ಮಂಡಲ ರಾಜಕಾರಣದಲ್ಲಿ ಪರ್ಯವಸಾನ ಕಂಡಿತು. ಇದನ್ನು ಸಮಾಜಶಾಸ್ತ್ರಜ್ಞ ಜಿ.ಎಸ್. ಘುರ್ಯೆ ಅವರು ‘ಜಾತಿ ದೇಶಭಕ್ತಿ’ ಎಂದು ಕರೆದಿದ್ದಾರೆ.

ಜಾತಿ ಇಂದು ಕಾರ್ಮಿಕ ಸಂಘಟನೆಗಳ ರೀತಿಯಲ್ಲಿಯೇ ತನ್ನ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದೆ. ಜಾತಿಯ ನಿರ್ಮೂಲನೆ ಇಂದು ಸಾಧ್ಯವಿಲ್ಲ. ಅಂಬೇಡ್ಕರ್‌ವಾದಿ ಮತ್ತು ಮಂಡಲ್ ರಾಜಕೀಯ ಪಕ್ಷಗಳ ಜೀವನಾಡಿ ಜಾತಿ. ಜಾತಿಗಳ ಆಧಾರದಲ್ಲಿನ ಮೀಸಲಾತಿಯನ್ನು ನಿಲ್ಲಿಸುವುದಕ್ಕೆ ಅವುಗಳ ಸಹಮತ ಇಲ್ಲ. ಈ ವಿಚಾರವಾಗಿ ಭಾಗವತ್ ಅವರು ದೊಡ್ಡ ಅನುಭವ ಹೊಂದಿದ್ದಾರೆ. 2015ರ ಬಿಹಾರ ವಿಧಾನಸಭಾ ಚುನಾವಣೆ ವೇಳೆ ಅವರು ಮೀಸಲಾತಿ ಇಲ್ಲವಾಗಿಸುವ ಸಂದರ್ಭ ಇದು ಎಂದು ಹೇಳಿದ್ದರು. ಆಗ ಬಿಜೆಪಿ ವಿರೋಧಿ ಮತಗಳು ಭಾರಿ ಪ್ರಮಾಣದಲ್ಲಿ ಹೆಚ್ಚಳ ಕಂಡಿದ್ದವು.

ಭಾಗವತ್ ಮತ್ತು ಆರ್‌ಎಸ್‌ಎಸ್ ‘ಜಾತಿ ವ್ಯವಸ್ಥೆ ಕೊನೆಗೊಳ್ಳಬೇಕು’ ಎಂದು ಹೇಳಿದಾಗಲೆಲ್ಲ, ಆ ಮಾತು ದುರ್ಬಲ ಜಾತಿಗಳನ್ನು ಉದ್ದೇಶಿಸಿರುತ್ತದೆ. ಈ ಮಾತನ್ನು ಅವರು ಪ್ರಬಲ ಜಾತಿಗಳನ್ನು ಉದ್ದೇಶಿಸಿ ಹೇಳುವುದಿಲ್ಲ. ದುರ್ಬಲ ಜಾತಿಗಳು ಪ್ರಬಲ ಜಾತಿಗಳ ವಿರುದ್ಧ ನಿಲ್ಲುತ್ತಿವೆ,

ಇದು ಹಿಂದೂ ಕುಟುಂಬವನ್ನು ಒಡೆಯುತ್ತಿದೆ, ಹಿಂದೂ ಕುಟುಂಬವು ಮತ್ತೆ ಒಂದಾಗಬೇಕು ಎಂಬ ನೆಲೆಯಲ್ಲಿ ಅವರು ಮಾತನಾಡುತ್ತಾರೆ. ಜಾತಿಯನ್ನು ಸಮಾಧಿ ಮಾಡಬೇಕು ಎಂದು ಭಾಗವತ್ ಹೇಳಿದ ಮಾತಿನ ಅರ್ಥ ದಲಿತರು ಮತ್ತು ಹಿಂದುಳಿದ ವರ್ಗಗಳು ಹಿಂದೂ ತೆಕ್ಕೆಗೆ ಮರಳಬೇಕು ಎಂದೇ ಆಗಿದೆ. ಅಸಮಾನ ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ನಾಶ ಮಾಡಿ, ಅದನ್ನು ಸಮಾನತೆಯ ನೆಲೆಯಲ್ಲಿ ಕಟ್ಟುವುದು ಆರ್‌ಎಸ್‌ಎಸ್ ಗುರಿ ಅಲ್ಲ. ಆರ್‌ಎಸ್‌ಎಸ್ ಕೂಡ ಅಸ್ಪೃಶ್ಯತೆಯನ್ನು ‘ವಿಕಾರ’ವೆಂದಷ್ಟೇ ಭಾವಿಸುತ್ತದೆ. ಇಂತಹ ವಿಕಾರಗಳು ಇಲ್ಲವಾಗಬೇಕು ಎಂದು ಆರ್‌ಎಸ್‌ಎಸ್ ಬಯಸುತ್ತದೆ. ಗಾಂಧಿ ಅವರಿಗೆ ಮಾನವ ಸಮಾನತೆಯ ಸ್ಥಾಪನೆಗೆ ಇದು ನಿರ್ಮೂಲವಾಗಬೇಕಿತ್ತು. ಆದರೆ ಆರ್‌ಎಸ್‌ಎಸ್‌ಗೆ, ಇಸ್ಲಾಮಿಕ್ ಮತ್ತು ಕ್ರೈಸ್ತ ಮಿಷನರಿಗಳು ನಡೆಸುವ ಮತಾಂತರ ಎದುರಿಸಲು ಹಿಂದೂ ಭ್ರಾತೃತ್ವವನ್ನು ಸ್ಥಾಪಿಸಲು ಇದು ಬೇಕಾಗಿದೆ.

ದಲಿತರನ್ನು ‘ಹಿಂದೂ ಕುಟುಂಬ’ದೊಳಗೆ ಸೇರಿಸಿಕೊಳ್ಳಲು ಆರ್‌ಎಸ್‌ಎಸ್ ದಶಕಗಳಿಂದ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ದಲಿತರು ದೇವಸ್ಥಾನ ಪ್ರವೇಶಿಸಲು ಆರ್‌ಎಸ್‌ಎಸ್‌ನ ಸ್ಥಳೀಯ ಘಟಕಗಳು ಹಲವೆಡೆ ಕೆಲಸ ಮಾಡುತ್ತಿವೆ. ದಲಿತರ ಜೊತೆ ಸಹಭೋಜನವನ್ನು ಆರ್‌ಎಸ್‌ಎಸ್ ಪ್ರೋತ್ಸಾಹಿಸುತ್ತಿದೆ. ಭಾಗವತ್ ಅವರು ಒಂದು ಪ್ರಶ್ನೆಯನ್ನು ತಮಗೇ ಕೇಳಿಕೊಳ್ಳಬೇಕು: ಸರಿಸುಮಾರು ಶತಮಾನದಿಂದ ನಡೆಯುತ್ತಿರುವ ಆರ್‌ಎಸ್‌ಎಸ್ ಕಾರ್ಯದಿಂದ ಜಾತಿ ದೂರವಾಗಿದೆಯೇ? ಹೋಗಿಲ್ಲವೆಂದಾದರೆ, ಏಕೆ?

ನಾಲ್ಕು ಕಾರಣಗಳಿಂದಾಗಿ ಅದು ದೂರ ಹೋಗಿಲ್ಲ. ಒಂದು: ಜಾತಿಯ ಬೇರಿನ ಮೇಲೆ ಆರ್‌ಎಸ್‌ಎಸ್ ಯಾವತ್ತೂ ದಾಳಿ ನಡೆಸಿಲ್ಲ. ಪವಿತ್ರವೆಂದು ಹೇಳಲಾಗುರುವ ಕೆಲವು ಹಿಂದೂ ಪಠ್ಯಗಳಲ್ಲಿ ಜಾತಿಗೆ ಅನುಮತಿ ನೀಡಲಾಗಿದೆ. ಈ ಪಠ್ಯಗಳನ್ನು ಆರ್‌ಎಸ್‌ಎಸ್ ತಿರಸ್ಕರಿಸಿಲ್ಲ.

ಎರಡು: ಈ ಅನುಮತಿಗಳ ಕಾರಣದಿಂದಾಗಿ ಬ್ರಾಹ್ಮಣರು ಮಾತ್ರ ಅರ್ಚಕರಾಗಬಹುದು. ಅರ್ಚಕ ವೃತ್ತಿಯು ಒಂದು ಸೇವೆಯಂತೆ ಪರಿಗಣಿತವಾಗಬೇಕು, ಎಲ್ಲ ಜಾತಿಗಳ ಜನರಿಗೂ ಇದನ್ನು ಕೈಗೆತ್ತಿಕೊಳ್ಳಲು ಅವಕಾಶವಿರಬೇಕು ಎಂದು ಅಂಬೇಡ್ಕರ್ ಬಯಸಿದ್ದರು. ಜಾತಿ ವ್ಯವಸ್ಥೆಯ ಹೃದಯ ಭಾಗದಲ್ಲಿರುವುದು ಬ್ರಾಹ್ಮಣರಿಗೆ ಮಾತ್ರ ಈ ಅವಕಾಶ ಎಂಬ ನಿಯಮ. ಅರ್ಚಕರಾಗಲು ಎಲ್ಲರಿಗೂ ಅವಕಾಶ ಕಲ್ಪಿಸಿದರೆ, ಜಾತಿ ವ್ಯವಸ್ಥೆ ಕುಸಿಯುತ್ತದೆ ಎಂದು ಅಂಬೇಡ್ಕರ್ ಹೇಳಿದ್ದರು. ಆರ್‌ಎಸ್‌ಎಸ್ ಇದಕ್ಕೆ ಯಾವತ್ತೂ ಬೆಂಬಲ ನೀಡಿಲ್ಲ.

ಮೂರನೆಯದು: ದುರ್ಬಲ ಜಾತಿಗಳು ‘ಹಿಂದೂ ಕುಟುಂಬ’ದಿಂದ ಏಕೆ ದೂರವಾಗುತ್ತಿವೆ ಎಂಬುದನ್ನು ಆರ್‌ಎಸ್‌ಎಸ್ ಯಾವತ್ತೂ ತನ್ನ ಧಾರ್ಮಿಕ ಕನ್ನಡಕ ತೆಗೆದಿರಿಸಿ ಗಮನಿಸಿಲ್ಲ. ಶೋಷಣೆ, ತುಳಿತ, ಹಿಂಸೆಗೆ ದುರ್ಬಲ ಜಾತಿಗಳು ಯಾವಾಗಲೂ ತುತ್ತಾಗುತ್ತಿವೆ. ಅವರನ್ನು ಪ್ರಬಲ ಜಾತಿಗಳಿಗೆ ಸೇರಿದವರು ತಮ್ಮ ಸಹೋದರರಂತೆ ಕಂಡಿದ್ದರೆ ಜಾತೀಯತೆಯೇ ಇರುತ್ತಿರಲಿಲ್ಲ.

ನಾಲ್ಕನೆಯದು: ಪ್ರಬಲ ಜಾತಿಗಳ ಜಾತೀಯತೆಗೆ ಪ್ರತಿಯಾಗಿ ಅಂಬೇಡ್ಕರ್‌ವಾದಿಗಳು ಮತ್ತು ಮಂಡಲ್ ಪಕ್ಷಗಳ ಜಾತೀಯತೆ ಚಾಲ್ತಿಗೆ ಬಂತು. ಆರ್‌ಎಸ್‌ಎಸ್ ತನ್ನ ಸಂಘಟನಾ ಬಲವನ್ನು ಬಳಸಿ ಪ್ರಬಲ ಜಾತಿಗಳ ಜಾತೀಯತೆಯ ವಿರುದ್ಧ ಹೋರಾಡದಿದ್ದರೆ, ಜಾತಿಯನ್ನು ಕೊನೆಗಾಣಿಸಬೇಕು ಎಂದು ಅದು ನೀಡುವ ಕರೆ ಬೂಟಾಟಿಕೆಯದ್ದಾಗಿ ಕಾಣುತ್ತದೆ.

ಚುರುಮುರಿ



ಎಲ್ಲ ದೇವರಿಚ್ಛೆ!

• ಬಿ.ಎನ್.ಮಲ್ಲೇಶ್

ಪಂಚಾಯ್ತಿ ಮೆಂಬರ್ ಪರ್ಮೇಶಿ ಅಪರೂಪಕ್ಕೆ ಹರಟೆಕಟ್ಟೆಗೆ ಬಂದಿದ್ದ. ಚಾ ಸಮಾರಾಧನೆ ಎಲ್ಲ ಮುಗಿದ ಬಳಿಕ ತೆಪರೇಸಿ ‘ಅಲ್ಲಲೆ ಪರ್ಮಿ, ನಮ್ಮೂರು ಬಸ್‌ಸ್ಟ್ಯಾಂಡ್ ಟಾಯ್ಲೆಟ್ ನೋಡೀ ಏನ್ಲೆ? ಎಷ್ಟು ಗಬ್ಬು ನಾರ್ತತಿ, ಮುಕ್ಕಾಲು ಗ್ವಾಡಿನೇ ಬಿದ್ದು ಹೋಗೇತಿ. ರಿಪೇರಿ ಮಾಡ್ಸಲ್ಲೇನು?’ ಎಂದು ಕೇಳಿದ.

‘ಅದಾ? ಟೆಂಡರ್ ಆಗೇತಲೆ, ಅವನು ಕಾಂಟ್ರಾಕ್ಟು ಕೈಗೇ ಸಿಕ್ತಿಲ್ಲ...’ ಪರ್ಮೇಶಿ ತಲೆ ಕೊಡವಿದ.

‘ಯಾಕೆ? ನೀನು ಕಮಿಷನ್ ಜಾಸ್ತಿ ಕೇಳಿರಬೇಕು’ ಗುಡ್ಡೆ ನಕ್ಕ.

‘ಲೇಯ್ ಗುಡ್ಡೆ ನೆಟ್ಟಗೆ ಮಾತಾಡು, ನಮ್ ಪರ್ಮಿ ಟಾಯ್ಲೆಟ್‌ನಾಗೆಲ್ಲ ಕಮಿಷನ್ ತಿನ್ನೋನಲ್ಲ...’ ದುಬ್ಬೀರ ಇದ್ದವನು ಪರ್ಮೇಶಿ ಪರ ನಿಂತ.

‘ಆತುಬಿಡಪ, ಆದ್ರೆ ಟಾಯ್ಲೆಟ್ ಬಿದ್ದೋಗೇತಿ, ಹೆಣಮಕ್ಳಿಗೆ ತೊಂದ್ರಿ ಆಗಲ್ವ ಅಂತ ಅಷ್ಟೆ ನನ್ನ ಕಾಳಜಿ...’

‘ಲೇ ಗುಡ್ಡೆ, ದೇಶದಾಗೆ ಎಂತೆಂಥ ಸೇತುವೆಗಳೇ ಬಿದ್ದು ಹೋಗಿದಾವು. ಜುಜುಬಿ ಈ ಟಾಯ್ಲೆಟ್‌ದು ಹೇಳ್ತಿಯಲ್ಲಲೆ’ ಪರ್ಮೇಶಿ ಆಕ್ಷೇಪಿಸಿದ.

‘ಕರೆಕ್ಟ್, ಸೇತುವೆನೋ ಟಾಯ್ಲೆಟ್ಟೋ ಅವು ಬಿದ್ರೆ ಯಾರೇನ್ ಮಾಡಾಕಾಗ್ತತಿ? ಎಲ್ಲ ದೇವರಿಚ್ಛೆ!’ ತೆಪರೇಸಿ ಆಕಾಶ ನೋಡಿದ.

‘ಅಲ್ಲ ನನ್ ಪ್ರಶ್ನೆ ಏನಪ ಅಂದ್ರೆ, ನಮ್ ಮಿನಿಸ್ಟ್ರಿಗೆ ಇರೋ ಕಾಳಜಿ ನಿಂಗಿಲ್ಲಲ್ಲ ಅಂತ’ ಗುಡ್ಡೆ ಮತ್ತೆ ರಾಗ ಎಳೆದ.

‘ಏನು ಹಂಗಂದ್ರೆ? ಏನು ಕಾಳಜಿ?’

‘ಪೇಪರ್ ನೋಡಿಲ್ವಾ? ನಮ್ಮ ಮಿನಿಸ್ರು ಒಬ್ರು ಅದ್ಯಾವುದೋ ಕಾಲುವೆ ರಿಪೇರಿ ಆಗಿಲ್ಲ ಅಂತ ಸಿಟ್ಟಿಗೆದ್ದು ರಾತ್ರಿ ಎಲ್ಲ ಆ ಕಾಲುವೆ ಪಕ್ಕಾನೇ ಮಲಗಿದ್ರಂತೆ’.

‘ಅದ್ಕೆ? ನಾನೇನ್ ಮಾಡ್ಲಿ?’ ಪರ್ಮೇಶಿ ಪ್ರಶ್ನೆ.

‘ನೀನೂ ಮಲಗಬೇಕು’.

‘ಎಲ್ಲಿ?’

‘ಆ ಟಾಯ್ಲೆಟ್ ಪಕ್ಕದಲ್ಲಿ!’

ಗುಡ್ಡೆ ಮಾತಿಗೆ ಸಿಟ್ಟಿಗೆದ್ದ ಪರ್ಮೇಶಿ ಚಾ ಕಪ್ ಬಿಸಾಕಿ ತಿರುಗಿ ನೋಡದೆ ಎದ್ದು ಹೋದ. ಎಲ್ಲರೂ ಒಳಗೇ ನಕ್ಕರು.

ಸಂಗತ

ಅಭಿವೃದ್ಧಿಗೆ ‘ಸಾಲ’ದ ಮೆಟ್ಟಿಲು!

ಸಾಲ ಪಡೆಯುವುದರ ಬಗ್ಗೆ ಇರುವ ನಕಾರಾತ್ಮಕ ನಂಬಿಕೆಗಳನ್ನು ಎಲ್ಲ ವ್ಯವಹಾರಗಳಿಗೂ ಅನ್ವಯಿಸಿಕೊಳ್ಳುವುದು ಸಮಂಜಸವಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

ರಿಲಯನ್ಸ್ ಉದ್ಯಮ ಸಾಮ್ರಾಜ್ಯ ಕಟ್ಟಿದ ಧೀರುಭಾಯಿ ಅಂಬಾನಿ ಅವರ ಬದುಕಿನ ರೋಚಕ ಸಂಗತಿ ಇದು. ಯೆಮನ್ ದೇಶದ ಏಡನ್ ಬಂದರಿನಲ್ಲಿ ಕೆಲಸಕ್ಕೆ ಸೇರಿಕೊಳ್ಳಲು ಹೊರಟಾಗ ಅವರ ಬಳಿ ಹಣವಿರಲಿಲ್ಲ. ಅವರು ಚಿಂತಿಸುತ್ತಿದ್ದಾಗ ಪಕ್ಕದ ಮನೆಯ ಸರಭಾಭಾ ಪಾರ್ಥ ಎಂಬುವರು ಸಾಲ ಕೊಡಲು ಒಪ್ಪಿದರು. ಮನೆಯವರು ‘ಸಾಲ ಮಾಡಿ ಹೋಗುವುದು ಬೇಡ, ಇಲ್ಲೇ ಕೆಲಸ ಹುಡುಕು’ ಎಂದರು. ಸಮಾಜದ ಗುರುಗಳೂ ‘ಸಾಲ ಮಾಡಬೇಡ’ ಎಂದು ಉಪದೇಶ ಮಾಡಿದರು. ಎಲ್ಲ ಹಳೆಯ ನಂಬಿಕೆಗಳನ್ನೂ ಪಕ್ಕಕ್ಕೆ ಸರಿಸಿ ಧೀರುಭಾಯಿ ಸಾಲ ಪಡೆದು ಏಡನ್‌ಗೆ ತೆರಳಿ ಕೆಲಸಕ್ಕೆ ಸೇರಿಕೊಂಡರು. ಇದು ಅವರ ಬೆಳವಣಿಗೆಗೆ ಮೆಟ್ಟಿಲಾಯಿತು. ಸಾಲ, ಬಡ್ಡಿ ಹಣ ವಾಪಸ್ ಮಾಡಿದರು. ಮುಂದೆ ಕಂಪನಿ ಕಟ್ಟಿದಾಗ ಪಾರ್ಥ ಅವರ ಮಗ ಹಾಗೂ ಮೊಮ್ಮಗನಿಗೆ ಉದ್ಯೋಗ ನೀಡಿ ಕೃತಜ್ಞತೆ ಸಲ್ಲಿಸಿದರು.

ಸಮರ್ಪಕವಾಗಿ ಬಳಸಿಕೊಳ್ಳುವ ಸಾಲ ಆರ್ಥಿಕವಾಗಿ ಬೆಳೆಯಲು ಊರುಗೋಲಾಗುತ್ತದೆ ಎನ್ನುವ ಮಾತನ್ನು ಧೀರುಭಾಯಿ ಅಂಬಾನಿ ತಮ್ಮ ಬದುಕಿನುದ್ದಕ್ಕೂ ಹೇಳುತ್ತಿದ್ದರು.

‘ಸಾಲ ಎಂದರೆ ಶೂಲ’ ಎಂಬ ಭಯ ಸಾಮಾನ್ಯವಾಗಿ ಎಲ್ಲರ ಭಾವನೆಯಾಗಿದೆ. ಸಾಲ ಮಾಡುವುದನ್ನು ಅಪರಾಧ ಎನ್ನುವಂತೆ ಪ್ರವಚನ, ಉಪನ್ಯಾಸ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಿಂಬಿಸಲಾಗುತ್ತದೆ. ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಕೆಲವು ಪುಸ್ತಕಗಳಲ್ಲಿಯೂ ಇಂತಹುದೇ ಸಲಹೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಲದ ಬಗ್ಗೆ ಅತಿಯಾದ ತಪ್ಪು ಕಲ್ಪನೆಗಳು ತುಂಬಿವೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಲ ಪೂರಕ, ಸಾಲದ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ಸಂಪತ್ತನ್ನು ವೃದ್ಧಿಸಿಕೊಳ್ಳಲು ಸಾಧ್ಯವಿದೆ ಎನ್ನುವುದನ್ನು ಮರೆಯಬಾರದು.

ಸಾಲ ಪಡೆದು ಅದನ್ನು ಸದ್ವಿನಿಯೋಗ ಮಾಡಿಕೊಂಡು ಆರ್ಥಿಕ ಉನ್ನತಿ ಸಾಧಿಸುವುದನ್ನು ಹಣಕಾಸು ನಿರ್ವಹಣೆಯ ಪರಿಭಾಷೆಯಲ್ಲಿ ಲಿವರೇಜಿಂಗ್ ಎಂದು ಕರೆಯಲಾಗುತ್ತದೆ. ದೊಡ್ಡ ಭಾರದ ವಸ್ತುಗಳನ್ನು ಎತ್ತಲು ಭೌತಶಾಸ್ತ್ರದ ಸನ್ನೆ ವಿಧಾನ ಅನುಸರಿಸಲಾಗುತ್ತದೆ. ಹಣಕಾಸಿನ ಭಾರ ನೀಗಿಸಲು ಸಾಲ ಒಂದು ಸನ್ನೆಯಾಗಬೇಕು ಎಂಬುದನ್ನು ಒಂದು ರೂಪಕವಾಗಿ ಹೇಳಲಾಗುತ್ತದೆ.

‘ಸಾಲ ಪಡೆದು ಶ್ರೀಮಂತರಾಗಿ’ ಎನ್ನುವ ಮಾತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಒಂದು ಘೋಷವಾಕ್ಯವಾಗಿದೆ.

ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ
ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ

ಸಾಲದ ದುಡ್ಡನ್ನು ದುಂದುವೆಚ್ಚ ಮಾಡಿ ಕಳೆದುಕೊಳ್ಳುವವರ ಕುರಿತು ಸರ್ವಜ್ಞ ಹೇಳಿದ ಎಚ್ಚರಿಕೆಯ ಮಾತುಗಳಿವು. ಇದನ್ನೇ ಎಲ್ಲ ವ್ಯವಹಾರಗಳಿಗೆ ಅನ್ವಯಿಸಿ ಹೇಳುವುದು ಸಮಂಜಸವಲ್ಲ.

1990ರ ದಶಕದ ಆರಂಭದಿಂದ ಶುರುವಾದ ಆರ್ಥಿಕ ಉದಾರೀಕರಣದ ಶಕೆ, ಆರ್ಥಿಕ ಸಬಲೀಕರಣದಲ್ಲಿ ಒಂದು ಮಹತ್ವದ ಹೆಜ್ಜೆ. ದೇಶವು ನಿಧಾನವಾಗಿ ಕೃಷಿ ಪ್ರಧಾನ ವ್ಯವಸ್ಥೆಯೊಂದಿಗೆ ಉದ್ಯಮ ಪ್ರಧಾನ ವ್ಯವಸ್ಥೆಯತ್ತ ಸಾಗುವುದಕ್ಕೆ ನೆರವಾಯಿತು.

ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಸಾಲ ಕೊಡಲು ಮುಂದೆ ಬರುತ್ತಿವೆ. ಬೆಳೆಯಬೇಕೆನ್ನುವವರಿಗೆ ಇದು ಒಂದು ದೊಡ್ಡ ಅವಕಾಶ. ಇಲ್ಲಿ ಸಾಲವಾಗಿ ಪಡೆದ ಬಂಡವಾಳಕ್ಕೆ ಪಾವತಿಸುವ ಬಡ್ಡಿಗಿಂತ ಹೆಚ್ಚಿನ ಲಾಭವನ್ನು ಕಂಡುಕೊಳ್ಳುವುದು ಬಹಳ ಮುಖ್ಯ. ಸರಿಯಾದ ಯೋಜನೆ ರೂಪಿಸಬೇಕು. ತಜ್ಞರಿಂದ ಮಾರ್ಗದರ್ಶನ ಪಡೆಯಬೇಕು. ಶ್ರದ್ಧೆ ಹಾಗೂ ಶ್ರಮದಿಂದ ನಿಗದಿತ ಸಮಯದಲ್ಲಿಯೇ ಕಾರ್ಯರೂಪಕ್ಕೆ ತರಬೇಕು. ನಿರ್ವಹಣಾ ಕೌಶಲ ಪ್ರತಿಯೊಬ್ಬರ ವೈಯಕ್ತಿಕ ಬೆಳವಣಿಗೆಗೂ ದೇಶದ ಸಮಗ್ರ ಬೆಳವಣಿಗೆಗೂ ಅತ್ಯಂತ ಅವಶ್ಯ.

ಬ್ರಿಟನ್ ಆರ್ಥಿಕ ಬಿಕ್ಕಟ್ಟಿಗೆ ಸಾಲದ ನಿಯಮಗಳನ್ನು ಕಠಿಣಗೊಳಿಸಿರುವುದು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದು ಈಗ ಹೇಳಲಾಗುತ್ತಿದೆ. ಅಲ್ಲಿ ಆಸ್ತಿ ಅಡಮಾನ ಸಾಲ ಒಮ್ಮೆಲೇ ಶೇ 50ರಷ್ಟು ಕುಸಿತ ಕಂಡಿದೆ. ಇದರಿಂದ ಬ್ರಿಟನ್ನಿನ ರಿಯಲ್ ಎಸ್ಟೇಟ್ ಉದ್ಯಮ ಬಹಳ ಹಿನ್ನಡೆ ಅನುಭವಿಸುತ್ತಿದೆ. ಹೊಸ ಆಡಳಿತ ವ್ಯವಸ್ಥೆಯು ಸಾಲ ನೀತಿಯನ್ನು ಸರಳಗೊಳಿಸುವುದಾಗಿ ಪ್ರಕಟಿಸಿದೆ.

ಎಲ್ಲದಕ್ಕೂ ಸ್ವಂತದ ಹಣ ಹೂಡುವುದು ಸಾಧ್ಯವಿಲ್ಲ. ಸಾಲಕ್ಕೆ ಮೊರೆ ಹೋಗಬೇಕಾಗುತ್ತದೆ. ಸಾಲ ಮಾಡುವುದು ತಪ್ಪು ಎನ್ನುವ ಭಾವನೆಯಿಂದ ಮುಖ್ಯವಾಗಿ ಯುವಕರು ಹೊರಬರಬೇಕಾಗಿರುವುದು ಅವಶ್ಯ.

1965ರಲ್ಲಿ ಸರ್ಕಾರವು ಉನ್ನತ ಶಿಕ್ಷಣಕ್ಕೆ ಸಾಲರೂಪದ ಶಿಷ್ಯವೇತನ ನೀಡುವ ಯೋಜನೆ ಪ್ರಕಟಿಸಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದ, ಆರ್ಥಿಕ ತೊಂದರೆಯಲ್ಲಿರುವ ವಿದ್ಯಾರ್ಥಿಗಳಿಗೆ ಈ ಸಾಲ ಸೌಲಭ್ಯ ಪಡೆಯಲು ಅನುಕೂಲ ಕಲ್ಪಿಸಲಾಯಿತು. ಈ ಸಾಲದ ನೆರವಿನಿಂದಲೇ ನಾನು ಮತ್ತು ನನ್ನ ಗೆಳೆಯರು ಪದವಿ ಶಿಕ್ಷಣ ಪೂರ್ಣಗೊಳಿಸಲು ಸಾಧ್ಯವಾಯಿತು.

ದಿಗ್ಗಜ ಉದ್ಯಮಿಗಳೆಲ್ಲ ಸಾಲ ಪಡೆದೇ ಸಂಪತ್ತು ಸೃಷ್ಟಿಸಿದ್ದಾರೆ. ಸಾಲ ಮಾಡದೇ ದೊಡ್ಡ ಮಟ್ಟದ ಸಂಪತ್ತು ಸೃಷ್ಟಿಸುತ್ತೇವೆ ಎಂದರೆ ಅದು ಆಗದ ಮಾತು. ಉತ್ಪಾದಕ ಸಾಲ ಅಂದರೆ ಸಂಪತ್ತು ಗಳಿಕೆಯ ಉದ್ದೇಶಕ್ಕಾಗಿ ಪಡೆಯುವ ಸಾಲ. ಇದನ್ನು ಅಭಿವೃದ್ಧಿಗಾಗಿ ಸಾಲ ಎಂದು ಪರಿಗಣಿಸಲಾಗುತ್ತಿದೆ.

‘ಸಾಲ ಮಾಡಿಯಾದರೂ ತುಪ್ಪ ತಿನ್ನು’ ಎಂದು ಚಾರ್ವಾಕ ಋಷಿ ಹೇಳಿದ ಮಾತು ನೆನಪಾಗುತ್ತದೆ. ಅವಶ್ಯವಿದ್ದಾಗ ಸಾಲ ಮಾಡು ಎಂಬುದನ್ನು ಈ ಮಾತು ಧ್ವನಿಸುತ್ತದೆ. ಆದರೆ, ಅದು ಯೋಜನಾಬದ್ಧ ರೀತಿಯಲ್ಲಿ ಸದ್ವಿನಿಯೋಗ ಆಗಬೇಕು.

ವಾಚಕರ ವಾಣಿ

ಅವಮಾನಕರ: ಇದನ್ನು ಸರಿಪಡಿಸಿ

ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ಬೆಂಗಳೂರಿನ ದೊಡ್ಡ ಗಣಪತಿ ಸಮೂಹ ದೇವಸ್ಥಾನಗಳ ಆವರಣದಲ್ಲಿ ಚಪ್ಪಲಿ ಕಾಯ್ದುಕೊಳ್ಳುವ ಕೆಲಸವನ್ನು ದಲಿತರಿಗೆ ಮೀಸಲಿಟ್ಟ ಸುದ್ದಿ (ಪ್ರ.ವಾ., ನ. 2) ತಿಳಿದು ಬೇಸರವಾಯಿತು. ಬಹಿರಂಗ ಹರಾಜು ಪ್ರಕಟಣೆಯಲ್ಲಿ ಈ ರೀತಿ ಒಂದು ವರ್ಗಕ್ಕೆ ಮಾತ್ರ ಇಂತಹ ಕೆಲಸ ಎಂದು ನಿಗದಿಪಡಿಸಿದ್ದು ದುರದೃಷ್ಟಕರ. ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೇ ಸಾಮಾಜಿಕವಾಗಿ ಪರಿಶಿಷ್ಟರನ್ನು ಅವಮಾನಿಸುವಂಥ ಈ ರೀತಿಯ ಮೀಸಲು ಪ್ರಕ್ರಿಯೆಯ ವಿಷಯ ಬಹಿರಂಗ ಆಗಿದೆ! ಇದು, ಖಂಡನೀಯ. ಇಂತಹ ವ್ಯವಸ್ಥೆಯನ್ನು ಸರಿಪಡಿಸಲು ಮುಜರಾಯಿ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕು.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಜೀವಕ್ಕೆ ಇಲ್ಲಿ ಬೆಲೆ ಇಲ್ಲ

ಗುಜರಾತಿನ ಮೊರ್ಬಿ ತೂಗುಸೇತುವೆ ನವೀಕರಣ ಗುತ್ತಿಗೆಯನ್ನು ಅನರ್ಹರಿಗೆ ನೀಡಲಾಗಿತ್ತು ಎಂದು ನ್ಯಾಯಾಲಯಕ್ಕೆ ಪೊಲೀಸರು ವರದಿ ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ (ಪ್ರ.ವಾ., ನ. 3). ಈ ದೇಶದಲ್ಲಿ ‘ಅರ್ಹತೆ’ಯ ಮಾನದಂಡಗಳು ಬೇರೆಯೇ ಇರುವಾಗ ಅನರ್ಹರು ಎಂಬ ಮಾತಿಗೆ ಅರ್ಥ ಉಳಿದಿದೆಯೇ?

ಈ ದೇಶದಲ್ಲಿ ಜೀವಕ್ಕೆ ಬೆಲೆ ಎಂಬುದು ಇಲ್ಲವಾಗಿದೆ. ದುರಂತ ಸಂಭವಿಸುತ್ತದೆ, ಸಾವು-ನೋವು ಆಗುತ್ತದೆ. ಆರೋಪ- ಪ್ರತ್ಯಾರೋಪಗಳು ನಡೆಯುತ್ತವೆ. ತನಿಖೆ, ಅಧಿಕಾರಿಗಳ ಅಮಾನತು ಎಂದೆಲ್ಲ ಕಾಲಹರಣ ಆಗುತ್ತದೆ. ಆ ಬಳಿಕ ಎಲ್ಲವನ್ನೂ ಮರೆತುಬಿಡುತ್ತೇವೆ. ಗುಣಮಟ್ಟ, ಉತ್ತರದಾಯಿತ್ವ ಎಂಬ ಪದಗಳು ಅಧಿಕಾರಸ್ಥರಿಗೆ ಅಪಥ್ಯ.

ಗಿರೀಶ್ ಎನ್.ಕೆ., ಶಿವಮೊಗ್ಗ

ಹಣವಿಲ್ಲ ಎಂಬ ಮಾತು ಒಪ್ಪಬಹುದೇ?

ಕಾಂಗ್ರೆಸ್ ಪಕ್ಷದಲ್ಲಿ ಹಣ ಇಲ್ಲ ಎಂಬರ್ಥದ ಮಾತುಗಳನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಡಿದ್ದಾರೆ. ಇದು ಅಚ್ಚರಿಗೆ ಕಾರಣವಾಗುವ ಮಾತು. ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಶತಮಾನಕ್ಕಿಂತಲೂ ಹೆಚ್ಚು ಇತಿಹಾಸ ಹೊಂದಿದೆ ಮತ್ತು ದಶಕಗಳ ಕಾಲ ದೇಶವನ್ನು ಆಳಿದೆ. ಅಂತಹ ಪಕ್ಷ ಎರಡು ಅವಧಿಗೆ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡ ಮಾತ್ರಕ್ಕೆ ಈ ಪರಿ ಬಡವಾಗಿದೆಯೇ?

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

‘ಕನ್ನಡ ರಾಜ್ಯೋತ್ಸವ’ವೇ ಇರಲಿ

‘ಕನ್ನಡ ರಾಜ್ಯೋತ್ಸವ’ವನ್ನು ‘ಕರ್ನಾಟಕ ರಾಜ್ಯೋತ್ಸವ’ ಎಂದು ಕರೆಯುವುದು ಸರಿ ಎಂಬ ಚಂದ್ರಕಾಂತ ವಡ್ಡು ಮತ್ತು ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ (ವಾ.ವಾ., ನ. 2 ಮತ್ತು 3) ಅವರ ವಾದ ತಾರ್ಕಿಕವಾಗಿ ಸರಿಯಲ್ಲ. ಕನ್ನಡ ಎಂಬ ಶಬ್ದ ಬರೀ ಭಾಷೆಯಲ್ಲ, ಅದು ನಾಡು ನುಡಿ, ಜನಾಂಗ ಮತ್ತು ಸಂಸ್ಕೃತಿಯ ಪ್ರತೀಕವಾಗಿದೆ. ಕನ್ನಡ ನುಡಿ, ಕನ್ನಡ ನಾಡು, ಕನ್ನಡಿಗರು ಸರ್ವವೂ ಎನಿಸಿದೆ.

ಮೂಲತಃ ದ್ರಾವಿಡ ಭಾಷೆಯ ಕುಟುಂಬಗಳಲ್ಲಿ ತಮಿಳು ಭಾಷೆಯ ತರುವಾಯ ಕನ್ನಡಕ್ಕೆ ಎರಡನೆಯ ಸ್ಥಾನ. ಆನಂತರ ತೆಲುಗು ಮತ್ತು ಮಲಯಾಳಂ ಭಾಷೆಗಳದ್ದು. ತಮಿಳುನಾಡು, ತೆಲಂಗಾಣ, ಕೇರಳ (ಚೇರ) ಹೆಸರುಗಳು ದ್ರಾವಿಡ ಭಾಷೆಗೆ ಸಂಬಂಧಿಸಿದ್ದು ಅವು ಇಂದಿಗೂ ಸಂಸ್ಕೃತೀಕರಣಗೊಂಡಿಲ್ಲ. ‘ದ್ರಾವಿಡ’ ತಮಿಳು ಪದದ ಸಂಸ್ಕೃತೀಕರಣ ಶಬ್ದ. ಹಾಗೆಯೇ ಕರ್ಣಾಟ/ಕರ್ನಾಟಕ ಪದ ಶುದ್ಧ ಕನ್ನಡ ಪದದ ಸಂಸ್ಕೃತೀಕರಣ ಎಂಬುದು ಸರ್ವವಿದಿತ. ಅಂತೆಯೇ ಕನ್ನಡದಲ್ಲಿ ‘ಕರ್ನಾಟಕ’ ಇದೆಯೇ ವಿನಾ ಕರ್ನಾಟಕದಲ್ಲಿ ಕನ್ನಡವಲ್ಲ. ‘ಕನ್ನಡ ಶಾಸ್ತ್ರೀಯಭಾಷೆ’ ಎಂದು ಈಗಾಗಲೇ ಕನ್ನಡದ ಮುದ್ರೆ ಬಿದ್ದಿದೆ. ಹೀಗಿದ್ದು ಕರ್ನಾಟಕ ಭಾಷೆಯಲ್ಲಿ ತುಳು, ಕೊಂಕಣಿ ಮತ್ತು ಬ್ಯಾರಿ ಭಾಷೆಗಳೊಂದಿಗೆ ಕನ್ನಡ ಭಾಷೆಯನ್ನು ಸೇರಿಸಿರುವುದು ಭಾಷಾ ಜ್ಞಾನದ ಕೊರತೆ ಎನಿಸಿದೆ. ಕನ್ನಡ ಭಾಷೆಗೆ ಭವ್ಯ ಪರಂಪರೆ ಇರುವುದರಿಂದ ‘ಕನ್ನಡ ರಾಜ್ಯೋತ್ಸವ’ ಸರಿಯಾಗಿದೆ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಪೂರಕ ವಾತಾವರಣ ಸೃಷ್ಟಿಸಬೇಕಿದೆ

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ನಿಯತಕಾಲಿಕೆಗಳ ಪ್ರಸರಣ ಸಂಖ್ಯೆ ಹೆಚ್ಚಬೇಕು ಎಂದು ಬಿ.ಎಸ್. ಭಗವಾನ್ ಹೇಳಿರುವುದು (ಸಂಗತ, ನ. 3) ಸೂಕ್ತವಾದ ಸಲಹೆ. ವಿಜ್ಞಾನ ಪತ್ರಿಕೆಗಳನ್ನು ಓದಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು. ವಿಜ್ಞಾನಕ್ಕೆ ಸಂಬಂಧಿಸಿದ ಲೇಖನ ಬರೆಯುವುದಕ್ಕೆ ಬೇಕಾದ ಅಗತ್ಯ ತರಬೇತಿಗಳನ್ನು ಕಲ್ಪಿಸಬೇಕು. ಶಾಲಾ- ಕಾಲೇಜುಗಳಲ್ಲಿ ವಿಜ್ಞಾನ ಶಿಕ್ಷಕರು ಆಸಕ್ತಿಯಿಂದ ಜನಪ್ರಿಯ ವಿಜ್ಞಾನ ಲೇಖನಗಳನ್ನು ಪ್ರಕಟಿಸುವಂತಾದರೆ ವಿದ್ಯಾರ್ಥಿಗಳಿಗೆ ಅದರಿಂದ ಮತ್ತಷ್ಟು ಪ್ರೇರಣೆ ದೊರೆಯುತ್ತದೆ.

ಇದರಿಂದಾಗಿ ಕ್ರಮೇಣ ಸಾಮಾನ್ಯ ಓದುಗರಿಗೂ ವಿಜ್ಞಾನ-ತಂತ್ರಜ್ಞಾನದ ಪಠ್ಯ ಲಭ್ಯವಾಗಿ, ವಿಜ್ಞಾನದಲ್ಲಿ ಆಸಕ್ತಿ ಉಂಟಾದರೆ ಅಜ್ಞಾನ ಅಳಿಯುತ್ತದೆ. ವಿಜ್ಞಾನ- ತಂತ್ರಜ್ಞಾನ ಕೋರ್ಸುಗಳಲ್ಲಿ ಕನ್ನಡದಲ್ಲಿ ಶೈಕ್ಷಣಿಕ ಬೋಧನೆ ಮತ್ತು ಸಂಶೋಧನೆಗಳಿಗೆ ಪೂರಕ ವಾತಾವರಣವನ್ನು ಸಹ ಸೃಷ್ಟಿಸಿದಂತಾಗುತ್ತದೆ.

ಡಾ. ಜಿ. ಬೈರೇಗೌಡ, ಬೆಂಗಳೂರು

ಡಬಲ್ ಎಂಜಿನ್ ವಾಹನ ಬೇಕು

ಬೆಂಗಳೂರಿನ ರಸ್ತೆ ಗುಂಡಿಗಳಿಂದ ಆಗಿರುವ ಸಮಸ್ಯೆಗಳ ಬಗ್ಗೆ ಹೆಚ್ಚಿನ ವಿವರಣೆಯ ಅಗತ್ಯ ಈಗ ಇಲ್ಲ. ರಸ್ತೆಗುಂಡಿಗಳು ಜನರ ಜೀವ ತೆಗೆದಿವೆ. ಕಳಪೆ ಗುಣಮಟ್ಟದ ರಸ್ತೆಗಳನ್ನು ನಿರ್ಮಾಣ ಮಾಡಿದವರ ಜೇಬುಗಳು ತುಂಬಿವೆ ಎಂಬ ಮಾತನ್ನು ಬಲ್ಲವರು ಹೇಳುತ್ತಿದ್ದಾರೆ! ನಮ್ಮಲ್ಲಿ ಈಗ ಡಬಲ್ ಎಂಜಿನ್ ಸರ್ಕಾರ ಇದೆ.

ಡಬಲ್ ಎಂಜಿನ್ ಅಂದರೆ ಹೆಚ್ಚು ಶಕ್ತಿ ಇರುವುದು ಎಂದು ಅರ್ಥ. ಈಗಿನ ರಸ್ತೆಗಳ ಮೇಲೆ ಓಡಾಡಲು ಡಬಲ್ ಎಂಜಿನ್ ವಾಹನಗಳು ಬೇಕು. ಇಲ್ಲದಿದ್ದರೆ ವಾಹನಗಳೂ ರಸ್ತೆಯಲ್ಲೇ ಬಿದ್ದು ಪ್ರಾಣ ಕಳೆದುಕೊಳ್ಳುತ್ತವೆ.

ವಿ.ಜೆ. ದೇವೇಂದ್ರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಗದ ಬಳಸಿ ಹಾಲಿನ ಪ್ಯಾಕೆಟ್!

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ವಸ್ತುಪ್ರದರ್ಶನ: ತೈವಾನ್‌ನ 'ಸ್ಟ್ರಾಂಗ್ ಗ್ಲೋಬಲ್' ಕಂಪನಿಯ ಆವಿಷ್ಕಾರ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕಾಗದದಿಂದ ತಯಾರಿಸಿದ ಪರಿಸರ ಸ್ನೇಹಿ ಹಾಲಿನ ಪ್ಯಾಕೆಟ್, ದಿನನಿತ್ಯ ಬಳಸುವ ಪ್ಲಾಸ್ಟಿಕ್‌ಗೆ ಮುಕ್ತಿ ನೀಡಲಿದೆ.

ತೈವಾನ್ ಮೂಲದ 'ಸ್ಟ್ರಾಂಗ್ ಗ್ಲೋಬಲ್' ಕಂಪನಿ ಇಂತಹ ಪ್ರಯತ್ನ ಕೈಗೊಂಡಿದೆ. ಕಾಗದದಿಂದ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿರುವ ಈ ಕಂಪನಿ, ಕರ್ನಾಟಕದಲ್ಲೂ ತನ್ನ ಘಟಕ ಸ್ಥಾಪಿಸಲು ಆಸಕ್ತಿ ತೋರಿದೆ.

ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಈ ಉತ್ಪನ್ನಗಳನ್ನು ಪ್ರದರ್ಶಿಸಿದೆ. 'ಕಾಗದದಿಂದ ತಯಾರಿಸುವ ಹಾಲಿನ ಪ್ಯಾಕೆಟ್ ಜೈವಿಕವಾಗಿ ವಿಘಟನೆಯಾಗಲಿದ್ದು, ಮಣ್ಣಿನಲ್ಲಿ ಸಂಪೂರ್ಣವಾಗಿ ಕೊಳೆಯಲಿದೆ. ಇದು ಸುರಕ್ಷಿತ ಮತ್ತು ಸ್ವಚ್ಛ. ಮೈನಸ್ 20ರಿಂದ ಮೈನಸ್ 100 ಡಿಗ್ರಿ ಸೆಲ್ಸಿಯಸ್‌ನಲ್ಲಿ ಏಳು ದಿನಗಳ ಕಾಲ ಹಾಲನ್ನು ಸುರಕ್ಷಿತವಾಗಿರಿಸಬಹುದು' ಎಂದು ಕಂಪನಿಯ ಯೋಜನಾ ವ್ಯವಸ್ಥಾಪಕ ರಾಜೀವ್ ಕುಮಾರ್ ಸಿಂಗ್ ವಿವರಿಸುತ್ತಾರೆ.

ಬಾಟಲ್, ಪೇಪರ್ ಟ್ಯೂಬ್‌ಗಳು, ಕಪ್‌ಗಳು, ಸ್ಟ್ರಾ ಸೇರಿದಂತೆ ಹಲವು ಉತ್ಪನ್ನಗಳನ್ನು ಈ ಕಂಪನಿ ತಯಾರಿಸುತ್ತಿದೆ. ಬಿಸಿಯಾಗಿರುವ ಆಹಾರವನ್ನಿರಿಸಲು ಸಹ ಈ ಉತ್ಪನ್ನಗಳನ್ನು ಬಳಸಬಹುದಾಗಿದೆ. ಚೀನಾ, ಐರೋಪ್ಯ ಒಕ್ಕೂಟ, ಅಮೆರಿಕ, ವಿಯೆಟ್ನಾಂ ಮತ್ತು ಭಾರತದಿಂದ ಈ ಉತ್ಪನ್ನಗಳಿಗೆ ಪೇಟೆಂಟ್ ಪಡೆಯಲಾಗಿದೆ.

'ಕಾಗದದಿಂದ ತಯಾರಿಸಿದ ಉತ್ಪನ್ನಗಳಿಗೆ ಉತ್ತಮ ಪ್ರತಿಕ್ರಿಯೆಯೂ ದೊರೆಯುತ್ತಿದ್ದು, ಅಪಾರ ಬೇಡಿಕೆ ಇದೆ. ಡಾಬರ್ ಇಂಡಿಯಾ ಸೇರಿದಂತೆ ವಿವಿಧ ಕಂಪನಿಗಳಿಗೆ ನಮ್ಮ ಕಂಪನಿಯ ಉತ್ಪನ್ನಗಳನ್ನು ಪೂರೈಸಲಾಗುತ್ತಿದೆ' ಎಂದು ರಾಜೀವ್ ಕುಮಾರ್ ಸಿಂಗ್ ಹೇಳುತ್ತಾರೆ.


ಕಾಗದದಿಂದ ತಯಾರಿಸಿದ ಹಾಲಿನ ಪ್ಯಾಕೆಟ್

ಕಾಗದದಿಂದ ತಯಾರಿಸಿರುವ ಸ್ಟ್ರಾ

ಪುಡಿ ರೂಪದಲ್ಲೂ ಬಂತು ಎಳನೀರು

ಸುಲಭವಾಗಿ ಎಲ್ಲೆಂದರಲ್ಲಿ ಕೊಂಡೊಯ್ಯಬಹುದಾದ ಎಳನೀರು ಪುಡಿ ತಯಾರಿಸುವ ಕಾರ್ಯದಲ್ಲಿ 'ಪುಡಿಯೊ.ಫಿಟ್' ನವೋದ್ಯಮ ಕಂಪನಿ ತೊಡಗಿದೆ. ಎಳನೀರಿನ ಜತೆಗೆ ಕಬ್ಬಿನ ಹಾಲಿನ ಪುಡಿಯನ್ನು ಸಹ ಉತ್ಪಾದಿಸುತ್ತಿದೆ. ಕನಿಷ್ಠ 15 ಗ್ರಾಂನಿಂದ 200 ಗ್ರಾಂಗಳ ವಿವಿಧ ಗಾತ್ರಗಳ ಪ್ಯಾಕ್‌ಗಳನ್ನು ಮಾಡಿ ಮಾರಾಟ ಮಾಡಲಾಗುತ್ತಿದೆ. ಈ ಪುಡಿಗೆ ನೀರು ಮಿಶ್ರಣ ಮಾಡಿದರೆ, ತಕ್ಷಣವೇ ಕುಡಿಯಲು ಸಿದ್ಧವಾಗುತ್ತದೆ ಎನ್ನುತ್ತಾರೆ ಕಂಪನಿಯ ಮುಖ್ಯಸ್ಥೆ ಅಪೂರ್ವ.

'ಫ್ರೀಸ್‌ಡ್ರೈನ್' ತಂತ್ರಜ್ಞಾನ ಬಳಸಿ ಈಗಾಗಲೇ ವಿವಿಧ ಹಣ್ಣು, ತರಕಾರಿ, ಕಾಫಿ ಪುಡಿ ತಯಾರಿಸಲಾಗುತ್ತಿದೆ. ಆದರೆ, ಎಳನೀರು ಮತ್ತು ಕಬ್ಬಿನ ಹಾಲಿನ ಪುಡಿ ತಯಾರಿಸುತ್ತಿರುವುದು ಇದೇ ಮೊದಲು. ಈ ತಂತ್ರಜ್ಞಾನದ ಮೂಲಕ ಎಳನೀರಿನಲ್ಲಿನ ನೀರಿನ ಅಂಶ ತೆಗೆದು ಉಳಿದಿರುವ ಸೋಡಿಯಂ, ಪೊಟಾಷಿಯಂ, ಉಪ್ಪಿನ ಅಂಶಗಳನ್ನು ಹಾಗೆಯೇ ಉಳಿಸಿ ಪ್ಯಾಕ್ ಮಾಡಲಾಗುತ್ತದೆ. ಒಂದು ಎಳನೀರನ್ನು ಈ ತಂತ್ರಜ್ಞಾನದ ಮೂಲಕ ಸಂಸ್ಕರಿಸಿದಾಗ ಸುಮಾರು 15 ಗ್ರಾಂ ಪುಡಿ ದೊರೆಯಲಿದೆ' ಎಂದು ವಿವರಿಸುತ್ತಾರೆ.

'ಈ ಉತ್ಪನ್ನಗಳನ್ನು ಒಂದು ವರ್ಷದಿಂದ ತಯಾರಿಸಲಾಗುತ್ತಿದೆ. ಭಾರತ, ಅಮೆರಿಕ ಮತ್ತು ಬ್ರಿಟನ್ ದೇಶಗಳಿಗೆ ಪೂರೈಸಲಾಗುತ್ತಿದೆ. ಪ್ರತಿ ದಿನ 2ಟನ್ ಪುಡಿ ತಯಾರಿಸಲಾಗುತ್ತಿದೆ. ಸುಮಾರು 17 ಸಾವಿರ ಅಂಗಡಿಗಳಲ್ಲಿ ಲಭ್ಯವಿದೆ' ಎಂದು ವಿವರಿಸಿದರು.

ಗಾಯಕ್ಕೆ ರೇಷ್ಮೆಯ ಮುಲಾಮು!

ರೇಷ್ಮೆಗೂಡುಗಳು ಈಗ ಗಾಯಕ್ಕೆ ಚಿಕಿತ್ಸೆಯ ಸ್ಪರ್ಶ ನೀಡುತ್ತಿವೆ. ರೇಷ್ಮೆಗೂಡುಗಳ ನೂಲಿನಿಂದ ತಯಾರಿಸಿದ ಉತ್ಪನ್ನಗಳನ್ನು ವಿವಿಧ ರೀತಿಯ ಗಾಯಗಳ ನಿವಾರಣೆಯಲ್ಲಿ ಬಳಸಲಾಗುತ್ತಿದೆ. ಇಂತಹ ವಿನೂತನ ಕಾರ್ಯದಲ್ಲಿ ಯಲಹಂಕ ನ್ಯೂಟೌನ್‌ನ 'ಫೈಬ್ರೊಹೀಲ್' ಕಂಪನಿ ತೊಡಗಿದೆ.

'ದೇಶದಾದ್ಯಂತ 100ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಕಂಪನಿಯ ಉತ್ಪನ್ನಗಳನ್ನು ಪೂರೈಸಲಾಗಿದ್ದು, ಒಂದು ಲಕ್ಷ ರೋಗಿಗಳ ಮೇಲೆ ಕೈಗೊಂಡ ಪ್ರಯೋಗವು ಯಶಸ್ವಿಯಾಗಿದೆ. ಶಸ್ತ್ರಚಿಕಿತ್ಸೆ ಗಾಯ, ಸುಟ್ಟ ಗಾಯ ಸೇರಿದಂತೆ ವಿವಿಧ ಗಾಯಗಳಿಗೆ ರೇಷ್ಮೆ ಗೂಡಿನಿಂದ ತಯಾರಿಸಿದ ಪ್ಲಾಸ್ಟರ್‌ಗಳು ಪರಿಣಾಮಕಾರಿಯಾಗಿದ್ದು ಬೇಗ ಗುಣವಾಗುತ್ತದೆ' ಎಂದು ಕಂಪನಿಯ ಪ್ರೊಡಕ್ಷನ್ ಮ್ಯಾನೇಜರ್ ಎಂ.ಆರ್. ಶಕ್ತಿ ಪ್ರಕಾಶ್ ವಿವರಿಸುತ್ತಾರೆ. 'ರೇಷ್ಮೆ ಗೂಡಿನ ಪ್ರೊಟೀನ್ ಬಳಸಿ ಪ್ಲಾಸ್ಟರ್‌ಗಳನ್ನು ತಯಾರಿಸಲಾಗುತ್ತಿದ್ದು, ನೀರು ನಿರೋಧಕವಾಗಿದೆ. ದೇಶದಲ್ಲಿ ಮೊದಲ ಬಾರಿ ರೇಷ್ಮೆ ಗೂಡಿನಿಂದ ಪ್ಲಾಸ್ಟರ್‌ಗಳನ್ನು ತಯಾರಿಸಲಾಗುತ್ತಿದೆ. ರಾಮನಗರ ಹಾಗೂ ಶಿಡ್ಲಘಟ್ಟದಿಂದ ರೇಷ್ಮೆ ಗೂಡುಗಳನ್ನು ಖರೀದಿಸುತ್ತೇವೆ. ಐದು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಈ ಕಂಪನಿಯಲ್ಲಿ 35 ಉದ್ಯೋಗಿಗಳಿದ್ದಾರೆ' ಎಂದು ಅವರು ವಿವರಿಸುತ್ತಾರೆ.

ರಿವರ್ಸ್ ಟ್ರೈಕ್: ಕಾರು–ಬೈಕ್ ನಡುವಿನ ವಾಹನ

ಬೆಂಗಳೂರು: ಬೈಕ್‌ನಂತೆ ಸವಾರಿ ಮಾಡಬಹುದಾದ, ಕಾರಿನ ಸೌಲಭ್ಯವುಳ್ಳ ದೇಶೀಯ ಆವಿಷ್ಕಾರದ 'ಸ್ವಾಟರ್' ರಿವರ್ಸ್ ಟ್ರೈಕ್ ವಾಹನವನ್ನು ಹುಬ್ಬಳ್ಳಿಯ ಸ್ವಾಟರ್ ಮೊಬಿಲಿಟಿ ಸಲ್ಯೂಷನ್ ಸಂಸ್ಥೆ ಹೊರತಂದಿದೆ.

ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಈ ವಾಹನವನ್ನು ಸಂಸ್ಥೆ ಪ್ರದರ್ಶಿಸಿದೆ. ಮೂರು ಚಕ್ರ ಈ ವಾಹನ, ಮುಂಭಾಗದಲ್ಲಿ ಎರಡು ಚಕ್ರ, ಹಿಂಭಾಗದಲ್ಲಿ ಒಂದು ಚಕ್ರ ಹೊಂದಿದೆ. ಬೈಕ್‌ನಂತೆ ಎರಡು ಆಸನದ ಸೌಲಭ್ಯವಿದ್ದು, ಹವಾನಿಯಂತ್ರಿತ ವ್ಯವಸ್ಥೆ ಇದೆ. ಇದು ಎಲೆಕ್ಟ್ರಿಕ್ ವಾಹನವಾಗಿದೆ. ಒಂದು ಬಾರಿ ಚಾರ್ಜ್ ಮಾಡಿದರೆ 120ರಿಂದ 150 ಕಿ.ಮೀ ಸಂಚರಿಸಬಹುದು ಎಂದು ಸಂಸ್ಥೆಯ ಕಿರಣ್ ಅಗಡಿ ತಿಳಿಸಿದರು.

'ಪ್ರಥಮ ಬಾರಿಗೆ ಈ ವಾಹನವನ್ನು ಪ್ರದರ್ಶಿಸಿದ್ದೇವೆ. ಮಾರ್ಚ್‌ನಲ್ಲಿ ಬುಕಿಂಗ್ ಆರಂಭಿಸಲಾಗುತ್ತದೆ. ಜೂನ್ ವೇಳೆಗೆ ಪೂರೈಕೆಯಾಗುತ್ತದೆ. ಈ ವಾಹನದ ಬೆಲೆ ಸುಮಾರು ₹2.5 ಲಕ್ಷ' ಎಂದು ಹೇಳಿದರು.

'ಸ್ವಾಟರ್' ರಿವರ್ಸ್ ಟ್ರೈಕ್ ವಾಹನ

ಜಾಗತಿಕ ಹೂಡಿಕೆದಾರರ ಸಮಾವೇಶದ ವಿಚಾರಗೋಷ್ಠಿ

'ಇ.ವಿ.: ಮೂಲಸೌಕರ್ಯಕ್ಕೆ ಪಿಪಿಪಿ'

• ವಿಶ್ವನಾಥ ಎಸ್.

ಬೆಂಗಳೂರು: ಸರ್ಕಾರ ಮತ್ತು ಖಾಸಗಿ ವಲಯದ ಪಾಲುದಾರಿಕೆಯಲ್ಲಿ (ಪಿಪಿಪಿ) ವಿದ್ಯುತ್ ಚಾಲಿತ ವಾಹನಗಳ ಮೂಲಸೌಕರ್ಯ ವ್ಯವಸ್ಥೆ ಅಭಿವೃದ್ಧಿಪಡಿಸುವ ಅಗತ್ಯ ಇದೆ ಎನ್ನುವ ಅಭಿಪ್ರಾಯ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ವಿಚಾರ ಗೋಷ್ಠಿಯೊಂದರಲ್ಲಿ ವ್ಯಕ್ತವಾಯಿತು.

'ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಮತ್ತು ಬಳಕೆ ಹೆಚ್ಚುತ್ತಿರುವ ಈ ಹೊತ್ತಿನಲ್ಲಿ ಮೂರು ಪ್ರಮುಖ ಅಂಶಗಳು ಮುಖ್ಯವಾಗುತ್ತವೆ. ಮೊದಲನೆಯದಾಗಿ, ಆಡಳಿತದಲ್ಲಿರುವವರಿಂದ ಪೂರಕ ವಾತಾವರಣದ ಬೇಕು. ಎರಡನೆಯದು, ಮೂಲಸೌಕರ್ಯ ವ್ಯವಸ್ಥೆ ಪರಿಪೂರ್ಣವಾಗಿರಬೇಕು. ಮೂರನೆಯದು, ಉದ್ಯಮವು ದೇಶಿ ಮಾರುಕಟ್ಟೆಯನ್ನಷ್ಟೇ ಅಲ್ಲದೆ, ಜಾಗತಿಕ ಮಾರುಕಟ್ಟೆಯನ್ನು ತಲುಪುವ ಕಡೆಗೂ ಗಮನ ಹರಿಸಬೇಕು' ಎಂದು ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನ ಹಿರಿಯ ಪಾಲುದಾರ ಥಾಮಸ್ ಡೌನರ್ ಸಲಹೆ ನೀಡಿದರು.

ವಿಚಾರಗೋಷ್ಠಿಯಲ್ಲಿ ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನ ಹಿರಿಯ ಪಾಲುದಾರ ಥಾಮಸ್ ಡೌನರ್, ಟಿಎಂಎಲ್ ಸ್ಮಾರ್ಟ್‌ಸಿಟಿ ಮೊಬಿಲಿಟಿ ಸಲ್ಯೂಷನ್ಸ್‌ನ ಸಿಇಒ ಆಸೀಮ್ ಕುಮಾರ್ ಮುಖೋಪಾಧ್ಯಾಯ, ಸನ್ ಮೊಬಿಲಿಟಿ ಸಹ ಸಂಸ್ಥಾಪಕ ಚೇತನ್ ಮೈನಿ ಮತ್ತು ಸ್ವಿಚ್ ಮೊಬಿಲಿಟಿಯ ಚೀಫ್ ರೆವಿನ್ಯು ಆಫಿಸರ್ ಸಚಿನ್ ನಿಜಾವನ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು ಅರಮನೆಯಲ್ಲಿ ಗುರುವಾರ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ 'ಡ್ರೈವಿಂಗ್ ಇಂಡಿಯಾ ಇಂಟು ದಿ ಫ್ಯೂಚರ್: ರೆವಲ್ಯೂಷನ್ ಇನ್ ಇಂಡಿಯಾಸ್ ಮೊಬಿಲಿಟಿ' ವಿಚಾರಗೋಷ್ಠಿಯ ನಿರೂಪಕರಾಗಿ ಅವರು ಭಾಗವಹಿಸಿದ್ದರು.

'ವಿದ್ಯುತ್ ಚಾಲಿತ ದ್ವಿಚಕ್ರ, ತ್ರಿಚಕ್ರ ವಾಹನಗಳಲ್ಲದೆ, ಬಸ್‌ಗಳು ಸಹ ಉತ್ತಮ ಮಾರಾಟ ಕಾಣಲಿವೆ. ಸರ್ಕಾರದ ಮಟ್ಟದಲ್ಲಿ ಅಲ್ಲದೆ, ಖಾಸಗಿ ಕಂಪನಿಗಳು ಸಹ ಎಲೆಕ್ಟ್ರಿಕ್ ಬಸ್ ಖರೀದಿಸುತ್ತಿವೆ. ಜನರು ಇ.ವಿ. ಬಳಕೆಗೆ ಹೆಚ್ಚು ಗಮನ ಹರಿಸಲು ಆರಂಭಿಸಿಯಾಗಿದೆ. ಸುರಕ್ಷತೆ ಮತ್ತು ವೆಚ್ಚ ತಗ್ಗಿಸುವ ಕಡೆಗಷ್ಟೇ ನಾವು ಗಮನ ನೀಡಬೇಕಿದೆ' ಎಂದು ಅಶೋಕ್ ಲೇಲ್ಯಾಂಡ್‌ನ ಅಂಗಸಂಸ್ಥೆ ಸ್ವಿಚ್ ಮೊಬಿಲಿಟಿಯ ಚೀಫ್ ರೆವಿನ್ಯು ಆಫಿಸರ್ ಸಚಿನ್ ನಿಜಾವನ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸಾರಿಗೆ ವಲಯದಿಂದಲೇ ಹೆಚ್ಚಿನ ಮಾಲಿನ್ಯ ಉಂಟಾಗುತ್ತಿದೆ. ಹೀಗಾಗಿ ಸಾರಿಗೆ ವಲಯದಲ್ಲಿ ಶುದ್ಧ ಇಂಧನ ಬಳಕೆಗೆ ಹೆಚ್ಚಿನ ಗಮನ ನೀಡಬೇಕಿದೆ. ಈ ನಿಟ್ಟಿನಲ್ಲಿ ವಿದ್ಯುತ್ ಚಾಲಿತ ವಾಹನಗಳ ಬಳಕೆ ಹೆಚ್ಚಾಗಬೇಕು. ಎಥೆನಾಲ್ ಮಿಶ್ರಣ ಮಾಡಿರುವ ಪೆಟ್ರೋಲ್ ಬಳಕೆ ಹಾಗೂ ನವೀಕರಿಸಬಹುದಾದ ಇಂಧನ ಉತ್ಪಾದನೆ ಹೆಚ್ಚಳದಂತಹ ಕ್ರಮಗಳು ಅಗತ್ಯ ಎಂದರು.

'ಸರ್ಕಾರಿ, ಖಾಸಗಿ ಇಲ್ಲವೇ ವೈಯಕ್ತಿಕವಾಗಿ ಚಾರ್ಜಿಂಗ್ ಮೂಲಸೌಕರ್ಯ ಅಳವಡಿಕೆ ಮಾಡಲು ಆಗುವಂತೆ ನೀತಿಯನ್ನು ರೂಪಿಸಬೇಕಿದೆ. ಇದರಿಂದ ಮೆಟ್ರೊ ನಗರಗಳಲ್ಲಿ ಮೂಲಸೌಕರ್ಯದ ಸಮಸ್ಯೆ ನಿವಾರಿಸಬಹುದು. ಎರಡು ಮತ್ತು ಮೂರನೇ ಶ್ರೇಣಿಯ ನಗರಗಳಲ್ಲಿ ಗುಣಮಟ್ಟದ ವಿದ್ಯುತ್ ಕೊರತೆ ಸ್ವಲ್ಪ ಮಟ್ಟಿಗೆ ಸವಾಲಾಗಿದೆ. ಗ್ರಾಮೀಣ ಭಾಗದಲ್ಲಿ ಜಾಗದ ಸಮಸ್ಯೆ ಇಲ್ಲ. ಆದರೆ, ವಿದ್ಯುತ್ ಅಭಾವ ಇದೆ. ಈ ಭಾಗದಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನ ಚಾರ್ಜ್ ಮಾಡಲು ಸೌರ ವಿದ್ಯುತ್ ಮೂಲಕ ಚಾರ್ಜಿಂಗ್ ಸೌಲಭ್ಯ ಕಲ್ಪಿಸಬಹುದು' ಎಂದು ಸನ್ ಮೊಬಿಲಿಟಿ ಸಹ ಸ್ಥಾಪಕ ಚೇತನ್ ಮೈನಿ ಹೇಳಿದರು.

ಏರ್‌ಬಸ್ ಘಟಕ ಸ್ಥಾಪನೆಗೆ ಫ್ರಾನ್ಸ್‌ಗೆ ಆಹ್ವಾನ

ಬೆಂಗಳೂರು: ಕರ್ನಾಟಕದಲ್ಲಿ ಏರ್‌ಬಸ್ ಉತ್ಪಾದನಾ ಘಟಕವನ್ನು ಸ್ಥಾಪಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫ್ರಾನ್ಸ್ ಕಂಪನಿಗಳಿಗೆ ಆಹ್ವಾನ ನೀಡಿದರು.

ಫ್ರೆಂಚ್–ಇಂಡೋ ಚೇಂಬರ್ ಆಫ್ ಕಾಮರ್ಸ್‌ಗೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ಫ್ರಾನ್ಸ್ ಏರೋಸ್ಪೇಸ್ ಕಂಪನಿಗಳ ರಾಜ್ಯದಲ್ಲಿವೆ. ವಿಮಾನದ ಬಿಡಿ ಭಾಗಗಳ ಉತ್ಪಾದನೆ ಕರ್ನಾಟಕದಲ್ಲಿ ನಡೆಯುತ್ತಿದೆ. ಪೂರ್ಣ ಪ್ರಮಾಣದ ವಿಮಾನ ತಯಾರಿಸುವ ಗುರಿಯನ್ನು ರಾಜ್ಯ ಹೊಂದಿದೆ. ಏರ್‌ಬಸ್ ಮತ್ತು ಬೋಯಿಂಗ್ ಕಂಪನಿಗಳು ವಿಮಾನ ತಯಾರಿಕೆ ಕ್ಷೇತ್ರದಲ್ಲಿವೆ. ಏರ್‌ಬಸ್ ಉತ್ಪಾದನೆ ಘಟಕವನ್ನು ಇಲ್ಲಿ ಆರಂಭಿಸಿದರೆ ಅಗತ್ಯ ನೆರವು ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಭಾರತದಲ್ಲಿರುವ ಫ್ರಾನ್ಸ್ ರಾಯಭಾರಿ ಎಮೆನುಲಾ, ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹಾಜರಿದ್ದರು.

ರಾಜ್ಯದಲ್ಲೇ ಅತಿ ಹೆಚ್ಚು ಎಥೆನಾಲ್ ಉತ್ಪಾದನೆ: ವಿಜಯ್ ನಿರಾಣಿ

'ಏಷ್ಯಾದಲ್ಲೇ ಅತಿ ಹೆಚ್ಚು ಎಥೆನಾಲ್ ಕರ್ನಾಟಕದಲ್ಲಿ ಉತ್ಪಾದನೆಯಾಗುತ್ತಿದೆ. ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಸಾಕಷ್ಟು ಅವಕಾಶಗಳಿದ್ದು, ಉದ್ಯಮಿಗಳು ಆಸಕ್ತಿ ವಹಿಸಬೇಕು' ಎಂದು ಎಂಆರ್‌ಎನ್ ಸಮೂಹದ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಎಂ ನಿರಾಣಿ ಹೇಳಿದರು. 'ಡೀಸೆಲ್ ಮತ್ತು ಪೆಟ್ರೋಲ್ ಮೇಲಿನ ಅವಲಂಬನೆ ಕಡಿಮೆ ಮಾಡಲು ಎಥೆನಾಲ್ ಬಳಕೆ ಹೆಚ್ಚಾಗಬೇಕು. ಪೆಟ್ರೋಲ್, ಡೀಸೆಲ್ ಜತೆಗೆ ಶೇ 20ರಷ್ಟು ಎಥೆನಾಲ್ ಮಿಶ್ರಣದ ಗುರಿಯನ್ನು ಈಗಾಗಲೇ ಸಾಧಿಸಿದ್ದೇವೆ' ಎಂದರು.

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವು ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 266

ಮಾತು ಕೇಳದ ಮೇನಾದೇವಿ

ಮೇನಾದೇವಿ ಪ್ರಲಾಪಿಸುತ್ತಾ ನೆಲಕ್ಕೆ ಬಿದ್ದಾಗ ಅಲ್ಲಿದ್ದ ಪರಿಜನರು ಹಾಹಾಕಾರ ಮಾಡಿದರು. ಬ್ರಹ್ಮ ಅವಳನ್ನು ಎಬ್ಬಿಸಿ ಕೂರಿಸಿದ. ನಾರದ ಮೇನಾದೇವಿಗೆ ಸಾಂತ್ವನದ ಮಾತಾಡಿದ. 'ಮೇನಾದೇವಿ, ನೀನು ಶಿವನ ನಿಜವಾದ ಸುಂದರರೂಪವನ್ನು ನೋಡಿಲ್ಲ. ಆ ಶಿವ ತನ್ನ ಲೀಲೆಯಿಂದ ಕುರೂಪವನ್ನು ಧರಿಸಿ ನಿನ್ನ ಮೂರ್ಖನನ್ನಾಗಿಸಿದ್ದಾನೆ. ನೀನು ನೋಡಿದ್ದು ಶಿವನ ನಿಜವಾದ ರೂಪವಲ್ಲ. ಶಾಂತಳಾಗು. ಶಿವನಿಗೆ ಗಿರಿಜೆಯನ್ನು ಸಂತೋಷದಿಂದ ಮದುವೆ ಮಾಡಿ ಕೊಡು' ಎಂದಾಗ ಮೇನಾದೇವಿ ಮತ್ತಷ್ಟು ಕೋಪಗೊಂಡಳು.

'ಎಲೈ ದುಷ್ಟ, ನೀನಿಲ್ಲಿಂದ ಮಾತನಾಡದೆ ಹೊರಡು. ನೀನು ಮಹಾನೀಚ' ಎಂದಳು ರೋಷದಿಂದ. ದೇವತೆಗಳೆಲ್ಲರೂ ಒಬ್ಬೊಬ್ಬರಾಗಿ ಮೇನಾದೇವಿಯನ್ನು ಸಮಾಧಾನಮಾಡಿದರು. 'ಮೇನಾದೇವಿ, ನಮ್ಮ ಮಾತನ್ನು ಸಾವಧಾನವಾಗಿ ಕೇಳು. ಶಿವನೇ ಸಾಕ್ಷಾತ್ ಪರಮೇಶ್ವರ. ಅವನನ್ನು ಒಲಿಸಿಕೊಳ್ಳುವುದು ಸುಲಭವಲ್ಲ. ನಿನ್ನ ಮಗಳ ಕಠೋರ ತಪಸ್ಸನ್ನು ಮೆಚ್ಚಿ ಶಿವನು ದಯೆಯಿಂದ ಅವಳ ಕೋರಿಕೆ ಮೇರೆಗೆ ವಿವಾಹವಾಗುತ್ತಿದ್ದಾನೆ. ಪರಮಶಿವ ಅಳಿಯನಾಗುತ್ತಿರುವುದು ನಿನ್ನ ಸುಕೃತದ ಫಲ' ಎನ್ನುತ್ತಾರೆ.

ದೇವತೆಗಳ ಮಾತಿಗೆ ಮಣಿಯದ ಮೇನಾದೇವಿ ತುಂಬಾ ವಿಲಾಪಿಸಿದಳು. ಶಿವನಿಗೆ ಮಗಳನ್ನು ನಾನು ಖಂಡಿತ ಕೊಡುವುದಿಲ್ಲ ಎಂದು ಹಠ ಹಿಡಿದಳು. ಸಪ್ತರ್ಷಿಗಳು ಬಂದು 'ಮೇನಾದೇವಿ, ವಿವಾಹಕಾರ್ಯವನ್ನು ನೆರವೇರಿಸಲು ನಾವು ಬಂದಿರುವೆವು. ಈಗ ನಾವು ನಿನ್ನ ವಿರೋಧವನ್ನು ಮನ್ನಿಸಲಾರೆವು. ನಿನಗೀಗ ಆದ ಶಂಕರದರ್ಶನವು ಮಹಾ ಲಾಭ ತಂದಿದೆ. ಹೀಗಾಗಿ ಶಂಕರ ನಿನ್ನ ದಾನಕ್ಕೆ ಪಾತ್ರನಾಗಿ ತಾನಾಗಿಯೇ ಬಂದಿದ್ದಾನೆ' ಎಂದರು. ಋಷಿಗಳ ಮಾತನ್ನು ತಿರಸ್ಕರಿಸಿದ ಅಜ್ಞಾನಿಯಾದ ಮೇನಾದೇವಿ ರೋಷದಿಂದ, 'ಗಿರಿಜೆಯನ್ನು ಕೊಂದುಹಾಕುವೆನೇ ಹೊರತು, ಅವಳನ್ನು ಶಂಕರನಿಗೆ ಕೊಡುವುದಿಲ್ಲ' ಎಂದಳು. ಹಿಮವಂತ ಶಿವನ ತತ್ವವನ್ನ ಮೇನಾದೇವಿಗೆ ಮನದಟ್ಟಾಗುವಂತೆ ಬೋಧಿಸಿದ.

'ಪ್ರಿಯೆ, ಪೂಜ್ಯರನ್ನೆಲ್ಲಾ ನಿಂದಿಸಿರುವೆಯಲ್ಲಾ? ಇದು ಸರಿಯೇ? ಶಂಕರನ ವಿಕಾರರೂಪವನ್ನು ನೋಡಿ ಅವನ ನಿಜರೂಪವನ್ನು ತಿಳಿಯದವಳಾಗಿರುವೆ. ಅವನು ವಿರಾಟಪುರುಷ. ಪೂಜ್ಯರಿಗಿಂತಲೂ ಮಹಾಪೂಜ್ಯನು' ಎಂದು ತಿಳಿವಳಿಕೆ ಹೇಳಿದ.

ಇದನ್ನು ಒಪ್ಪದ ಮೇನಾದೇವಿ, 'ನಾಥ, ಪಾರ್ವತಿಯ ಕತ್ತನ್ನು ಹಿಸುಕಿ ಕೊಂದುಹಾಕು. ಅಥವಾ ಇವಳನ್ನು ಸಮುದ್ರದಲ್ಲಿ ಮುಳುಗಿಸು. ನಾನು ಅಡ್ಡಿಪಡಿಸುವುದಿಲ್ಲ. ಆದರೆ ಮಗಳನ್ನು ಕುರೂಪಿಯಾದ ರುದ್ರನಿಗೆ ಕೊಟ್ಟರೆ ನಾನು ಖಂಡಿತವಾಗಿ ಪ್ರಾಣ ಬಿಡುವೆ' ಎಂದಳು. ಪಾರ್ವತಿ ತಾಯಿಯನ್ನು ಸಮಾಧಾನ ಮಾಡಲು ಪ್ರಯತ್ನಿಸಿದಳು. 'ಮಾತೆ, ನಿನಗೆ ಅಮಂಗಳವಾದ ದುರ್ಬುದ್ಧಿ ಏಕೆ ಬಂದಿತು? ಶಿವ ಪರಮಶ್ರೇಷ್ಠನೆಂದು ತಿಳಿದೇ ನಾನು ಕಠಿಣ ತಪಸ್ಸು ಮಾಡಿ ವರಿಸುತ್ತಿದ್ದೇನೆ. ಶಿವ ದೇವಶ್ರೇಷ್ಠನಾಗಿರುವುದರಿಂದಲೇ ದೇವತೆಗಳೆಲ್ಲರೂ ಸೇವಕರಾಗಿ ಉತ್ಸವದೊಡನೆ ಬಂದಿದ್ದಾರೆ. ನನ್ನನ್ನು ಶಿವನಿಗೆ ಧಾರೆಯೆರೆದುಕೊಟ್ಟು ನಿನ್ನ ಗೃಹಸ್ಥಾಶ್ರಮವನ್ನೂ ಸಾರ್ಥಕಮಾಡಿಕೊ' ಎಂದಳು ಸ್ಪಷ್ಟವಾಗಿ.

ಗಿರಿಜೆಯ ಮಾತನ್ನು ಕೇಳಿ ಮೇನಾದೇವಿ ತುಂಬಾ ಕೋಪಗೊಂಡು ಅವಳನ್ನು ಹೊಡೆಯತೊಡಗಿದಳು. ಆಗ ನಾರದ ಮತ್ತು ಸಪ್ತರ್ಷಿಗಳು ಪಾರ್ವತಿಯನ್ನು ಮೇನಾದೇವಿಯಿಂದ ಬಿಡಿಸಿ ದೂರ ಕರೆದುಕೊಂಡು ಹೋದರು. ಮೇನಾದೇವಿ ಮತ್ತೆ ಪಾರ್ವತಿ ಮತ್ತು ಋಷಿಗಳನ್ನು ನಿಂದಿಸುತ್ತಾ ಗೋಳಾಡತೊಡಗಿದಳು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಏಕಾದಶಿ ಗಂ. 18-09 ನಕ್ಷತ್ರ: ಪೂರ್ವಾಭಾದ್ರಾ ಗಂ. 24-12, ಯೋಗ: ವ್ಯಾಘಾತ ಗಂ. 27-15, ಕರಣ: ವಣಿಜ ಗಂ. 06-47, ತುಲಾ ಮಾಸದ 17 ನೇ ದಿನ.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 06-29 ಸೂರ್ಯಾಸ್ತ : 05-59

ಮುಸ್ಲಿಂ ದಿನಾಂಕ : 08 ರಬಿಯುಸ್ಸಾನಿ

ದಿನ ವಿಶೇಷ : ದೇವ ಪ್ರಬೋಧಿನಿ ಏಕಾದಶಿ ಅದೃಷ್ಟ ಸಂಖ್ಯೆ : 4, 11

ಮೇಷ: ಇಂದು ಪ್ರಭಾವೀ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಬೇಕಾಗುವುದು. ಸಾಮಾಜಿಕ ಬದುಕಿನಲ್ಲಿ ಗೌರವಯುತವಾಗಿ ವರ್ತಿಸುವುದನ್ನು ಮರೆಯದಿರಿ. ಯಶಸ್ಸಿನ ಹೊಸ ಮಾರ್ಗಗಳು ನಿಮಗಿಂದು ಅರಿವಾಗುವುದು.

ವೃಷಭ: ವಿದ್ಯಾರ್ಥಿಗಳಿಗೆ ಇಂದು ಸಾಧನೆಗೆ ಪೂರಕವಾದ ದಿನ. ಧನಾಗಮನದಲ್ಲಿ ವ್ಯತ್ಯಯ, ವಿಳಂಬ ತೋರಿಬರಲಿದೆ. ಸಿದ್ಧ ಉಡುಪು ಮಾರಾಟಗಾರರಿಗೆ ಶುಭದಿನ. ಮನೆ ನವೀಕರಣಗೊಳಿಸುವ ವಿಚಾರಗಳು ಯೋಚನೆಗೆ ಬರಲಿವೆ.

ಮಿಥುನ: ನಿಮ್ಮ ಕೆಲಸದಲ್ಲಿನ ಹೆಚ್ಚಿನ ಸ್ವಾತಂತ್ರ್ಯ ಸಿಗುವ ಕಾರಣದಿಂದ ಗುರಿ ಸಾಧನೆ ಇನ್ನೂ ಹತ್ತಿರವಾಗಲಿದೆ. ಸರ್ಕಾರಿ ಕೆಲಸದವರಿಗೆ ಅನುಕೂಲಕರ ದಿನ. ಕ್ರಿಯಾತ್ಮಕವಾಗಿ, ಸೃಜನಶೀಲತೆಯಿಂದ ಕಾರ್ಯ ನಿರ್ವಹಿಸಿ ಹೆಸರು ಗಳಿಸುವಿರಿ.

ಕರ್ಕಾಟಕ: ನಿಮ್ಮ ಉದ್ಧಟತನ ನಿಮ್ಮ ಸೋಲಿಗೆ ಮುಖ್ಯ ಕಾರಣ. ಮನೆಯಲ್ಲಿ ನಿಮಗೆ ಜವಾಬ್ದಾರಿ ಹೆಚ್ಚಲಿದೆ. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಾಣಲಿದೆ. ಮೆಕ್ಯಾನಿಕ್‌ಗಳಿಗೆ ಹೆಚ್ಚು ಆದಾಯ ತರುವ ದಿನ.

ಸಿಂಹ: ಅತಿಯಾದ ಉತ್ಸಾಹದಿಂದ ಜೀವನದಲ್ಲಿ ಹೊಸ ತಿರುವು ಪಡೆದುಕೊಳ್ಳುವಿರಿ. ಧಾರ್ಮಿಕ ಮಾರ್ಗದರ್ಶಕರ ಸಹಾಯದಿಂದ ಬದುಕನ್ನು ಅರ್ಥಪೂರ್ಣವಾಗಿಸುವ ಬಗ್ಗೆ ತಿಳಿದುಕೊಳ್ಳುವಿರಿ. ಮದುವೆ ವಿಷಯ ಪ್ರಸ್ತಾಪವಾಗಲಿದೆ.

ಕನ್ಯಾ: ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವ ಸಾಧ್ಯತೆ. ಕೆಲವು ವಿಚಾರಗಳನ್ನು ತೀರ್ಮಾನಿಸುವ ಸಂದರ್ಭದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಕನಸುಗಳನ್ನು ಸಾಕಾರಗೊಳಿಸಲು ಅವಿರತ ಪರಿಶ್ರಮ ಅಗತ್ಯ.

ತುಲಾ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭ್ಯವಾಗಲಿದೆ. ಜಟಿಲ ಸಮಸ್ಯೆಗಳನ್ನು ಸುಲಭವಾಗಿ ಬಗೆ ಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ನಿಮ್ಮ ಹಿಂದಿನ ಪ್ರಯತ್ನಗಳು ವ್ಯರ್ಥವಾಗಿಲ್ಲ ಎಂದು ಇಂದು ಅರಿವಾಗುವುದು.

ವೃಶ್ಚಿಕ: ನಿರೀಕ್ಷಿಸಿದ ಕಾರ್ಯಗಳು ನೆರವೇರುವುದರಿಂದ ಮನಸ್ಸಿಗೆ ನೆಮ್ಮದಿ. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭ. ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರ ಮರೆಯದಿರಿ.

ಧನು: ಅನುಮಾನಕ್ಕೆ ಎಡೆಮಾಡಿಕೊಡುವಂತಹ ಕೆಲಸಗಳು ನಿಮ್ಮಿಂದ ನಡೆಯಲಿದೆ. ಜಾಗ್ರತರಾಗಿರಿ. ಜನರೊಂದಿಗೆ ಹೆಚ್ಚು ಬೆರೆಯುವುದನ್ನು ಅಭ್ಯಾಸ ಮಾಡಿಕೊಂಡಲ್ಲಿ ವ್ಯವಹಾರ ಸುಗಮವಾಗುವುದು. ನೀಲಿ ಬಣ್ಣ ಶುಭ ತರಲಿದೆ.

ಮಕರ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು. ಸಂತೋಷದ ಘಟನೆಗಳು ನಡೆಯಲಿವೆ. ವಿದ್ಯುತ್ ಉಪಕರಣಗಳ ಮಾರಾಟದಿಂದ ಲಾಭ ಪಡೆಯುವಿರಿ.

ಕುಂಭ: ನಿಮ್ಮ ಗೊಂದಲದ ಸಮಸ್ಯೆಗೆ ಅನುಭವಿಗಳ ಸಲಹೆ ಪಡೆಯುವುದು ಸರಿಯಾದ ಮಾರ್ಗ. ಅತಿಯಾದ ಓಡಾಟದಿಂದ ದೇಹಕ್ಕೆ ದಣಿವಾದರೂ ಮನಸ್ಸಿಗೆ ಹಿತವೆನಿಸುವುದು. ಸಾಂಸಾರಿಕವಾಗಿ ವೈದ್ಯಕೀಯ ಖರ್ಚು ಹೆಚ್ಚಲಿದೆ.

ಮೀನ: ಕೈಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸಲು ಯೋಚಿಸಿ. ಕಛೇರಿ ಕೆಲಸಗಳಲ್ಲಿ ಸಹೋದ್ಯೋಗಿಗಳ ಸಹಕಾರ ದೊರೆಯಲಿದೆ. ಇಷ್ಟು ದಿನ ನಿಮ್ಮಲ್ಲಿದ್ದ ಅಭದ್ರತೆಯ ಭಾವ ಇಂದಿನಿಂದ ಬಿಟ್ಟು ಹೋಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಧರೆಯ ಸುಖ-ಕೇವಲ ಬಡ್ಡಿ

ಧರೆಯ ಸುಖ-ಕೇವಲ ಬಡ್ಡಿ
ಪರಮ ಲಾಭವ ಗಳಿಸೆ ಜೀವಿತವ್ಯಾಪಾರ - |
ಕಿರಬೇಕು ಮೂಲಧನವದು ತತ್ವದೃಷ್ಟಿ ||
ಚಿರಲಾಭ ಜಗದಾತ್ಮ ಲೀಲಾವಿಹಾರಸುಖ |
ಧರೆಯ ಸುಖ ಮೇಲ್ ಬಡ್ಡಿ
– ಮಂಕುತಿಮ್ಮ ||749||

ಪದ-ಅರ್ಥ: ಗಳಿಸೆ = ಗಳಿಸಲು, ಜೀವಿತವ್ಯಾಪಾರ ಕಿರಬೇಕು = ಜೀವಿತ + ವ್ಯಾಪಾರಕೆ + ಇರಬೇಕು, ಮೂಲಧನವದು = ಮೂಲಧನವು + ಅದು, ಚಿರಲಾಭ = ಶಾಶ್ವತವಾದ ಲಾಭ, ಮೇಲ್ = ಮೇಲಿನ.

ವಾಚ್ಯಾರ್ಥ: ಜೀವನದ ವ್ಯಾಪಾರದಲ್ಲಿ ಹೆಚ್ಚಿನ ಲಾಭ ಗಳಿಸಲು ಮೂಲಧನ ಇರಬೇಕು. ಅದು ತತ್ವದೃಷ್ಟಿ. ಶಾಶ್ವತ ಲಾಭವೆಂದರೆ ಜಗದಾತ್ಮದ ಲೀಲಾವಿಹಾರದಲ್ಲಿ ದೊರೆಯುವ ಸುಖ. ಭೂಮಿಯಲ್ಲಿ ದೊರೆಯುವ ಸುಖ ಕೇವಲ ಮೇಲಿನ ಬಡ್ಡಿ ಮಾತ್ರ.

ವಿವರಣೆ: ಯಾವುದೇ ವ್ಯಾಪಾರ ಮಾಡಲು ಮೊದಲು ಮೂಲಧನ ಬೇಕು. ಆ ಮೂಲಧನದ ಧೈರ್ಯದ ಮೇಲೆಯೇ ವ್ಯಾಪಾರ ನಡೆಯುವುದು. ಮೂಲಧನವಿಲ್ಲದೆ ಪ್ರಾರಂಭಿಸಿದ ವ್ಯವಹಾರ ಅತಂತ್ರ. ಅಂತೆಯೇ ಮನುಷ್ಯನ ಜೀವಿತವೆಂಬ ವ್ಯಾಪಾರಕ್ಕೆ ಮೂಲಧನ ತತ್ವದೃಷ್ಟಿ. ಆ ತತ್ವದೃಷ್ಟಿ ಹೇಗಿರಬೇಕೆಂಬುದನ್ನು ಡಿ.ವಿ.ಜಿ ತಮ್ಮ 'ಬಾಳಿಗೊಂದು ನಂಬಿಕೆ' ಗ್ರಂಥದಲ್ಲಿ ಮನಮುಟ್ಟುವಂತೆ ಹೇಳುತ್ತಾರೆ 'ಜೀವನವು ದೇವರು ಕೊಟ್ಟ ವರ, ಜೀವನವನ್ನು ಅಂದಗೊಳಿಸುವುದೇ ನಾವು ದೇವರಿಗೆ ಸಲ್ಲಿಸುವ ಕೃತಜ್ಞತೆ. ಜೀವನ ಸಮೃದ್ಧಿ, ಜೀವನ ಸಂಸ್ಕಾರ, ಜೀವನ ಸೌಂದರ್ಯ, ಇದು ಬರಿಯ ಐಹಿಕಾಸಕ್ತಿಯಲ್ಲ, ಭೋಗನಿಷ್ಠೆಯಲ್ಲ, ಅದು ವೇದವೇದಾಂತಗಳ ಸಾರಾಂಶ. ಅದರಲ್ಲಿ ಅತ್ಯಾಶೆ ಬೇಡ, ಉದ್ವೇಗ ಬೇಡ, ಆತುರ ಬೇಡ, ಆವೇಶ ಬೇಡ, ಪ್ರತಿಫಲ ನಿರೀಕ್ಷೆಯ ಅತಿ ಸಂಭ್ರಮ ಬೇಡ; ಹಾಗೆ ಆಲಸ್ಯವೂ ಬೇಡ; ಪ್ರಮತ್ತತೆ ಬೇಡ. ಪ್ರಕೃತಿಯ ಕಾರ್ಯದಂತೆ, ಸೂರ್ಯೋದಯದಂತೆ, ಗಿಡ ಚಿಗುರುವಂತೆ, ನಿರಾಡಂಬರವಾಗಿ ಎಡೆಬಿಡದೆ ಸಾಗುತ್ತಿರಲಿ ನಮ್ಮ ಜೀವಿತದ ವ್ಯವಸಾಯ.'

ಆದರೆ ಶಾಶ್ವತವಾದ ಲಾಭ ನಮಗೆ ದೊರಕುವುದು ಜಗದಾತ್ಮವಾದ ಪರಮಾತ್ಮನ ಲೀಲಾ ವಿಹಾರದಲ್ಲಿ ದೊರೆಯುವ ಸುಖ. ಅದನ್ನು ಪಡೆಯಲು ಏನು ಮಾಡಬೇಕು? ಸಾಗರದಲ್ಲಿ ತೆರೆಯಾದಂತೆ, ಸೂರ್ಯನಲ್ಲಿ ಬೆಳಕಾದಂತೆ, ವಜ್ರದಲ್ಲಿ ಹೊಳಪಿದ್ದಂತೆ ಭಗವಂತನ ಸೃಷ್ಟಿಯಲ್ಲಿ ನನ್ನತನವನ್ನು ಕರಗಿಸಿ ಮರೆತು ಹೋಗಬೇಕು.

ಸತ್ಯಕಾಮ ಜ್ಞಾನಕ್ಕಾಗಿ ತಹತಹಿಸಿದ, ಗುರುವಿನ ಬಳಿ ಸಾರಿದ. ಅವರೊಂದು ಕೆಲಸ ಕೊಟ್ಟರು. 'ಈ ಗೋವುಗಳನ್ನು ಕಾಡಿಗೆ ಒಯ್ದು, ನೂರಾದ ಮೇಲೆ ಕರೆದು ತಾ' ಎಂದರು. ಸತ್ಯಕಾಮ ಕಾಡಿನ ಸೌಂದರ್ಯದಲ್ಲಿ ಮೈ ಮರೆತ. ಸೂರ್ಯನ ಬೆಳಕಿನಲ್ಲಿ ಹೊಳಪಾದ, ಚಂದ್ರನ ಬೆಳದಿಂಗಳಿನಲ್ಲಿ ತಂಪಾದ, ಹೂವಿನಲ್ಲಿ ಸುಗಂಧವಾದ, ಹಕ್ಕಿಗಳ ಕೊರಳಿನ ಧ್ವನಿಯಾದ, ನದಿಯ ನೀರಿನ ಹರಿವಾದ. ತಾನೇ ಪ್ರಕೃತಿಯಾದ. ಅದೊಂದು ಅದ್ಭುತ ಸಮಾಧಿಯ ಅವಸ್ಥೆ. ಯಾವುದೂ ಶಾಶ್ವತವಲ್ಲ, ಸ್ಥಿರವಾದದ್ದು ಆತ್ಮ ಮಾತ್ರ ಎಂದು ತಿಳಿದು ಸತ್ಯಕಾಮ ದಾರ್ಶನಿಕನಾದ. ಹಾಗೆ ಅಂತರ್‌ದೃಷ್ಟಿ ಇದ್ದವನಿಗೆ ಅಪ್ರಯತ್ನ ಸಾಕ್ಷಾತ್ಕಾರ!

ಕಗ್ಗದ ಮಾತೂ ಅದೇ. ಜಗದ ಆತ್ಮದ ಲೀಲೆಯಲ್ಲಿ ವಿಹಾರ ಮಾಡುವುದೇ ಶಾಶ್ವತವಾದ ಲಾಭ. ಭೌತಿಕ ಜೀವನದಲ್ಲಿ, ನಿತ್ಯವ್ಯವಹಾರಗಳಲ್ಲಿ ದೊರೆಯುವ ಸುಖ, ಮೂಲಧನದ ಮೇಲೆ ದೊರಕಿದ ಬಡ್ಡಿ ಇದ್ದಂತೆ. ನಿಮ್ಮ ಮೂಲಧನ ನಿಮ್ಮ ಬಳಿಯೇ ಇದೆ.

ಪದಬಂಧ 5128

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಹಳ ಆಶ್ಚರ್ಯಕರವಾದ ಸಂಗತಿ (3)
3.ಒಬ್ಬನಿಗೆ ಸೇರಿದ ಎಲ್ಲಾ ವಸ್ತು (3)
5.ಗಡಿ ಬಳಿ ಖರೀದಿಸಿದ ದೊಡ್ಡ ಹಾರೆ (3
6.ಅಗುಳು ನುಂಗುವಾಗ ಉದುರಿದ ಅಶ್ರು (2)
7.ಕರದಲ್ಲಿರುವುದು ನೀರು ತುಂಬಿದ ಕಳಶ (3)
9.ವಿಷಯ ತಿಳಿಸಿದಾಗ ಆಗಿರುವ ದುಃಖ (3)
10.ಮಾತು ಕೇಳುತ್ತಿರುವ ಸೋದರಮಾವ (3)
12.ನರನು ನೋಡಿರುವ ಪಟ್ಟಣ (3)
15.ದಿಟ್ಟತನದಿಂದ ನುಡಿದ ಸತ್ಯ (2)
17.ಭಾರ ಹೊರುವ ಕೂಲಿ ಆಳು (3)
19.ಬಯ್ಯಲು ಸೂಕ್ತವೆನಿಸಿದ ವಿಸ್ತಾರವಾದ ಜಾಗ (3)
20.ಜನರು ಸಲ್ಲಿಸಿದ ಕಾಣಿಕೆ (3)

ಮೇಲಿಂದ ಕೆಳಕ್ಕೆ

1.ಒಪ್ಪಂದ ಅಥವಾ ಕರಾರು ಎಂದರೂ ಸರಿ (2)
2.ಕರುವಿನ ಪಚನಾಂಗ (3)
3.ಓರಿಗೆಯವರು ಧರಿಸಿರುವ ಕಂಠಾಭರಣ (3)
4.ಸ್ವಯಂವರದಲ್ಲಿ ನಾದ ಕೇಳಿಸಿತೇ? (2)
5.ಟಾರ ರಸ್ತೆಯ ಬಳಿಯಲ್ಲಿರುವ ಮೋರಿ (3)
6.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
7.ದನಕ್ಕಾಗಿ ನಡೆದ ಕಾಳಗ (3)
8.ಈತ ಪಕ್ಕಾ ಹಳ್ಳಿಯವ! (3)
11.ಲಟಕ್ಕನೆ ಮುತ್ತಿಕ್ಕಿದ ಹಣೆ (3)
13.ರಸ್ತೆಯ ಉದ್ದಗಲ ನಡೆಯುತ್ತಿರುವ ಗಲಾಟೆ(3)
14.ಮಹನೀಯ ಕಟ್ಟಿಸಿರುವ ಭವ್ಯ ಸೌಧ (3)
15.ದಿನದಲ್ಲೇ ಮಂತ್ರಿ ಬಂದಿರುವನಲ್ಲಾ! (3)
16.ಪಡಿನೆಳಲು ಇಲ್ಲಿ ಕಾಣುತ್ತಿದೆ (2)
18.ನಾಗರೀಕರು ಹಿಡಿದಿರುವ ಗುಂಜು (2)



5127ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಣಕ 3.ಪಗಾರ
5.ಕರಿ 6.ಟಗರು
8.ನೆಪ 10.ವರ್ಜ್ಯ
11.ಭವ 13.ಸೆಹ
15.ಕಡಲು 17.ಮನೆ
18.ಗೆಜ್ಜಲು 19.ಕಶೇರು

ಮೇಲಿಂದ ಕೆಳಕ್ಕೆ:
1.ಕತ್ತರಿ 2.ಕರಟ
3.ಪನ್ನೀರು 4.ರವಾನೆ
5.ಕತ್ತಿವರಸೆ 7.ಗಡ್ಡ
9.ಪರಿವರ್ತನೆ 12.ದಂಡ
14.ಹಣೆಗೆ 15.ಕನಲು
16.ಉಬ್ಬಕ 17.ಮಲರು

ಸುಡೊಕು 5514

		5	6		2			
	3				4	6	8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5513 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಮುಂಬೈ ಧಾರಣೆ

ಶೇಂಗಾ

3–11-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1320 (1310)
ಪಾಮ್ ವಾರದ ಡೆಲಿವರಿ	1018 (1018)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,900 (50,575)
ಬೆಳ್ಳಿ ಕೆ.ಜಿ 57,200 (58,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹16000-20000

ಷೇರುಪೇಟೆ ವಹಿವಾಟು

▼ 70

60,906 ಹಿಂದಿನ ಅಂತ್ಯ
60,836 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,083
ಇಂದಿನ ಅಂತ್ಯ	18,053
▼	30
ದಿನದ ಕನಿಷ್ಠ	17,959

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹520
12 ಮೊಟ್ಟೆಗೆ ₹67
ಮೈಸೂರು
100 ಮೊಟ್ಟೆಗೆ ₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹389-621
ದ್ವಿತಳಿ (ಬಿ.ವಿ) ₹458-820

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1387 (1375)
ಸೂರ್ಯಕಾಂತಿ (ರಿಫೈನ್ಡ್)	₹1650 (1630)
ಪಾಮೋಲಿನ್	₹1020 (1020)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2500-3500
ಮಧ್ಯಮ	₹1500-2500
ಸಣ್ಣ	₹500-1500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹145
ಆರ್‌ಎಸ್‌ಎಸ್-5 ₹137
ಗುಡ್ ಲಾಟ್ ₹131
(ಪ್ರತಿ ಕೆ.ಜಿಗೆ)

ಇಪ್ಪತ್ತು ವರ್ಷಗಳಲ್ಲಿ ಹೀಗೆ ಆಗಿದ್ದು ಇದೇ ಮೊದಲು: ಎಸ್‌ಬಿಐ ಎಕೊವ್ರ್ಯಾಪ್ ವರದಿ

ದೀಪಾವಳಿ: ತಗ್ಗಿದ ನಗದು ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬ ಇದ್ದ ವಾರದಲ್ಲಿ ಇಪ್ಪತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ದೇಶದಲ್ಲಿ ಚಲಾವಣೆಯಲ್ಲಿದ್ದ ನಗದು ಹಣದ ಪ್ರಮಾಣ ಕಡಿಮೆ ಆಗಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹೇಳಿದೆ.

ಹಬ್ಬದ ಸಂದರ್ಭದಲ್ಲಿ ಖರೀದಿ ಚಟುವಟಿಕೆ ಹೆಚ್ಚು ನಡೆಯುವುದು ವಾಡಿಕೆ. ಹೆಚ್ಚಿನ ಖರೀದಿ ಇದ್ದಾಗ ನಗದು ಚಲಾವಣೆಯೂ ಹೆಚ್ಚಿನ ಮಟ್ಟದಲ್ಲಿ ಇರುವುದು ಸಾಮಾನ್ಯ.

‘ಕಳೆದ ಕೆಲವು ವರ್ಷಗಳಲ್ಲಿ ಭಾರತದ ನಗದು ಪಾವತಿ ಆಧಾರಿತ ಅರ್ಥವ್ಯವಸ್ಥೆಯು ಸ್ಮಾರ್ಟ್‌ಫೋನ್ ಆಧಾರಿತ ಪಾವತಿ ಅರ್ಥವ್ಯವಸ್ಥೆಯಾಗಿ ಪರಿವರ್ತನೆ ಕಂಡಿದೆ’ ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಸಿದ್ಧಪಡಿಸಿರುವ ವರದಿಯು ಹೇಳಿದೆ.

ಡಿಜಿಟಲ್ ವಹಿವಾಟುಗಳು ಹೆಚ್ಚಾಗುತ್ತಿರುವ ಕಾರಣದಿಂದಾಗಿ, 2002ರ ನಂತರದಲ್ಲಿ ದೀಪಾವಳಿ ಹಬ್ಬದ ವಾರದಲ್ಲಿ ಚಲಾವಣೆಯಲ್ಲಿನ ನಗದಿನ ಪ್ರಮಾಣವು ಇದೇ ಮೊದಲ ಬಾರಿಗೆ ಕುಸಿತ ಕಂಡಿದೆ. 2009ರಲ್ಲಿಯೂ ದೀಪಾವಳಿ ವಾರದಲ್ಲಿ ಚಲಾವಣೆಯಲ್ಲಿ ಇದ್ದ ನಗದು ಹಣದ ಪ್ರಮಾಣವು ಕುಸಿದಿತ್ತು. ಆದರೆ, ಆಗ ಹಾಗೆ ಆಗಿದ್ದಕ್ಕೆ ಕಾರಣ ಅಂದಿನ ಆರ್ಥಿಕ ಹಿಂಜರಿತ ಎಂದು ಎಸ್‌ಬಿಐ ಅಂದಾಜು ಮಾಡಿದೆ.

ಈಚಿನ ವರ್ಷಗಳಲ್ಲಿ ಹಣದ ವಹಿವಾಟುಗಳಲ್ಲಿ ಕ್ರೆಡಿಟ್ ಕಾರ್ಡ್ ಹಾಗೂ ಡೆಬಿಟ್ ಕಾರ್ಡ್‌ನ ಪಾಲು ಸ್ಥಿರವಾಗಿದೆ. ಆದರೆ ಏಕೀಕೃತ ಪಾವತಿ ವ್ಯವಸ್ಥೆಯ (ಯುಪಿಐ) ಪಾಲು 2015-16ನೆಯ ಆರ್ಥಿಕ ವರ್ಷದಲ್ಲಿ ಶೂನ್ಯ ಮಟ್ಟದಲ್ಲಿ ಇದ್ದಿದ್ದು, 2021-22ನೆಯ ಸಾಲಿನಲ್ಲಿ ಶೇ 16ಕ್ಕೆ ಏರಿಕೆ ಆಗಿದೆ.

2015-16ರಲ್ಲಿ ಕಾಗದ ಆಧಾರಿತ ಪಾವತಿಗಳ (ಚೆಕ್, ಡಿ.ಡಿ.) ಪ್ರಮಾಣವು ಶೇ 46ರಷ್ಟು ಇತ್ತು. ಅದು 2021-22ರಲ್ಲಿ ಶೇ 12.7ಕ್ಕೆ ಕುಸಿದಿದೆ ಎಂದು ವರದಿ ಹೇಳಿದೆ.

ಒಟ್ಟಾರೆ ಪಾವತಿ ವ್ಯವಸ್ಥೆಯಲ್ಲಿ 2015-16ರಲ್ಲಿ ಶೇ 88ರಷ್ಟಿದ್ದ ನಗದಿನ ಪ್ರಮಾಣವು 2021-22ರಲ್ಲಿ ಶೇ 20ಕ್ಕೆ ಕುಸಿದಿದೆ. ಇದು 2026-27ನೆಯ ಹಣಕಾಸು ವರ್ಷದ ಹೊತ್ತಿಗೆ ಶೇ 11.15ಕ್ಕೆ ಇಳಿಕೆಯಾಗುವ ಸಾಧ್ಯತೆ ಇದೆ.

ಎನ್‌ಇಎಫ್‌ಟಿ ಸೇರಿದಂತೆ ವಿವಿಧ ಬಗೆಯ ಡಿಜಿಟಲ್ ಪಾವತಿಗಳ ಪಾಲು 2015-16ರಲ್ಲಿ ಶೇ 11.26ರಷ್ಟು ಇದ್ದಿದ್ದು 2021-22ರಲ್ಲಿ ಶೇ 80.4ಕ್ಕೆ ಏರಿಕೆ ಕಂಡಿದೆ.

2026-27ನೆಯ ಹಣಕಾಸು ವರ್ಷದಲ್ಲಿ ಡಿಜಿಟಲ್ ಪಾವತಿಗಳ ಪ್ರಮಾಣವು ಶೇ 88ಕ್ಕೆ ತಲುಪುವ ನಿರೀಕ್ಷೆ ಇದೆ.



(ಎಸ್‌ಬಿಐ ಎಕೊವ್ರ್ಯಾಪ್ ವರದಿಯಲ್ಲಿ ಇರುವ ಅಂದಾಜು ಪ್ರಮಾಣ)

ಸುದ್ದಿ 2 ನಿಮಿಷ

ವಾಟ್ಸ್‌ಆ್ಯಪ್ ಮೂಲಕ 32 ಜನರಿಗೆ ವಿಡಿಯೊ ಕರೆ ಸೌಲಭ್ಯ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಮೂಲಕ ಧ್ವನಿ ಮತ್ತು ವಿಡಿಯೊ ಕರೆ ಮಾಡುವಾಗ ಇನ್ನು ಮುಂದೆ ಏಕಕಾಲದಲ್ಲಿ 32 ಜನರ ಜೊತೆ ಸಂಪರ್ಕ ಸಾಧಿಸಲು ಸಾಧ್ಯವಾಗಲಿದೆ. ಅಲ್ಲದೆ, ಒಂದೇ ಬಾರಿಗೆ ಗರಿಷ್ಠ 2 ಜಿ.ಬಿ.ವರೆಗಿನ ಕಡತಗಳನ್ನು ಕಳುಹಿಸಲಿಕ್ಕೂ ವಾಟ್ಸ್‌ಆ್ಯಪ್ ಅವಕಾಶ ಕಲ್ಪಿಸಲಿದೆ.

ವಾಟ್ಸ್‌ಆ್ಯಪ್ ಗುಂಪಿನಲ್ಲಿ ಇನ್ನು ಮುಂದೆ ಗರಿಷ್ಠ 1,024 ಜನರನ್ನು ಸೇರಿಸಿಕೊಳ್ಳಲು ಆಗಲಿದೆ ಎಂದು ಕಂಪನಿ ಗುರುವಾರ ತಿಳಿಸಿದೆ.

ಗರಿಷ್ಠ ಐದು ಸಾವಿರ ಜನರಿಗೆ ಸಂದೇಶಗಳನ್ನು ಬ್ರಾಡ್‌ಕಾಸ್ಟ್ ಮಾಡಲು ಸಾಧ್ಯವಾಗಲಿದೆ. ವಾಟ್ಸ್‌ಆ್ಯಪ್ ಮೂಲಕ ಅಭಿಪ್ರಾಯ ಸಂಗ್ರಹ (ಪೋಲ್) ನಡೆಸಲು ಅವಕಾಶ ಸಿಗಲಿದೆ.

‘ವಾಟ್ಸ್‌ಆ್ಯಪ್‌ನಲ್ಲಿ ನಾವು ಇಂದು ‘ಕಮ್ಯುನಿಟೀಸ್’ಗೆ ಚಾಲನೆ ನೀಡುತ್ತಿದ್ದೇವೆ. ಇದರ ಮೂಲಕ ಗ್ರೂಪ್‌ಗಳು ಇನ್ನಷ್ಟು ಉತ್ತಮವಾಗುತ್ತವೆ... ಪೋಲ್ ಹಾಗೂ ಒಂದೇ ಬಾರಿಗೆ 32 ಜನರಿಗೆ ವಿಡಿಯೊ ಕರೆ ಮಾಡುವ ಸೌಲಭ್ಯವನ್ನು ಕೂಡ ನಾವು ಆರಂಭಿಸುತ್ತಿದ್ದೇವೆ’ ಎಂದು ವಾಟ್ಸ್‌ಆ್ಯಪ್‌ನ ಮಾಲೀಕತ್ವ ಹೊಂದಿರುವ ಮೆಟಾ ಕಂಪನಿಯ ಸಂಸ್ಥಾಪಕ ಮಾರ್ಕ್ ಝುಕರ್‌ಬರ್ಗ್ ಹೇಳಿದ್ದಾರೆ.

ಈ ಸೌಲಭ್ಯಗಳು ಆರಂಭವಾಗುವ ಕುರಿತು ಕಂಪನಿಯು ಏಪ್ರಿಲ್‌ನಲ್ಲಿ ಘೋಷಣೆ ಮಾಡಿತ್ತು. ಈಗ ಅವುಗಳನ್ನು ಆರಂಭಿಸುತ್ತಿದೆ. ಇವು ಮುಂದಿನ ಕೆಲವು ವಾರಗಳಲ್ಲಿ ಎಲ್ಲ ಬಳಕೆದಾರರಿಗೆ ಹಂತ ಹಂತವಾಗಿ ಲಭ್ಯವಾಗಲಿವೆ.

ಪಿಂಚಣಿ: ವಿವರಣೆ ಕೇಳಲಿರುವ ಸಂಸತ್ತಿನ ಸ್ಥಾಯಿ ಸಮಿತಿ

ನವದೆಹಲಿ (ಪಿಟಿಐ): ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಚಂದಾದಾರರ ಪಿಂಚಣಿ ಮೊತ್ತವನ್ನು ಈಗಿನ ₹ 1,000ಕ್ಕಿಂತ ಹೆಚ್ಚು ಮಾಡುವ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದು ಏಕೆ ಎಂದು ಸಂಸತ್ತಿನ ಸ್ಥಾಯಿ ಸಮಿತಿಯೊಂದು ಕೇಂದ್ರ ಹಣಕಾಸು ಸಚಿವಾಲಯದಿಂದ ವಿವರಣೆ ಕೇಳಲಿದೆ.

ಪಿಂಚಣಿ ಮೊತ್ತ ಹೆಚ್ಚಿಸುವಂತೆ ಕೇಂದ್ರ ಕಾರ್ಮಿಕ ಸಚಿವಾಲಯ ಪ್ರಸ್ತಾವ ಸಲ್ಲಿಸಿತ್ತು. ಆದರೆ ಪಿಂಚಣಿ ಹೆಚ್ಚಳದ ಪ್ರಸ್ತಾವ ಎಷ್ಟಿತ್ತು ಎಂಬುದು ಸ್ಪಷ್ಟವಾಗಿಲ್ಲ.

ಕಾರ್ಮಿಕ ಸಚಿವಾಲಯವು 1995ರ ನೌಕರರ ಪಿಂಚಣಿ ಯೋಜನೆಯನ್ನು (ಇಪಿಎಸ್) ಸಂಪೂರ್ಣವಾಗಿ ಪುನರ್ ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿದೆ. ಸದಸ್ಯರಿಗೆ ನೀಡುವ ಮಾಸಿಕ ಕನಿಷ್ಠ ಪಿಂಚಣಿಯ ಮೊತ್ತವು ₹ 2,000 ಇರಬೇಕು ಎಂದು ಸಮಿತಿಯು ಶಿಫಾರಸು ಮಾಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ರಾಮಯ್ಯರೆಡ್ಡಿ
(ದಿ॥ ಶ್ರೀ ಅಣ್ಣಯ್ಯರೆಡ್ಡಿಯವರ ಪುತ್ರ)
ತಾ॥ 03-11-2022ನೇ ಗುರುವಾರ ಮಧ್ಯಾಹ್ನ 3-55 ಘಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ಅಂತಿಮ ಸಂಸ್ಕಾರವನ್ನು ತಾ॥ 04-11-2022ನೇ ಶುಕ್ರವಾರ ಮಧ್ಯಾಹ್ನ 2-00 ಘಂಟೆಗೆ ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಸ್ಥಳ: ಹಿಂದೂ ರುದ್ರಭೂಮಿ, ಸುದ್ದುಗುಂಟೆ ಪಾಳ್ಯ (ಹೊಸೂರು ಮುಖ್ಯ ರಸ್ತೆ), ಬೆಂಗಳೂರು
ಇಂತಿ ದುಃಖತಪ್ತರು :
ಕುಟುಂಬವರ್ಗದವರು ಮತ್ತು ಮಿತ್ರರು
ದೂ : 93438 50080, 94488 48269

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-56000
ಚಿತ್ರದುರ್ಗ	
ಅಪಿ	46139-46569
ಬೆಟ್ಟೆ	36619-37059
ಕೆಂಪುಗೋಟು	29409-29810
ರಾಶಿ	45629-46099
ಕುಮಟ	
ಚಿಪ್ಪು	26001-34369
ಕೋಕ	1529-32315
ಹೊಸಚಾಲಿ	37681-40899
ಸಾಗರ	
ಬಿಳಿಗೋಟು	7290-31321
ಚಾಲಿ	32299-39099
ಕೋಕ	20129-33110
ರಾಶಿ	30690-47969
ಸಿಪ್ಪೆಗೋಟು	10690-20299
ಶಿವಮೊಗ್ಗ	
ಬೆಟ್ಟೆ	49190-52989
ಗೊರಬಲು	17119-36699
ಹೊಸತು	44108-46869
ರಾಶಿ	44409-49000
ಸಿದ್ದಾಪುರ	
ಬಿಳಿಗೋಟು	28399-35399
ಚಾಲಿ	37099-41599
ಕೋಕ	27099-33299
ಕೆಂಪುಗೋಟು	26699-33499
ರಾಶಿ	44399-46799
ತಟ್ಟಿಬೆಟ್ಟೆ	36119-39809
ಶಿರಸಿ	
ಬೆಟ್ಟೆ	46366-52399
ಬಿಳಿಗೋಟು	21899-36299
ಚಾಲಿ	34899-42699
ರಾಶಿ	46200-46200
ಯಲ್ಲಾಪುರ	
ಬಿಳಿಗೋಟು	27019-34299
ಚಾಲಿ	37359-42190
ಕೋಕ	18899-32212
ಕೆಂಪುಗೋಟು	30599-35919
ರಾಶಿ	47800-53699
ತಟ್ಟಿಬೆಟ್ಟೆ	37600-46262

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14000	14200	182.15 ಸೆಂಟ್ಸ್
ಎಸಿ	7280	8000	7300	
ಆರ್‌ಪಿ	8500	9000	8800	ಲಂಡನ್
ಆರ್‌ಸಿ	4600	3925	4300	1882 ಡಾಲರ್ಸ್

ಕೇಂದ್ರ ಶಿಕ್ಷಣ ಸಚಿವಾಲಯದಿಂದ ವರದಿ ಬಿಡುಗಡೆ

ಮುಚ್ಚಿದ 20 ಸಾವಿರ ಶಾಲೆಗಳು

ದೇಶದಲ್ಲಿನ ಶಾಲೆಗಳ ಸ್ಥಿತಿಗತಿ ಕುರಿತ ‘ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ-2021-22’ ವರದಿಯನ್ನು ಕೇಂದ್ರ ಶಿಕ್ಷಣ ಸಚಿವಾಲಯದ ‘ಎಜುಕೇಷನ್ +’ ಗುರುವಾರ ಬಿಡುಗಡೆ ಮಾಡಿದೆ. ಕೋವಿಡ್ ನಂತರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆದ ಬದಲಾವಣೆಗಳನ್ನು ಇಲ್ಲಿ ಹೇಳಲಾಗಿದೆ. ಎಷ್ಟು ಶಾಲೆಗಳು ಮುಚ್ಚಿವೆ, ಶಿಕ್ಷಕರ ಸಂಖ್ಯೆಯ ಏರಿಕೆ-ಇಳಿಕೆ, ಮಕ್ಕಳ ದಾಖಲಾತಿ, ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿದ ಮಕ್ಕಳ ಶಾಲಾ ದಾಖಲಾತಿ ಮತ್ತು ದೇಶದ ಶಾಲೆಗಳ ಕಾರ್ಯಕ್ಷಮತೆಗೆ ಶ್ರೇಯಾಂಕ ನೀಡುವ ಸೂಚ್ಯಂಕಗಳ ಮಾಹಿತಿಗಳನ್ನು ಒಳಗೊಂಡ ವರದಿ ಇದಾಗಿದೆ.

ಭಾರತದಲ್ಲಿ 10ರಲ್ಲಿ 7 ಖಾಸಗಿ ಶಾಲೆಗಳು

ಕಳೆದ ಎಂಟು ವರ್ಷಗಳಲ್ಲಿ ಭಾರತದಲ್ಲಿ ತೆರೆದಿರುವ 10 ಶಾಲೆಗಳಲ್ಲಿ 7 ಶಾಲೆಗಳು ಖಾಸಗಿ ಶಾಲೆಗಳಾಗಿವೆ ಎಂದು ಯುನೆಸ್ಕೊ ತನ್ನ ಗ್ಲೋಬಲ್ ಎಜುಕೇಷನ್ ಮೊನಿಟರಿಂಗ್ ರಿಪೋರ್ಟ್ 2022ರಲ್ಲಿ ಹೇಳಿದೆ. ದಕ್ಷಿಣ ಏಷ್ಯಾ ದೇಶಗಳಲ್ಲಿ ಯುನೆಸ್ಕೊ ಸಮೀಕ್ಷೆಗಳನ್ನು ನಡೆಸಿ, ವರದಿ ಸಿದ್ಧಪಡಿಸಿದೆ.

ಪೋಷಕರ ಆಕಾಂಕ್ಷೆಗಳ ಮಟ್ಟಕ್ಕೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ದೊರೆಯದಿರುವ ಕಾರಣಕ್ಕೆ ಖಾಸಗಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯುತ್ತಿವೆ ಎಂದು ವರದಿ ಹೇಳಿದೆ.

ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಿಗುವುದಿಲ್ಲ ಎಂದು ಶೇ 73ರಷ್ಟು ಪೋಷಕರು ಸಮೀಕ್ಷೆಯೊಂದರಲ್ಲಿ ಅಭಿಪ್ರಾಯಪಡುತ್ತಾರೆ. ಶೇ 12ರಷ್ಟು ಪೋಷಕರು ಇಂಗ್ಲಿಷ್ ಮಾಧ್ಯಮ ಬೇಕು ಹಾಗೂ ಶೇ 10ರಷ್ಟು ಪೋಷಕರು ಸರ್ಕಾರಿ ಶಾಲೆಯ ಲಭ್ಯತೆ ಇಲ್ಲ ಎಂದು ಸಮೀಕ್ಷೆಯಲ್ಲಿ ಹೇಳಿದ್ದಾರೆ.



- 2021-22ನೇ ಸಾಲಿನಲ್ಲಿ ದೇಶದಾದ್ಯಂತ ಒಟ್ಟು 20 ಸಾವಿರಕ್ಕೂ ಹೆಚ್ಚು ಶಾಲೆಗಳು ಮುಚ್ಚಿವೆ. ಈ ಸಂಖ್ಯೆಯಲ್ಲಿ ಹೆಚ್ಚು ಖಾಸಗಿ ಶಾಲೆಗಳೇ ಇವೆ.
- ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಕ್ಕಳ ದಾಖಲಾತಿ ಸಂಖ್ಯೆ 7.85 ಲಕ್ಷ ಹೆಚ್ಚಾಗಿದೆ. 2020-21ರಲ್ಲಿ ಶೇ 53.8ರಷ್ಟಿದ್ದ ಪ್ರಮಾಣವು 2021-22ರಲ್ಲಿ ಶೇ 57.6ರಷ್ಟಾಗಿದೆ.
- ಕಳೆದ ವರ್ಷಕ್ಕೆ ಹೋಲಿಸಿದರೆ, ಶಿಕ್ಷಕರ ಪ್ರಮಾಣವು ಈ ವರ್ಷ ಶೇ 1.95ರಷ್ಟು ಕಡಿಮೆ ಆಗಿದೆ.

ಶಾಲೆಗಳ ಕಾರ್ಯಕ್ಷಮತೆ ಶ್ರೇಯಾಂಕ

ಶಾಲೆಗಳ ಕಾರ್ಯಕ್ಷಮತೆಯನ್ನು ಪರಿಗಣಿಸಿ ನೀಡಲಾಗುವ ಶ್ರೇಯಾಂಕ ಪಟ್ಟಿಯಲ್ಲಿ ಯಾವ ರಾಜ್ಯವೂ ಅತ್ಯುತ್ತಮ ಸ್ಥಾನ (ಲೆವೆಲ್1) ಪಡೆದುಕೊಂಡಿಲ್ಲ. ಆದರೆ, ಏಳು ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶವು ಪಟ್ಟಿಯಲ್ಲಿ ಉತ್ತಮ ಸ್ಥಾನ (ಲೆವೆಲ್2) ಪಡೆದುಕೊಂಡಿವೆ.

ಆಂಧ್ರ ಪ್ರದೇಶ, ಕೇರಳ, ಮಹಾರಾಷ್ಟ್ರ, ಪಂಜಾಬ್, ಚಂಡೀಗಢ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳು ಈ ಪಟ್ಟಿಯಲ್ಲಿ ಉತ್ತಮ ಸ್ಥಾನ ಪಡೆದುಕೊಂಡಿರುವ ರಾಜ್ಯಗಳು. ಲಡಾಖ್ ಕೇಂದ್ರಾಡಳಿತ ಪ್ರದೇಶವು ಲೆವೆಲ್ 8ರಿಂದ ಲೆವೆಲ್ 4ಕ್ಕೆ ತಲುಪಿದೆ.

ಶಾಲೆಗಳ ಕಾರ್ಯಕ್ಷಮತೆಯನ್ನು ಅಳೆಯುವುದಕ್ಕಾಗಿ 70 ಅಂಶಗಳನ್ನು ಗುರುತಿಸಿ, ಎರಡು ವರ್ಗಗಳಾಗಿ ವಿಂಗಡಣೆ ಮಾಡಲಾಗಿತ್ತು. ಅವುಗಳೆಂದರೆ, ಫಲಿತಾಂಶ ಮತ್ತು ಆಡಳಿತ ನಿರ್ವಹಣೆ. ಇವುಗಳನ್ನು ಮತ್ತೆ ಐದು ಅಂಶಗಳಲ್ಲಿ ವಿಭಾಗ ಮಾಡಲಾಗಿತ್ತು. ಅವುಗಳೆಂದರೆ, ಕಲಿಕೆ ಫಲಿತಾಂಶ, ಮೂಲಭೂತ ಸೌಕರ್ಯ ಮತ್ತು ಸೌಲಭ್ಯ, ಆಡಳಿತ ಪ್ರಕ್ರಿಯೆ ಹಾಗೂ ಅವಕಾಶ ಇವುಗಳಿಗೆ 1000 ಅಂಕಗಳನ್ನು ನಿಗದಿ ಮಾಡಲಾಗಿತ್ತು.

ಸೇವಾ ವಲಯ: ಹೆಚ್ಚಿದ ಬೇಡಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಅಕ್ಟೋಬರ್ ತಿಂಗಳಲ್ಲಿ ಚೇತರಿಕೆ ಕಂಡಿವೆ. ಸೇವೆಗಳಿಗೆ ಬೇಡಿಕೆ ಹೆಚ್ಚುತ್ತಿರುವುದು, ಹೊಸ ವಹಿವಾಟುಗಳು ಕಂಪನಿಗಳಿಗೆ ಸಿಗುತ್ತಿರುವುದು ಹಾಗೂ ಸೇವಾ ವಲಯದಲ್ಲಿ ಹೊಸ ನೇಮಕಾತಿಗಳು ಆಗುತ್ತಿರುವುದು ಒಟ್ಟಾರೆ ಚಟುವಟಿಕೆ ಹೆಚ್ಚಳಕ್ಕೆ ಇಂಬು ನೀಡಿವೆ.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಅಕ್ಟೋಬರ್ ತಿಂಗಳಲ್ಲಿ 55.1ಕ್ಕೆ ಏರಿಕೆ ಆಗಿದೆ. ಇದು ಸೆಪ್ಟೆಂಬರ್‌ನಲ್ಲಿ 54.3ರಷ್ಟು ಇತ್ತು.

ಸೇವಾ ವಲಯದ ಚಟುವಟಿಕೆಗಳು ಸತತ ಹದಿನೈದು ತಿಂಗಳುಗಳಿಂದ ಏರಿಕೆ ಕಾಣುತ್ತಿವೆ ಎಂಬುದನ್ನು ಸೂಚ್ಯಂಕವು ಹೇಳುತ್ತಿದೆ. ಸೂಚ್ಯಂಕ 50ಕ್ಕಿಂತ ಹೆಚ್ಚಿದ್ದರೆ ಬೆಳವಣಿಗೆ ಎಂದೂ, 50ಕ್ಕಿಂತ ಕಡಿಮೆ ಇದ್ದರೆ ಕುಸಿತ ಎಂದೂ ಪರಿಗಣಿಸಲಾಗುತ್ತದೆ.

‘ಶುಲ್ಕ ಹೆಚ್ಚಳ ಮಾಡಿದ್ದರೂ ಸೇವಾ ವಲಯದ ಕಂಪನಿಗಳಿಗೆ ಹೊಸ ಕೆಲಸದ ಒಪ್ಪಂದಗಳು ಸಿಗುತ್ತಿವೆ. ಹೀಗಾಗಿ ಸೇವಾ ವಲಯವು ವಿಸ್ತರಣೆ ಕಾಣುವುದು ಮುಂದುವರಿದಿದೆ. ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ನೌಕರರ ನೇಮಕ ಕೂಡ ಜಾಸ್ತಿ ಆಗಿದೆ’ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್ ಸಂಸ್ಥೆಯ ಅರ್ಥಶಾಸ್ತ್ರದ ಸಹ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ತಿಳಿಸಿದ್ದಾರೆ.

ಸೇವಾ ವಲಯದ ಉದ್ಯೋಗಗಳ ಸಂಖ್ಯೆಯು ಸತತ ಐದು ತಿಂಗಳಿಂದ ಏರಿಕೆ ದಾಖಲಿಸಿದೆ. ಮೂರು ವರ್ಷಕ್ಕೂ ಹೆಚ್ಚಿನ ಅವಧಿಯ ಎಡನೆಯ ಅತ್ಯಂತ ವೇಗದ ಏರಿಕೆ ಅಕ್ಟೋಬರ್‌ನಲ್ಲಿ ಆಗಿದೆ.

ಸಂಪರ್ಕಕ್ಕೆ ಸಿಗದ ಮಲ್ಯ: ‘ಸುಪ್ರೀಂ’ಗೆ ವಕೀಲರ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯಮಿ ವಿಜಯ್ ಮಲ್ಯ ಅವರು ಕೆಲ ದಿನಗಳಿಂದ ಸಂಪರ್ಕಕ್ಕೆ ಸಿಗುತ್ತಿಲ್ಲ ಮತ್ತು ಪ್ರತಿಕ್ರಿಯಿಸುತ್ತಿಲ್ಲ. ಯಾವುದೇ ಸೂಚನೆಗಳನ್ನು ನೀಡಲು ಆಗುತ್ತಿಲ್ಲ ಎಂದು ಅವರ ಪರ ವಕೀಲರು ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಮಲ್ಯ ಪರ ವಕಾಲತ್ತು ವಹಿಸುವ ಜವಾಬ್ದಾರಿಯಿಂದ ತಮ್ಮನ್ನು ಬಿಡುಗಡೆಗೊಳಿಸುವಂತೆ ನ್ಯಾಯಾಲಯಕ್ಕೆ ವಕೀಲರು ಮನವಿ ಮಾಡಿದರು.

‘ಮಲ್ಯ ಬಹಳ ಸಮಯದಿಂದ ಸಂವಹನ ನಡೆಸುತ್ತಿಲ್ಲ. ಬಾಕಿ ಇರುವ ವಿಷಯಕ್ಕೆ ಸಂಬಂಧಿಸಿದಂತೆ ಅವರಿಂದ ಯಾವುದೇ ಸೂಚನೆಗಳಿಲ್ಲ’ ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರ ನ್ಯಾಯಪೀಠಕ್ಕೆ ವಕೀಲರು ಹೇಳಿದರು.

ಬ್ರಿಟನ್‌ನಲ್ಲಿರುವ ಮಲ್ಯ ಅವರ ಇ-ಮೇಲ್ ಮತ್ತು ವಸತಿ ವಿಳಾಸವನ್ನು ನ್ಯಾಯಾಲಯದ ರಿಜಿಸ್ಟ್ರರ್‌ಗೆ ಒದಗಿಸುವಂತೆ ಪೀಠ ವಕೀಲರಿಗೆ ಹೇಳಿದೆ.

ನ್ಯಾಯಾಲಯದ ನಿರ್ಬಂಧದ ಆದೇಶ ಹೊರತಾಗಿಯೂ ಅವರ ಮೂವರು ಮಕ್ಕಳ ಖಾತೆಗಳಿಗೆ ₹331 ಕೋಟಿ ವರ್ಗಾವಣೆಗೆ ಸಂಬಂಧಿಸಿದ 2017ರ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಮಲ್ಯ ಅವರ ಗೈರು ಹಾಜರಿಯಲ್ಲಿ ₹2,000 ದಂಡದೊಂದಿಗೆ ನಾಲ್ಕು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ. 10,000-15,000. 8951315839, 9880545002

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ವ್ಯಾಪಾರ

Business Offers

Finance

ತುಮಕೂರಿನಲ್ಲಿರುವ ಸ್ಥಿರಾಸ್ತಿಯ ಮೇಲೆ ಮೂರು ಕೋಟಿ ರೂಪಾಯಿ ಸಾಲ ಬೇಕಾಗಿದೆ. ಕನ್ನಡದಲ್ಲಿ (ವ್ಯಕ್ತಿ - ಸಂಸ್ಥೆ) ವ್ಯವಹರಿಸಲಾಗುವುದು. ಕಡಿಮೆ ಬಡ್ಡಿ- ನಿಬಂಧನೆಗಳಿಗೆ ಆದ್ಯತೆ. ಯಾವುದೇ ಶುಲ್ಕವನ್ನು ಮುಂಗಡವಾಗಿ ನೀಡುವುದಿಲ್ಲ. ನಗದು ರೂಪದಲ್ಲಿ ವ್ಯವಹರಿಸಬಹುದು. ಕರೆಮಾಡಿ: 98445 44500.

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರಜಾವಾಣಿ
ರಿಯಲ್ ಎಸ್ಟೇಟ್
BOOK YOUR PROPERTY AD IN PRAJAVANI ALL KARNATAKA ON FRIDAY + SATURDAY + SUNDAY
@ 960/-* Per Sqcm
Single Column
conditions apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560 | 9731810277
9901641752 | 9886213331
080- 45557163 | 45557164

TRAVEL CORNER
ಭಾರತೀಯ ರೈಲ್ವೆ
ಕಾಶಿ ರಾಮೇಶ್ವರಂ ರೈಲ್ವೆಯಾತ್ರೆ
ವಾರಣಾಸಿ -ಗಯಾ- ಪ್ರಯಾಗರಾಜ್ ಚಿತ್ರಕೂಟದಾಮ ಅಯೋಧ್ಯ -ಪೂರಿ ಕೊನಾರ್ಕ್-ರಾಮೇಶ್ವರಂ -ಮಧುರೈ
18.11.22 - 11 ದಿವಸ - 2SL Rs 23500
ರೈಲಿನಲ್ಲಿ ಪ್ರಯಾಣ- ವಸತಿ ಬಸ್-ಊಟ ಸೆಕ್ಯೂರಿಟಿ ಟುರ್-ಮ್ಯಾನೇಜರ್
87544 04260 | WWW.ULARAIL.COM

ರಿಯಲ್ ಎಸ್ಟೇಟ್ ಬೈಯಿಂಗ್

Commercial Land

South

URGENTWANTED 0.5 to 1 acre open land. The land should be located on Doddaballapuramain road surrounding areas or in Doddaballapura industrial area. Interestedparties contact to below mobile numbers: 91 8088541467/ 7496969434.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಶ್ರೀ ದುರ್ಗಾದೇವಿ ಆರಾಧನೆಯಿಂದ ಆರೋಗ್ಯ, ಸಂತಾನ, ಶತ್ರುಕಾಟ, ಲೈಂಗಿಕ ಸಮಸ್ಯೆ ಹಾಗೂ ಸ್ತ್ರೀ ಪುರುಷ ವಶೀಕರಣ 3 ದಿನದಲ್ಲಿ ಮಾಡಿಕೊಡುತ್ತಾರೆ. ಫೋನಿನ ಮೂಲಕ ನೇರ ಪರಿಹಾರ. ಶ್ರೀ ಆಚಾರ್ಯ: 9945995681

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರವಾಸ

Travel

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ, ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು4. 9342514289 9686721196

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 14/11/22 ಗುಜರಾತ್, ದ್ವಾರಕ, ಸೋಮನಾಥ್, ನಾಗನಾಥ, ಮಾತ್ರುಗಯ. 01/12/22 ಕೇರಳ, ಗುರುವಾಯೂರು, ಕೊಚಿನ್, ತ್ರಿವಂಡ್ರಮ್. 9591017782, 9964527782

05.01.2023, 5000 ರಿಯಾಯಿತಿಯೊಂದಿಗೆ ಕಾಶಿ, ಅಯೋಧ್ಯೆ,ಪ್ರಯಾಗ್ ರಾಜ್. 30.11.2022. ಶಿರಡಿ, ಕೊಲ್ಲಾಪುರ, ಪಂಡರಾಪುರ. 24.12.2022, ತ್ರಿರಂಗ, ನವಗ್ರಹ. ಅನುಗ್ರಹಯಾತ್ರ. 9880079351.

ಹಿಮಾಚಲ ಪ್ರದೇಶ

ಶೇ 23 ಅಭ್ಯರ್ಥಿಗಳಿಗೆ ಕ್ರಿಮಿನಲ್ ಹಿನ್ನೆಲೆ

ನವದೆಹಲಿ: ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿರುವ 412 ಅಭ್ಯರ್ಥಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ವಿಶ್ಲೇಷಣೆ ನಡೆಸಿ ಗುರುವಾರ ವರದಿ ಪ್ರಕಟಿಸಿದೆ. ಕಣದಲ್ಲಿರುವ ಶೇ 23ರಷ್ಟು (94 ಮಂದಿ) ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ. ಇಬ್ಬರು ಕೊಲೆ ಆರೋಪ ಹೊತ್ತಿದ್ದಾರೆ. ಮೂವರು ಕೊಲೆ ಯತ್ನದ ಆರೋಪಿಗಳು ಹಾಗೂ ಐವರು ಅಭ್ಯರ್ಥಿಗಳು ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ ಆರೋಪ ಹೊಂದಿದ್ದಾರೆ. ಶೇ 55ರಷ್ಟು ಅಭ್ಯರ್ಥಿಗಳು ಕೋಟ್ಯಧಿಪತಿಗಳು ಎಂದು ವರದಿ ತಿಳಿಸಿದೆ.

412 ಒಟ್ಟು ಅಭ್ಯರ್ಥಿಗಳು (2017ರಲ್ಲಿ 338)

24 ಮಹಿಳಾ ಅಭ್ಯರ್ಥಿಗಳು (2017ರಲ್ಲಿ 19)

ಗಂಭೀರ ಕ್ರಿಮಿನಲ್ ಪ್ರಕರಣ ಹೊಂದಿರುವವರು: 50 (2017ರಲ್ಲಿ 31)

ಕೋಟ್ಯಧಿಪತಿ ಅಭ್ಯರ್ಥಿಗಳು: 226 (2017ರಲ್ಲಿ 338)



ಅಭ್ಯರ್ಥಿಗಳ ಸರಾಸರಿ ಆಸ್ತಿ: ₹4.65 ಕೋಟಿ (2017ರಲ್ಲಿ ₹4.07 ಕೋಟಿ)



ಶ್ರೀಮಂತ ಅಭ್ಯರ್ಥಿಗಳು
- ಬಲಬೀರ್ ಸಿಂಗ್ ವರ್ಮಾ (ಬಿಜೆಪಿ, ಚೋಪಾಲ್ ಕ್ಷೇತ್ರ): ₹128.45 ಕೋಟಿ
- ವಿಕ್ರಮಾದಿತ್ಯ ಸಿಂಗ್ (ಕಾಂಗ್ರೆಸ್, ಶಿಮ್ಲಾ ಗ್ರಾಮೀಣ): ₹101.39 ಕೋಟಿ
- ಆರ್.ಎಸ್.ಬಾಲಿ (ಕಾಂಗ್ರೆಸ್, ನಗರೋಟಾ): ₹92.36 ಕೋಟಿ

ಬಡ ಅಭ್ಯರ್ಥಿಗಳು
- ಕೈಲಾಶ್ ಚಾಂದ್ (ರಾಷ್ಟ್ರೀಯ ದೇವಭೂಮಿ ಪಾರ್ಟಿ, ಸರ್ಕಾಘಾಟ್): ₹3,000
- ಅಮೃತಾ ಚೌಧರಿ (ಹಿಂದೂ ಸಮಾಜ್ ಪಾರ್ಟಿ, ಭಟ್ಟಿಯಾಟ್): ₹5,500
- ಅಶೀಶ್ ಕುಮಾರ್ (ಪಕ್ಷೇತರ, ಹಮೀರ್‌ಪುರ): ₹7,440

ಅಭ್ಯರ್ಥಿಗಳ ವಿದ್ಯಾರ್ಹತೆ				
154 ಐದನೇ ತರಗತಿಯಿಂದ ಪಿಯುಸಿ ವರೆಗೆ	246 ಪದವೀಧರರು	8 ಡಿಪ್ಲೊಮಾ	2 ಕೇವಲ ಅಕ್ಷರಸ್ಥರು	2 ಅನಕ್ಷರಸ್ಥರು

ಅಭ್ಯರ್ಥಿಗಳ ವಯಸ್ಸು			
91 25ರಿಂದ 40 ವರ್ಷ	240 41ರಿಂದ 60 ವರ್ಷ	80 61ರಿಂದ 80 ವರ್ಷ	1 80 ವರ್ಷ ಮೀರಿದವರು

ಚುನಾವಣಾ ಕಣಕ್ಕೆ ಎಎಪಿ ಪ್ರವೇಶ: ಕೇಜ್ರಿವಾಲ್ ಅಬ್ಬರದ ಪ್ರಚಾರ

ಗುಜರಾತ್: ತ್ರಿಕೋನ ಸ್ಪರ್ಧೆ

ಗುಜರಾತ್ ವಿಧಾನಸಭಾ ಚುನಾವಣಾ ಕಣ ಎಂದರೆ ಅದು ಈವರೆಗೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವಣ ಹೋರಾಟ ಮಾತ್ರ ಎನ್ನುವಂತಿತ್ತು. ಅಂತಹ ಕಣಕ್ಕೆ ಈ ಬಾರಿ ಎಎಪಿ ಇಳಿದಿದೆ. ಕಳೆದ ಐದು ಚುನಾವಣೆಗಳಲ್ಲಿ ಬಿಜೆಪಿಯ ನೆಲೆ ಸಡಿಲವಾಗುತ್ತಿದ್ದರೆ, ಕಾಂಗ್ರೆಸ್‌ನ ನೆಲೆ ಗಟ್ಟಿಯಾಗುತ್ತಿದೆ. ಅಂತಹ ಸಂದರ್ಭದಲ್ಲೇ ಎಎಪಿ ಚುನಾವಣೆಗೆ ಇಳಿದಿದೆ. ಎಎಪಿ ಪ್ರವೇಶದಿಂದ ಬಿಜೆಪಿಗೆ ಅನನುಕೂಲ, ಕಾಂಗ್ರೆಸ್‌ಗೆ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗಿದೆ

ಮೋದಿಯನ್ನೇ ನೆಚ್ಚಿಕೊಂಡ ಬಿಜೆಪಿ

ಸತತ ಆರು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಅಧಿಕಾರದಲ್ಲಿರುವ ಬಿಜೆಪಿಯು ಈ ಬಾರಿಯೂ ಗೆಲ್ಲುವ ನೆಚ್ಚಿನ ಪಕ್ಷ ಎನಿಸಿದೆ. ಕೇಂದ್ರದಲ್ಲೂ ಬಿಜೆಪಿ ಸರ್ಕಾರವಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ತವರು ರಾಜ್ಯದಲ್ಲಿ ಪಕ್ಷದ ಪರವಾಗಿ ಪ್ರಚಾರಕ್ಕೆ ಇಳಿದಿದ್ದಾರೆ. ಬಿಜೆಪಿ ಪ್ರಚಾರವನ್ನು ದೊಡ್ಡ ಮಟ್ಟದಲ್ಲಿಯೇ ನಡೆಸುತ್ತಿದೆ. ಕೇಂದ್ರ ಸರ್ಕಾರವು ಈಚಿನ ತಿಂಗಳಲ್ಲಿ ಒಟ್ಟು ₹2.25 ಲಕ್ಷ ಕೋಟಿಯಷ್ಟು ಹೂಡಿಕೆಯನ್ನು ಗುಜರಾತ್‌ಗೆ ಒದಗಿಸಿಕೊಟ್ಟಿದೆ. ಇವೆಲ್ಲವೂ ಪಕ್ಷದ ಪರವಾಗಿ ಕೆಲಸ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ.

ಕಾಂಗ್ರೆಸ್ ಅತ್ಯಂತ ಸಂಘಟಿತವಾಗಿ, ಸದ್ದುಗದ್ದಲವಿಲ್ಲದೆ ಪ್ರಚಾರ ನಡೆಸುತ್ತಿರುವುದು ಬಿಜೆಪಿಗೆ ಮುಳುವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಸ್ವತಃ ಮೋದಿ ಅವರು ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಬಿಜೆಪಿ ನಗರ ಪ್ರದೇಶದಲ್ಲಿ ಪ್ರಚಾರಕ್ಕೆ ಒತ್ತು ನೀಡಿದ್ದರೆ, ಕಾಂಗ್ರೆಸ್ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಸಕ್ರಿಯವಾಗಿದೆ. ಚುನಾವಣಾ ಕಣಕ್ಕೆ ಎಎಪಿ ಪ್ರವೇಶಿಸಿರುವುದು ಬಿಜೆಪಿಗೇ ಹೊಡೆತ ನೀಡಲಿದೆ ಎಂದು ಅಂದಾಜಿಸಲಾಗಿದೆ. ಪ್ರಚಾರಕ್ಕೆ ಬಿಜೆಪಿ ಮೋದಿಯನ್ನೇ ನೆಚ್ಚಿಕೊಂಡಿದೆ.

ಇನ್ನು ಮೊರ್ಬಿ ತೂಗು ಸೇತುವೆ ದುರಂತ, ವಂದೇ ಭಾರತ್ ರೈಲುಗಳು ಪದೇ ಪದೇ ಅಪಘಾತಕ್ಕೆ ಒಳಗಾಗುತ್ತಿರುವುದು ಗುಜರಾತ್ ಸರ್ಕಾರ ಮತ್ತು ಮೋದಿ ಅವರ ಆತ್ಮ-ವಿಶ್ವಾಸವನ್ನು ಕುಗ್ಗಿಸಿದೆ. ಅತಿಪ್ರಶಂಸೆಗೆ ಪಾತ್ರವಾದ 'ಗುಜರಾತ್ ಮಾದರಿ' ಎಂಬ ಪರಿಕಲ್ಪನೆ-ಯನ್ನು ಈ ದುರಂತಗಳು ಮುಕ್ಕಾಗಿಸಿವೆ.



ಎಎಪಿ ಪರ್ಯಾಯ ಆಯ್ಕೆ ಆಗುತ್ತಾ?

ಇದುವರೆಗೆ ಎರಡು ರಾಜಕೀಯ ಪಕ್ಷಗಳ ನಡುವೆ ಮಾತ್ರ ನಡೆಯುತ್ತಿದ್ದ ಗುಜರಾತ್ ಕದನ ಕಣಕ್ಕೆ ಆಮ್ ಆದ್ಮಿ ಪಕ್ಷ (ಎಎಪಿ) ಪ್ರವೇಶಿಸಿದೆ. ವಿವಿಧ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಮಧ್ಯಮ ವರ್ಗದವರನ್ನು ತಲುಪಲು ಎಎಪಿ ಮುಂದಾಗಿದೆ. ಮತದಾರರಿಗೆ ನೀಡಿರುವ ಆಕರ್ಷಕ ಭರವಸೆಗಳೇ ಅದರ ಶಕ್ತಿ ಎಂದು ಪರಿಗಣಿಸಲಾಗಿದೆ. ಎಲ್ಲ ಮನೆಗಳಿಗೆ ಉಚಿತ ವಿದ್ಯುತ್, ನಿರುದ್ಯೋಗ ಭತ್ಯೆ, ಮಹಿಳೆಯರಿಗೆ ತಲಾ ಒಂದು ಸಾವಿರ ರೂಪಾಯಿ ನೆರವು ಘೋಷಣೆಗಳಿಂದಾಗಿ ಮತದಾರರು ಎಎಪಿಯನ್ನು ಪರ್ಯಾಯ ಆಯ್ಕೆ ಎಂದು ಪರಿಗಣಿಸಲೂಬಹುದು.

ಆದರೆ ಎಎಪಿಗೆ ತೊಡಕಾಗಬಹುದಾದ ಕೆಲ ಅಂಶಗಳಿವೆ. ಜನಸ-ಮುದಾಯಗಳನ್ನು ಸೆಳೆಯಬಲ್ಲ ಸ್ಥಳೀಯ ನಾಯಕನ ಕೊರತೆ ಪಕ್ಷಕ್ಕಿದೆ. ಮೇಲಾಗಿ ಗುಜರಾತ್ ರಾಜಕಾರಣದಲ್ಲಿ ಪಕ್ಷ ಅಷ್ಟಾಗಿ ಪಳಗಿಲ್ಲ. ಪಕ್ಷಕ್ಕೆಂದೇ ಪ್ರತ್ಯೇಕ ಮತಬ್ಯಾಂಕ್ ಇಲ್ಲ. 2021ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಎಪಿ ಕೆಲವು ವಾರ್ಡ್‌ಗಳಲ್ಲಿ ಜಯ ಗಳಿಸಿದ್ದರೂ, ಅದು ವಿಧಾನಸಭಾ ಚುನಾವಣೆಯ ಗೆಲುವಿಗೆ ಕಾರಣವಾಗುತ್ತದೆ ಎಂದು ಹೇಳಲಾಗದು.

ಈ ಚುನಾವಣೆಯ ಮೂಲಕ ಗುಜರಾತ್ ಅನ್ನು ತನ್ನ ನೆಲೆಯನ್ನಾಗಿ ಪರಿವರ್ತಿಸಿಕೊ-ಳ್ಳುವ ಅವಕಾಶ ಪಕ್ಷಕ್ಕೆ ಇದೆ. ಬಿಜೆಪಿ ಹಾಗೂ ಕಾಂಗ್ರೆಸ್ ಪ್ರಾಬಲ್ಯದ ಗುಜರಾತ್‌ನಲ್ಲಿ ಈ ಬಾರಿ ಎಎಪಿ ಗೆಲ್ಲುವ ಕೆಲವೇ ಸೀಟುಗಳು, ಮುಂದಿನ ಲೋಕಸಭಾ ಚುನಾವಣೆಯಲ್ಲಿ ನೆರವಾಗಲಿವೆ.

ನೆಲೆ ಕಳೆದುಕೊಳ್ಳದ ಕಾಂಗ್ರೆಸ್

ಸತತ ಆರು ಬಾರಿ ಬಿಜೆಪಿ ಎದುರು ಸೋತಿದ್ದರೂ, ಗುಜರಾತ್‌ನಲ್ಲಿ ಕಾಂಗ್ರೆಸ್ ತನ್ನ ನೆಲೆಯನ್ನು ಕಳೆದುಕೊಂಡಿಲ್ಲ. 1995ರಿಂದಲೂ ಬಿಜೆಪಿಯೇ ಸರ್ಕಾರ ರಚಿಸುತ್ತಿದ್ದರೂ, ಪ್ರತಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶೇ 40ರ ಆಸುಪಾಸಿನಷ್ಟು ಮತಗಳನ್ನು ಪಡೆದುಕೊಳ್ಳುತ್ತಲೇ ಇದೆ. 2002ರಿಂದ ನಡೆದ ಪ್ರತಿ ಚುನಾವಣೆಯಲ್ಲೂ ಪಕ್ಷದ ಮತ ಪ್ರಮಾಣ ಮತ್ತು ಗೆದ್ದ ಸ್ಥಾನಗಳ ಸಂಖ್ಯೆ ಏರಿಕೆಯಾಗುತ್ತಲೇ ಬಂದಿದೆ.

ಗುಜರಾತ್‌ನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮುಸ್ಲಿಂ ಮತ್ತು ಠಾಕೂರ್ ಮತದಾರರೇ ಕಾಂಗ್ರೆಸ್‌ನ ಬಲ. ಈ ಬಾರಿಯೂ ಈ ಜಾತಿ ಸಮುದಾಯಗಳು ಹೆಚ್ಚು ಇರುವ ಕ್ಷೇತ್ರಗಳಲ್ಲಿ ಕಾಂಗ್ರೆಸ್ ತನ್ನ ಪ್ರಚಾರಕ್ಕೆ ಒತ್ತು ನೀಡಿದೆ. ಬಿಜೆಪಿ ನೆಲೆ ಗಟ್ಟಿಯಾಗಿರುವ ನಗರ ಕ್ಷೇತ್ರಗಳಲ್ಲಿ, ಎಎಪಿಯು ಬಿಜೆಪಿಯ ಮತಗಳನ್ನು ಕಸಿಯಬಹುದು. ಅದು ಕಾಂಗ್ರೆಸ್‌ಗೆ ಅನುಕೂಲವಾಗಬಹುದು ಎಂದು ಅಂದಾಜಿಸಲಾಗಿದೆ.

ಕಾಂಗ್ರೆಸ್ ಪರವಾಗಿ ಕೆಲಸಮಾಡುವ ಹಲವಾರು ಅಂಶಗಳಿದ್ದರೂ, ರಾಜ್ಯದಲ್ಲಿ ಪ್ರಬಲ ನಾಯಕರು ಇಲ್ಲದೇ ಇರುವುದು ದೊಡ್ಡ ಕೊರತೆ. ಅಲ್ಲದೆ, 2017ರಿಂದ ಈವರೆಗೆ 17 ಶಾಸಕರೂ ಸೇರಿ ಹಲವು ಮುಖಂಡರು ಬಿಜೆಪಿ ಸೇರಿದ್ದಾರೆ. ಪಕ್ಷದ ರಾಷ್ಟ್ರ ಮಟ್ಟದ ನಾಯಕರು 'ಭಾರತ್ ಜೋಡೊ' ಯಾತ್ರೆಯಲ್ಲಿದ್ದಾರೆ. ಇವೆಲ್ಲಾ ಹಿನ್ನಡೆಯಾಗುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗಿದೆ.

ಮೋದಿ ತವರಲ್ಲಿ ಮತ ಸಮರಕ್ಕೆ ಸಜ್ಜು

ಒಂದನೇ ಪುಟದಿಂದ...

ನರೇಂದ್ರ ಮೋದಿ ಅವರು ಅಕ್ಟೋಬರ್ 30ರಂದು ತವರು ರಾಜ್ಯಕ್ಕೆ ಭೇಟಿ ನೀಡಿ ₹11,760 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು. ಅದೇ ವೇಳೆ, ಭಾರತೀಯ ವಾಯುಪಡೆಗಾಗಿ ಯುರೋಪ್‌ನ ಏರ್‌ಬಸ್ ಸಂಸ್ಥೆಯ ಸಿ–295 ವಿಮಾನಗಳನ್ನು ತಯಾರಿಸುವ ಘಟಕಕ್ಕೆ ವಡೋದರಾದಲ್ಲಿ ಶಂಕು ಸ್ಥಾಪನೆ ನೆರವೇರಿಸಿದ್ದರು. ಇದಾದ ನಾಲ್ಕು ದಿನಗಳ ಬಳಿಕ ಆಯೋಗವು ವೇಳಾಪಟ್ಟಿ ಪ್ರಕಟಿಸಿದೆ.

ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, 'ರಾಜ್ಯದಲ್ಲಿ 4.90 ಕೋಟಿ ಮತದಾರರು ಮತದಾನದ ಹಕ್ಕನ್ನು ಹೊಂದಿದ್ದಾರೆ' ಎಂದರು.

ಹಿಮಾಚಲ ಪ್ರದೇಶ ವಿಧಾನಸಭೆಗೆ ಆಯೋಗವು ಅಕ್ಟೋಬರ್ 14ರಂದು ಚುನಾವಣಾ ದಿನಾಂಕವನ್ನು ಘೋಷಿಸಿತ್ತು. 'ಗುಜರಾತಿನಲ್ಲಿ ಇನ್ನಷ್ಟು ಕಲ್ಯಾಣ ಯೋಜನೆಗಳನ್ನು ಘೋಷಿಸಲು ಆಯೋಗ ಅನುವು ಮಾಡಿಕೊಟ್ಟಿದೆ. ಅದಕ್ಕಾಗಿ, ಗುಜರಾತಿನ ಚುನಾವಣಾ ವೇಳಾಪಟ್ಟಿ ಪ್ರಕಟಿಸಿಲ್ಲ' ಎಂದು ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷಗಳು ಆರೋಪಿಸಿದ್ದವು. ಎರಡು ರಾಜ್ಯಗಳಿಗೆ ಪ್ರತ್ಯೇಕವಾಗಿ ವೇಳಾಪಟ್ಟಿ ಪ್ರಕಟಿಸಿದ್ದನ್ನು ಚುನಾವಣಾ ಆಯುಕ್ತರು ಸಮರ್ಥಿಸಿ-ಕೊಂಡರು. 'ಹಲವು ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಆಯೋಗವು ಪ್ರತ್ಯೇಕವಾಗಿ ವೇಳಾಪಟ್ಟಿ ಪ್ರಕಟಿಸಿದೆ. ಪ್ರಸ್ತುತ ವಿಧಾನಸಭೆಯ ಅವಧಿ ಪೂರ್ಣಗೊಳ್ಳುವ ದಿನಾಂಕ ಹಾಗೂ ಮಾದರಿ ನೀತಿಸಂಹಿತೆ ಮತ್ತಿತರ ವಿಷಯಗಳನ್ನು ಪರಿಗಣಿಸಲಾಗಿದೆ' ಎಂದರು.

'ಹಿಮಾಚಲ ವಿಧಾನಸಭೆಯ ಅವಧಿ 2023ರ ಜನವರಿ 8ಕ್ಕೆ ಅಂತ್ಯಗೊಳ್ಳಲಿ-ದೆ. ಆದರೆ, ಗುಜರಾತ್ ವಿಧಾನಸಭೆಯ ಅವಧಿ ಮುಗಿಯುವುದು ಫೆಬ್ರುವರಿ 18ಕ್ಕೆ. ಅದಕ್ಕಿಂತ 100 ದಿನಗಳ ಮೊದಲು ಚುನಾವಣೆಯನ್ನು ಘೋಷಿಸಲಾಗಿದೆ' ಎಂದು ಗಮನ ಸೆಳೆದರು.

ಗುಜರಾತ್‌ನ ಮೊರ್ಬಿಯಲ್ಲಿ ಅ. 30ರಂದು ತೂಗುಸೇತುವೆ ಕುಸಿದು 135ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದ-ರು. ಈ ಘಟನೆಯನ್ನು ಉಲ್ಲೇಖಿಸಿದ ರಾಜೀವ್ ಕುಮಾರ್, 'ರಾಜ್ಯದಲ್ಲಿ ಸಂಭವಿಸಿದ ದುರಂತವನ್ನು ನಾವು ಗಮನಿಸಬೇಕಿದೆ. ವೇಳಾಪಟ್ಟಿ ಪ್ರಕಟ ವಿಳಂಬಕ್ಕೆ ಇದೂ ಒಂದು ಕಾರಣ' ಎಂದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಗುರುವಾರ ಹಿಮಾಚಲ ಪ್ರದೇಶದಲ್ಲಿ ರೋಡ್ ಶೋ ನಡೆಸಿದರು. ಈ ವೇಳೆ ಆಮ್ ಆದ್ಮಿ ಪಕ್ಷದ ವಿರುದ್ಧ ಪ್ರತಿಭಟನೆ ನಡೆಯಿತು –ಪಿಟಿಐ ಚಿತ್ರ

ಚುನಾವಣಾ ಆಯೋಗ ವಿವರಣೆ ನೀಡಲಿ: ಕಾಂಗ್ರೆಸ್ ಆಗ್ರಹ

ಎರಡು ರಾಜ್ಯಗಳ ವಿಧಾನಸಭಾ ಚುನಾವಣೆಗೆ ಪ್ರತ್ಯೇಕ ದಿನಾಂಕಗಳಂದು ವೇಳಾಪಟ್ಟಿ ಪ್ರಕಟಿಸಿದ್ದಕ್ಕೆ ಚುನಾವಣಾ ಆಯೋಗವು ದೇಶದ ಜನರಿಗೆ ವಿವರಣೆ ನೀಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಸುದ್ದಿಗಾರರ ಜತೆಗೆ ಮಾತನಾಡಿದ ಕಾಂಗ್ರೆಸ್‌ನ ಗುಜರಾತ್ ರಾಜ್ಯ ಉಸ್ತುವಾರಿ ರಘು ಶರ್ಮಾ, 'ಬಿಜೆಪಿಯು ಸರ್ಕಾರಿ ವೆಚ್ಚದಲ್ಲಿ ಹಲವು ರ್‍ಯಾಲಿಗಳನ್ನು ಆಯೋಜಿಸಲು ಹಾಗೂ ಸಾರ್ವಜನಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿಕೊಳ್ಳಲು ಆಯೋಗ ಅನುವು ಮಾಡಿಕೊಟ್ಟದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಒತ್ತಡದ ಮಧ್ಯೆಯೂ ಚುನಾವಣಾ ವೇಳಾಪಟ್ಟಿಯನ್ನು ಕೊನೆಗೂ ಪ್ರಕಟಿಸಿದ ಆಯೋಗಕ್ಕೆ ಧನ್ಯವಾದಗಳು' ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಮುಖಂಡ ಪವನ್ ಖೇರಾ, 'ಪ್ರಧಾನಿ ಅವರು ರಿಬ್ಬನ್ ಕತ್ತರಿಸುವ ಸಮಾರಂಭದಲ್ಲಿ ಭಾಗವಹಿಸಲು ಆಯೋಗ ನೆರವು ನೀಡಿತು. ಆದರೆ, ಗುಜರಾತಿನ ಜನರು ಬದಲಾವಣೆ ಬಯಸಿದ್ದಾರೆ' ಎಂದರು.

ಚುನಾವಣೆ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಕಾಂಗ್ರೆಸ್ ಪಕ್ಷವು ಟ್ವಿಟರ್‌ನಲ್ಲಿ ಮೂರು ಮಂಗಗಳ (ಕೆಟ್ಟದ್ದನ್ನು ನೋಡಬೇಡ, ಕೆಟ್ಟದನ್ನು ಕೇಳಬೇಡ, ಕೆಟ್ಟದ್ದನ್ನು ಆಡಬೇಡ) ಇಮೋಜಿ ಪ್ರಕಟಿಸಿ ಆಯೋಗದ ಕಾಲೆಳೆಯಿತು.

ರಾಜಕೀಯ ಪಕ್ಷಗಳ ಟೀಕೆಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, 'ಹಿಂತಿರುಗಿ ಪ್ರತಿ ಬಾಲ್ ಅನ್ನು ಪರಿಶೀಲಿಸಲು ನಾವು ಇಲ್ಲಿ ತೃತೀಯ ಅಂಪೈರ್ ಅನ್ನು ಹೊಂದಿಲ್ಲ. ಆಯೋಗವು ನ್ಯಾಯಸಮ್ಮತ ಚುನಾವಣೆ ನಡೆಸಲು ಬದ್ಧವಾಗಿದೆ' ಎಂದರು.

ಕಾಂಗ್ರೆಸ್–ಎನ್‌ಸಿಪಿ ಮೈತ್ರಿ?

ಬಿಜೆಪಿ ವಿರೋಧಿ ಮತಗಳು ವಿಭಜನೆಯಾಗುವುದನ್ನು ತಪ್ಪಿಸಲು ಎನ್‌ಸಿಪಿ ಜತೆಗೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ.

ಕಾಂಗ್ರೆಸ್‌ನ ಗುಜರಾತ್ ರಾಜ್ಯ ಉಸ್ತುವಾರಿ ರಘು ಶರ್ಮಾ ಹಾಗೂ ಎನ್‌ಸಿಪಿಯ ಹಿರಿಯ ನಾಯಕ ಪ್ರಫುಲ್ ಪಟೇಲ್ ಮಾತುಕತೆ ಆರಂಭಿಸಿದ್ದು, ಸೀಟು ಹಂಚಿಕೆ ಪ್ರಕ್ರಿಯೆ ಶೀಘ್ರ ಪೂರ್ಣಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. 2017ರ ವಿಧಾನಸಭೆ ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಈ ಎರಡು ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು.



ಉಗ್ರ ಆರಿಫ್‌ಗೆ ಮರಣದಂಡನೆ ತೀರ್ಪು ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಕೆಂಪು ಕೋಟೆ ಮೇಲೆ ನಡೆಸಿದ್ದ ದಾಳಿಗೆ ಸಂಬಂಧಿಸಿದಂತೆ ಲಷ್ಕರ್ ಎ ತಯಬಾ (ಎಲ್‌ಇಟಿ) ಸಂಘಟನೆಯ ಉಗ್ರ ಮೊಹಮ್ಮದ್ ಆರಿಫ್ ಅಲಿಯಾಸ್ ಅಸ್ಫಾಕ್‌ಗೆ ವಿಧಿಸಿದ್ದ ಮರಣದಂಡಣೆ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ಗುರುವಾರ ಎತ್ತಿಹಿಡಿದಿದೆ.

2008ರಲ್ಲಿ ಕೆಂಪು ಕೋಟೆಗೆ ನುಗ್ಗಿದ್ದ ಉಗ್ರರು ಮನಸೋ ಇಚ್ಛೆ ಗುಂಡಿನ ದಾಳಿ ನಡೆಸಿದ್ದರು. ದಾಳಿಯಲ್ಲಿ ಇಬ್ಬರು ಸೈನಿಕರು ಸೇರಿದಂತೆ ಮೂವರು ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಆರಿಫ್ ದೋಷಿ ಎಂಬುದು ಸಾಬೀ-ತಾಗಿದ್ದರಿಂದ ಸುಪ್ರೀಂ ಕೋರ್ಟ್ ಮರಣದಂಡನೆ ಶಿಕ್ಷೆ ವಿಧಿಸಿತ್ತು. ತೀರ್ಪು ಮರುಪರಿಶೀಲಿಸುವಂತೆ ಆತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದ.

ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಮತ್ತು ನ್ಯಾಯಮೂರ್ತಿ ಬೇಲಾ ಎಂ.ತ್ರಿವೇದಿ ಅವರಿದ್ದ ದ್ವಿಸದಸ್ಯ ನ್ಯಾಯಪೀಠವು ಗುರುವಾರ ಆರಿಫ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿತು.

'ಎಲೆಕ್ಟ್ರಾನಿಕ್ ದಾಖಲೆಗಳನ್ನು ಪರಿಗಣಿಸುವಂತೆ ಮಾಡಲಾಗಿದ್ದ ಮನವಿಯನ್ನು ನಾವು ಪುರಸ್ಕರಿಸಿದ್ದೇವೆ. ಆತ ತಪ್ಪಿತಸ್ಥ ಎಂಬುದು ಸಾಬೀತಾಗಿದೆ. ಈ ಪ್ರಕರಣದಲ್ಲಿ ನ್ಯಾಯಾಲಯ ಈ ಹಿಂದೆ ನೀಡಿದ್ದ ತೀರ್ಪನ್ನು ನಾವು ಎತ್ತಿಹಿಡಿಯುತ್ತೇವೆ. ಅಪರಾಧಿಯ ಮರುಪರಿಶೀಲನಾ ಅರ್ಜಿಯನ್ನು ತಿರ-ಸ್ಕರಿಸುತ್ತಿದ್ದೇವೆ' ಎಂದು ನ್ಯಾಯಪೀಠ ಹೇಳಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ

ಪಿ. ಶೇಷಾದ್ರಿ, ಚಿತ್ರ ನಿರ್ದೇಶಕ
'ಅತಿಥಿ'ಯ ಮುನ್ನುಡಿ
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ

ಉಕ್ರೇನ್‌ನಲ್ಲಿ ಯುದ್ಧ: ಭಾರತ ಮತ್ತೊಮ್ಮೆ ತಟಸ್ಥ ನಿಲುವು

ವಿಶ್ವಸಂಸ್ಥೆ (ಪಿಟಿಐ): ಅಮೆರಿಕ ಪ್ರಾಯೋಜಕತ್ವದಲ್ಲಿ ಉಕ್ರೇನ್ ಪ್ರಯೋ-ಗಾಲಯಗಳಲ್ಲಿ ನಡೆಯುತ್ತಿರುವ ಜೈವಿಕ ಅಸ್ತ್ರಗಳ ಅಭಿವೃದ್ಧಿ ಚಟುವಟಿಕೆಗಳ ತನಿಖೆಗೆ ಆಯೋಗ ರಚಿಸಲು ಒತ್ತಾಯಿಸಿ ರಷ್ಯಾ ಮಂಡಿಸಿದ್ದ ನಿರ್ಣಯಕ್ಕೆ ವಿಶ್ವ-ಸಂಸ್ಥೆಯಲ್ಲಿ ಸೋಲಾಗಿದೆ. ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿದ ನಿರ್ಣಯದಲ್ಲಿ ಭಾರತ ಮತ್ತೊಮ್ಮೆ ತಟಸ್ಥವಾಗಿ ಉಳಿದಿದೆ.

ನಿರ್ಣಯದ ಮೇಲಿನ ಮತದಾನದಲ್ಲಿ ರಷ್ಯಾ ಮತ್ತು ಚೀನಾ ಮಾತ್ರ ನಿರ್ಣಯದ ಪರ ಮತ ಚಲಾಯಿಸಿದವು. ಅಮೆರಿಕ, ಬ್ರಿಟನ್, ಫ್ರಾನ್ಸ್ ನಿರ್ಣಯದ ವಿರುದ್ಧ ಮತ ಹಾಕಿದವು. ಭಾರತ ತಟಸ್ಥವಾಗಿ ಉಳಿಯಿತು. ಇದರಿಂದ ರಷ್ಯಾದ ನಿರ್ಣಯಕ್ಕೆ ವಿಶ್ವಸಂಸ್ಥೆಯಲ್ಲಿ ಅಂಗೀಕಾರ ಸಿಗಲಿಲ್ಲ.

ತಟಸ್ಥ ನಿಲುವಿನ ಬಗ್ಗೆ ವಿವರಣೆ ನೀಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಎ. ಅಮರನಾಥ್, 'ಬಯೋಲಾಜಿಕಲ್ ಆ್ಯಂಡ್ ಟಾಕ್ಸಿನ್ ವೆಪನ್ಸ್ ಕನ್‌ವೆನ್ಷನ್ (ಬಿಟಿಡಬ್ಲ್ಯುಸಿ) ಉದ್ದೇಶಗಳಿಗೆ ಭಾರತವು ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಶಸ್ತ್ರಾಸ್ತ್ರಗಳ ನಿಷೇಧಿಸುವ ತಾರತಮ್ಯರಹಿತ ನಿಶ್ಯ-ಸ್ತ್ರೀಕರಣದ ಮೊದಲ ಒಪ್ಪಂದವಿದು' ಎಂದು ಅವರು ಹೇಳಿದರು.

ಮೊರ್ಬಿ ಸೇತುವೆ ದುರಂತ ಅವ್ಯವಸ್ಥಿತ ತನಿಖೆಗೆ ಖರ್ಗೆ ಕಿಡಿ

ನವದೆಹಲಿ (ಪಿಟಿಐ): ಗುಜರಾತ್‌ನ ಮೊರ್ಬಿ ಸೇತುವೆ ಕುಸಿತ ಪ್ರಕರಣದ ತನಿಖಾ ಪ್ರಕ್ರಿಯೆ ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದು-ಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಗುರುವಾರ ಟ್ವೀಟ್ ಮಾಡಿರುವ ಅವರು, '130ಕ್ಕೂ ಹೆಚ್ಚು ಜನ ಮೃತ-ಪಟ್ಟದ್ದರೂ ಗುತ್ತಿಗೆದಾರರು ಹಾಗೂ ನಗರಪಾಲಿಕೆ ಅಧಿಕಾರಿಗಳ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ. ನಿರ್ಲಕ್ಷ್ಯವೂ ದೇವರ ಕೆಲಸವಾಗಿತ್ತೇ' ಎಂದು ಪ್ರಶ್ನಿಸಿದ್ದಾರೆ.

'ತುಕ್ಕು ಹಿಡಿದಿದ್ದ ಸೇತುವೆಯ ಕೇಬಲ್‌ಗಳನ್ನು ಬದಲಿಸಿರಲಿಲ್ಲ. ಸಾಮರ್ಥ್ಯ ಪ್ರಮಾಣಪತ್ರ ಪಡೆದಿರಲಿಲ್ಲ. ಅಧಿಕಾರಿಗಳ ಒಪ್ಪಿಗೆಯಿಲ್ಲದೇ ಅ.26ರಂದು ಅದನ್ನು ಬಳಕೆಗೆ ಮುಕ್ತ-ಗೊಳಿಸಲಾಗಿತ್ತು. ಸೇತುವೆ ದುರಸ್ತಿ ಕೆಲಸ ವಹಿಸಿಕೊಂಡಿದ್ದ ಗುತ್ತಿಗೆದಾರರು ಅನನುಭವಿಗಳಾಗಿದ್ದರು' ಎಂದು ಖರ್ಗೆ ಆರೋಪಿಸಿದ್ದಾರೆ.

ಕುಲಾಂತರಿ ಸಾಸಿವೆ ತಡೆಗೆ ಮನವಿ: ಯಥಾಸ್ಥಿತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕುಲಾಂತರಿ ಸಾಸಿವೆ ತಳಿ ಡಿಎಂಎಚ್–11 ಅನ್ನು ತೆರೆದ ಪರಿಸರದಲ್ಲಿ ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡುವಂತೆ ಶಿಫಾರಸು ಮಾಡಿದ್ದ 'ಕುಲಾಂತರಿ ತಳಿ ಪರಿಶೀಲನಾ ಸಮಿತಿ -ಜಿಇಎಸಿ' ನಿರ್ಧಾರಕ್ಕೆ ಸಂಬಂಧಿಸಿ, ಮುಂದಿನ ವಿಚಾರಣೆವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಮೌಖಿಕ ಸೂಚನೆ ನೀಡಿದೆ.

ಜಿಇಎಸಿಯ ಶಿಫಾರಸನ್ನು ಅನುಮೋದಿಸಿ ಕೇಂದ್ರ ಸರ್ಕಾರವು ಇದೇ ಅಕ್ಟೋಬರ್ ಕೊನೆಯ ವಾರದಲ್ಲಿ ಆದೇಶ ನೀಡಿತ್ತು. ಡಿಎಂಎಚ್–11 ಬಿಡುಗಡೆ ಮಾಡದಂತೆ 2016ರಲ್ಲಿ ಅರುಣಾ ರಾಡ್ರಿಗಸ್ ಅವರು ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯ ವಿಚಾರಣೆ ಇನ್ನೂ ನಡೆಯುತ್ತಿದೆ. ಮೂಲ ಅರ್ಜಿಗೆ ಪೂರಕವಾಗಿ ಅರುಣಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮತ್ತೊಂದು ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಪೀಠವು ಈ ಆದೇಶ ನೀಡಿದೆ.

ಅದಕ್ಕೂ ಮುನ್ನ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಪ್ರಶಾಂತ್ ಭೂಷಣ್, 'ಕುಲಾಂತರಿ ಸಾಸಿವೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2016 ಮತ್ತು 2017ರಲ್ಲಿ ಆದೇಶ ಹೊರಡಿಸಿತ್ತು. ಆ ಪ್ರಕಾರ, ಈ ಸಂಬಂಧ ಕೈಗೊಳ್ಳುವ ಯಾವುದೇ ನಿರ್ಧಾರವನ್ನು ನ್ಯಾಯಾಲಯದ ಮುಂದೆ ಇರಿಸಬೇಕಿತ್ತು. ಹಾಗೆ ಮಾಡದೇ ಇರುವ ಕಾರಣ, ಜಿಇಎಸಿಯ ನಿರ್ಧಾರವನ್ನು ರದ್ದುಪಡಿಸಬೇಕು' ಎಂದು ಅವರು ಪ್ರತಿಪಾದಿಸಿದರು.

ಅರ್ಜಿಯ ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಇ.ಡಿ ವಿಚಾರಣೆಗೆ ಹೇಮಂತ್ ಸೊರೇನ್ ಗೈರು

ರಾಂಚಿ (ಪಿಟಿಐ): ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ್ದ ಸಮನ್ಸ್ ಧಿಕ್ಕರಿಸಿದ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ರಾಯಪುರದಲ್ಲಿ ನಡೆದ ಬುಡಕಟ್ಟು ಜನಾಂಗದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನ.3ರಂದು ಜಾರಿ ನಿರ್ದೇಶನಾಲಯ ರಾಂಚಿಯಲ್ಲಿರುವ ತನ್ನ ಪ್ರಾದೇಶಿಕ ಕಚೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು.

'ಸಂಚು ರೂಪಿಸಿ ಇ.ಡಿ ನನಗೆ ಸಮನ್ಸ್ ನೀಡಿದೆ. ವಿಚಾರಣೆಗೆ ಸಮನ್ಸ್ ಕಳುಹಿಸುವ ಬದಲು ನಾನು ಅಪರಾಧ ಮಾಡಿದ್ದರೆ ನನ್ನನ್ನು ಬಂಧಿಸಿ. ನಾನು ಹೆದರುವುದೂ ಇಲ್ಲ, ಚಿಂತೆಯೂ ಇಲ್ಲ. ಬದಲಿಗೆ ಬಲಶಾಲಿಯಾಗಿ ಹೊರಹೊಮ್ಮುತ್ತಿದ್ದೇನೆ' ಎಂದು ಸೊರೇನ್ ತಮ್ಮ ನಿವಾಸದ ಬಳಿ ಜೆಎಂಎಂ ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದರು.

ನೋಟಿಸ್‌ಗೆ ಪ್ರತಿಕ್ರಿಯಿಸಲು ಕುಲಪತಿಗಳಿಗೆ ಕಾಲಾವಕಾಶ

ಕೊಚ್ಚಿ(ಪಿಟಿಐ): ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಕಳುಹಿಸಿರುವ ಷೋಕಾಸ್ ನೋಟಿಸ್‌ಗಳಿಗೆ ಉತ್ತರಿಸಲು ಕುಲಪತಿಗಳಿಗೆ (ವಿ.ಸಿಗಳು) ನೀಡಿದ ಸಮಯವನ್ನು ಕೇರಳ ಹೈಕೋರ್ಟ್ ಗುರುವಾರ ನ.7ರವರೆಗೆ ವಿಸ್ತರಿಸಿದೆ. ಷೋಕಾಸ್ ನೋಟಿಸ್‌ಗೆ ತಡೆಯಾಜ್ಞೆ ನೀಡಲು ನ್ಯಾಯಮೂರ್ತಿ ದೇವನ್ ರಾಮಚಂದ್ರನ್ ನಿರಾಕರಿಸಿದರು.

ಇತ್ತೀಚಿನ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಅವರ ನೇಮಕಾತಿಗಳು ಕಾನೂನುಬಾಹಿರ ಆಗಿರುವುದರಿಂದ, ತಮ್ಮ ಹುದ್ದೆಗಳಲ್ಲಿ ಮುಂದುವರಿಯಲು ಅವರಿಗೆ ಏಕೆ ಅವಕಾಶ ನೀಡಬೇಕು ಎಂದು ಕುಲಪತಿಗಳಿಂದ ವಿವರಣೆ ಕೇಳಲಾಗಿದೆ.

ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಮತ್ತು ವೈಯಕ್ತಿಕ ವಿಚಾರಣೆಗೆ ಹಾಜರಾಗಲು ಸಮಯ ನೀಡಿದ್ದಾರೆ ಎಂದು ರಾಜ್ಯಪಾಲರ ಪರ ಹಾಜರಾದ ಹಿರಿಯ ವಕೀಲ ಜಾಜು ಬಾಬು ಹೇಳಿದರು.

ನಾಗ್ಪುರ ಮೆಟ್ರೊ: ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯ ಏರಿಕೆ

ನಾಗ್ಪುರ: ನಾಗ್ಪುರ ಮೆಟ್ರೊದಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಗಣನೀಯವಾಗಿದೆ ಏರಿಕೆಯಾಗಿದೆ. ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿರುವ ಕಾರಣ ಅವರ ಅನುಕೂಲಗಳಿಗೆ ತಕ್ಕಂತೆ ಮೆಟ್ರೊ ಹಲವು ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿದೆ.

ಸ್ವಾತಂತ್ರ್ಯ ದಿನಾಚರಣೆಯಂದು 90,758 ಮಂದಿ ಮೆಟ್ರೊದಲ್ಲಿ ಪ್ರಯಾಣಿಸಿದ್ದರು. ಈ ವರೆಗಿನ ಗರಿಷ್ಠ ಸಂಖ್ಯೆ ಇದಾಗಿದೆ. ದಸರಾ ಸಂದರ್ಭದಲ್ಲಿ 83,876 ಮಂದಿ ಹಾಗೂ ಭಾರತ–ಆಸ್ಟ್ರೇಲಿಯಾ ಟಿ–20 ಪಂದ್ಯ ನಡೆದ ದಿನ 80,794 ಪ್ರಯಾಣಿಕರು ಮೆಟ್ರೊದಲ್ಲಿ ಪ್ರಯಾಣಿಸಿದ್ದರು. ಈ ದಿನ ಮೆಟ್ರೊವು ತನ್ನ ಎಂದಿನ ಮುಕ್ತಾಯ ಸಮಯ ರಾತ್ರಿ 10 ಗಂಟೆಯನ್ನೂ ಮೀರಿ, ಓಡಾಟ ನಡೆಸಿತ್ತು. ಪ್ರತಿ ದಿನ ನಾಗ್ಪುರ ಮೆಟ್ರೊದಲ್ಲಿ 70 ಸಾವಿರ ಮಂದಿ ಪ್ರಯಾಣಿಸುತ್ತಾರೆ.

ಕೊಯಮತ್ತೂರು: ಹಿಂದೂ ದೇಗುಲಕ್ಕೆ ಉಲೇಮಾಗಳ ಭೇಟಿ

ಚೆನ್ನೈ: ಕೊಯಮತ್ತೂರಿನ ಉಕ್ಕಾಡಂನಲ್ಲಿರುವ ಶತಮಾನದಷ್ಟು ಹಳೆಯ ಸಂಗಮೇಶ್ವರ ದೇವಸ್ಥಾನಕ್ಕೆ ಕೊಟ್ಟಾಯ್‌ಮೇಡುವಿನ ಮೂರು ಮಸೀದಿಗಳ ಉಲೇಮಾಗಳು ಗುರುವಾರ ಭೇಟಿ ನೀಡಿ ಸೌಹಾರ್ದತೆಯ ಸಂದೇಶ ಸಾರಿದ್ದಾರೆ.

ಈ ದೇಗುಲದ ಬಳಿ ಅಕ್ಟೋಬರ್ 23ರಂದು ಕಾರೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡು ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು.

ಉಲೇಮಾಗಳನ್ನು ಆತ್ಮೀಯತೆಯಿಂದ ಬರಮಾಡಿಕೊಂಡ ದೇವಸ್ಥಾನದ ಆಡಳಿತ ಮಂಡಳಿಯವರು ಶಾಲು ಹೊದಿಸಿ ಸನ್ಮಾನಿಸಿದರು. ಸುಮಾರು 30 ನಿಮಿಷ ಅವರು ದೇವಸ್ಥಾನದಲ್ಲಿ ಇದ್ದರು.

'ಕೋಮು ಸೂಕ್ಷ್ಮ ಪ್ರದೇಶವಾಗಿರುವ ಕೊಯಮತ್ತೂರಿನಲ್ಲಿ ಸೌಹಾರ್ದತೆ ನೆಲೆಗೊಳಿಸುವುದು ಈ ಭೇಟಿಯ ಉದ್ದೇಶವಾಗಿತ್ತು' ಎಂದು ಉಭಯ ಸಮುದಾಯದವರು ಹೇಳಿದ್ದಾರೆ.

ಮಸೀದಿಗೆ ಭೇಟಿ ನೀಡುವಂತೆ ದೇವಸ್ಥಾನದ ಆಡಳಿತ ಮಂಡಳಿಯವರಿಗೆ ಉಲೇಮಾಗಳು ಆಹ್ವಾನ ನೀಡಿದ್ದಾರೆ ಎನ್ನಲಾಗಿದೆ.

ಹಿಂದೂ ದೇವಾಲಯಕ್ಕೆ ಭೇಟಿ ನೀಡಿದ್ದ ಉಲೇಮಾಗಳನ್ನು ದೇವಸ್ಥಾನದ ಆಡಳಿತ ಮಂಡಳಿಯವರು ಸನ್ಮಾನಿಸಿದರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/3054/2022–23/5435
ದಿನಾಂಕ : 02–11–2022
ಇ–ಟೆಂಡರ್ ಪ್ರಕಟಣೆ
ದಿನಾಂಕ : 02–11–2022 ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಹಾವೇರಿ ಪ್ಯಾಕೇಜ್ ನಂ.1, ಪ್ಯಾಕೇಜ್ ನಂ.2 , 160302, 160303, 160259, 159454, 159074, 159090, 159194, 159197, 159839, 159842, 159646, 160113, 160132, 160134, 160305, 160270, 159978, 159979, 159626, 159604, 159605, 159606, 159663, 159657, 159680, 159681, 159682, 159426, 159413, 159428, 159850, 159421, 158686, 159069, 159422, 159409, 159648, 159649, 159650, 159651, 159652, 159653, 159654, 158971, 159260, 159164, 159567, 159685, 159678, 159771, 159647, 159575, 159580, 160012, 158957, 159258, 158948, 159238, 159461, 159463, 159549, 159466, 159688, 159670, 159427, 159417 ಮತ್ತು 159419ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **10–11–2022** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– (ಕೆ.ರಮೇಶ) ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/344/2022–23

ಪಾಕ್ ಸೆಮಿ ಆಸೆಗೆ ಜೀವ

ದ. ಆಫ್ರಿಕಾಕ್ಕೆ ಸೋಲು; ಕುತೂಹಲ ಕೆರಳಿಸಿದ ಎರಡನೇ ಗುಂಪಿನ ಪೈಪೋಟಿ

ವಿಕೆಟ್ ಗಳಿಸಿದ ಪಾಕಿಸ್ತಾನ ತಂಡದ ಶಾದಾಬ್ ಖಾನ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ಸಿಡ್ನಿ (ಪಿಟಿಐ): ಶಾದಾಬ್ ಖಾನ್ ಆಲ್‌ರೌಂಡ್ ಆಟದ ಬಲದಿಂದ ಪಾಕಿಸ್ತಾನ ಕ್ರಿಕೆಟ್ ತಂಡವು ಗುರುವಾರ ದಕ್ಷಿಣ ಆಫ್ರಿಕಾ ಎದುರು ಅಮೋಘ ಜಯ ಸಾಧಿಸಿತು.

ಇದರೊಂದಿಗೆ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಪಾಕ್ ತಂಡದ ಕನಸು ಜೀವಂತವಾಗುಳಿಯಿತು. ಸಿಡ್ನಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪಾಕಿಸ್ತಾನ ತಂಡವು ಶಾದಾಬ್ ಖಾನ್ (52; 22ಎಸೆತ) ಮಿಂಚಿನ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 185 ರನ್ ಗಳಿಸಿತು.

ದಕ್ಷಿಣ ಆಫ್ರಿಕಾ ಇನಿಂಗ್ಸ್‌ಗೆ ಮಳೆ ಅಡ್ಡಿಯಾಯಿತು. ಪರಿಷ್ಕತ ಗುರಿ ಬೆನ್ನಟ್ಟಿದ ತಂಡಕ್ಕೆ ಬೌಲಿಂಗ್‌ನಲ್ಲಿಯೂ ಮಿಂಚಿದ ಶಾದಾಬ್ (16ಕ್ಕೆ2) ಹಾಗೂ ಶಹೀನ್ ಶಾ ಆಫ್ರಿದಿ (14ಕ್ಕೆ3) ಸೋಲಿನ ರುಚಿ ತೋರಿಸಿದರು. ಪಾಕ್ ತಂಡವು 33 ರನ್‌ಗಳಿಂದ ಜಯಿಸಿತು.

ಮಳೆಯಿಂದಾಗಿ ಕೆಲಹೊತ್ತು ಆಟ ನಿಂತ ಕಾರಣ ಡಕ್ವರ್ಥ್ ಲೂಯಿಸ್ ನಿಯಮದ ಪ್ರಕಾರ ದಕ್ಷಿಣ ಆಫ್ರಿಕಾ ತಂಡಕ್ಕೆ 14 ಓವರ್‌ಗಳಲ್ಲಿ 142 ರನ್‌ಗಳನ್ನು ಗಳಿಸುವ ಗುರಿ ನೀಡಲಾಗಿತ್ತು. ತೆಂಬಾ ಬವುಮಾ ಬಳಗದ ಬ್ಯಾಟಿಂಗ್ ಪಡೆ ವೈಫಲ್ಯ ಅನುಭವಿಸಿತು.

ಈ ಜಯದೊಂದಿಗೆ ಪಾಕಿಸ್ತಾನ ತಂಡವು ಒಟ್ಟು ನಾಲ್ಕು ಅಂಕಗಳೊಂದಿಗೆ ಸೂಪರ್ 12ರ ಎರಡನೇ ಗುಂಪಿನಲ್ಲಿ ಮೂರನೇ ಸ್ಥಾನಕ್ಕೇರಿತು. ಭಾರತವು ಆರು ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿ ಮುಂದುವರಿದಿದೆ. ಐದು ಅಂಕ ಗಳಿಸಿರುವ ದಕ್ಷಿಣ ಆಫ್ರಿಕಾ ಎರಡನೇ ಸ್ಥಾನದಲ್ಲಿದೆ.

ಈ ಮೂರು ತಂಡಗಳೂ ತಲಾ ಇನ್ನೊಂದು ಪಂದ್ಯ ಆಡಬೇಕಿದೆ. ಪಾಕ್ ತಂಡವು ತನ್ನ ಪಾಲಿನ ಕೊನೆಯ ಪಂದ್ಯದಲ್ಲಿ ಬಾಂಗ್ಲಾದೇಶದ ಎದುರು ಆಡಲಿದೆ. ಆ ಪಂದ್ಯದಲ್ಲಿ ಗೆಲ್ಲುವ ತಂಡದ ಅಂಕವು ಆರಕ್ಕೇರಲಿದೆ. ಭಾರತ ತಂಡವು ತನ್ನ ಕೊನೆಯ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಗೆದ್ದರೆ ಸೆಮಿ ಹಾದಿ ಸುಗಮ. ಇಲ್ಲದಿದ್ದರೆ ಒಟ್ಟು ರನ್‌ರೇಟ್ ಲೆಕ್ಕಾಚಾರ ಮುನ್ನೆಲೆಗೆ ಬರಲಿದೆ. ದಕ್ಷಿಣ ಆಫ್ರಿಕಾ ತಂಡವು ನಾಲ್ಕನೇ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು ಗೆದ್ದರೆ ಏಳು ಅಂಕಗಳೊಂದಿಗೆ ಸೆಮಿಫೈನಲ್ ಪ್ರವೇಶಿಸಲಿದೆ. ನಾಲ್ಕು ಪಂದ್ಯಗಳನ್ನು ಆಡಿರುವ ನೆದರ್ಲೆಂಡ್ಸ್ ಮೂರರಲ್ಲಿ ಸೋತು, ಒಂದರಲ್ಲಿ ಗೆದ್ದಿದೆ. ನಾಲ್ಕರ ಘಟ್ಟದ ಹಾದಿಯಿಂದ ಹೊರಬಿದ್ದಿದೆ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 185 (ಮೊಹಮ್ಮದ್ ಹ್ಯಾರಿಸ್ 28, ಇಫ್ತಿಕಾರ್ ಅಹಮದ್ 51, ಮೊಹಮ್ಮದ್ ನವಾಜ್ 28, ಶಾದಾಬ್ ಖಾನ್ 52, ಎನ್ರಿಚ್ ನಾಕಿಯಾ 41ಕ್ಕೆ4) ದಕ್ಷಿಣ ಆಫ್ರಿಕಾ: 14 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 108 (ತೆಂಬಾ ಬವುಮಾ 36, ಏಡನ್ ಮರ್ಕರಂ 20, ಹೆನ್ರಿಚ್ ಕ್ಲಾಸೆನ್ 15, ಟ್ರಿಸ್ಟನ್ ಸ್ಟಬ್ಸ್ 18, ಶಾಹೀನ್ ಶಾ ಆಫ್ರಿದಿ 14ಕ್ಕೆ3, ಶಾದಾಬ್ ಖಾನ್ 16ಕ್ಕೆ2) ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 33 ರನ್‌ಗಳ ಜಯ (ಡಿಎಲ್‌ಎಸ್ ಪದ್ಧತಿ)

ಮುಖ್ಯಾಂಶಗಳು

- ಪಾಕಿಸ್ತಾನಕ್ಕೆ 33 ರನ್ ಗೆಲುವು
- 22 ಎಸೆತಗಳಲ್ಲಿ 52 ರನ್ ಗಳಿಸಿದ ಶಾದಾಬ್
- ಇಫ್ತಿಕಾರ್ ಅಹಮದ್ ಅರ್ಧಶತಕ

ನೂರುಲ್‌ಗೆ ತಿರುಗುಬಾಣವಾಗುವುದೇ ಆರೋಪ?

ಕೊಹ್ಲಿ ‘ಫೇಕ್ ಫೀಲ್ಡಿಂಗ್’

ನೂರುಲ್ ಹಸನ್

ಅಡಿಲೇಡ್ (ಪಿಟಿಐ): ಬುಧವಾರ ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾರತದ ವಿರಾಟ್ ಕೊಹ್ಲಿ ಅವರು ‘ಅಣಕು ಫೀಲ್ಡಿಂಗ್’ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಫೀಲ್ಡ್ ಅಂಪೈರ್‌ಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಬಾಂಗ್ಲಾದೇಶ ತಂಡದ ಆಟಗಾರ ನೂರುಲ್ ಹಸನ್ ಆರೋಪಿಸಿದ್ದಾರೆ.

ಆದರೆ ನೂರುಲ್ ಅವರು ಈ ವಿಷಯದಲ್ಲಿ ಅಂಪೈರ್‌ಗಳನ್ನು ಟೀಕಿಸಿರುವುದರಿಂದ ಶಿಕ್ಷೆಯನ್ನು ಎದುರಿಸುವ ಸಾಧ್ಯತೆ ಇದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ರೋಹಿತ್ ಶರ್ಮಾ ಬಳಗವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 184 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ್ದ ಬಾಂಗ್ಲಾದೇಶ ತಂಡದ ಆರಂಭಿಕ ಜೋಡಿ ಲಿಟನ್ ದಾಸ್ ಹಾಗೂ ನಜ್ಮುಲ್ ಹಸನ್ ಶಾಂತೊ ಅಬ್ಬರಿಸಿದ್ದರು. ಇನಿಂಗ್ಸ್‌ನ ಏಳನೇ ಓವರ್‌ನಲ್ಲಿ ಈ ಘಟನೆ ನಡೆದಿರುವುದು ವಿಡಿಯೊ ತುಣುಕೊಂದರಲ್ಲಿದೆ. ಆದರೆ ಫೀಲ್ಡ್ ಅಂಪೈರ್ ಸೇರಿದಂತೆ ಯಾರೂ ಕೊಹ್ಲಿಯತ್ತ ಗಮನ ಹರಿಸಲಿಲ್ಲ.

ಬ್ಯಾಟರ್ ಹೊಡೆದ ಚೆಂಡನ್ನು ಡೀಪ್ ಪೊಸಿಷನ್‌ನಿಂದ ಫೀಲ್ಡರ್ ಅರ್ಷದೀಪ್ ಸಿಂಗ್ ವಿಕೆಟ್‌ಕೀಪರ್ ದಿನೇಶ್ ಕಾರ್ತಿಕ್‌ಗೆ ಥ್ರೋ ಮಾಡಿದರು. ಆಗ ಮಿಡ್ ಪೊಸಿಷನ್‌ನಲ್ಲಿದ್ದ ಫೀಲ್ಡರ್ ವಿರಾಟ್ ಅವರು ನಾನ್‌ಸ್ಟ್ರೈಕರ್‌ನತ್ತ ಚೆಂಡು ಎಸೆಯುವಂತೆ ಅಣಕ ಮಾಡುತ್ತಾರೆ. ಆದರೆ ಏಳನೇ ಓವರ್ ಅಂತ್ಯವಾಗುವ ಸಂದರ್ಭದಲ್ಲಿ ಜೋರಾಗಿ ಮಳೆ ಸುರಿದ ಕಾರಣ ಪಂದ್ಯ ಕೆಲಹೊತ್ತು ಸ್ಥಗಿತವಾಗುತ್ತದೆ. ನಂತರ ಡಕ್ವರ್ಥ್–ಲೂಯಿಸ್ ನಿಯಮದ ಪ್ರಕಾರ 16 ಓವರ್‌ಗಳಲ್ಲಿ 151 ರನ್‌ಗಳ ಪರಿಷ್ಕೃತ ಗುರಿಯನ್ನು ನೀಡಲಾಗುತ್ತದೆ. ನಂತರ ನಡೆದ ರೋಚಕ ಹಣಾಹಣಿಯಲ್ಲಿ ಭಾರತವು ಐದು ರನ್‌ಗಳಿಂದ ಗೆದ್ದಿತು.

ಪಂದ್ಯದ ಕೊನೆಯ ಎಸೆತದವರೆಗೂ ಹೋರಾಟ ನಡೆಸಿದ ನೂರುಲ್ ಬಾಂಗ್ಲಾದ ಗೆಲುವಿಗೆ ಪ್ರಯತ್ನಿಸಿದರು. ಪಂದ್ಯದ ನಂತರ ಕಾಮನ್ ಏರಿಯಾದಲ್ಲಿ ಬಂಗಾಳಿ ಭಾಷೆಯಲ್ಲಿ ಮಾತನಾಡಿರುವ ನೂರುಲ್, ‘ತೇವಗೊಂಡಿದ್ದ ಔಟ್‌ಫೀಲ್ಡ್‌ನಲ್ಲಿ ಆಡುವ ಸವಾಲು ನಮಗಿತ್ತು. ಆದರೆ ಫೇಕ್ ಥ್ರೋ (ಅಣಕು) ಕೂಡ ನಮಗೆ ಐದು ರನ್‌ಗಳಷ್ಟು ದುಬಾರಿಯಾಯಿತು’ ಎಂದಿದ್ದಾರೆ. ಪಂದ್ಯದ ಫೀಲ್ಡ್ ಅಂಪೈರ್‌ಗಳಾದ ಕ್ರಿಸ್ ಬ್ರೌನ್ ಹಾಗೂ ಮರಾಯಸ್ ಎರಸ್ಮಸ್ ಅವರನ್ನು ಪರೋಕ್ಷವಾಗಿ ನೂರುಲ್ ಟೀಕಿಸಿದ್ದಾರೆ.

ಐಸಿಸಿಯ 41.5ನೇ ನಿಯಮದ ಪ್ರಕಾರ ‘ಅಣಕು ಫೀಲ್ಡಿಂಗ್, ಬ್ಯಾಟರ್‌ಗಳ ಏಕಾಗ್ರತೆಗೆ ಭಂಗ ತರುವ ಪ್ರಯತ್ನಗಳು ಹಾಗೂ ಆಟಕ್ಕೆ ಅಡ್ಡಿಪಡಿಸುವಂತಹ ಹಾವಭಾವಗಳು’ ಶಿಕ್ಷಾರ್ಹವಾಗಿವೆ. ಈ ರೀತಿಯಾದಾಗ ಆ ಎಸೆತವನ್ನು ಡೆಡ್‌ಬಾಲ್ ನೀಡಬೇಕು ಹಾಗೂ ತಂಡಕ್ಕೆ ಐದು ರನ್‌ಗಳ ದಂಡ ವಿಧಿಸಬೇಕೆಂದು ನಿಯಮದಲ್ಲಿ ಉಲ್ಲೇಖಿಸಲಾಗಿದೆ.

ಆದರೆ, ಬ್ಯಾಟರ್‌ಗಳಾದ ದಾಸ್ ಹಾಗೂ ಶಾಂತೊ ಅವರು ಕೊಹ್ಲಿಯತ್ತ ಗಮನವನ್ನೇ ಹರಿಸಿಲ್ಲ. ಅವರು ಚೆಂಡಿನ ಮೇಲಷ್ಟೇ ಗಮನ ಕೇಂದ್ರಿಕರಿಸಿ ರನ್ ಪಡೆದಿದ್ದಾರೆ.

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್‌ಗೆ ಸಾತ್ವಿಕ್– ಚಿರಾಗ್

ಸಾರ್‌ಬ್ರೂಕೆನ್, ಜರ್ಮನಿ (ಪಿಟಿಐ): ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಲ್ಲಿ ನಡೆಯುತ್ತಿರುವ ಹೈಲೊ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಜೋಡಿ 22–24, 21–15, 21–11 ರಲ್ಲಿ ಇಂಗ್ಲೆಂಡ್‌ನ ರೋರಿ ಎಸ್ಟೋನ್– ಜಾಕ್ ರೂಸ್ ಎದುರು ಪ್ರಯಾಸದ ಗೆಲುವು ಪಡೆಯಿತು.

ಮೊದಲ ಗೇಮ್ ಸೋತ ಸಾತ್ವಿಕ್– ಚಿರಾಗ್ ಪುಟಿದೆದ್ದು ನಿಲ್ಲುವಲ್ಲಿ ಯಶಸ್ವಿಯಾಯಿತು. ಈ ಪಂದ್ಯ ಒಂದು ಗಂಟೆ ಎರಡು ನಿಮಿಷ ನಡೆಯಿತು.

ಈಚೆಗೆ ಫ್ರೆಂಚ್ ಓಪನ್ ಗೆದ್ದಿದ್ದ ಭಾರತದ ಜೋಡಿ ಮುಂದಿನ ಸುತ್ತಿನಲ್ಲಿ ಇಂಗ್ಲೆಂಡ್‌ನ ಬೆನ್ ಲೇನ್– ಸೀನ್ ವೆಂಡಿ ಅವರನ್ನು ಎದುರಿಸಲಿದೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಆಕರ್ಷಿ ಕಶ್ಯಪ್ 13-21, 14-21 ರಲ್ಲಿ ಡೆನ್ಮಾರ್ಕ್‌ನ ಲೀನೆ ಕ್ಯಾಸ್‌ಫೆಲ್ಟ್ ಎದುರು ಪರಾಭವಗೊಂಡರು.

ಮಹಿಳೆಯರ ಡಬಲ್ಸ್ ವಿಭಾಗದ ಪಂದ್ಯದಲ್ಲಿ ತ್ರಿಶಾ ಜೋಲಿ– ಗಾಯತ್ರಿ ಗೋಪಿಚಂದ್ ಅವರು 21–18, 21–19 ರಲ್ಲಿ ನೆದರ್ಲೆಂಡ್ಸ್‌ನ ಡೆಬೋರಾ ಜಿಲ್– ಚೆರ್ಲಿ ಸೀನೆಮ್ ಅವರನ್ನು ಮಣಿಸಿದರು.

ನ್ಯೂಜಿಲೆಂಡ್, ಆಸ್ಟ್ರೇಲಿಯಾ ತಂಡಗಳಿಗೆ ಮಹತ್ವದ ಪಂದ್ಯ

ಸೆಮಿಫೈನಲ್ ಪ್ರವೇಶ ಗುರಿ

ನ್ಯೂಜಿಲೆಂಡ್ ತಂಡದ ಗ್ಲೆನ್ ಫಿಲಿಪ್ಸ್

ಅಡಿಲೇಡ್ (ಎಎಫ್‌ಪಿ): ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸ್ಥಾನ ಪಡೆಯಲು ‘ಗುಂಪು 1’ ರಲ್ಲಿ ಪ್ರಬಲ ಪೈಪೋಟಿ ಏರ್ಪಟ್ಟಿದ್ದು, ಶುಕ್ರವಾರದ ಪಂದ್ಯಗಳು ಕುತೂಹಲ ಮೂಡಿಸಿವೆ.

ಅಡಿಲೇಡ್‌ನಲ್ಲಿ ನಡೆಯುವ ಪಂದ್ಯಗಳಲ್ಲಿ ನ್ಯೂಜಿಲೆಂಡ್– ಐರ್ಲೆಂಡ್ ಹಾಗೂ ಆಸ್ಟ್ರೇಲಿಯಾ– ಅಫ್ಗಾನಿಸ್ತಾನ ತಂಡಗಳು ಪೈಪೋಟಿ ನಡೆಸಲಿವೆ.

ನಾಲ್ಕರಘಟ್ಟದಲ್ಲಿ ಸ್ಥಾನ ಪಡೆಯಬೇಕಾದರೆ ನ್ಯೂಜಿಲೆಂಡ್ ಮತ್ತು ಆತಿಥೇಯ ಆಸ್ಟ್ರೇಲಿಯಾಕ್ಕೆ ಗೆಲುವು ಪಡೆಯುವುದು ಅನಿವಾರ್ಯ. ಐರ್ಲೆಂಡ್ ಹಾಗೂ ಅಫ್ಗಾನಿಸ್ತಾನ ತಂಡಗಳು ಸೆಮಿ ಪ್ರವೇಶಿಸುವ ಅವಕಾಶವನ್ನು ಈಗಾಗಲೇ ಕಳೆದುಕೊಂಡಿವೆ.

ನ್ಯೂಜಿಲೆಂಡ್, ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತ ಶ್ರೀಲಂಕಾ ತಂಡಗಳಿಗೆ ‘ಗುಂಪು 1’ ರಿಂದ ಸೆಮಿಫೈನಲ್ ಪ್ರವೇಶಿಸುವ ಅವಕಾಶ ಇದೆ. ನಾಲ್ಕು ಪಂದ್ಯಗಳಿಂದ ತಲಾ ಐದು ಪಾಯಿಂಟ್ಸ್ ಹೊಂದಿರುವ ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

ಆತಿಥೇಯ ತಂಡದ ರನ್‌ರೇಟ್ ಕಡಿಮೆ ಇರುವುದರಿಂದ ಮೂರನೇ ಸ್ಥಾನದಲ್ಲಿದೆ. ಶುಕ್ರವಾರ ಗೆದ್ದರೂ, ಆಸ್ಟ್ರೇಲಿಯಾಕ್ಕೆ ಸೆಮಿಯಲ್ಲಿ ಸ್ಥಾನ ಖಚಿತ ಎಂದು ಹೇಳಲಾಗದು. ಇತರ ಪಂದ್ಯಗಳ ಫಲಿತಾಂಶವನ್ನೂ ಅವಲಂಬಿಸಬೇಕಾಗಿದೆ.

ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ಅವರು ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದು, ಅಫ್ಗನ್ ವಿರುದ್ಧ ಆಡುವುದು ಅನುಮಾನ. ಇದು ಆತಿಥೇಯರಿಗೆ ಹಿನ್ನಡೆಯಾಗಿ ಪರಿಣಮಿಸಿದೆ. ಫಿಂಚ್ ಕಣಕ್ಕಿಳಿಯದಿದ್ದರೆ, ವಿಕೆಟ್‌ಕೀಪರ್ ಬ್ಯಾಟರ್ ಮ್ಯಾಥ್ಯೂ ವೇಡ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

ಆತ್ಮವಿಶ್ವಾಸದಲ್ಲಿ ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ ನೇತೃತ್ವದ ನ್ಯೂಜಿಲೆಂಡ್ ತಂಡದ ರನ್‌ರೇಟ್ ಉತ್ತಮವಾಗಿರುವುದರಿಂದ ಶುಕ್ರವಾರ ಗೆದ್ದರೆ ಸೆಮಿಫೈನಲ್‌ನಲ್ಲಿ ಸ್ಥಾನ ಖಚಿತವಾಗಲಿದೆ. ಆದ್ದರಿಂದ ಐರ್ಲೆಂಡ್ ವಿರುದ್ಧ ಪೂರ್ಣ ಸಾಮರ್ಥ್ಯದೊಂದಿಗೆ ಆಡಲು ತಂಡ ಸಜ್ಜಾಗಿದೆ.

‘ತಾಳ್ಮೆಯ ಆಟವಾಡಿ ಗೆಲುವು ಪಡೆಯುವುದು ನಮ್ಮ ಗುರಿ. ಪಂದ್ಯದಿಂದ ಪಂದ್ಯಕ್ಕೆ ತಂಡದ ಆಟಗಾರರ ಪ್ರದರ್ಶನದಲ್ಲಿ ಸುಧಾರಣೆ ಕಾಣುತ್ತಿದೆ’ ಎಂದು ವಿಲಿಯಮ್ಸನ್ ಹೇಳಿದ್ದಾರೆ.

ವಿಲಿಯಮ್ಸನ್ ಟೂರ್ನಿಯಲ್ಲಿ ಇದುವರೆಗೆ ಬಿರುಸಿನ ಆಟವಾಡುವಲ್ಲಿ ವಿಫಲರಾಗಿದ್ದಾರೆ. ಮಹತ್ವದ ಪಂದ್ಯದಲ್ಲಿ ಮಿಂಚುವ ವಿಶ್ವಾಸದಲ್ಲಿ ಅವರು ಇದ್ದಾರೆ.

ಶ್ರೀಲಂಕಾ ಮತ್ತು ಇಂಗ್ಲೆಂಡ್ ವಿರುದ್ಧ ಉತ್ತಮ ಆಟವಾಡಿದ್ದ ಬ್ಯಾಟರ್ ಗ್ಲೆನ್ ಫಿಲಿಪ್ಸ್ ಮೇಲೆ ನ್ಯೂಜಿಲೆಂಡ್ ತಂಡ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದೆ.

ಇಂದಿನ ಪಂದ್ಯಗಳು

ನ್ಯೂಜಿಲೆಂಡ್– ಐರ್ಲೆಂಡ್
(ಆರಂಭ: ಬೆಳಿಗ್ಗೆ 9.30)

ಆಸ್ಟ್ರೇಲಿಯಾ– ಅಫ್ಗಾನಿಸ್ತಾನ
(ಆರಂಭ: ಮಧ್ಯಾಹ್ನ 1.30)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	4	2	1	1	5	2.233
ಇಂಗ್ಲೆಂಡ್	4	2	1	1	5	0.547
ಆಸ್ಟ್ರೇಲಿಯಾ	4	2	1	1	5	-0.304
ಶ್ರೀಲಂಕಾ	4	2	2	0	4	-0.457
ಐರ್ಲೆಂಡ್	4	1	2	1	3	-1.544
ಅಫ್ಗಾನಿಸ್ತಾನ	4	0	2	2	2	-0.718
ಗುಂಪು 2						
ಭಾರತ	4	3	1	0	6	0.730
ದಕ್ಷಿಣ ಆಫ್ರಿಕಾ	4	2	1	1	5	1.441
ಪಾಕಿಸ್ತಾನ	4	2	2	0	4	1.117
ಬಾಂಗ್ಲಾದೇಶ	4	2	2	0	4	-1.276
ಜಿಂಬಾಬ್ವೆ	4	1	2	1	3	-0.313
ನೆದರ್ಲೆಂಡ್ಸ್	4	1	3	0	2	-1.233

ಐಸಿಸಿ ಹಣಕಾಸು ಸಮಿತಿಗೆ ಬಿಸಿಸಿಐ ಪ್ರತಿನಿಧಿ ನೇತೃತ್ವ?

ಮೆಲ್ಬರ್ನ್ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮಂಡಳಿಯಲ್ಲಿ ಸ್ಥಾನ ಪಡೆಯುವ ಬಿಸಿಸಿಐ ಪ್ರತಿನಿಧಿಗೆ ಐಸಿಸಿಯ ಹಣಕಾಸು ಮತ್ತು ವಾಣಿಜ್ಯ ವ್ಯವಹಾರಗಳ (ಎಫ್ ಮತ್ತು ಸಿಎ) ಸಮಿತಿಯ ಮುಖ್ಯಸ್ಥನ ಹುದ್ದೆ ಲಭಿಸುವ ಸಾಧ್ಯತೆಯಿದೆ.

ಐಸಿಸಿ ಮಂಡಳಿಯಲ್ಲಿ ಭಾರತದ ಪ್ರತಿನಿಧಿ ಯಾರು ಎಂಬುದನ್ನು ಬಿಸಿಸಿಐ ಇನ್ನೂ ಬಹಿರಂಗಪಡಿಸಿಲ್ಲ. ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರೇ ಭಾರತದ ಪ್ರತಿನಿಧಿಯಾಗುವ ಸಾಧ್ಯತೆಯಿದೆ.

‘ಜಯ್ ಶಾ ಅವರು ಐಸಿಸಿ ಮಂಡಳಿಯಲ್ಲಿ ಬಿಸಿಸಿಐ ಪ್ರತಿನಿಧಿಯಾಗುವರಾದರೆ, ಐಸಿಸಿ ಹಣಕಾಸು ಸಮಿತಿಯಲ್ಲೂ ಸ್ಥಾನ ಪಡೆಯುವರು. ಭಾರತದ ಪ್ರತಿನಿಧಿಗಳಿಗೆ ಹಲವು ವರ್ಷಗಳಿಂದ ಹಣಕಾಸು ಸಮಿತಿಯ ಮುಖ್ಯಸ್ಥನ ಸ್ಥಾನ ಲಭಿಸಿಲ್ಲ. ಆದ್ದರಿಂದ ಈ ಬಾರಿ ಲಭಿಸುವ ಸಾಧ್ಯತೆಯೇ ಹೆಚ್ಚು’ ಎಂದು ಐಸಿಸಿ ಮೂಲಗಳು ತಿಳಿಸಿವೆ.

ಕೆಎಸ್‌ಸಿಎ ಚುನಾವಣೆ 20ರಂದು

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಗಳ ಆಯ್ಕೆಗಾಗಿ ನವೆಂಬರ್ 20ರಂದು ಚುನಾವಣೆ ನಡೆಯಲಿದೆ.

ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಜಂಟಿ ಕಾರ್ಯದರ್ಶಿ ಹಾಗೂ ಆಡಳಿತ ಸಮಿತಿ ಸದಸ್ಯರ ಆಯ್ಕೆಗಾಗಿ ಚುನಾವಣೆ ನಡೆಯಲಿದೆ.

ನಾಮಪತ್ರ ಸಲ್ಲಿಕೆಗೆ ನ.5 ಕೊನೆಯ ದಿನವಾಗಿದೆ. ನ.7ರಂದು ಮಧ್ಯಾಹ್ನ ಮೂರರವರೆಗೆ ನಾಮಪತ್ರಗಳ ಪರಿಶೀಲನೆ ಮಾಡಲಾಗುವುದು ಹಾಗೂ ಅಭ್ಯರ್ಥಿಗಳ ಅಂತಿಮಪಟ್ಟಿ ಪ್ರಕಟಿಸಲಾಗುವುದು. ನ.8 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ನ.9ರಂದು ಸ್ಪರ್ಧಿಗಳ ಅಂತಿಮ ಪಟ್ಟಿ ಪ್ರಕಟವಾಗಲಿದೆ. ನ.20ರಂದು ಚುನಾವಣೆ ನಡೆಯುವುದು. ಅದೇ ದಿನ ರಾತ್ರಿ 7 ಗಂಟೆಗೆ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕೆಎಸ್‌ಸಿಎ ವೆಬ್‌ಸೈಟ್‌ನಲ್ಲಿ ಹಾಕಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಂ.ಆರ್. ಹೆಗಡೆ ಅವರು ಚುನಾವಣಾಧಿಕಾರಿಯಾಗಿದ್ದಾರೆ.

2019ರಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲಿ ನೂತನ ನಿಯಮಾವಳಿ ಜಾರಿಯಾದಾಗ ಚುನಾವಣೆ ನಡೆದಿತ್ತು. ಆ ಸಮಿತಿಯ ಮೂರು ವರ್ಷಗಳ ಅವಧಿಯು ಈಗ ಪೂರ್ಣವಾಗಿದೆ. ಆಗ ಅಧ್ಯಕ್ಷರಾಗಿ ರೋಜರ್ ಬಿನ್ನಿ ಆಯ್ಕೆಯಾಗಿದ್ದರು. ಅವರೊಂದಿಗೆ ಜೆ.ಅಭಿರಾಮ್ (ಉಪಾಧ್ಯಕ್ಷ), ಸಂತೋಷ್ ಮೆನನ್ (ಕಾರ್ಯದರ್ಶಿ), ವಿನಯ್ ಮೃತ್ಯುಂಜಯ (ಖಜಾಂಚಿ) ಹಾಗೂ ಶಾವೀರ್ ತಾರಾಪುರೆ (ಜಂಟಿ ಕಾರ್ಯದರ್ಶಿ) ಆಯ್ಕೆಯಾಗಿದ್ದರು.

ಇತ್ತೀಚೆಗೆ ಬಿನ್ನಿ ಅವರನ್ನು ಬಿಸಿಸಿಐ ಅಧ್ಯಕ್ಷರನ್ನಾಗಿ ಅವಿರೋಧ ಆಯ್ಕೆ ಮಾಡಲಾಗಿದೆ.

ಟಿ20: ಫೈನಲ್‌ಗೆ ಮುಂಬೈ, ಹಿಮಾಚಲಪ್ರದೇಶ

ಕೋಲ್ಕತ್ತ (ಪಿಟಿಐ): ಮುಂಬೈ ಮತ್ತು ಹಿಮಾಚಲಪ್ರದೇಶ ತಂಡಗಳು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಗುರುವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಮುಂಬೈ ತಂಡವು 5 ವಿಕೆಟ್‌ಗಳಿಂದ ವಿದರ್ಭ ವಿರುದ್ಧ ಗೆಲುವು ಸಾಧಿಸಿತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಹಿಮಾಚಲ ಪ್ರದೇಶ ತಂಡವು ಪಂಜಾಬ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ವಿದರ್ಭ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 164 (ವಾಂಖೆಡೆ 34, ಜಿತೇಶ್ ಶರ್ಮಾ 46, ತುಷಾರ್ ದೇಶಪಾಂಡೆ 24ಕ್ಕೆ2, ಶಮ್ಸ್ ಮಲಾನಿ 20ಕ್ಕೆ3, ಶಿವಂ ದುಬೆ 15ಕ್ಕೆ2) ಮುಂಬೈ: 16.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 169 (ಪೃಥ್ವಿ ಶಾ 34, ಶ್ರೇಯಸ್ ಅಯ್ಯರ್ 73, ಸರ್ಫರಾಜ್ ಖಾನ್ 27, ದರ್ಶನ್ ನಾಯ್ಕಂಡೆ 35ಕ್ಕೆ2) ಫಲಿತಾಂಶ:ಮುಂಬೈ ತಂಡಕ್ಕೆ 5 ವಿಕೆಟ್‌ಗಳ ಜಯ.

ಹಿಮಾಚಲಪ್ರದೇಶ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 176 (ಸುಮಿತ್ ವರ್ಮಾ 51, ಆಕಾಶ್ ವಸಿಷ್ಠ 43, ಅಭಿಷೇಕ್ ಶರ್ಮಾ 20ಕ್ಕೆ2, ಸನ್ವೀರ್ ಸಿಂಗ್ 17ಕ್ಕೆ2) ಪಂಜಾಬ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 163 (ಶುಭಮನ್ ಗಿಲ್ 45, ಅನ್ಮೋಲ್‌ಪ್ರೀತ್ ಸಿಂಗ್ 30, ರಿಷಿ ಧವನ್ 25ಕ್ಕೆ3, ಮಯಂಕ್ ದಾಗರ್ 27ಕ್ಕೆ2) ಫಲಿತಾಂಶ: ಹಿ.ಪ್ರದೇಶಕ್ಕೆ 13 ರನ್‌ಗಳ ಜಯ.

ಫೈನಲ್ ದಿನಾಂಕ: ನವೆಂಬರ್ 5

ಆರ್‌.ಪ್ರಗ್ನಾನಂದ ಹಾಗೂ ಪಿ.ವಿ.ನಂದಿದಾ – ಟ್ವಿಟರ್ ಚಿತ್ರ

ಪ್ರಗ್ನಾನಂದ, ನಂದಿದಾಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಮತ್ತು ಪಿ.ವಿ.ನಂದಿದಾ ಅವರು ಗುರುವಾರ ಕೊನೆಗೊಂಡ ಏಷ್ಯನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಓಪನ್ ಹಾಗೂ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಪ್ರಗ್ನಾನಂದ ಅವರು ಒಂಬತ್ತನೇ ಹಾಗೂ ಕೊನೆಯ ಸುತ್ತಿನಲ್ಲಿ ಭಾರತದವರೇ ಆದ ಬಿ.ಅಧಿಬನ್ ಅವರೊಂದಿಗೆ 63 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಈ ಮೂಲಕ ಒಟ್ಟು ಏಳು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ತಮ್ಮದಾಗಿಸಿಕೊಂಡರು.

ಚೆನ್ನೈನ 17 ವರ್ಷದ ಪ್ರಗ್ನಾನಂದ ಅವರು ಇತರ ಸ್ಪರ್ಧಿಗಳಿಗಿಂತ ಅರ್ಧ ಪಾಯಿಂಟ್‌ಗಳ ಮುನ್ನಡೆಯೊಂದಿಗೆ ಅಂತಿಮ ಸುತ್ತಿನಲ್ಲಿ ಕಣಕ್ಕಿಳಿದಿದ್ದರು. ಅನುಭವಿ ಅಧಿಬನ್ ವಿರುದ್ಧ ಎಚ್ಚರಿಕೆಯ ಆಟವಾಡಿ ಪಾಯಿಂಟ್ ಹಂಚಿಕೊಂಡರು.

ಇಲ್ಲಿ ಚಾಂಪಿಯನ್ ಆಗುವ ಮೂಲಕ ಪ್ರಗ್ನಾನಂದ, ಮುಂಬರುವ ಫಿಡೆ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿಕೊಂಡರು.

ತಲಾ ಆರು ಪಾಯಿಂಟ್ಸ್ ಕಲೆಹಾಕಿದ ಹರ್ಷ ಭರತ್‌ಕೋಟಿ ಮತ್ತು ಅಧಿಬನ್ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ನಂದಿದಾ ಅವರು ಒಂಬತ್ತನೇ ಸುತ್ತಿನಲ್ಲಿ ದಿವ್ಯಾ ದೇಶಮುಖ್ ಎದುರು ಡ್ರಾ ಮಾಡಿಕೊಂಡು ಒಟ್ಟು 7.5 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡರು. ತಮಿಳುನಾಡಿನ 26 ವರ್ಷದ ನಂದಿದಾ, ಟೂರ್ನಿಯಲ್ಲಿ ಅಜೇಯರಾಗುಳಿದರು. ಅವರು ಒಟ್ಟು ಆರು ಸುತ್ತುಗಳಲ್ಲಿ ಗೆಲುವು ಸಾಧಿಸಿದರು.

ಬ್ಯಾಸ್ಕೆಟ್‌ಬಾಲ್: ಸೆಮಿಫೈನಲ್ ಲೀಗ್‌ಗೆ ಬ್ಯಾಂಕ್ ಆಫ್ ಬರೋಡ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ ತಂಡದವರು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದಲ್ಲಿ ಸೆಮಿಫೈನಲ್ ಲೀಗ್ ಪ್ರವೇಶಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೋಡ ತಂಡ 80–65 ರಲ್ಲಿ ಸರ್ದಾರ್ನ್ ಬ್ಲೂಸ್ ತಂಡವನ್ನು ಮಣಿಸಿತು. ಕಾರ್ತಿಕ್ (20) ಮತ್ತು ಅರವಿಂದ್ (15) ಅವರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸಿಎಂಪಿ, ಯಂಗ್ ಓರಿಯನ್ಸ್ ಮತ್ತು ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳೂ ಸೆಮಿ ಲೀಗ್‌ಗೆ ಅರ್ಹತೆ ಪಡೆದುಕೊಂಡವು.

ಸಿಎಂಪಿ 80–67 ರಲ್ಲಿ ಎಂಎನ್‌ಕೆ ರಾವ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡದ ವಿರುದ್ಧ; ಮಂಗಳೂರು 65–45 ರಲ್ಲಿ ಪಿಪಿಸಿ ವಿರುದ್ಧ; ಯಂಗ್ ಓರಿಯನ್ಸ್ 76–61 ರಲ್ಲಿ ಎಎಸ್‌ಸಿ ಸೆಂಟರ್ ವಿರುದ್ಧ ಗೆಲುವು ಪಡೆದವು. ಮಹಿಳೆಯರ ವಿಭಾಗದಲ್ಲಿ ಎಸ್‌ಡಬ್ಲ್ಯುಆರ್, ಮೌಂಟ್ಸ್ ಕ್ಲಬ್, ಡಿವೈಇಎಸ್ ಮೈಸೂರು ಮತ್ತು ನಿಟ್ಟೆಯ ಕೆ.ಎಸ್.ಹೆಗ್ಡೆ ತಂಡಗಳು ಸೆಮಿ ಲೀಗ್‌ಗೆ ಪ್ರವೇಶ ಪಡೆದುಕೊಂಡವು.

ನಾಗೇಶ್ವರ ರಾವ್ ಸಲಹೆಗೆ ‘ಸುಪ್ರೀಂ’ ಒಪ್ಪಿಗೆ

ಡಿ.10 ರಂದು ಐಒಎ ಚುನಾವಣೆ

ನವದೆಹಲಿ: ಭಾರತ ಒಲಿಂಪಿಕ್ಸ್ ಸಂಸ್ಥೆಯ (ಐಒಎ) ಕಾರ್ಯಕಾರಿ ಸಮಿತಿಗೆ ಡಿ.10 ರಂದು ಚುನಾವಣೆ ನಡೆಸುವಂತೆ ನಿವೃತ್ತ ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್ ಅವರು ಮುಂದಿಟ್ಟಿರುವ ಸಲಹೆಯನ್ನು ಸುಪ್ರೀಂಕೋರ್ಟ್ ಗುರುವಾರ ಅಂಗೀಕರಿಸಿದೆ.

ಐಒಎ ಚುನಾವಣೆಗೆ ಸಂಬಂಧಿಸಿದಂತೆ ರಾವ್ ಅವರು ಸಲ್ಲಿಸಿರುವ ಟಿಪ್ಪಣಿಗೆ ಒಮ್ಮತವಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು ತಿಳಿಸಿದೆ.

‘ಚುನಾವಣೆ ಪ್ರಕ್ರಿಯೆ ಕುರಿತು ಈ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ತ್ವರಿತಗತಿಯಲ್ಲಿ ಕೈಗೊಂಡ ಸಮಗ್ರ ಕೆಲಸವು ಟಿಪ್ಪಣಿಯಲ್ಲಿ ಪ್ರತಿಫಲಿಸುತ್ತದೆ. ದೇಶದ ಹಿತಾಸಕ್ತಿಯನ್ನು ಮನಗಂಡು ಅವರು ತೋರಿರುವ ಚುರುಕುತನಕ್ಕೆ ನ್ಯಾಯಾಲಯ ಪ್ರಶಂಸೆ ವ್ಯಕ್ತಪಡಿಸುತ್ತದೆ’ ಎಂದು ಪೀಠ ಹೇಳಿದೆ.

ಐಒಎ ಚುನಾವಣೆ ಪ್ರಕ್ರಿಯೆಗೆ ಮಾರ್ಗಸೂಚಿ ಸಿದ್ಧಪಡಿಸಲು ಸುಪ್ರೀಂಕೋರ್ಟ್ ಸೆ.22 ರಂದು ರಾವ್ ಅವರನ್ನು ನೇಮಿಸಿತ್ತು. ಐಒಎ ನಿಯಮಾವಳಿ ತಿದ್ದುಪಡಿಯ ಜವಾಬ್ದಾರಿಯನ್ನೂ ಅವರಿಗೆ ವಹಿಸಿತ್ತು.

ರಾವ್ ಅವರು ಈ ಸಂಬಂಧ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ, ಐಒಎ ಮತ್ತು ಎಲ್ಲ ರಾಜ್ಯ ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಮಾಲೋಚನೆ ನಡೆಸಿದ್ದಾರೆ ಎಂದು ಪೀಠ ತಿಳಿಸಿತು.

ನಿಯಮಾವಳಿ ತಿದ್ದುಪಡಿ ಕರಡು ಪ್ರತಿಯನ್ನು ಗುರುವಾರವೇ ಸಂಬಂಧಪಟ್ಟವರಿಗೆ ಹಂಚಬೇಕು. ಹಾಗಾದಲ್ಲಿ ನ.10 ರಂದು ಸಾಮಾನ್ಯ ಸಭೆ ನಡೆಸಬಹುದು ಎಂಬ ಸಲಹೆಗೂ ಪೀಠ ಒಪ್ಪಿಗೆ ಸೂಚಿಸಿದೆ.

ಸಂಕ್ಷಿಪ್ತ ಸುದ್ದಿ

ಬಾಕ್ಸಿಂಗ್: ಕಪಿಲ್, ಸ್ಪರ್ಶ್‌ಗೆ ನಿರಾಸೆ

ನವದೆಹಲಿ (ಪಿಟಿಐ): ಭಾರತದ ಕಪಿಲ್ ಪೋಖರಿಯಾ ಮತ್ತು ಸ್ಪರ್ಶ್ ಕುಮಾರ್ ಅವರು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಎಲೈಟ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಲು ಅನುಭವಿಸಿದರು.

ಗುರುವಾರ ನಡೆದ 86 ಕೆ.ಜಿ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಕಪಿಲ್ 0–5 ರಲ್ಲಿ ಇರಾನ್‌ನ ಪೌರಿಯಾ ಅಮೀರಿ ಕೈಯಲ್ಲಿ ಸೋತರು. ಉತ್ತರಾಖಂಡ್‌ನ ಬಾಕ್ಸರ್ ಆರಂಭದಲ್ಲಿ ಆಕ್ರಮಣಕಾರಿ ಪ್ರದರ್ಶನ ನೀಡಿದರೂ, ಬಳಿಕ ಲಯ ಕಳೆದುಕೊಂಡರು.

51 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಸ್ಪರ್ಶ್ 1–4 ರಲ್ಲಿ ಒಲಿಂಪಿಕ್ ಕಂಚಿನ ಪದಕ ವಿಜೇತ ಬಾಕ್ಸರ್ ಕಜಕಸ್ತಾನದ ಸಕೆನ್ ಬಿಬೊಸಿನೊವ್ ಎದುರು ಸೋತರು.

ಚಾಂಪಿಯನ್ಸ್ ಲೀಗ್: ನಾಕೌಟ್‌ಗೆ ಎ.ಸಿ ಮಿಲಾನ್

ಪ್ಯಾರಿಸ್ (ಎಎಫ್‌ಪಿ): ಎ.ಸಿ ಮಿಲಾನ್ ತಂಡ ಒಂಬತ್ತು ವರ್ಷಗಳ ಬಿಡುವಿನ ಬಳಿಕ ಇದೇ ಮೊದಲ ಬಾರಿ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಇಟಲಿಯ ಕ್ಲಬ್ 4–0 ಗೋಲುಗಳಿಂದ ಸಾಲ್ಜ್‌ಬರ್ಗ್ ತಂಡವನ್ನು ಮಣಿಸಿತು.

ಒಲಿವಿಯರ್ ಗಿರೂಡ್ (14 ಹಾಗೂ 57ನೇ ನಿ.) ಎರಡು ಗೋಲುಗಳನ್ನು ತಂದಿತ್ತರೆ, ರಾದೆ ಕ್ರೂನಿಚ್ (46) ಮತ್ತು ಜೂನಿಯರ್ ಮೆಸಿಯಸ್ (90 + 1) ತಲಾ ಒಂದು ಗೋಲು ಗಳಿಸಿದರು.

ಆರ್‌ಬಿ ಲೈಪ್‌ಸಿಗ್ ತಂಡ 4–0 ಗೋಲುಗಳಿಂದ ಶಕ್ತಾರ್ ಡೊನೆಸ್ಕ್ ತಂಡವನ್ನು ಸೋಲಿಸಿ 16ರ ಘಟ್ಟದಲ್ಲಿ ಸ್ಥಾನ ಪಡೆಯಿತು.

ಫುಟ್‌ಬಾಲ್: ಗೆರಾರ್ಡ್ ನಿವೃತ್ತಿ

ಬಾರ್ಸಿಲೋನಾ (ರಾಯಿಟರ್ಸ್): ಬಾರ್ಸಿಲೋನಾ ಕ್ಲಬ್ ಪ್ರತಿನಿಧಿಸುವ ಸ್ಪೇನ್‌ನ ಫುಟ್‌ಬಾಲ್ ಆಟಗಾರ ಗೆರಾರ್ಡ್ ಪಿಕ್ ಅವರು ನಿವೃತ್ತಿಯಾಗಲು ನಿರ್ಧರಿಸಿದ್ದಾರೆ.

ಕ್ಯಾಂಪ್ ನೌ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಅಲ್ಮೇರಿಯಾ ವಿರುದ್ಧದ ಲಾಲಿಗಾ ಪಂದ್ಯ, ಬಾರ್ಸಿಲೋನಾ ಪರ ತಮ್ಮ ಕೊನೆಯ ಪಂದ್ಯ ಎಂದು 35 ವರ್ಷದ ಪಿಕ್, ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

2018ರ ಫಿಫಾ ವಿಶ್ವಕಪ್ ಬಳಿಕ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ನಿವೃತ್ತಿ ಪ್ರಕಟಿಸಿದ್ದ ಅವರು ಕ್ಲಬ್ ಫುಟ್‌ಬಾಲ್‌ನಲ್ಲಿ ಆಟ ಮುಂದುವರಿಸಿದ್ದರು. ಸ್ಪೇನ್ ತಂಡ 2010ರ ಫಿಫಾ ವಿಶ್ವಕಪ್ ಗೆಲ್ಲುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಬೆಂಗಳೂರು ಇಂಡಿಪೆಂಡೆಂಟ್ಸ್‌ಗೆ ಜಯ

ಬೆಂಗಳೂರು: ಮುಜಮಿರ್ ಅಬ್ದುಲ್ಲಾ ಗಳಿಸಿದ ಮೂರು ಗೋಲುಗಳ ನೆರವಿನಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಜಯ ಗಳಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಇಂಡಿಪೆಂಡೆಂಟ್ಸ್ ತಂಡ 5–2 ಗೋಲುಗಳಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು. ಮುಜಮಿರ್ ಅವರು 4, 31 ಹಾಗೂ 43ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಇತರ ಎರಡು ಗೋಲುಗಳನ್ನು ಮಾಹಿನ್ ಹುಸೇನ್ (11ನೇ ನಿ.) ಹಾಗೂ ರಾಜಾ ಪಾಂಡಿ (90 + 1ನೇ ನಿ.) ತಂದಿತ್ತರು.